ಮಂಗಳವಾರ, ಫೆಬ್ರುವರಿ 4, 2025 | ₹ 7.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಮಂದಹಾಸ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಏರ್ಪಡಿಸಿದ್ದ ಸ್ಪೋರ್ಟ್ಸ್ ಫಾರ್ವರ್ಡ್ ನೇಷನ್ ರಿಪೋರ್ಟ್ ಕಾರ್ಯಕ್ರಮದಲ್ಲಿ ಆರ್‌ಸಿಬಿ ಮಹಿಳಾ ತಂಡದ ನಾಯಕಿ ಸ್ಮೃತಿ ಮಂದಾನ ಹಾಜರಿದ್ದರು

‘ಚಾವಣಿ ಸೌರಶಕ್ತಿ’ ಅಳವಡಿಕೆಗೆ ಅಪಾರ್ಟ್‌ಮೆಂಟ್‌ಗಳ ಆಸಕ್ತಿ

‘ಕಾಮನ್ ಏರಿಯಾ’ಕ್ಕೆ ‘ಹಸಿರು ಇಂಧನ’ದ ಶಕ್ತಿ

137 ಅರ್ಜಿಗಳು, 27ಕ್ಕೆ ಚಾಲನೆ

ಬೆಸ್ಕಾಂ ವ್ಯಾಪ್ತಿಯಲ್ಲಿ ಈವರೆಗೆ ವಸತಿ ಕ್ಷೇಮಾಭಿವೃದ್ಧಿ ಸಂಘಗಳಿಂದ ಮನೆ ಚಾವಣಿ ಮೇಲೆ ಸೌರಫಲಕ ಅಳವಡಿಕೆಗಾಗಿ ಎಂಎನ್‌ಆರ್‌ಇ/ಬೆಸ್ಕಾಂ ಪೋರ್ಟಲ್‌ನಲ್ಲಿ 137 ಅರ್ಜಿಗಳು ನೋಂದಣಿಯಾಗಿವೆ ಇದರಲ್ಲಿ 27 ಯೋಜನೆಗಳಿಗೆ ಚಾಲನೆ ನೀಡಿದ್ದೇವೆ. ಉಳಿದ ಅರ್ಜಿಗಳು ಅನುಷ್ಠಾನ ಹಂತದಲ್ಲಿವೆ. ಶೀಘ್ರವೇ ಎಲ್ಲವನ್ನೂ ಪೂರ್ಣಗೊಳಿಸುತ್ತೇವೆ

ರಮೇಶ್ ವಿ.ಎಸ್., ಪ್ರಧಾನ ವ್ಯವಸ್ಥಾಪಕ, ಡಿಎಸ್‌ಎಂ ವಿಭಾಗ, ಬೆಸ್ಕಾಂ

ಪಾವನಿ ಡಿವೈನ್ ಅಪಾರ್ಟ್‌ಮೆಂಟ್ ಚಾವಣಿ ಮೇಲೆ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಿರುವುದು

ಪ್ರೋತ್ಸಾಹ ಧನ

ಪಿಎಂಎಸ್‌ಜಿಎಂಬಿವೈ ಅಡಿಯಲ್ಲಿ ಗುಂಪು ವಸತಿ ಸೊಸೈಟಿಗಳು ಹಾಗೂ ಬಹುಮಹಡಿ ವಸತಿ ಸಮುಚ್ಚಯಗಳ ಚಾವಣಿಗಳಲ್ಲಿ ಸಾಮಾನ್ಯ ಬಳಕೆಯ ಸ್ಥಳಗಳಲ್ಲಿ (ಕಾಮನ್ ಏರಿಯಾ) ವಿದ್ಯುತ್ ಬಳಕೆಗೆ ಸೌರ ವಿದ್ಯುತ್ ಘಟಕ ಅಳವಡಿಸಲು ಪ್ರತಿ ಕಿಲೊ ವಾಟ್‌ಗೆ ₹18 ಸಾವಿರ ಸಹಾಯಧನ ಸಿಗಲಿದೆ (ಒಂದು ಮನೆಗೆ 3ಕೆವಿಎ ಯಂತೆ 500 ಕಿಲೊ ವಾಟ್‌ವರೆಗೆ).

ನೋಂದಣಿ ಹೇಗೆ?

ಪಿಎಂಎಸ್‌ಜಿಎಂಬಿವೈ ಅಡಿ ಛಾವಣಿ ಸೌರಶಕ್ತಿ ವಿದ್ಯುತ್ ಘಟಕ ನೋಂದಣಿಗಾಗಿ https://www.pmsuryaghar.gov.in ಜಾಲತಾಣಕ್ಕೆ ಭೇಟಿ ನೀಡಿ. ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿ. ಅಲ್ಲಿ ನಮೂದಿಸಿದ ನೋಂದಣಿ ಸಂಖ್ಯೆಯನ್ನು ಬೆಸ್ಕಾಂ ಪೋರ್ಟಲ್ (https://srtpv.bescom.org/SRTPV/home.jsp) ನಲ್ಲಿ ಹಾಕಿ ಪ್ರಕ್ರಿಯೆಯನ್ನು ಮುಂದುವರಿಸಬೇಕು. ಬೆಸ್ಕಾಂ ಗುರುತಿಸಿರುವ ವೆಂಡರ್ಸ್‌ಗಳನ್ನು(ಏಜೆನ್ಸಿಗಳು) ಆಯ್ಕೆ ಮಾಡಿಕೊಳ್ಳಬೇಕು. ಬೆಸ್ಕಾಂ ವ್ಯಾಪ್ತಿಯಲ್ಲಿ 5289 ವೆಂಡರ್ಸ್‌ಗಳನ್ನು ಬೆಸ್ಕಾಂ ಆಯ್ಕೆ ಮಾಡಿದೆ.

• ಗಾಣಧಾಳು ಶ್ರೀಕಂಠ

ಬೆಂಗಳೂರು: ‘ಅಪಾರ್ಟ್‌ಮೆಂಟ್ ಚಾವಣಿಯ ಮೇಲೆ ಸೌರಫಲಕ ಅಳವಡಿಕೆಯಿಂದಾಗಿ ವಿದ್ಯುತ್ ಬಿಲ್‌ನಲ್ಲಿ ತಿಂಗಳಿಗೆ ಕನಿಷ್ಠ ಲಕ್ಷ ರೂಪಾಯಿವರೆಗೂ ಉಳಿತಾಯವಾಗುವ ವಿಶ್ವಾಸವಿದೆ. ಇದು ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘಟಿತ ಪ್ರಯತ್ನದಿಂದ ಸಾಕಾರಗೊಂಡ ಯೋಜನೆ...’

ವೈಟ್‌ಫೀಲ್ಡ್‌ನಲ್ಲಿರುವ ಬ್ರಿಗೇಡ್ ವುಡ್ಸ್ ಅಪಾರ್ಟ್‌ಮೆಂಟ್‌ನ ಆನಂದರಾಜು ಪಾಟೀಲ್, ತಮ್ಮ ಅಪಾರ್ಟ್‌ಮೆಂಟ್ ಚಾವಣಿ ಮೇಲೆ ಅಳವಡಿಸಿರುವ ಸೌರ ವಿದ್ಯುತ್ ಘಟಕ’ದಿಂದ ಆಗುವ ಉಪಯೋಗದ ಬಗ್ಗೆ ಸಂತಸದಿಂದ ಈ ಅಭಿಪ್ರಾಯ ಹಂಚಿಕೊಂಡರು.

ಒಂದು ವರ್ಷದಿಂದ ನಗರದಾದ್ಯಂತ ಇಂಥ ಹಲವು ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರು ತಮ್ಮ ಅಪಾರ್ಟ್‌ಮೆಂಟ್ ಚಾವಣಿಯ ಮೇಲೆ ‘ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ’ಯಡಿ (ಪಿಎಂಎಸ್‌ಜಿಎಂಬಿವೈ) ಇಂಧನ ಇಲಾಖೆಯ ಪ್ರೋತ್ಸಾಹಧನದೊಂದಿಗೆ ‘ಚಾವಣಿ ಸೌರವಿದ್ಯುತ್ ಘಟಕ’ಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಈ ಘಟಕದಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಅಪಾರ್ಟ್‌ಮೆಂಟ್‌ನ ಕ್ಲಬ್‌ಹೌಸ್, ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ), ಜಿಮ್, ಈಜುಕೊಳ ದಂತಹ ಸಾಮಾನ್ಯ ಬಳಕೆಯ ಸ್ಥಳಗಳಿಗೆ (ಕಾಮನ್) ಉಪಯೋಗಿಸುತ್ತಿದ್ದಾರೆ. ಈ ಮೂಲಕ ಲಕ್ಷ ರೂಪಾಯಿಯವರಗೆ ವಿದ್ಯುತ್ ಬಿಲ್ ಉಳಿತಾಯ ಮಾಡುತ್ತಿವೆ.

‘ಇತ್ತೀಚೆಗೆ ಚಾವಣಿ ಸೌರ ವಿದ್ಯುತ್ ಅಳವಡಿಕೆಗೆ ಹೆಚ್ಚು ಅಪಾರ್ಟ್‌ಮೆಂಟ್‌ಗಳು ಆಸಕ್ತಿ ತೋರುತ್ತಿವೆ. ಮಹದೇವಪುರ ವಲಯದಲ್ಲಿ ಕಳೆದ ವರ್ಷದಿಂದ ಐದಾರು ಅಪಾರ್ಟ್‌ಮೆಂಟ್‌ಗಳು ಪಿಎಂಎಸ್‌ಜಿಎಂಬಿವೈ ಅಡಿ ಸೌರ ವಿದ್ಯುತ್ ಘಟಕ ಅಳವಡಿಸಿಕೊಂಡಿವೆ. ಬೆಸ್ಕಾಂ ಕೂಡ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುತ್ತಿದೆ’ ಎಂದು ಬೆಸ್ಕಾಂನ ಸಹಾಯಕ ಎಂಜಿನಿಯರ್ ಮೈಲಾರಪ್ಪ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿದ್ಯುತ್ ಬಿಲ್ ಉಳಿತಾಯ: ಬ್ರಿಗೇಡ್ ವುಡ್ಸ್ ಅಪಾರ್ಟ್‌ಮೆಂಟ್‌ನಲ್ಲಿ 300 ಮನೆಗಳಿವೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಚಾವಣಿ ಮೇಲೆ ಸೌರ ವಿದ್ಯುತ್ ಘಟಕ ಅಳವಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿ, ಡಿಸೆಂಬರ್‌ನಲ್ಲಿ ಪೂರ್ಣಗೊಳಿಸಿದ್ದಾರೆ. ಜನವರಿ 8ರಂದು ಗ್ರಿಡ್‌ಗೆ ಸಂಪರ್ಕ ಕಲ್ಪಿಸಲಾಗಿದೆ. ಗಣರಾಜ್ಯೋತ್ಸವ ದಿನದಂದು ಸೌರ ವಿದ್ಯುತ್ ಉತ್ಪಾದನೆಗೆ ಚಾಲನೆ ನೀಡಲಾಗಿದೆ.

‘ಘಟಕ ಅಳವಡಿಕೆಗೆ ₹75 ಲಕ್ಷ ವೆಚ್ಚವಾಗಿದೆ. ಪಿಎಂಎಸ್‌ಜಿಎಂಬಿ ಯೋಜನೆಯಡಿ ₹19 ಲಕ್ಷ ಸಹಾಯಧನ ಲಭ್ಯವಾಗುತ್ತಿದೆ. ಅಪಾರ್ಟ್‌ಮೆಂಟ್‌ನಲ್ಲಿರುವ ‘ನಿವಾಸಿ ಮಾಲೀಕರ ನಿಧಿ’ಯಲ್ಲಿದ್ದ ಹಣವನ್ನು ಈ ಯೋಜನೆಗೆ ಬಳಸಿಕೊಂಡಿದ್ದೇವೆ. ಸದಸ್ಯರೆಲ್ಲರ ಒಮ್ಮತದಿಂದ ಯೋಜನೆ ಸಾಕಾರಗೊಂಡಿದೆ. ಎರಡು ಚಾವಣಿಗಳಲ್ಲಿ 109 ಕಿಲೊ ವಾಟ್ ಸಾಮರ್ಥ್ಯದ ಈ ಘಟಕಗಳನ್ನು ಅಳವಡಿಸಲಾಗಿದೆ’ ಎಂದು ಬ್ರಿಗೇಡ್ ವುಡ್ಸ್ ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘದ ಖಜಾಂಚಿ ಆನಂದರಾಜ ಪಾಟೀಲ್ ವಿವರಿಸಿದರು.

ಆರ್‌ಟಿಎಸ್ ಅಳವಡಿಕೆಗೆ ಬ್ರಿಗೇಡ್ ವುಡ್ಸ್ ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘ ಸಭೆಯಲ್ಲಿ ನಿರ್ಧಾರ ಮಾಡಿದ ಸಂದರ್ಭ

‘ಅಪಾರ್ಟ್‌ಮೆಂಟ್‌ನ ಕಾಮನ್ ಏರಿಯಾದಲ್ಲಿರುವ ಎಸ್‌ಟಿಪಿ, ಕ್ಲಬ್‌ಹೌಸ್, ಈಜುಕೊಳ, ಜಿಮ್, ಲಿಫ್ಟ್ ಸೇರಿದಂತೆ ಹಲವು ಸೌಕರ್ಯಗಳಿಗೆ ಸೌರ ವಿದ್ಯುತ್ ಬಳಕೆ ಮಾಡುತ್ತೇವೆ. ಕಾಮನ್ ಏರಿಯಾಕ್ಕಾಗಿ ತಿಂಗಳಿಗೆ ಸುಮಾರು 35 ಸಾವಿರ ಯೂನಿಟ್ ವಿದ್ಯುತ್ ಬಳಕೆಯಾಗುತ್ತಿದೆ. ₹4.5 ಲಕ್ಷದಷ್ಟು ವಿದ್ಯುತ್ ಬಿಲ್ ಬರುತ್ತಿತ್ತು. ಈ ಸೌಲಭ್ಯ ಅಳವಡಿಕೆಯಿಂದ ಅಪಾರ್ಟ್‌ಮೆಂಟ್‌ನ ಒಟ್ಟು ವಿದ್ಯುತ್ ಬಿಲ್‌ನಲ್ಲಿ ₹80 ಸಾವಿರದಿಂದ ₹1ಲಕ್ಷದವರೆಗೂ ಉಳಿತಾಯವಾಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬ್ರಿಗೇಡ್ ವುಡ್ಸ್ ಅಪಾರ್ಟ್‌ಮೆಂಟ್‌ನ ಚಾವಣಿ ಮೇಲೆ ಅಳವಡಿಸಿರುವ ಸೌರ ವಿದ್ಯುತ್ ಫಲಕಗಳು

ಹೆರಿಟೇಜ್ ವುಡ್ಸ್ ಅಪಾರ್ಟ್‌ಮೆಂಟ್

256 ಯೂನಿಟ್ ನಿತ್ಯ ಉತ್ಪಾದನೆಯಾಗುವ ವಿದ್ಯುತ್

109 ಕಿಲೊ ವಾಟ್ ಘಟಕದ ಉತ್ಪಾದನಾ ಸಾಮರ್ಥ್ಯ

₹75 ಲಕ್ಷ ಘಟಕ ಸ್ಥಾಪನೆ ವೆಚ್ಚ

₹60 ಸಾವಿರ ಉಳಿತಾಯ: ಹೂಡಿ ಸಮೀಪವಿರುವ ಪಾವನಿ ಡಿವೈನ್ ಅಪಾರ್ಟ್‌ಮಂಟ್‌ನಲ್ಲಿ 165 ಮನೆಗಳಿವೆ. ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಚಾವಣಿ ಸೌರಶಕ್ತಿ ಘಟಕ ಅಳವಡಿಕೆಯಾಗಿದೆ. 120 ಕೆವಿಎ ಮಂಜೂರಾಗಿದ್ದು, ಎರಡು ವಿಭಾಗದಲ್ಲಿ ಘಟಕ ಅಳವಡಿಸಲಾಗುತ್ತಿದೆ. ಸದ್ಯ ಅಪಾರ್ಟ್‌ಮೆಂಟ್‌ನ ‘ಎ’ ಬ್ಲಾಕ್‌ನಲ್ಲಿ 40 ಕೆವಿಎ ಸಾಮರ್ಥ್ಯದ ಮೊದಲ ಘಟಕ ಅಳವಡಿಸಲಾಗಿದೆ (ಉಳಿದ 80 ಕೆವಿಎಯನ್ನು ಬಿ ಬ್ಲಾಕ್‌ಗೆ ಅಳವಡಿಸಲಾಗುತ್ತದೆ). ಈ ಘಟಕದಿಂದ ಉತ್ಪಾದನೆಯಾಗುವ ವಿದ್ಯುತ್ ಅನ್ನು ಈಜುಕೊಳ, ಕ್ಲಬ್ ಹೌಸ್, ಎರಡು ಕೊಳವೆಬಾವಿಗಳಿರುವ ಕಾಮನ್ ಏರಿಯಾಗೆ ಬಳಸಲಾಗುತ್ತಿದೆ.

‘ಸೌರ ವಿದ್ಯುತ್ ಘಟಕ ಅಳವಡಿಸಿದ ಮೇಲೆ, ತಿಂಗಳಿಗೆ ಸರಾಸರಿ ₹60 ಸಾವಿರ ಉಳಿತಾಯವಾಗುತ್ತಿದೆ. ಎಂಟು ತಿಂಗಳಿನಿಂದ ಅಂದಾಜು ₹5 ಲಕ್ಷದಿಂದ ₹6 ಲಕ್ಷದವರೆಗೆ ಉಳಿತಾಯವಾಗಿದೆ. ಸೌರ ವಿದ್ಯುತ್ ಬಳಕೆಯ ಭಾಗವಾಗಿರುವುದಕ್ಕೆ ಹೆಮ್ಮೆ ಇದೆ’ ಎಂದು ಪಾವನಿ ಡಿವೈನ್ ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಇ.ವಿ. ಪವನ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಪರಿಸರ ರಕ್ಷಣೆಗೆ ಕೊಡುಗೆ: ಸುಮಧರ ಶ್ರೀನಿವಾಸಮ್ ಅಪಾರ್ಟ್‌ಮೆಂಟ್‌ನಲ್ಲಿ 50 ಕೆವಿಎ ಸಾಮರ್ಥ್ಯದ ‘ಚಾವಣಿ ಸೌರಶಕ್ತಿ ಘಟಕ’ವನ್ನು ಅಳವಡಿಸಿದ್ದಾರೆ. ಇಲ್ಲೂ ಕೂಡ ಕಾಮನ್ ಏರಿಯಾಕ್ಕೆ ವಿದ್ಯುತ್ ಬಳಕೆ ಮಾಡುತ್ತಿದ್ದಾರೆ. ‘ಸದ್ಯ ವಿದ್ಯುತ್ ಬಿಲ್ ನಿರೀಕ್ಷೆಯಲ್ಲಿದ್ದೇವೆ. ಕಾಮನ್ ಏರಿಯಾದಲ್ಲಿ ಬಳಸುತ್ತಿದ್ದ ವಿದ್ಯುತ್‌ನಿಂದ ₹50 ಸಾವಿರ ಬಿಲ್ ಬರುತ್ತಿತ್ತು. ಅದು ಪೂರ್ಣ ಉಳಿಯಬಹುದು’ ಎಂದು ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಅಧ್ಯಕ್ಷ ಜಯೇಶ್ ತಿಳಿಸಿದರು.

‘ಸೌರಶಕ್ತಿ ಘಟಕ ಅಳವಡಿಕೆಯಿಂದ ವಿದ್ಯುತ್ ಬಿಲ್ ಉಳಿತಾಯಕ್ಕಿಂತ, ಅಷ್ಟು ಪ್ರಮಾಣದಲ್ಲಿ ವಿದ್ಯುತ್ ಬಳಸುವುದನ್ನು ಉಳಿಸಬಹುದು. ಇದರಿಂದ ಪರಿಸರ ಸಂರಕ್ಷಣೆಗೆ ನಮ್ಮಿಂದ ಒಂದು ಸಣ್ಣ ಕೊಡುಗೆ ನೀಡಿದಂತಾಗುತ್ತದೆ’ ಎಂದು ಅವರು ಹೇಳುತ್ತಾರೆ.

❖

ಅಶ್ವತ್ಥ ನಾರಾಯಣ ವಿಚಾರಣೆ

ಪಿಎಸ್‌ಐ ನೇಮಕಾತಿ ಅಕ್ರಮ: ಎಸ್‌ಐಟಿ ಮುಂದೆ ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 545 ಪಿಎಸ್‌ಐ ಹುದ್ದೆಗಳ ಭರ್ತಿಗೆ ನಡೆದ ನೇಮಕಾತಿಯಲ್ಲಿ ನಡೆದಿದ್ದ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ವಿಶೇಷ ತನಿಖಾ ತಂಡ (ಎಸ್‌ಐಟಿ)ದ ವಿಚಾರಣೆ ಎದುರಿಸಿದ್ದಾರೆ.

ಅಶ್ವತ್ಥ ನಾರಾಯಣ

ಎಸ್‌ಐಟಿ ನೋಟಿಸ್ ನೀಡಿದ್ದ ಕಾರಣ ತನಿಖಾಧಿಕಾರಿ ಎದುರು ಹಾಜರಾದ ಅಶ್ವತ್ಥ ನಾರಾಯಣ, ‘ನನಗೂ ಅಕ್ರಮ ನೇಮಕಾತಿಗೂ ಸಂಬಂಧವಿಲ್ಲ. ಯಾವುದೇ ಅಭ್ಯರ್ಥಿಯ ಪರಿಚಯವೂ ಇಲ್ಲ. ಯಾರಿಗೂ ಹುದ್ದೆ ಕೊಡಿಸಲು ಶಿಫಾರಸು ಮಾಡಿಸಿಲ್ಲ ಎಂದು ತಿಳಿಸಿದ್ದಾರೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಮಾಗಡಿ ನಿವಾಸಿಯಾದ ಅವರ ಹತ್ತಿರ ಸಂಬಂಧಿಯೊಬ್ಬರ ಆಯ್ಕೆಯಲ್ಲಿ ಅಶ್ವತ್ಥ ನಾರಾಯಣ ಅವರ ಪಾತ್ರವಿದೆ ಎಂದು ಆರೋಪಿಸಲಾಗಿತ್ತು. ಹಾಗಾಗಿ ವಿಚಾರಣೆಗೆ ಹಾಜರಾಗುವಂತೆ ಅವರಿಗೆ ನೋಟಿಸ್ ನೀಡಿತ್ತು.

‘ಪಿಎಸ್‌ಐ ನೇಮಕಾತಿ ಅಕ್ರಮದ ತನಿಖೆಗೆ ಸಂಬಂಧಿಸಿದಂತೆ ಎಸ್‌ಐಟಿಯವರು ಅಶ್ವತ್ಥ ನಾರಾಯಣ ಅವರನ್ನು ಯಾವ ವಿಚಾರಕ್ಕೆ ವಿಚಾರಣೆಗೆ ಕರೆದಿದ್ದಾರೆ ಎಂಬುದರ ಬಗ್ಗೆ ಗೊತ್ತಿಲ್ಲ. ತನಿಖೆ ಇನ್ನೂ ಮುಗಿದಿಲ್ಲ. ಎಸ್‌ಐಟಿಯವರಿಗೆ ತನಿಖೆ ವೇಳೆ ಯಾವ ಮಾಹಿತಿ ಸಿಗುತ್ತದೆಯೋ, ಅದನ್ನು ಆಧರಿಸಿ ಸಂಬಂಧಿಸಿದವರನ್ನು ವಿಚಾರಣೆಗೆ ಕರೆಯುತ್ತಾರೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ರಾಜ್ಯ ಪೊಲೀಸ್ ಇಲಾಖೆಯಲ್ಲಿ 545 ಪಿಎಸ್‌ಐ ಹುದ್ದೆಗಳ ಭರ್ತಿಗೆ 2021ರ ಅಕ್ಟೋಬರ್‌ನಲ್ಲಿ ನಡೆದ ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದ ಆರೋಪ ಕೇಳಿ ಬಂದಿತ್ತು. ಹೀಗಾಗಿ ರಾಜ್ಯ ಸರ್ಕಾರ ಈ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಿತ್ತು.

ಎಸ್‌ಐಟಿ ತನಿಖೆಯಲ್ಲಿ ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿತ್ತು. 52 ಅಭ್ಯರ್ಥಿಗಳು, ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ, ಡಿವೈಎಸ್‌ಪಿ, ಕಾನ್‌ಸ್ಟೇಬಲ್‌ಗಳು, ಇನ್‌ಸ್ಪೆಕ್ಟರ್‌ಗಳು, ಮಧ್ಯವರ್ತಿಗಳು ಸೇರಿ 100ಕ್ಕೂ ಹೆಚ್ಚು ಆರೋಪಿಗಳನ್ನು ಬಂಧಿಸಲಾಗಿತ್ತು.

ಲಂಚ: ವಿಶೇಷ ತಹಶೀಲ್ದಾರ್ ಸೇರಿ ಮೂವರ ಬಂಧನ

ಬೆಂಗಳೂರು: ಜಮೀನು ಮಾಲೀಕರ ಹೆಸರನ್ನು ಪಹಣಿಯಲ್ಲಿ ಸೇರಿಸಲು ₹ 2 ಲಕ್ಷ ಲಂಚ ಪಡೆಯುತ್ತಿದ್ದ ಯಲಹಂಕ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ಮುನಿಶಾಮಿ ರೆಡ್ಡಿ ಸೇರಿ ಮೂವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಮಧ್ಯವರ್ತಿಗಳಾದ ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕ ನಾಗರಾಜು ಮತ್ತು ಸಂದೀಪ್ ಹಾಗೂ ಮುನಿಶಾಮಿ ರೆಡ್ಡಿ ಅವರನ್ನು ಬಂಧಿಸಿರುವ ಲೋಕಾಯುಕ್ತದ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–2ರ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

‘ಜಮೀನಿನ ದಾಖಲೆಗೆ ಮಾಲೀಕರ ಹೆಸರು ಸೇರಿಸುವಂತೆ ವಕೀಲ ಮಹೇಶ್ ಅವರು ಅರ್ಜಿ ಸಲ್ಲಿಸಿದ್ದರು. ಕೆಲಸ ಮಾಡಿಕೊಡಲು ವಿಶೇಷ ತಹಶೀಲ್ದಾರ್ ಅವರು ₹ 10 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ ₹ 3 ಲಕ್ಷ ಪಡೆದುಕೊಂಡಿದ್ದರು. ಎರಡನೇ ಕಂತಿನಲ್ಲಿ ₹ 2 ಲಕ್ಷ ಕೊಡುವಂತೆ ಸೂಚಿಸಿದ್ದರು. ಈ ಕುರಿತು ಮಹೇಶ್ ಅವರು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ವಿಶೇಷ ತಹಶೀಲ್ದಾರ್ ಸೂಚನೆಯಂತೆ ನಾಗರಾಜು ಅವರನ್ನು ಭೇಟಿಮಾಡಿದ ದೂರುದಾರ ₹2 ಲಕ್ಷ ನಗದನ್ನು ನೀಡಿದರು. ನಾಗರಾಜು ಹಣವನ್ನು ತನ್ನ ಸಂಬಂಧಿಯೂ ಆದ ವಿಐಟಿ ಕಾಲೇಜು ಪ್ರಯೋಗಾಲಯದ ಸಿಬ್ಬಂದಿ ಸಂದೀಪ್ ಕೈಗೆ ನೀಡಿದ್ದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತದ ಪೊಲೀಸರು, ಇಬ್ಬರನ್ನೂ ಬಂಧಿಸಿದರು. ಬಳಿಕ ಮುನಿಶಾಮಿ ರೆಡ್ಡಿ ಅವರನ್ನು ವಶಕ್ಕೆ ಪಡೆದು, ಬಂಧಿಸಲಾಯಿತು ಎಂದು ತನಿಖಾ ಸಂಸ್ಥೆ ಮಾಹಿತಿ ನೀಡಿದೆ.

ಪರಿಶಿಷ್ಟರಿಗೆ ಶೇ 24.10 ಮೀಸಲಾತಿ: ಘೋಷಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ₹2 ಕೋಟಿವರೆಗಿನ ಸರಕು, ಸೇವೆ, ಸಂಗ್ರಹಣೆ, ಹೊರಗುತ್ತಿಗೆ ಪೂರೈಕೆಯಲ್ಲಿ ಪರಿಶಿಷ್ಟ ಸಮುದಾಯದವರಿಗೆ ಶೇ 24.10ರಷ್ಟು ಮೀಸಲಾತಿ ನೀಡಲು ಕೆಟಿಪಿಪಿ ಕಾಯ್ದೆಗೆ ತಿದ್ದುಪಡಿ ತರುವ ವಿಚಾರವನ್ನು 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಬೇಕು’ ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘ ಆಗ್ರಹಿಸಿದೆ.

‘ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ನೇಮಕಾತಿ, ಸೋಲಾರ್ ಸೌಲಭ್ಯ, ನೀರು ಶುದ್ಧೀಕರಣ ಘಟಕ, ವಿದ್ಯಾರ್ಥಿ ವಸತಿ ನಿಲಯಗಳಿಗೆ ಹಾಸಿಗೆ, ದಿಂಬು ಹೀಗೆ ನಾನಾ ವಸ್ತುಗಳನ್ನು ಟೆಂಡರ್ ಆಹ್ವಾನಿಸಿ ಪೂರೈಸಲಾಗುತ್ತದೆ. ಈ ಖರೀದಿಗಳಿಗೆ ವಾರ್ಷಿಕ ಸುಮಾರು ₹ 6 ಸಾವಿರ ಕೋಟಿಯನ್ನು ಸರ್ಕಾರ ವ್ಯಯ ಮಾಡುತ್ತದೆ. ಕೆಟಿಪಿಪಿ ಕಾಯ್ದೆ ನಿಯಮಗಳು ಕಠಿಣವಾಗಿರುವುದರಿಂದ ಮತ್ತು ಎಸ್‌ಸಿ, ಎಸ್‌ಟಿ ಸಮುದಾಯವರಿಗೆ ಮೀಸಲಾತಿ ಇಲ್ಲದೇ ಇರುವುದರಿಂದ ಎಲ್ಲ ಟೆಂಡರ್‌ಗಳು ಶ್ರೀಮಂತ ಗುತ್ತಿಗೆದಾರರ ಪಾಲಾಗುತ್ತಿದೆ. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ’ ಎಂದು ಸಂಘದ ಅಧ್ಯಕ್ಷ ವಿ. ಲೋಕೇಶ್ ತಿಳಿಸಿದ್ದಾರೆ.

ಖರೀದಿ ಟೆಂಡರ್

‘ಗರಿಷ್ಠ ಮೊತ್ತದ ಗುತ್ತಿಗೆಗಳನ್ನು ವಿಕೇಂದ್ರೀಕರಿಸಿ ಮೀಸಲಾತಿ ಕಲ್ಪಿಸುವುದು ತುರ್ತು ಅಗತ್ಯವಾಗಿದೆ. ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ ಮಂಡಳಿಗಳಲ್ಲಿ ಅಗತ್ಯ ಇರುವ ಸರಕು ಸಾಮಗ್ರಿಗಳ ಖರೀದಿಯಲ್ಲಿ ಶೇ 20ರಷ್ಟು ಸಾಮಗ್ರಿಗಳನ್ನು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಂದ ಖರೀದಿಸಬೇಕೆಂಬ ಕಾನೂನಿದೆ. ಈ ಟೆಂಡರ್‌ಗಳಲ್ಲಿ ಪರಿಶಿಷ್ಟರಿಗೆ ಶೇ 4ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಸಾರ್ವಜನಿಕ ಸಂಗ್ರಹಣೆಯಲ್ಲಿ ಎಸ್‌ಸಿಗಳಿಗೆ ಶೇ 20, ಎಸ್‌ಟಿಗಳಿಗೆ ಶೇ 5ರಷ್ಟು ಮೀಸಲಾತಿ ನಿಗದಿಪಡಿಸಿ ಸಮಾಜ ಕಲ್ಯಾಣ ಇಲಾಖೆ 2005ರಲ್ಲಿಯೇ ಸುತ್ತೋಲೆ ಹೊರಡಿಸಿದೆ. ಆದರೆ, ಕಾಯ್ದೆ ಆಗದ ಕಾರಣ ಯಾವುದೇ ಇಲಾಖೆ ಈ ಸುತ್ತೋಲೆಯನ್ನು ಪಾಲಿಸುತ್ತಿಲ್ಲ. ಪರಿಶಿಷ್ಟರಿಗೆ ಮೀಸಲಾತಿ ಒದಗಿಸಲು ಕಾಯ್ದೆ ತಿದ್ದುಪಡಿ ಮಾಡುವ ವಿಚಾರವನ್ನು ಮುಂಬರುವ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಬೇಕು’ ಎಂದೂ ಅವರು ಮನವಿ ಮಾಡಿದ್ದಾರೆ.

ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿ: ಹೆಸರಘಟ್ಟ ತಂಡ ದ್ವಿತೀಯ

ಬೆಂಗಳೂರು ರಾಯಲ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಆನೇಕಲ್: ಇಲ್ಲಿನ ಪಟ್ಟಣದ ಎಎಸ್‌ಬಿ ಮೈದಾನದಲ್ಲಿ ನಡೆದ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಬೆಂಗಳೂರಿನ ಹೆಸರಘಟ್ಟ ತಂಡವನ್ನು ಮಣಿಸಿದ ಬೆಂಗಳೂರಿನ ರಾಯಲ್ಸ್ ತಂಡ ಜಯ ಸಾಧಿಸಿ, ₹1 ಲಕ್ಷ ನಗದು ಮತ್ತು ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಬಿ.ಶಿವಣ್ಣ ಅಭಿಮಾನಿಗಳ ಬಳಗ, ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಮತ್ತು ಬೆಂಗಳೂರು ನಗರ ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಮೂರು ದಿನ ಕಬಡ್ಡಿ ಪಂದ್ಯಾವಳಿಯಲ್ಲಿ ಆಯೋಜಿಸಿತು. ಮಂಡ್ಯ, ಕೋಲಾರ, ನೆಲಮಂಗಲ, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ 35 ತಂಡಗಳು ಭಾಗವಹಿಸಿದ್ದವು.

ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ವಿಜೇತ ಬೆಂಗಳೂರಿನ ರಾಯಲ್ಸ್ ತಂಡಕ್ಕೆ ಬಹುಮಾನ ವಿತರಿಸಲಾಯಿತು. ಆನೇಕಲ್ ಶಾಸಕ ಬಿ.ಶಿವಣ್ಣ ಉಪಸ್ಥಿತರಿದ್ದರು

ಭಾನುವಾರ ರಾತ್ರಿ ಬೆಂಗಳೂರಿನ ರಾಯಲ್ಸ್ ತಂಡ ಮತ್ತು ಹೆಸರಘಟ್ಟ ತಂಡ ಫೈನಲ್‌ನಲ್ಲಿ ಸೆಣಸಿದವು.

ವಿಜೇತ ತಂಡಕ್ಕೆ ₹1ಲಕ್ಷ ನಗದು, ಟ್ರೋಫಿ, ರನ್ನರ್ಸ್‌ಅಪ್ ತಂಡಕ್ಕೆ ₹75 ಸಾವಿರ, ಟ್ರೋಫಿ, ಮೂರನೇ ಸ್ಥಾನ ಪಡೆದ ಆನೇಕಲ್ ತಂಡಕ್ಕೆ ₹25 ಸಾವಿರ ನಗದು ಟ್ರೋಫಿ, ನಾಲ್ಕನೇ ಸ್ಥಾನ ಪಡೆದ ನೆಲಮಂಗಲ ಶ್ರೀಸಾಯಿ ತಂಡಕ್ಕೆ ಟ್ರೋಫಿ ನೀಡಲಾಯಿತು.

ತಾಲ್ಲೂಕು ಮಟ್ಟದ ಮಹಿಳಾ ಕಬಡ್ಡಿ ಪಂದ್ಯದಲ್ಲಿ ಹೊಸರೋಡ್ ತಂಡವನ್ನು ಸೋಲಿಸಿ ಆನೇಕಲ್ ತಂಡ ಜಯ ಸಾಧಿಸಿತು. ವಿಜೇತ ತಂಡಕ್ಕೆ ಟ್ರೋಫಿ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು. ಪುರುಷರ ತಾಲ್ಲೂಕು ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಆನೇಕಲ್ ತಂಡ ಪ್ರಥಮ ಸ್ಥಾನ ಪಡೆಯಿತು.

ನೀರಿನ ಸಮಸ್ಯೆ ಮುಂಜಾಗ್ರತಾ ಕ್ರಮಕ್ಕೆ ಸೂಚನೆ

ಬೆಂಗಳೂರು: ಬೇಸಿಗೆಯಲ್ಲಿ ನೀರಿನ ಸಮಸ್ಯೆ ತಲೆದೋರದಂತೆ ಕ್ರಮ ವಹಿಸುವ ಸಂಬಂಧ, ಹಿಂದಿನ ವರ್ಷ ಬಳಸಿದ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿ ಸೇವಾ ಠಾಣೆವಾರು ಗುರುತಿಸಿರುವ ಸ್ಥಳಗಳಲ್ಲಿ ಅಳವಡಿಸುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರು ಸೋಮವಾರ ಆದೇಶಿಸಿದ್ದಾರೆ.

ಹೆಚ್ಚುವರಿ ಟ್ಯಾಂಕ್‌ಗಳ ಅವಶ್ಯಕತೆ ಕಂಡುಬಂದರೆ, ನಿರ್ವಹಣಾ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ಹಂತದಲ್ಲಿಯೇ ನಿಯಮಾನುಸಾರ ದರದಲ್ಲಿ ಖರೀದಿ ಮಾಡಿ ಅಳವಡಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ. ನಿರ್ವಹಣಾ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಖಾಸಗಿ ನೀರಿನ ಟ್ಯಾಂಕರ್‌ಗಳಿಗೆ ನಿಯಮಾನುಸಾರ ದರ ನಿಗದಿಪಡಿಸಬೇಕು. ಅವಶ್ಯಕ ಷರತ್ತುಗಳನ್ನು ವಿಧಿಸಿ ಒಪ್ಪಂದ ಮಾಡಿಕೊಳ್ಳಬೇಕು. ಜಿಪಿಎಸ್ ಅಳವಡಿಸಿದ ಟ್ಯಾಂಕರ್‌ಗಳನ್ನು ಮಾತ್ರ ಬಳಸಬೇಕು’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ನಿಯೋಜಿತ ಸ್ಥಳದಲ್ಲಿ ಅಳವಡಿಸಿರುವ ಸಿಂಟೆಕ್ಸ್ ಟ್ಯಾಂಕ್‌ಗಳು ಮತ್ತು ಖಾಸಗಿ ಖಾಸಗಿ ನೀರಿನ ಟ್ಯಾಂಕರ್‌ಗಳ ಕುರಿತ ಮಾಹಿತಿಯನ್ನು ಪ್ರತಿ ವಾರ ಕಚೇರಿಗೆ ಸಲ್ಲಿಸುವಂತೆ ಅಧ್ಯಕ್ಷರು ಆದೇಶದಲ್ಲಿ ಸೂಚಿಸಿದ್ದಾರೆ.

ಸಂಪಾದಿತ ‘ನೆಲದ ಕಾಲುಗಳ ನೆನೆದು’ ಪುಸ್ತಕ ಬಿಡುಗಡೆ

ಜ್ಞಾನಭಾರತಿ: ಕವಿ ಸಿದ್ದಲಿಂಗಯ್ಯ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದಲಿತ, ವಿದ್ಯಾರ್ಥಿ, ಕಾರ್ಮಿಕ ಮತ್ತು ಮಹಿಳಾ ಹೋರಾಟದ ಚಳವಳಿಗೆ ಅಡಿಪಾಯ ಹಾಕಿದವರು ಕವಿ ಸಿದ್ದಲಿಂಗಯ್ಯ. 80ರ ದಶಕದಲ್ಲಿ ಮಾರ್ಕ್ಸ್‌ವಾದ ಪರಿಚಯಿಸಿ ಅಂದಿನ ಯುವ ಸಮೂಹವನ್ನು ಜಾಗೃತಗೊಳಿಸಿದರು ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಉಪಾಧ್ಯಕ್ಷ ಎಂ.ವೆಂಕಟಸ್ವಾಮಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಸಹಯೋಗ ದೊಂದಿಗೆ ‘ನಾಡೋಜ ಕವಿ ಡಾ.ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನ’ ಸೋಮವಾರ ಆಯೋಜಿಸಿದ್ದ ಕವಿ ಸಿದ್ದಲಿಂಗಯ್ಯ ಅವರ 71ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆ, ತತ್ವ, ಸಿದ್ಧಾಂತ, ಮಾರ್ಗ, ಚಿಂತನೆಗಳನ್ನು ಮೈಗೂಡಿಸಿಕೊಂಡು ಅದೇ ಬದ್ಧತೆಯಲ್ಲಿ ಸಿದ್ದಲಿಂಗಯ್ಯ ದುಡಿದರು. ಅವರ ಬರಹ, ಚಿಂತನೆ, ಆಲೋಚನೆ ಕ್ರಮ ಜೀವಂತವಾಗಿದೆ. ಅವರು ಆರಂಭಿಸಿದ ಹೋರಾಟ ರಾಜ್ಯದ ಚಳವಳಿಯ ದಿಕ್ಕನ್ನೇ ಬದಲಿಸಿತು ಎಂದರು.

ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಕೆ.ಷರೀಫಾ, ರಮಾಕುಮಾರಿ ಸಿದ್ದಲಿಂಗಯ್ಯ, ಡಾ.ಮಾನಸ ಸಿದ್ದಲಿಂಗಯ್ಯ ಅವರು ಅಂಬೇಡ್ಕರ್ ಮತ್ತು ಸಿದ್ದಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಸಿದ್ದಲಿಂಗಯ್ಯ ಅವರು ರಾಜಕೀಯ ಪಕ್ಷ ಹುಟ್ಟು ಹಾಕಿದ್ದರೆ ಕರ್ನಾಟಕದಲ್ಲಿ ದಲಿತ ಸಮುದಾಯವು ರಾಜ್ಯವನ್ನೇ ಆಳುತ್ತಿತ್ತು. ಅವರು ಮುಖ್ಯಮಂತ್ರಿಯಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. 80ರ ದಶಕದಲ್ಲಿ ಶುರುವಾದ ಸೈದ್ಧಾಂತಿಕ ಹೋರಾಟ, ಚಳವಳಿಗಳು ಅಧಿಕಾರದ ಗದ್ದುಗೆ ಹಿಡಿಯುವ ಪ್ರಯತ್ನ ಮಾಡಿಲ್ಲ. ಸಿದ್ಧಾಂತದ ಹೋರಾಟ ಅಧಿಕಾರವನ್ನು ಪಡೆಯುವ ಮೂಲಕ ತಾರ್ಕಿಕ ಅಂತ್ಯ ಕಾಣಬೇಕಾಗಿತ್ತು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕೆ.ವಿ.ರವೀಂದ್ರ ಸಂಪಾದಿತ ‘ನೆಲದ ಕಾಲುಗಳ ನೆನೆದು’ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಕುಲಪತಿ ಎಸ್.ಎಂ.ಜಯಕರ, ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ವಿಶ್ವನಾಥ್, ವಿಮರ್ಶಕ ಎಸ್.ಆರ್.ವಿಜಯಶಂಕರ್, ಸಿಂಡಿಕೇಟ್ ಸದಸ್ಯರಾದ ರಮೇಶ್ ಬಾಬು, ಕೆ.ಷರೀಫಾ, ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನ ಅಧ್ಯಕ್ಷೆ ಮಾನಸಾ ಸಿದ್ದಲಿಂಗಯ್ಯ, ಉಪಾಧ್ಯಕ್ಷೆ ರಮಾ ಕುಮಾರಿ ಸಿದ್ದಲಿಂಗಯ್ಯ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಬಿ.ಗಂಗಾಧರ, ಪ್ರಾಧ್ಯಾಪಕ ಪ್ರೊ.ಡಿ.ಡೊಮಿನಿಕ್ ಉಪಸ್ಥಿತರಿದ್ದರು.

ಅಲೆಮಾರಿಗಳಿಗೆ ಶೇ 4 ಒಳಮೀಸಲಾತಿ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಗುರುತಿಸಿದ 51 ಅಲೆಮಾರಿ, ವಿಮುಕ್ತ ಬುಡಕಟ್ಟು ಮತ್ತು ಸೂಕ್ಷ್ಮ ಸಮುದಾಯಗಳಿಗೆ ಶೇ 4ರಷ್ಟು ಒಳಮೀಸಲಾತಿ ಕಲ್ಪಿಸಬೇಕು ಎಂದು ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮ ಮನವಿ ಮಾಡಿದೆ.

ಒಳಮೀಸಲಾತಿ ವಿಚಾರಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರನ್ನು ಭೇಟಿ ಮಾಡಿದ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ, ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಅಲೆಮಾರಿಗಳಿಗೆ ಇರುವರೆಗೂ ಸೂಕ್ತ ಮೀಸಲಾತಿ ಸಿಕ್ಕಿಲ್ಲ. ಒಳ ಮೀಸಲಾತಿಯಲ್ಲಿ ಪ್ರಾತಿನಿಧ್ಯ ದೊರೆತರೆ ಭವಿಷ್ಯದಲ್ಲಿ ಅವರ ಜೀವನ ಹಸನಾಗಬಹುದು ಎಂದು ಹೇಳಿದ್ದಾರೆ.

ಬುಡ್ಗಜಂಗಮ, ಹಂದಿಜೋಗಿ, ಶಿಳ್ಳೆಕ್ಯಾತ, ಸುಡುಗಾಡುಸಿದ್ದ, ಚೆನ್ನದಾಸರ್, ಹೊಲೆಯದಾಸರ್, ಮಾಲದಾಸರಿ ಮತ್ತಿತರ ಅಲೆಮಾರಿ ಜನರು ನೆಲೆ ಮತ್ತು ನೆಲದ ಒಡೆತನವಿಲ್ಲದೇ, ಒಂದೆಡೆ ನೆಲೆ ನಿಲ್ಲಲಾಗದ ಸ್ಥಿತಿಯಲ್ಲಿದ್ದಾರೆ. ನಿರ್ದಿಷ್ಟ ವೃತ್ತಿ ಇಲ್ಲದೇ ಊರೂರು ಅಲೆದು ಬದುಕು ಸಾಗಿಸುತ್ತಿದ್ದಾರೆ. ಭಿಕ್ಷಾಟನೆ, ತೊಗಲಗೊಂಬೆ, ಹಚ್ಚೆ ಹಾಕುವುದು, ತತ್ವಪದ ಹಾಡುವುದು, ಜೀತ, ಕೂಲಿ, ಪಶುಪಾಲನೆ, ಹಂದಿ ಸಾಕಣೆ, ಬುಟ್ಟಿ ಹೆಣೆಯುವುದು, ಕಸಬರಿಗೆ ಕಟ್ಟುವುದು, ಕೊರವಂಜಿ, ಕಣಿ ಹೇಳುವುದು, ವೇಷಧಾರಿಗಳು, ಶಹನಾಯಿ ನುಡಿಸುವುದು, ಚರ್ಮಾಧಾರಿತ ಗುಡಿಕೈಗಾರಿಕೆ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಾರೆ. 2011ರ ಜನಗಣತಿಯ ಪ್ರಕಾರ ಒಟ್ಟು ಅಲೆಮಾರಿಗಳ ಜನಸಂಖ್ಯೆಯಲ್ಲಿ ಶೇ 66.67 ಅನಕ್ಷರಸ್ಥರಿದ್ದಾರೆ. ಜನಗಣತಿಯ ಅಂಕಿ,ಅಂಶಗಳಲ್ಲೂ ವ್ಯತ್ಯಾಸವಿದೆ ಎಂದು ವಿವರಿಸಿದ್ದಾರೆ

ಜಿ.ಪಲ್ಲವಿ

101 ಸಮುದಾಯಗಳ ಅಂತರ್ ಹಿಂದುಳಿದಿರುವಿಕೆ, ಸಮರ್ಪಕ ಪ್ರಾತಿನಿಧ್ಯದ ಕೊರತೆ ಹಾಗೂ ಪರಿಶೀಲನಾರ್ಹ ದತ್ತಾಂಶಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಬೇಕು. 70 ವರ್ಷಗಳಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮರ್ಪಕ ಪ್ರಾತಿನಿಧ್ಯದ ದೊರಕದ ಸಮುದಾಯಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಬೇಕು. ಒಳಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗಕಷ್ಟೇ ಸೀಮಿತಗೊಳಿಸದೆ ರಾಜಕೀಯ, ಸಹಕಾರ ಮತ್ತು ಸ್ಥಳೀಯ ಸಂಸ್ಥೆಯ ಚುನಾವಣೆಗಳಿಗೂ ವಿಸ್ತರಿಸಬೇಕು. ಸೀಟು ಹಂಚಿಕೆ, ಬಡ್ತಿ ರೋಸ್ಟರ್‌ಗಳಿಗೂ ಅನ್ವಯಿಸಬೇಕು. ಕುಲಶಾಸ್ತ್ರೀಯ ಮತ್ತು ಮಾನವ ಶಾಸ್ತ್ರೀಯ ಅಧ್ಯಯನಗಳನ್ನು ಆಧರಿಸಿ ಕುಲಶಾಸ್ತ್ರೀಯ ಸಾಮ್ಯತೆ ಇರುವ ಸಮುದಾಯಗಳನ್ನು ಒಂದೇ ಗುಂಪಿನಲ್ಲಿ ಸೇರಿಸಲು ಶಿಫಾರಸು ಮಾಡಬೇಕು ಎಂದು ಕೋರಿದ್ದಾರೆ.

ಜೆಎನ್‌ಯು ಪ್ರಾಧ್ಯಾಪಕ ಅಮಾನತು

ನವದೆಹಲಿ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಪ್ರಾಧ್ಯಾಪಕ ರಾಜೀವ್ ಸಿಜಾರಿಯಾ ಅವರನ್ನು ಅಮಾನತುಗೊಳಿಸಿ ವಿ.ವಿಯ ಕುಲಪತಿ ಶಾಂತಿಶ್ರೀ ಪಂಡಿತ್ ಆದೇಶ ಹೊರಡಿಸಿದ್ದಾರೆ.

ಆಂಧ್ರಪ್ರದೇಶದ ಗುಂಟೂರಿನಲ್ಲಿರುವ ಕೋನೇರು ಲಕ್ಷ್ಮಯ್ಯ ಎಜುಕೇಷನ್ ಫೌಂಡೇಷನ್‌ಗೆ (ಕೆಎಲ್‌ಇಎಫ್) ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತಿನಿಂದ (ನ್ಯಾಕ್) ‘ಎ + + ಗ್ರೇಡ್’ ಕೊಡಿಸಲು ಲಂಚ ಪಡೆದ ಆರೋಪದಡಿ ಸಿಬಿಐ ಶನಿವಾರ ಸಿಜಾರಿಯಾ ಸೇರಿದಂತೆ 10 ಮಂದಿಯನ್ನು ಬಂಧಿಸಿತ್ತು. ಸಿಜಾರಿಯಾ ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಅವರನ್ನು ಅಮಾನತು ಮಾಡಲಾಗಿದೆ ಎಂದು ಕುಲಪತಿ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಮಂಗಳವಾರ, ಫೆಬ್ರುವರಿ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 35 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಸಾಮಾನ್ಯ ಭಾಷೆಯಲ್ಲಿ 'ಸರ್ಪಸುತ್ತು' ಎಂದಾಗಿರುವ ಹರ್ಪಿಸ್‌ಗೆ ಕಾರಣ ಒಂದು ವೈರಾಣು



ಆಳ-ಅಗಲ ಮೋದಿ ವರ್ಚಸ್ಸು V/S ಕೇಜ್ರಿವಾಲ್ ಬ್ರ್ಯಾಂಡ್

ದೆಹಲಿ: ಬಹಿರಂಗ ಪ್ರಚಾರ ಅಂತ್ಯ 11

ದೆಹಲಿಗೆ ತಲುಪಿದ ಬಿಜೆಪಿ ಬಣ ಜಗಳ 6

ಸೆನ್ಸೆಕ್ಸ್	ನಿಫ್ಟಿ	₹/$
77,186	23,361	87.17

ಅತ್ಯಾಚಾರ: 1,932 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆ



● ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲಿ ಐದು ವರ್ಷಗಳಲ್ಲಿ 2,803 ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದ್ದು, 75 ಪ್ರಕರಣಗಳಲ್ಲಷ್ಟೇ ಅಪರಾಧ ಸಾಬೀತಾಗಿ ಶಿಕ್ಷೆಯಾಗಿದೆ. ಸಾಕ್ಷ್ಯಾಧಾರಗಳ ಕೊರತೆ, ಸುಳ್ಳು ಪ್ರಕರಣಗಳು, ತನಿಖೆ ಹಾಗೂ ವಿಚಾರಣೆ ವಿಳಂಬದಿಂದ 1,932 ಪ್ರಕರಣಗಳಲ್ಲಿ ಆರೋಪಿಗಳ ಖುಲಾಸೆ ಆಗಿದೆ.

ಈ ಅವಧಿಯಲ್ಲಿ 2,007 ಪ್ರಕರಣಗಳ ವಿಚಾರಣೆ ರಾಜ್ಯದ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಪೂರ್ಣಗೊಂಡಿದೆ. 796 ಪ್ರಕರಣಗಳು ಇನ್ನೂ ವಿಚಾರಣಾ ಹಂತದಲ್ಲಿವೆ. ಅತ್ಯಾಚಾರ ಪ್ರಕರಣಗಳು ಏರಿಕೆ ಆಗುತ್ತಿದ್ದರೂ ಶಿಕ್ಷೆಯ ಪ್ರಮಾಣ ಕಡಿಮೆಯಾಗಿದೆ. ವಿಚಾರಣೆ ಪೂರ್ಣಗೊಂಡಿರುವ ಒಟ್ಟು ಪ್ರಕರಣಗಳ ಪೈಕಿ ಶೇಕಡ 3.73ರಷ್ಟು ಪ್ರಕರಣಗಳಲ್ಲಿ ಮಾತ್ರವೇ ಶಿಕ್ಷೆಯಾಗಿದೆ.

ಐದು ವರ್ಷಗಳಲ್ಲಿ ಬೆಂಗಳೂರಿನಲ್ಲಿ 714 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಅತ್ಯಾಚಾರ ಪ್ರಕರಣಗಳಲ್ಲಿ 884 ಆರೋಪಿಗಳು ಭಾಗಿಯಾಗಿರುವುದು ಪೊಲೀಸರ ತನಿಖೆಯಿಂದ ಪತ್ತೆ ಆಗಿದೆ. ಒಟ್ಟು 812 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ಅವಧಿಯಲ್ಲಿ 49 ಮಂದಿಗಷ್ಟೇ ಶಿಕ್ಷೆಯಾಗಿದೆ. 104 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ. ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಹಾಸನ ಜಿಲ್ಲೆಯಲ್ಲಿ ಹೆಚ್ಚಿನ ಅತ್ಯಾಚಾರ ಪ್ರಕರಣಗಳು ವರದಿ ಆಗಿವೆ.

ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೊ (ಎನ್‌ಸಿಆರ್‌ಬಿ) 2023ರಲ್ಲಿ ಪ್ರಕಟಿಸಿದ 'ಕ್ರೈಂ ಇನ್ ಇಂಡಿಯಾ' ಅಂಕಿಅಂಶದ ಪ್ರಕಾರ, ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳಲ್ಲಿ ರಾಜ್ಯವು ದೇಶದಲ್ಲಿ 17ನೇ ಸ್ಥಾನದಲ್ಲಿತ್ತು.

'ಕೃತ್ಯ ನಡೆದು 24 ಗಂಟೆಯ ಒಳಗೆ ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು. ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಸಾಕ್ಷ್ಯಾಧಾರ ಸಂಗ್ರಹಿಸಬೇಕು. ಆದರೆ, ಹಲವು ಪ್ರಕರಣಗಳಲ್ಲಿ ತ್ವರಿತ ಕ್ರಮ ಆಗುತ್ತಿಲ್ಲ. ಇದರಿಂದ ಆರೋಪಿಗಳು ಸುಲಭವಾಗಿ ಪ್ರಕರಣದಿಂದ ಹೊರ ಬರುತ್ತಿದ್ದಾರೆ' ಎಂದು ವಕೀಲರೊಬ್ಬರು ಹೇಳಿದರು.

'ಸುರಕ್ಷತಾ ದ್ವೀಪ' ಸ್ಥಾಪನೆ

'ಮಹಿಳಾ ಹಾಗೂ ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಬೆಂಗಳೂರು ನಗರದಲ್ಲಿ 241 ಹೊಯ್ಸಳ ವಾಹನಗಳು ಕಾರ್ಯಾಚರಿಸುತ್ತಿವೆ. 'ಸೇಫ್ ಸಿಟಿ' ಯೋಜನೆ ಅಡಿ 7,500 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಮಹಿಳೆಯರ ಸುರಕ್ಷತೆಗಾಗಿ 30 ಸ್ಥಳಗಳಲ್ಲಿ 'ಸುರಕ್ಷತಾ ದ್ವೀಪ' (ಸೇಫ್ಟಿ ಐಲ್ಯಾಂಡ್) ಸ್ಥಾಪಿಸಲಾಗಿದೆ. ಮಹಿಳಾ ಪೊಲೀಸ್ ಠಾಣೆಗಳಲ್ಲಿ 35 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನೂ ಸ್ಥಾಪಿಸಲಾಗಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಒಟ್ಟು 1,050 'ಮಹಿಳಾ ಸಹಾಯ ಡೆಸ್ಕ್' ಸ್ಥಾಪಿಸಲಾಗಿದೆ. ಈ ಡೆಸ್ಕ್‌ಗಳು ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ದಿನದ 24 ಗಂಟೆಯೂ ಕೆಲಸ ಮಾಡುತ್ತಿವೆ

ಜಿ.ಪರಮೇಶ್ವರ, ಗೃಹ ಸಚಿವ

5ನೇ ಪುಟ ನೋಡಿ

ವಿಪಕ್ಷದಲ್ಲಿದ್ದಾಗ ವಿರೋಧಿಸಿದ್ದ ಕಾಂಗ್ರೆಸ್ ● 3 ಕಾಯ್ದೆಗಳಡಿ ಶಿಫಾರಸಿಗೆ ಆಯೋಗಕ್ಕೆ ಸೂಚನೆ

ಹಳೆ ಕಾಯ್ದೆಗೆ ಜೋತುಬಿದ್ದ ರಾಜ್ಯ



● ಜಯಸಿಂಹ ಆರ್.

ಬೆಂಗಳೂರು: ರೈತರು, ಕಾಂಗ್ರೆಸ್‌ನ ತೀವ್ರ ಪ್ರತಿರೋಧದಿಂದಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಿಂಪಡೆದಿದ್ದ ಮೂರು ಕೃಷಿ ಕಾಯ್ದೆಗಳ ಅನ್ವಯವೇ, ರೈತರ ಆದಾಯ ಹೆಚ್ಚಿಸಲು ಶಿಫಾರಸು ನೀಡಿ ಎಂದು ಕರ್ನಾಟಕ ಕೃಷಿ ಬೆಲೆ ಆಯೋಗಕ್ಕೆ ರಾಜ್ಯ ಸರ್ಕಾರ ಸೂಚಿಸಿದೆ.

ಕೃಷಿ ಬೆಲೆ ಆಯೋಗಕ್ಕೆ ನೇಮಕ ಮಾಡಲಾದ ಅಧ್ಯಕ್ಷ ಮತ್ತು ಸದಸ್ಯರಿಗೆ ಷರತ್ತು–ನಿಬಂಧನೆ ಮತ್ತು ಕರ್ತವ್ಯಗಳನ್ನು ನಿಗದಿ ಮಾಡಿ 2024ರ ಡಿಸೆಂಬರ್ 24ರಂದು ರಾಜ್ಯ ಕೃಷಿ ಇಲಾಖೆ ಹೊರಡಿಸಿದ ಆದೇಶದಲ್ಲಿ ಈ ಉಲ್ಲೇಖವಿದೆ. ಕೇಂದ್ರ ಸರ್ಕಾರದ ಮೂರು ಕಾಯ್ದೆಗಳು ಮತ್ತು ಅದರ ಆಧಾರದಲ್ಲಿ 2020ರ ರಾಜ್ಯ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಆಧಾರವಾಗಿರಿಸಿಕೊಳ್ಳುವಂತೆ ತಿಳಿಸಿದೆ.

'ರೈತರ ಆದಾಯ ಹೆಚ್ಚಿಸಲು, ಕೃಷಿ ಉತ್ಪನ್ನಗಳಿಗೆ ಮುಕ್ತ ಮಾರುಕಟ್ಟೆ ಮತ್ತು ಉತ್ತಮ ಬೆಲೆ ಒದಗಿಸಿಕೊಡಲು ಈ ಕಾಯ್ದೆಗಳ ಅನ್ವಯ ಅಧ್ಯಯನ ನಡೆಸಿ' ಎಂದೂ ಹೇಳಿದೆ.

ಮುಖ್ಯಾಂಶಗಳು

- ಕೇಂದ್ರದ ರದ್ದಾದ ಕಾಯ್ದೆಗಳ ಅಡಿಯಲ್ಲಿ ಶಿಫಾರಸಿಗೆ ಸೂಚನೆ
- 2023ರ ಜುಲೈನಲ್ಲಿ ಷರತ್ತು, ನಿಬಂಧನೆ, ಕರ್ತವ್ಯ ನಿಗದಿ
- ಈಗಲೂ ಅದೇ ಸೂಚನೆ ಪಾಲಿಸಲು ಆಯೋಗಕ್ಕೆ ಆದೇಶ

2020ರಲ್ಲಿ ಕೇಂದ್ರ ಸರ್ಕಾರವು ರೈತ ಉತ್ಪನ್ನ ಮತ್ತು ವಾಣಿಜ್ಯ ಉತ್ತೇಜನ ಹಾಗೂ ಸೌಲಭ್ಯಗಳ ಕಾಯ್ದೆ–2020, ರೈತರ ಸಾಮರ್ಥ್ಯ ಅಭಿವೃದ್ಧಿ ಮತ್ತು ರಕ್ಷಣೆ ಕಾಯ್ದೆ–2020 ಮತ್ತು ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ–2020ಗಳನ್ನು ಸುಗ್ರೀವಾಜ್ಞೆಗಳ ಮೂಲಕ ಜಾರಿಗೆ ತಂದಿತ್ತು. ರಾಜ್ಯದ ಆಗಿನ ಬಿಜೆಪಿ ಸರ್ಕಾರವು ಎಪಿಎಂಸಿಗಳ ಹೊರಗೂ ಕೃಷಿ ಉತ್ಪನ್ನಗಳ ಮಾರಾಟ ಹಾಗೂ ಖರೀದಿಗೆ ಅವಕಾಶ ಮಾಡಿಕೊಡಲು ಎಪಿಎಂಸಿ ಕಾಯ್ದೆಗಳಿಗೆ ತಿದ್ದುಪಡಿ ತಂದಿತ್ತು.

ಈ ಎಲ್ಲಾ ತಿದ್ದುಪಡಿಗಳು ರೈತರಿಗೆ ಮಾರಕ ಮತ್ತು ಇವುಗಳ ಹಿಂದೆ ಕಾರ್ಪೊರೇಟ್ ಲಾಬಿ ಇದೆ ಎಂದು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿತ್ತು. 2023ರ ವಿಧಾನಸಭಾ ಚುನಾವಣೆಯ ವೇಳೆ ಕಾಂಗ್ರೆಸ್ ಮಂಡಿಸಿದ್ದ ಪ್ರಣಾಳಿಕೆಯಲ್ಲೂ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆಯುವುದಾಗಿ ಘೋಷಿಸಿತ್ತು.

ರೈತರು ದೆಹಲಿ ಗಡಿಯಲ್ಲಿ ಈ ಕಾಯ್ದೆಗಳ ವಿರುದ್ಧ ನಡೆಸಿದ ಹೋರಾಟದ ಫಲವಾಗಿ 2021ರ ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರವು, ಅವುಗಳನ್ನು ವಾಪಸ್ ಪಡೆಯಿತು. ಆದರೆ ಅವುಗಳ ಆಧಾರದಲ್ಲಿ ರಾಜ್ಯದಲ್ಲಿ 2020ರಲ್ಲಿ ಜಾರಿಗೆ ತರಲಾದ ಎಪಿಎಂಸಿ ತಿದ್ದುಪಡಿ ಕಾಯ್ದೆ ಇನ್ನೂ ಜಾರಿಯಲ್ಲಿದೆ.

2023ರ ಜುಲೈ 27ರಂದು ಕೃಷಿ ಬೆಲೆ ಆಯೋಗದ ಅವಧಿಯನ್ನು ಮೂರು ವರ್ಷಗಳವರೆಗೆ ವಿಸ್ತರಿಸಿ ಕಾಂಗ್ರೆಸ್ ಸರ್ಕಾರವು ಆದೇಶ ಹೊರಡಿಸಿತ್ತು. ಆಗಲೇ ಮೇಲಿನ ಕಾಯ್ದೆಗಳಡಿಯಲ್ಲಿ ಶಿಫಾರಸು ನೀಡಿ ಎಂದು ಸೂಚಿಸಿತ್ತು. 2024ರ ಡಿಸೆಂಬರ್‌ನಲ್ಲಿ ಹೊರಡಿಸಲಾದ ಆದೇಶದಲ್ಲೂ ಯಥಾವತ್ ಸೂಚನೆಗಳನ್ನು ಕಾಯ್ದುಕೊಂಡಿದೆ.

ಕಾಂಗ್ರೆಸ್ ಸರ್ಕಾರದ ಈ ನಡೆಗೆ ರಾಜ್ಯದ ರೈತರ ಹಕ್ಕುಗಳ ಹೋರಾಟಗಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಪತ್ರ ಬರೆದಿದ್ದಾರೆ.

'ಮಾತು ಮರೆತ ಸರ್ಕಾರ'

ಕೇಂದ್ರದ ಮೂರು ಕರಾಳ ಕೃಷಿ ಕಾಯ್ದೆಗಳ ಜಾರಿಯಲ್ಲಿ ಪಾತ್ರವಹಿಸಿದ್ದ ವ್ಯಕ್ತಿಯನ್ನೇ ರಾಜ್ಯದ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾಗಿ ನೇಮಕಮಾಡಿರುವುದು ಸರಿಯಲ್ಲ. ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆಯುತ್ತೇವೆ ಎಂದು ಹೇಳುತ್ತಲೇ ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರ, ಈಗ ಆ ಮಾತನ್ನು ಮರೆತಿದೆ. ಈ ಬಗ್ಗೆ ಸರ್ಕಾರಕ್ಕೆ ಎಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಅದರ ಮಧ್ಯೆ, ರೈತರಿಗೆ ಮಾರಕವಾದ ಕಾಯ್ದೆಗಳ ಅಡಿಯಲ್ಲೇ ಶಿಫಾರಸು ನೀಡಿ ಎಂದು ಕೃಷಿ ಬೆಲೆ ಆಯೋಗಕ್ಕೆ ಸೂಚಿಸಿರುವುದು ದುರಂತ.

ಚುಕ್ಕಿ ನಂಜುಂಡಸ್ವಾಮಿ, ರೈತ ಹೋರಾಟಗಾರ್ತಿ

'ಆಕಸ್ಮಿಕ ಅನಿಸುತ್ತಿಲ್ಲ'

ನೂರಾರು ರೈತರು ಪ್ರಾಣತೆತ್ತು ಈ ಕಾಯ್ದೆಗಳು ವಾಪಸ್ ಆಗುವಂತೆ ಮಾಡಿದ್ದಾರೆ. ರೈತರ ಹಕ್ಕುಗಳನ್ನು ಕಸಿದುಕೊಳ್ಳುವ, ಕೃಷಿ ಮತ್ತು ಜಮೀನಿನ ಮೇಲೆ ಅವರ ಹಿಡಿತವನ್ನೇ ಇಲ್ಲದಂತೆ ಮಾಡುವ ಅಪಾಯಕಾರಿ ಕಾಯ್ದೆಗಳು ಅವಾಗಿದ್ದವು. ಅವುಗಳನ್ನು ಆಧರಿಸಿ ರಾಜ್ಯದಲ್ಲಿ ಜಾರಿಗೆ ತಂದ ಎಪಿಎಂಸಿ ತಿದ್ದುಪಡಿ ಕಾಯ್ದೆ ಸಹ ಅಷ್ಟೇ ಅಪಾಯಕಾರಿಯಾಗಿದೆ. ರೈತರ ಗಳಿಕೆಯನ್ನು ಹೆಚ್ಚು ಮಾಡಲು ಮತ್ತು ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಒದಗಿಸಿಕೊಡಲು, ಆ ಅಪಾಯಕಾರಿ ಕಾಯ್ದೆಗಳ ಅಡಿಯಲ್ಲೇ ಶಿಫಾರಸು ನೀಡಿ ಎಂದು ಸರ್ಕಾರ ಸೂಚಿಸಿರುವುದು ಮೇಲ್ನೋಟಕ್ಕೆ ಆಕಸ್ಮಿಕ ಎಂದು ಅನಿಸುತ್ತಿಲ್ಲ. ಬದಲಿಗೆ ಕಾರ್ಪೊರೇಟ್ ಲಾಬಿ ಇದ್ದಂತಿದೆ.

ಟಿ.ಎನ್.ಪ್ರಕಾಶ ಕಮ್ಮರಡಿ, ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ

'ಕೂಡಲೇ ವಾಪಸ್ ಪಡೆಯಬೇಕು'

ಕೇಂದ್ರ ಸರ್ಕಾರವು ತನ್ನ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿದೆ. ಹೀಗಿದ್ದ ಮೇಲೆ ರಾಜ್ಯ ಸರ್ಕಾರ ಅದೇ ಕಾಯ್ದೆಗಳ ಅಡಿಯಲ್ಲಿ ಶಿಫಾರಸು ನೀಡಿ ಎಂದು ಸೂಚಿಸುವುದಕ್ಕೆ ಅವಕಾಶವೇ ಇಲ್ಲ. ಹೀಗಿದ್ದೂ ಅಂತಹ ಸೂಚನೆ ಹೊರಡಿಸಿದೆ. ಸರ್ಕಾರದ ಈ ನಡೆಯನ್ನು ಖಂಡಿಸುತ್ತೇವೆ. ಈ ಸೂಚನೆಯನ್ನು ರಾಜ್ಯ ಸರ್ಕಾರ ಕೂಡಲೇ ವಾಪಸ್ ಪಡೆಯಬೇಕು.

ಕುರುಬೂರು ಶಾಂತಕುಮಾರ್, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ

ವಸಂತ ಪಂಚಮಿ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ವಸಂತ ಪಂಚಮಿ ಪ್ರಯುಕ್ತ ತ್ರಿವೇಣಿ ಸಂಗಮದಲ್ಲಿ ಭಕ್ತರು ಸೋಮವಾರ ಪುಣ್ಯ ಸ್ನಾನ ಮಾಡಿದರು – ಪಿಟಿಐ ಚಿತ್ರ

ಸುದ್ದಿ 11

ತಯಾರಿಕೆ ಕ್ರಾಂತಿಯನ್ನು ಚೀನಾಕ್ಕೆ ಬಿಟ್ಟೆವು : ರಾಹುಲ್

'ಮೇಕ್ ಇನ್ ಇಂಡಿಯಾ ವಿಫಲ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ಮೇಕ್ ಇನ್ ಇಂಡಿಯಾ ವಿಫಲವಾಗಿದ್ದು, ಭಾರತದ ಮಾರುಕಟ್ಟೆಯಲ್ಲಿ ಚೀನಾದ ಉತ್ಪನ್ನಗಳು ರಾರಾಜಿಸುತ್ತಿವೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಟೀಕಿಸಿದರು.

ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆ ಸುಮಾರು 43 ನಿಮಿಷ ಭಾಷಣ ಮಾಡಿದ ಅವರು, ಮೋದಿ ನೇತೃತ್ವದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಭಾರತ–ಚೀನಾ ಗಡಿ ವಿವಾದ, ಭಾರತದ ವಿದೇಶಾಂಗ ನೀತಿಯನ್ನು ಪ್ರಸ್ತಾಪಿಸಿ ಟೀಕಿಸಿದರು.

'2014ರಲ್ಲಿ ತಯಾರಿಕಾ ವಲಯದ ಪಾಲು ಶೇ 15.3ರಷ್ಟಿದ್ದರೆ, ಈಗ ಶೇ 12.6ಕ್ಕೆ ಕುಸಿದಿದೆ. ತಯಾರಿಕಾ ವಲಯ ಈ ರೀತಿ ಕುಸಿತ ಕಂಡದ್ದು ಕಳೆದ 60



ವರ್ಷಗಳಲ್ಲಿ ಇದೇ ಮೊದಲು. ನಾನು ಇದಕ್ಕಾಗಿ ಪ್ರಧಾನಿ ಅವರನ್ನು ದೂಷಿಸುತ್ತಿಲ್ಲ. ಅವರು ಪ್ರಯತ್ನಿಸಲಿಲ್ಲ ಎಂದು ಹೇಳುವುದು ನ್ಯಾಯೋಚಿತವಲ್ಲ. 'ಮೇಕ್ ಇನ್ ಇಂಡಿಯಾ' ಒಳ್ಳೆಯ ಪರಿಕಲ್ಪನೆಯಾಗಿದೆ. ಆದರೆ, ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಪ್ರಧಾನಿ ವಿಫಲರಾಗಿದ್ದಾರೆ' ಎಂದು ದೂರಿದರು.

7ನೇ ಪುಟ ನೋಡಿ

'ಯುಪಿಎ ಕೂಡಾ ವಿಫಲವಾಗಿತ್ತು'

ದೇಶದಲ್ಲಿ ನಿರುದ್ಯೋಗ ಸಮಸ್ಯೆ ನೀಗಿಸಲು ಹಿಂದಿನ ಯುಪಿಎ ಸರ್ಕಾರ ಕೂಡಾ ವಿಫಲವಾಗಿತ್ತು ಎಂದು ರಾಹುಲ್ ಹೇಳಿದರು. 'ನಾವು ಬೆಳವಣಿಗೆ ಸಾಧಿಸುತ್ತಿರುವುದು ನಿಜ. ಆದರೆ, ನಿರುದ್ಯೋಗ ಸಮಸ್ಯೆಯನ್ನು ನಿಭಾಯಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಯುಪಿಎ ಆಗಿರಲಿ ಅಥವಾ ಈಗಿನ ಎನ್‌ಡಿಎ ಆಗಿರಲಿ, ನಿರುದ್ಯೋಗವನ್ನು ನೀಗಿಸಲು ಮತ್ತು ಯುವಕರಿಗೆ ಉದ್ಯೋಗದ ಬಗ್ಗೆ ಖಾತರಿ ನೀಡಲು ವಿಫಲವಾಗಿವೆ' ಎಂದರು.

'ಚೀನಾದಿಂದ 4 ಸಾವಿರ ಚದರ ಕಿ.ಮೀ ಅತಿಕ್ರಮಣ'

ಭಾರತ– ಚೀನಾ ಗಡಿ ವಿವಾದವನ್ನು ಪ್ರಸ್ತಾಪಿಸಿದ ರಾಹುಲ್, 'ಚೀನಾವು ನಮ್ಮ 4 ಸಾವಿರ ಚದರ ಕಿ.ಮೀ.ನಷ್ಟು ಪ್ರದೇಶವನ್ನು ಅತಿಕ್ರಮಿಸಿದೆ' ಎಂದು ಹೇಳಿದರು.

'ಚೀನಾದ ಸೇನೆ ಭಾರತದ ಗಡಿಯೊಳಗೆ ಇದೆಯಾದರೂ ಪ್ರಧಾನಿ ಅವರು ಚೀನಾದ ಅತಿಕ್ರಮಣವನ್ನು ಅಲ್ಲಗಳೆಯುತ್ತಾ ಬಂದಿದ್ದಾರೆ. ಆದರೆ ಸೇನೆಯು ಇದಕ್ಕೆ ತದ್ವಿರುದ್ಧ ಹೇಳಿಕೆ ನೀಡಿದೆ. ಚೀನಾ ಸೇನೆಯು ನಮ್ಮ ಗಡಿಯೊಳಗೆ ಇದೆ ಎಂದು ಸೇನೆಯ ಮುಖ್ಯಸ್ಥರೇ ಹೇಳಿದ್ದಾರೆ' ಎಂದರು. ಈ ವೇಳೆ ಮಧ್ಯಪ್ರವೇಶಿಸಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, 'ನಿಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಪುರಾವೆಗಳನ್ನು ಒದಗಿಸಬೇಕು' ಎಂದರು.

'ಮೇಕ್ ಇನ್ ಇಂಡಿಯಾ ವಿಫಲವಾಗಿರುವುದು ಮತ್ತು ತಯಾರಿಕೆಯಲ್ಲಿ ನಾವು ಆಸಕ್ತಿ ತೋರದೇ ಇರುವುದರಿಂದಲೇ ಚೀನಾದವರು ಇಂದು ನಮ್ಮ ದೇಶದೊಳಗೆ ಬಂದು ಕುಳಿತಿದ್ದಾರೆ' ಎಂದು ರಾಹುಲ್ ಹೇಳಿದರು.

'ಗೋ ಕಳ್ಳರಿಗೆ ನಡುರಸ್ತೆಯಲ್ಲಿ ಗುಂಡೇಟು'

ಪ್ರಜಾವಾಣಿ ವಾರ್ತೆ

ಕಾರವಾರ: 'ಗೋವು ಕಳವು ಮಾಡುವುದು ಉತ್ತರ ಕನ್ನಡದಲ್ಲಿ ಮತ್ತೆ ನಡೆದರೆ ಆರೋಪಿಗಳಿಗೆ ನಡು ರಸ್ತೆಯಲ್ಲಿ ಗುಂಡೇಟು ಕೊಡಲು ಆದೇಶಿಸುವೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಎಚ್ಚರಿಸಿದರು.

'ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಗೋವು ಕಳವು ಪ್ರಕರಣಗಳು ನಡೆಯುತ್ತಿದೆ. ಇದನ್ನು ತಡೆಯಲು ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಆರೋಪಿಗಳ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಲಾಗಿದೆ ಎಂದು ಮಾಧ್ಯಮದವರಿಗೆ ಸೋಮವಾರ ಪ್ರತಿಕ್ರಿಯಿಸಿದರು.

ಮಂಕಾಳ ವೈದ್ಯ

'ಬಿಜೆಪಿ ಸರ್ಕಾರದ ಅವಧಿಯಲ್ಲೂ ಗೋವು ಕಳವು ನಡೆದಿವೆ. ಹೊನ್ನಾವರದಲ್ಲಿ ಜ.19ರಂದು ನಡೆದಿದ್ದ ಗೋ ಹತ್ಯೆಯನ್ನು ಮುಂದಿಟ್ಟುಕೊಂಡು ಕುಮಟಾ ಬಿಜೆಪಿ ಶಾಸಕ ದಿನಕರ ಶೆಟ್ಟಿ ಅವರು ಮುಖ್ಯಮಂತ್ರಿ, ಗೃಹ ಸಚಿವರನ್ನು ಟೀಕಿಸಿದ್ದಾರೆ. ಅವರ ಸರ್ಕಾರದ ಅವಧಿಯಲ್ಲಿ ಗೋವು ಕಳ್ಳರ ಮೇಲೆ ಕ್ರಮ ಜರುಗಿಸಿರಲಿಲ್ಲ. ನಾವು ಅಧಿಕಾರದಲ್ಲಿದ್ದ ಕಾರಣಕ್ಕೆ ಆರೋಪಿಗಳ ಧರ್ಮ, ಜಾತಿ ಪರಿಗಣಿಸದೆ ಮುಲಾಜಿಲ್ಲದೆ ಕ್ರಮ ಜರುಗಿಸಿದ್ದೇವೆ' ಎಂದರು.

'ಗೋವನ್ನು ಪೂಜಿಸುವ ಸಂಸ್ಕೃತಿ ನಮ್ಮದು. ಗೋವಿನ ಹಾಲು ಕುಡಿದು ಬದುಕುವ ನಮಗೆ ಆ ಪ್ರಾಣಿಯ ಬಗ್ಗೆ ಗೌರವ ಇದೆ. ಗೋವು ಕಳವು ಮಾಡುವ ಬದಲು ಕಷ್ಟಪಟ್ಟು ದುಡಿದು ತಿನ್ನಲಿ' ಎಂದು ಹೇಳಿದರು.

'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಪರಿಸರಕ್ಕೆ ಹಾನಿ ಆಗದು ಎಂಬುದಾದರೆ ವಿರೋಧ ಇಲ್ಲ. ಇದು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಾರಿಗೆ ತಂದಿದ್ದಲ್ಲ. ಬಿಜೆಪಿ ಅವಧಿಯಲ್ಲೇ ಯೋಜನೆ ಜಾರಿಗೆ ಪ್ರಯತ್ನ ಆರಂಭವಾಗಿತ್ತು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ಕಾಂಗ್ರೆಸ್ ಪಕ್ಷದ ಶಾಸಕರಿದ್ದಂತೆ. ಜಿಲ್ಲೆಯ ಅಭಿವೃದ್ಧಿಗೆ ಅವರು ನಮ್ಮನ್ನು ಬೆಂಬಲಿಸಿ, ಕೆಲಸ ಮಾಡುತ್ತಿದ್ದಾರೆ' ಎಂದರು.

ಒಳಪುಟಗಳಲ್ಲಿ



6ನೇ ಗ್ಯಾರಂಟಿಗೆ ಅಂಗನವಾಡಿ ಕಾರ್ಯಕರ್ತೆಯರ ಪಟ್ಟು 6

ಮಣಿಪುರ ಸಿ.ಎಂ ವಿರುದ್ಧ ಆಡಿಯೊ ಕ್ಲಿಪ್: ವರದಿಗೆ 'ಸುಪ್ರೀಂ' ಸೂಚನೆ 11

'ತೆರಿಗೆ ಹಂಚಿಕೆಗೆ ಆಯೋಗದ ಜೊತೆ ರಾಜ್ಯಗಳು ಚರ್ಚಿಸಲಿ' 10

ಈಜು: ಧೀನಿಧಿ ದೇಸಿಂಗು ದಾಖಲೆ, ಶ್ರೀಹರಿ ಮಿಂಚು 12

ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ

ಮುಂಬೈ (ಪಿಟಿಐ): ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು 55 ಪೈಸೆಗಳಷ್ಟು ಕುಸಿದಿದೆ. ವಹಿವಾಟಿನ ಕೊನೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 87.17ಕ್ಕೆ ತಲುಪಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕೆನಡಾ, ಮೆಕ್ಸಿಕೊ ಮತ್ತು ಚೀನಾವನ್ನು ಗುರಿಯಾಗಿಸಿಕೊಂಡು ಸುಂಕ ಹೇರಿರುವುದು ಜಾಗತಿಕ ಮಾರುಕಟ್ಟೆ ವಹಿವಾಟುಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಿದೆ.

ಟ್ರಂಪ್ ಅವರ ಕ್ರಮದಿಂದಾಗಿ ಸುಂಕ ಸಮರವು ಹೆಚ್ಚಾಗುವ ಭೀತಿಯನ್ನು ಸೃಷ್ಟಿಸಿದೆ. ಹೀಗಾಗಿ, ಅಮೆರಿಕದ ಡಾಲರ್ ಸೂಚ್ಯಂಕವು ಏರಿಕೆ ಕಂಡಿದೆ. ಇದರ ಪರಿಣಾಮವಾಗಿ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವನ್ನು ತಲುಪಿತು ಎಂದು ಕರೆನ್ಸಿ ವಿನಿಮಯ ಮಾರುಕಟ್ಟೆ ವರ್ತಕರು ಹೇಳಿದ್ದಾರೆ.

ಸೋಮವಾರದ ವಹಿವಾಟಿನ ನಡುವಿನಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 87.29ರ ಮಟ್ಟಕ್ಕೂ ಕುಸಿದಿತ್ತು. ನಂತರ ಅದು ತುಸು ಚೇತರಿಕೆ ಕಂಡುಕೊಂಡಿತು. ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 86.62ಕ್ಕೆ ತಲುಪಿತ್ತು.

ವಿದೇಶಿ ಹೂಡಿಕೆದಾರರು ದೇಶದ ಮಾರುಕಟ್ಟೆಗಳಿಂದ ಹಣವನ್ನು ನಿರಂತರವಾಗಿ ಹಿಂದಕ್ಕೆ ತೆಗೆದುಕೊಳ್ಳುತ್ತಿರುವುದು ಮತ್ತು ತೈಲ ಆಮದುದಾರರು ಡಾಲರ್‌ಗೆ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಇರಿಸುತ್ತಿರುವ ಕಾರಣದಿಂದಾಗಿ ಅಮೆರಿಕದ ಕರೆನ್ಸಿಯು ವಿದೇಶಿ ಮಾರುಕಟ್ಟೆಗಳಲ್ಲಿ ಬಲಗೊಳ್ಳುತ್ತಿದೆ. ಇವುಗಳಿಂದಾಗಿ ರೂಪಾಯಿ ಮೌಲ್ಯದ ಮೇಲೆ ಒತ್ತಡ ಸೃಷ್ಟಿಯಾಗಿದೆ ಎಂದು ವರ್ತಕರು ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಬಂಡವಾಳ ಮಾರುಕಟ್ಟೆಗಳಿಂದ ಶನಿವಾರ ಒಟ್ಟು ₹1,327 ಕೋಟಿ ಹಿಂಪಡೆದಿದ್ದಾರೆ.

ಜಮನಾಲಾಲ್ ಬಜಾಜ್ ಸೇವಾ ಟ್ರಸ್ಟ್ ರಿಟ್ ಅರ್ಜಿಗಳ ವಜಾ

271 ಎಕರೆ ಸ್ವಾಧೀನಕ್ಕೆ ಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ (ಬಿಬಿಎಂಪಿ) ಮಾಗಡಿ ಮುಖ್ಯ ರಸ್ತೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ವತಿಯಿಂದ 'ಮೆಗಾ ಕೃಷಿ ಮಾರುಕಟ್ಟೆ' ನಿರ್ಮಾಣಕ್ಕಾಗಿ 272 ಎಕರೆಗೂ ಹೆಚ್ಚಿನ ವಿಶಾಲ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಭೂ ಸ್ವಾಧೀನ ಕ್ರಮವನ್ನು ಪ್ರಶ್ನಿಸಿ, 'ಜಮನಾಲಾಲ್ ಬಜಾಜ್ ಸೇವಾ ಟ್ರಸ್ಟ್' ಅಧ್ಯಕ್ಷ ರಾಹುಲ್ ಬಜಾಜ್ ಸೇರಿದಂತೆ ಒಟ್ಟು ಎಂಟು ಜನ ಟ್ರಸ್ಟಿಗಳು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನಿಯೋಜನೆಗೊಂಡಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ವಿಶೇಷ ನ್ಯಾಯಪೀಠ ವಿಚಾರಣೆ ನಡೆಸಿ, ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದೆ.

'ರಾಜ್ಯ ಸರ್ಕಾರ ಮೆಗಾ ಕೃಷಿ ಮಾರುಕಟ್ಟೆ ನಿರ್ಮಾಣದ ಉದ್ದೇಶಕ್ಕಾಗಿ ಈ ಪ್ರದೇಶವನ್ನು ವಶಕ್ಕೆ ಪಡೆದಿದೆ. ಇದರಿಂದ ಕೃಷಿ ಮತ್ತು ಕೃಷಿಕರಿಗೆ ಉಪಯೋಗವಾಗಲಿದೆ. ಅಂತೆಯೇ, ರಾಜ್ಯ ಸರ್ಕಾರದ ಈ ಕ್ರಮ ಸಂವಿಧಾನಕ್ಕೆ ಪೂರಕವಾಗಿದೆ' ಎಂದು ನ್ಯಾಯಪೀಠ ತೀರ್ಪಿನಲ್ಲಿ ತಿಳಿಸಿದೆ.

'ಭಾರತದಲ್ಲಿ ಭೂ ಸ್ವಾಧೀನ ಮತ್ತು ಪರಿಹಾರ ನೀಡಿಕೆ ಕಾನೂನಿನ ಅಧಿಕೃತ ವಕ್ತಾರ ಎನಿಸಿರುವ ವಿ.ಜಿ. ರಾಮಚಂದ್ರನ್, ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಜಮೀನು ಕಳೆದುಕೊಳ್ಳುವ ರೈತ ಅಥವಾ ಸಂತ್ರಸ್ತ ಪರಿಹಾರ ಪಡೆಯುವುದಕ್ಕಾಗಿ ಒಂದೇ ಒಂದು ಬಾರಿ ಆಸಕ್ತಿ ತೋರಿಸಿದರೂ ಸಾಕು. ಅವನ ಆಕ್ಷೇಪಣೆಯನ್ನು ಕೋರ್ಟ್ ಅಸಿಂಧುಗೊಳಿಸಬಹುದು' ಎಂದಿರುವುದನ್ನು ನ್ಯಾಯಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

'ಈ ಪ್ರಕರಣದಲ್ಲಿ ಅರ್ಜಿದಾರರು ಪರಿಹಾರ ನೀಡಿಕೆಯ ಮೂರು ಸಭೆಗಳಲ್ಲಿ ಭಾಗವಹಿಸಿದ್ದಾರೆ. ಹೀಗಾಗಿ, ಅವರು ಪರಿಹಾರ ಪಡೆಯಲು ತೋರಿರುವ ಆಸಕ್ತಿಯನ್ನು ಗಮನಿಸಿದರೆ ಅವರ ಆಕ್ಷೇಪಣೆಯನ್ನು ಮನ್ನಿಸಲಾಗದು. ಆದ್ದರಿಂದ, ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗುತ್ತಿದೆ' ಎಂದು ಸ್ಪಷ್ಟಪಡಿಸಿದೆ.

'ಸಾರ್ವಜನಿಕ ಧರ್ಮಾರ್ಥಕ್ಕಾಗಿ ರೂಪುಗೊಂಡ ಟ್ರಸ್ಟ್‌ಗಳ ವಶದಲ್ಲಿರುವ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳಬಾರದು' ಎಂಬ ಅರ್ಜಿದಾರರ ಪರ ಹಿರಿಯ ವಕೀಲರ ವಾದವನ್ನು ನ್ಯಾಯಪೀಠ ಸಾರಾಸಗಟಾಗಿ ತಳ್ಳಿಹಾಕಿತು. ಎಪಿಎಂಸಿ ಪರ ಪದಾಂಕಿತ ಹಿರಿಯ ವಕೀಲ ಕೆ.ಜಿ.ರಾಘವನ್ ವಾದ ಮಂಡಿಸಿದ್ದರು.

ಮುಖ್ಯಾಂಶಗಳು

- ಹೈಕೋರ್ಟ್ ವಿಶೇಷ ಪೀಠದ ಮಹತ್ವದ ತೀರ್ಪು
- 26 ವರ್ಷಗಳ ಸುದೀರ್ಘ ವ್ಯಾಜ್ಯ ಅಂತ್ಯ

ಅವಾರ್ಡ್ ಘೋಷಣೆಯಾದ ದಿನದಿಂದ ಕೊಡುವ ಪರಿಹಾರ, ಬಡ್ಡಿ ಬಿಟ್ಟು, ವಾರ್ಷಿಕ ಶೇ 12ರಷ್ಟು ಹೆಚ್ಚುವರಿ ಬಡ್ಡಿಯನ್ನು ಅರ್ಜಿದಾರರಿಗೆ 3 ತಿಂಗಳ ಒಳಗೆ ಪಾವತಿಸಬೇಕು

ಕೃಷ್ಣ ಎಸ್.ದೀಕ್ಷಿತ್, ನ್ಯಾಯಮೂರ್ತಿ

'₹15 ಸಾವಿರ ಕೋಟಿ ಮೌಲ್ಯ'

'ಮಾಗಡಿ ಮುಖ್ಯ ರಸ್ತೆಯಲ್ಲಿನ ಶ್ರೀಗಂಧ ಕಾವಲ್‌ನಲ್ಲಿ 172 ಎಕರೆ 22 ಗುಂಟೆ, ಹೇರೋಹಳ್ಳಿಯ ಎರಡು ಪ್ರದೇಶಗಳಲ್ಲಿ ಕ್ರಮವಾಗಿ 104 ಎಕರೆ 05 ಗುಂಟೆ ಹಾಗೂ 3 ಎಕರೆ 34 ಗುಂಟೆ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಕಾರ್ಯದರ್ಶಿ ಮತ್ತು ಬೆಂಗಳೂರು ಜಿಲ್ಲಾಧಿಕಾರಿ 1999ರ ಏಪ್ರಿಲ್ 13ರಂದು ಹೊರಡಿಸಿದ್ದ ಅಧಿಸೂಚನೆ ಹೊರಡಿಸಿದ್ದರು. ಈ ಅಧಿಸೂಚನೆ ರದ್ದುಪಡಿಸಬೇಕು ಎಂದು ಕೋರಿ ಅರ್ಜಿದಾರರು ಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಸರ್ಕಾರ ಈ ಜಮೀನನ್ನು ಯಾವ ಉದ್ದೇಶಕ್ಕಾಗಿ ವಶಪಡಿಸಿಕೊಂಡಿದೆ ಎಂಬುದನ್ನು ನ್ಯಾಯಪೀಠಕ್ಕೆ ಸಮರ್ಪಕವಾಗಿ ಮನದಟ್ಟು ಮಾಡಿಕೊಡಲಾಗಿದೆ. ಇದರಿಂದಾಗಿ ಅಂದಾಜು ₹15 ಸಾವಿರ ಕೋಟಿಗೂ ಹೆಚ್ಚಿನ ಮೊತ್ತದ ಈ ಜಮೀನಿನಲ್ಲಿ ಸರ್ಕಾರ ಪ್ರತಿಷ್ಠಿತ ಎಪಿಎಂಸಿ ಮೆಗಾ ಮಾರುಕಟ್ಟೆ ನಿರ್ಮಾಣ ಮಾಡಲು ಹೈಕೋರ್ಟ್ ಅನುವು ಮಾಡಿಕೊಟ್ಟಿದೆ' ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ್ ಪ್ರತಿಕ್ರಿಯಿಸಿದ್ದಾರೆ.



ರಾಜ್ಯಪಾಲರ ಅಂಗಳಕ್ಕೆ 'ಸುಗ್ರೀವಾಜ್ಞೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರು ನೀಡುತ್ತಿರುವ ಕಿರುಕುಳದಿಂದ ಸಾಲಗಾರರನ್ನು ರಕ್ಷಿಸುವ ಉದ್ದೇಶದಿಂದ ರೂಪಿಸಿದ 'ಕರ್ನಾಟಕ ಮೈಕ್ರೊ ಫೈನಾನ್ಸ್ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ–2025' ಅನ್ನು ಅಂಕಿತಕ್ಕಾಗಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರಿಗೆ ಕಳುಹಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ತಿಳಿಸಿದರು.

10 ವರ್ಷ ಜೈಲು: 'ಸಾಲಗಾರರಿಗೆ ಹಿಂಸೆ, ಕಿರುಕುಳ ನೀಡುವ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರರಿಗೆ ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದ, 10 ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹5 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿದೆ' ಎಂದರು.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಭೂ ಸ್ವಾಧೀನ: ಫೆ. 10ರಿಂದ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ರೈತರ ಹಕ್ಕುಗಳ ರಕ್ಷಣೆಗೆ ಹಾಗೂ ಬಲವಂತದ ಭೂ ಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ಫೆ.10ರಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮುಷ್ಕರ ಹಮ್ಮಿಕೊಂಡಿವೆ.

ನಿಮ್ಮ ಹಳೆಯ ಚಿನ್ನಾಭರಣಗಳಿಗೆ ಹೊಸ ಜೀವ ನೀಡಲಿರುವ GRT ಜ್ಯುವೆಲ್ಲರ್ಸ್

ಸ್ವರ್ಣ ಅವತಾರ ನಿಮ್ಮ ಹಳೆಯ ಚಿನ್ನಕ್ಕೆ ಹೊಸ ಜೀವ ತುಂಬಿ

1964ರಲ್ಲಿ ಆರಂಭಗೊಂಡು, ಜಿಆರ್‌ಟಿ ಜ್ಯುವೆಲ್ಲರ್ಸ್ ಆಭರಣ ಉದ್ಯಮದಲ್ಲಿ ಪ್ರಮುಖ ಹೆಸರಾಗಿ ಪ್ರವರ್ಧಮಾನಕ್ಕೆ ಬಂದಿದ್ದು, ತನ್ನ 60 ನೇ ವಾರ್ಷಿಕೋತ್ಸವವನ್ನು ಹೆಮ್ಮೆಯಿಂದ ಆಚರಿಸುತ್ತಿದೆ. ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿ ಮತ್ತು ರತ್ನಗಳ ವೈವಿಧ್ಯಮಯ ಶ್ರೇಣಿಯೊಂದಿಗೆ, ಜಿಆರ್‌ಟಿಯ ಗುಣಮಟ್ಟದ ಬದ್ಧತೆಯು ದಕ್ಷಿಣ ಭಾರತ ಮತ್ತು ಸಿಂಗಪುರದ ಗ್ರಾಹಕರ ಹೃದಯಗಳನ್ನು ಗೆದ್ದಿದೆ.

ಇಂದು, 61 ಶಾಖೆಗಳೊಂದಿಗೆ, ಈ ಬ್ರ್ಯಾಂಡ್, ಆಭರಣಗಳಲ್ಲಿ ವಿಶ್ವಾಸಾರ್ಹತೆ ಮತ್ತು ಶ್ರೇಷ್ಠತೆಯ ಪ್ರತೀಕವಾಗಿ ಮಿಂಚುತ್ತಲೇ ಇದೆ.

ಹಳೆಯ ಚಿನ್ನದ ಆಭರಣಗಳಿಗೆ ಜೀವ ತುಂಬುವ ಅಭಿಯಾನದೊಂದಿಗೆ ಜಿಆರ್‌ಟಿ ಜ್ಯುವೆಲ್ಲರ್ಸ್ ತನ್ನ ಶ್ರೀಮಂತ ಪರಂಪರೆಯನ್ನು ಮುಂದುವರಿಸಿದೆ. ಈ ವಿಶೇಷ ಕೊಡುಗೆಯು ನಿಮ್ಮ ಹಳೆಯ ಚಿನ್ನದ ಆಭರಣಗಳನ್ನು ಆಧುನಿಕ ಮೇರು ಕೃತಿಗಳನ್ನಾಗಿ ಪರಿವರ್ತಿಸಲು ನಿಮಗೆ ಅನುವು ಮಾಡಿಕೊಡುತ್ತದೆ. ತಮಿಳು ನಾಡಿನಲ್ಲಿ ತಂಗಾ ಅವತಾರಂ, ಆಂಧ್ರಪ್ರದೇಶದಲ್ಲಿ ಸ್ವರ್ಣ ಅವತಾರಂ ಮತ್ತು ಕರ್ನಾಟಕದಲ್ಲಿ ಸ್ವರ್ಣ ಅವತಾರ ಎಂದು ಹೆಸರಿಸಲಾದ ಈ ಅಭಿಯಾನವು, ಗ್ರಾಹಕರು ತಮ್ಮ ಹಳೆಯ ಚಿನ್ನವನ್ನು ವಿನಿಮಯ ಮಾಡಿಕೊಂಡಾಗ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ ₹75ಗಳನ್ನು ನೀಡುತ್ತದೆ. ಈ ಸೀಮಿತ ಅವಧಿಯ ಕೊಡುಗೆ ಚಿನ್ನದ ವಿನಿಮಯ ಕೇಂದ್ರಗಳಲ್ಲಿ ಮಾತ್ರ ಲಭ್ಯವಿದ್ದು ಚಿನ್ನದ ನಾಣ್ಯಗಳು ಅಥವಾ ಬಾರ್‌ಗಳ ಖರೀದಿಯು ಈ ಸಮಯ-ಸೀಮಿತ ಕೊಡುಗೆಗೆ ಅರ್ಹವಾಗಿರುವುದಿಲ್ಲ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಹೊಸ ಉಪಕ್ರಮದ ಕುರಿತು ಮಾತನಾಡಿದ ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಿ. ಆರ್. 'ಆನಂದ್' ಅನಂತಪದ್ಮನಾಭನ್ ಅವರು, ನಾವು, ನಮ್ಮ ಸಂಸ್ಥೆಯಲ್ಲಿ ಯಾವಾಗಲೂ ಕಾಲಾತೀತ ಸೌಂದರ್ಯ ಮತ್ತು ಸಂಪ್ರದಾಯದ ಸಂಕೇತವಾಗಿದ್ದೇವೆ. ಹಳೆಯ ಚಿನ್ನವು ತಲೆಮಾರುಗಳ ನೆನಪುಗಳನ್ನು ಹೊತ್ತು ತರುತ್ತದೆ, ಹಾಗಾಗಿ 'ಇದು ನಿಜವಾಗಿಯೂ ಅಮೂಲ್ಯವಾಗಿದೆ' ಎಂದರು. ಇದನ್ನು ಗಮನದಲ್ಲಿಟ್ಟುಕೊಂಡು, ನಿಮ್ಮ ಅಮೂಲ್ಯವಾದ ಆಭರಣಗಳಿಗೆ ಅರ್ಥಪೂರ್ಣ ರೂಪಾಂತರವನ್ನು ನೀಡಲು ಒಂದು ಅನನ್ಯ ಅವಕಾಶವನ್ನು ನೀಡುವ ನಮ್ಮ ಹೊಸ ಅಭಿಯಾನವನ್ನು ಪ್ರಾರಂಭಿಸಲು ನಾವು ಉತ್ಸುಕರಾಗಿದ್ದೇವೆ ಎಂದು ಅಭಿಪ್ರಾಯಪಟ್ಟರು.

ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಿ. ಆರ್. ರಾಧಾಕೃಷ್ಣನ್ ಅವರು ಮಾತನಾಡುತ್ತಾ, ನಮ್ಮ 60 ವರ್ಷಗಳ ಶ್ರೇಷ್ಠತೆಯ ಪರಂಪರೆಯನ್ನು ಮುಂದುವರಿಸುತ್ತಾ, ಈ ವಿಶೇಷ ಅಭಿಯಾನವನ್ನು ಪರಿಚಯಿಸಲು ನಾವು ಉತ್ಸುಕರಾಗಿದ್ದೇವೆ. ಈ ಉಪಕ್ರಮದ ಮೂಲಕ, ನಿಮ್ಮ ಹಳೆಯ ಸಂಪತ್ತನ್ನು ಹೊಸ ಅನನ್ಯ ಮೇರುಕೃತಿಗಳಾಗಿ ಪರಿವರ್ತಿಸಲು ನಾವು ಆಶಿಸುತ್ತೇವೆ. ನಮ್ಮನ್ನು ಭೇಟಿ ಮಾಡಲು ಮತ್ತು ನಿಮ್ಮ ಚಿನ್ನಕ್ಕೆ ಹೊಸ ಅವತಾರವನ್ನು ನೀಡಲು ನಾವು ನಿಮ್ಮನ್ನು ಆಹ್ವಾನಿಸುತ್ತಿದ್ದೇವೆ ಎಂದು ಹೇಳಿದರು.

ಸಿದ್ದರಾಮಯ್ಯರಿಂದ ಮಾತ್ರ ಕುರುಬರ ಕಲ್ಯಾಣ: ಎಂಟಿಬಿ

ಹೊಸಕೋಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನ ಪರಿಷತ್ ಸದಸ್ಯ ಎಂಟಿಬಿ ನಾಗರಾಜ್ ಸೋಮವಾರ ಹೊಗಳಿದರು.

ದಂಡುಪಾಳ್ಯ ದಿನ್ನೆಯಲ್ಲಿ ಕನಕದಾಸ ಜಯಂತಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರಿಂದ ಮಾತ್ರ ಕುರುಬ ಸಮಾಜದ ಅಭಿವೃದ್ಧಿ ಸಾಧ್ಯ. ಇಲ್ಲದಿದ್ದಲ್ಲಿ ಸಾಧ್ಯವೇ ಇಲ್ಲ ಎಂದರು.

ಸಿದ್ದರಾಮಯ್ಯ ಅಧಿಕಾರಾವಧಿಯಲ್ಲೇ ಕುರುಬ ಸಮುದಾಯದ ಅಭಿವೃದ್ಧಿಗೆ ಎಲ್ಲರೂ ಮುಂದಾಗಬೇಕು ಎಂದು ಹೇಳಿದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2024-25/79ಆರ್

ದಿನಾಂಕ : 25-01-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(ಮರು-ಟೆಂಡರ್) ಮೈಸೂರು ವಿಭಾಗದಲ್ಲಿ ಇಂಟರ್‌ಲಾಕ್ಡ್ ಎಲ್‌ಸಿ ಗೇಟ್‌ಗಳಿಗಾಗಿ ಆಕ್ಸಿಲರಿ ಟ್ರಾನ್ಸ್‌ಫಾರ್ಮರ್‌ನ್ನು ಒದಗಿಸುವುದು – ಜಿಎಸ್‌ಯು ಕಾಮಗಾರಿ.	ರೂ. 79,91,283.48

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17-02-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರಾಕ್ಷನ್ ಮೈಸೂರು

ಪಿಯುಬಿ/746/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 18-ಸಿಡಬ್ಲ್ಯುಎಂ-ಯುಬಿಎಲ್‌ಎಸ್-2024-25

ದಿನಾಂಕ : 29-01-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕ್ಯಾರೇಜ್ ರಿಪೇರಿ ಕಾರ್ಯಾಗಾರ ಹುಬ್ಬಳ್ಳಿಯಲ್ಲಿ ಒಂದು ವರ್ಷದ ಅವಧಿಗೆ ಐಸಿಎಫ್ ತಯಾರಿತ ಎಲ್‌ಹೆಚ್‌ಬಿ ಎಸಿ ಕೋಚ್‌ಗಳಲ್ಲಿ ಆರ್‌ಎಂಪಿಯು ಕೆಳಗೆ ಎಫ್‌ಆರ್‌ಪಿ ಟ್ರಫ್‌ಗೆ ಬದಲಾಗಿ ಎಸ್‌ಎಸ್ ಮೆಟಲ್ ಟ್ರಫ್‌ನ ಸರಬರಾಜು ಮತ್ತು ಅಳವಡಿಕೆ.	ರೂ. 1,33,06,402.56

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19-02-2025 ರಂದು 16:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು ಹುಬ್ಬಳ್ಳಿ

ಪಿಯುಬಿ/756/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

'ಸ್ಥಳ ಅಂತಿಮಗೊಳಿಸಿದರೆ ಕೇಂದ್ರ ಒಪ್ಪಿಗೆ'

ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ: ಕೇಂದ್ರ ನಾಗರಿಕ ವಿಮಾನಯಾನ ಸಚಿವ ನಾಯ್ಡು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಾಜ್ಯ ಸರ್ಕಾರದಿಂದ ಪ್ರಸ್ತಾವ ಸಲ್ಲಿಕೆಯಾದರೆ ಅನುಮೋದನೆಗೆ ಕ್ರಮ
- ರಾಜ್ಯಸಭೆಯಲ್ಲಿ ದೇವೇಗೌಡರ ಪ್ರಶ್ನೆಗೆ ಸಚಿವ ನಾಯ್ಡು ಉತ್ತರ
- ಹಾರೋಹಳ್ಳಿಯಲ್ಲೇ ಎರಡನೇ ನಿಲ್ದಾಣ ನಿರ್ಮಾಣ: ಡಿಕೆಶಿ ವಿಶ್ವಾಸ

ನವದೆಹಲಿ: ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ಸ್ಥಾಪನೆಗೆ ರಾಜ್ಯ ಸರ್ಕಾರ ಸ್ಥಳ ಗುರುತಿಸಿ ಪ್ರಸ್ತಾವ ಸಲ್ಲಿಸಿದರೆ, ಅದಕ್ಕೆ ಅಗತ್ಯ ಅನುಮೋದನೆ ನೀಡಲಾಗುವುದು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಭರವಸೆ ನೀಡಿದರು.

ರಾಜ್ಯಸಭೆಯಲ್ಲಿ ಸದಸ್ಯ ಎಚ್.ಡಿ. ದೇವೇಗೌಡ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 'ಬೆಂಗಳೂರು ವಿಮಾನ ನಿಲ್ದಾಣವು ದಿನದಿಂದ ದಿನಕ್ಕೆ ಬಹಳಷ್ಟು ಪ್ರಯಾಣಿಕರ ದಟ್ಟಣೆಯನ್ನು ಎದುರಿಸುತ್ತಿದೆ. ಇದನ್ನು ನಾವೆಲ್ಲರೂ ಒಪ್ಪುತ್ತೇವೆ' ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನಕ್ಕೆ ಬೆಂಗಳೂರು ನಗರ ಜಾಗತಿಕ ಹಬ್ ಆಗಿದ್ದು, ಸುಲಭ ಸಂಪರ್ಕಕ್ಕೆ ಮತ್ತೊಂದು ವಿಮಾನ ನಿಲ್ದಾಣ ನಗರಕ್ಕೆ ಅಗತ್ಯವಿದೆ ಎಂದು ದೇವೇಗೌಡ ಪ್ರತಿಪಾದಿಸಿದರು.

'ಕರ್ನಾಟಕ ಸರ್ಕಾರ ಮತ್ತೊಂದು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದೆ. ಸರ್ಕಾರ ಈಗಾಗಲೇ ನಾಗರಿಕ ವಿಮಾನಯಾನ ಸಚಿವರನ್ನು ಸಂಪರ್ಕಿಸಿ ಈ ಬಗ್ಗೆ ಚರ್ಚೆ ನಡೆಸಿದೆ. ಬೆಂಗಳೂರು ನಗರಕ್ಕೆ, ಅದರಲ್ಲಿಯೂ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಮತ್ತೊಂದು ವಿಮಾನ ನಿಲ್ದಾಣ ಅಗತ್ಯವಿದೆ' ಎಂದು ಒತ್ತಿ ಹೇಳಿದರು.

ಕರ್ನಾಟಕಕ್ಕೆ ಸಂಬಂಧಿಸಿ ನಾನು ಮಂಜೂರು ಮಾಡಿದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು ಈಗ ಪ್ರಯಾಣಿಕರ ದಟ್ಟಣೆಯಿಂದ ವಿಪರೀತ ಒತ್ತಡ ಎದುರಿಸುತ್ತಿದೆ. ಹೀಗಾಗಿ ಬೆಂಗಳೂರಿನಲ್ಲಿ ಇನ್ನೂ ಒಂದು ವಿಮಾನ ನಿಲ್ದಾಣದ ಅಗತ್ಯವಿದೆ ಎಂದು ಅವರು ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಹಾಗೂ ಕೇಂದ್ರ ಸರ್ಕಾರ ಮಾಡಿಕೊಂಡ ಒಪ್ಪಂದದ ಪ್ರಕಾರ, ಕೆಂಪೇಗೌಡ ವಿಮಾನ ನಿಲ್ದಾಣದ 150 ಕಿ.ಮೀ. ವ್ಯಾಪ್ತಿಯಲ್ಲಿ 2033ರ ವರೆಗೆ ಯಾವುದೇ ಹೊಸ ವಿಮಾನ ನಿಲ್ದಾಣ ನಿರ್ಮಿಸುವಂತಿಲ್ಲ. ಆದರೆ, ಹಾಸನ ಹಾಗೂ ಮೈಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಬಹುದು ಎಂಬ ಅಂಶ ಒಪ್ಪಂದದಲ್ಲಿದೆ. ಈ ಒಪ್ಪಂದದ ಪ್ರಕಾರ, 2033ರ ವರೆಗೆ ಎರಡನೇ ವಿಮಾನ ನಿಲ್ದಾಣದ ಕಾರ್ಯಾಚರಣೆ ಆರಂಭಿಸುವಂತಿಲ್ಲ. ಆದರೆ, ಭೂಸ್ವಾಧೀನ ಪ್ರಕ್ರಿಯೆ, ಅನುಮತಿ, ವಿಮಾನ ನಿಲ್ದಾಣ ಕಾಮಗಾರಿಗೆ ಸಾಕಷ್ಟು ಸಮಯ ಬೇಕಾಗುತ್ತದೆ. ಈಗಲೇ ಪ್ರಕ್ರಿಯೆ ಆರಂಭಿಸಿದರೆ 2033ರ ವೇಳೆಗೆ ವಿಮಾನ ನಿಲ್ದಾಣದ ಕಾರ್ಯಾಚರಣೆ ಆರಂಭಿಸಬಹುದು ಎಂಬುದು ರಾಜ್ಯ ಸರ್ಕಾರದ ಲೆಕ್ಕಾಚಾರ.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ರೋಡ್ ಷೋಗೆ ದೆಹಲಿಗೆ ಬಂದಿದ್ದ ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ, 'ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣಕ್ಕಾಗಿ ತಮ್ಮ ಇಲಾಖೆ ಮೂರು ಸ್ಥಳಗಳನ್ನು ಗುರುತಿಸಿದೆ. ಕೇಂದ್ರ ಸರ್ಕಾರದ ತಜ್ಞರ ತಂಡವು ಈ ಸ್ಥಳಗಳ ಪರಿಶೀಲನೆ ನಡೆಸಲಿದೆ. ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚಿಸಿ ಸ್ಥಳ ಅಂತಿಮಗೊಳಿಸಲಾಗುವುದು' ಎಂದು ತಿಳಿಸಿದ್ದರು. ನವದೆಹಲಿಯಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಅನೌಪಚಾರಿಕವಾಗಿ ಮಾತನಾಡಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಬೆಂಗಳೂರು ದಕ್ಷಿಣದ ಹಾರೋಹಳ್ಳಿಯಲ್ಲೇ ಎರಡನೇ ನಿಲ್ದಾಣ ನಿರ್ಮಾಣವಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು.

ತಮಿಳುನಾಡಿನ ಹೊಸೂರಿನಲ್ಲಿ ವಿಮಾನ ನಿಲ್ದಾಣದ ಅಗತ್ಯದ ಬಗ್ಗೆ ರಾಜ್ಯಸಭೆಯಲ್ಲಿ ಎಐಎಡಿಎಂಕೆ ಸಂಸದ ಎಂ. ತಂಬಿದೊರೈ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ರಾಮಮೋಹನ್ ನಾಯ್ಡು, 'ಈ ವಿಷಯದ ಬಗ್ಗೆ ತಮಿಳುನಾಡು ಸರ್ಕಾರ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಮತ್ತು ಕೇಂದ್ರ ಸರ್ಕಾರ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕಿದೆ' ಎಂದರು.

'ಸಾಲಗಾರರ ಸಂಕಷ್ಟ ಕಾಂಗ್ರೆಸ್ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಸಾಲಗಾರರು ಸಂಕಷ್ಟ ಎದುರಿಸಲು ಕೇಂದ್ರ ಸರ್ಕಾರದ ಆರ್ಥಿಕ ನೀತಿಯೇ ಕಾರಣ ಎಂದು ಆರೋಪಿಸುವ ಕಾಂಗ್ರೆಸ್ ನಾಯಕರು, 'ಯಾವ ಕಾರಣಕ್ಕೆ ಕರ್ನಾಟಕದಲ್ಲಿ ಈ ಸಮಸ್ಯೆ ಉದ್ಭವಿಸಿತು ಎನ್ನುವುದನ್ನು ತೋರಿಸಲಿ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಆರಂಭವಾದ ಈ ಸಮಸ್ಯೆಗೆ ಏನಾದರೂ ತರ್ಕ ಇದೆಯೇ? ಇದನ್ನು ನೀವೇ ಸೃಷ್ಟಿಸಿದ್ದು. ನಿಮ್ಮ ಹಳ್ಳ ನೀವೇ ತೋಡಿಕೊಂಡಿದ್ದೀರಿ' ಎಂದು ಕಾಂಗ್ರೆಸ್ ನಾಯಕರನ್ನು ಉದ್ದೇಶಿಸಿ ಹೇಳಿದರು.

ಛಲವಾದಿ ನಾರಾಯಣಸ್ವಾಮಿ

ಪ್ರಿಯಾಂಕ್ ರಾಜೀನಾಮೆ ನೀಡಲಿ: 'ಹಿಂದೂ ಧರ್ಮದಲ್ಲಿ ಸಮಾನತೆ, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಸಚಿವ ಪ್ರಿಯಾಂಕ್ ಖರ್ಗೆ ಹಿಂದೂಗಳನ್ನು ಹೀಯಾಳಿಸಿದ್ದಾರೆ. ಅವರು ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

'ವಿವೇಚನೆ, ಲೆಕ್ಕಾಚಾರ ಇಲ್ಲದ ಗ್ಯಾರಂಟಿಗಳಿಂದ ಕರ್ನಾಟಕದ ಆರ್ಥಿಕ ಸ್ಥಿತಿ ಸಂಪೂರ್ಣ ಹದಗೆಟ್ಟಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಈ ಇತಿಮಿತಿಗಳನ್ನು ಕಾಂಗ್ರೆಸ್ ಸರ್ಕಾರ ಮೊದಲೇ ಅರ್ಥ ಮಾಡಿಕೊಂಡಿದ್ದರೆ ನಿಭಾಯಿಸಬಹುದಾಗಿತ್ತು. ಆದರೆ, ಈಗ ನಿಭಾಯಿಸಲಾಗದೆ ಒದ್ದಾಡುತ್ತಿದೆ. ಮಾತೆತ್ತಿದರೆ ಕೇಂದ್ರ ಸರ್ಕಾರವನ್ನು ತೋರಿಸುವುದು ಬಿಟ್ಟು ಏನೂ ಇಲ್ಲ' ಎಂದು ಹೇಳಿದರು.

ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಅಭಿಮತ

'ರಂಗಭೂಮಿ ಸಮಾಜ ತಿದ್ದುವ ಮಾಧ್ಯಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗಭೂಮಿಯು ಸಮಾಜವನ್ನು ತಿದ್ದುವ ಬಹುದೊಡ್ಡ ಮಾಧ್ಯಮವಾಗಿದೆ ಎಂದು ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಹೇಳಿದರು.

ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ನಾಟಕ ಶಾಲೆ, ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ನಡೆಯುತ್ತಿರುವ 'ಭಾರತ ರಂಗ ಮಹೋತ್ಸವ' ಕಾರ್ಯ-ಕ್ರಮದಲ್ಲಿ ಅವರು ಮಾತನಾಡಿದರು. 'ನನಗೆ ಸಲ್ಲಿಸಿದ ಈ ರಂಗ ಮಹೋತ್ಸವದ ಗೌರವವನ್ನು ಸಿಜಿಕೆ ಅವರಿಗೆ ಅರ್ಪಿಸುತ್ತೇನೆ' ಎಂದು ಹೇಳಿದರು.

'ರಂಗಭೂಮಿ ಎಂಬ ಮಾಧ್ಯಮವನ್ನು ಸರ್ಕಾರ ಹಾಗೂ ಎಲ್ಲ ಅಕಾಡೆಮಿಗಳು ಬೆಂಬಲಿಸಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬಹುದೊಡ್ಡ ಕೆಲಸಗಳನ್ನು ಮಾಡುತ್ತಿದೆ. ರಾಷ್ಟ್ರೀಯ ನಾಟಕ ಶಾಲೆಯ ಸಹಯೋಗದಲ್ಲಿ ಭಾರತ ರಂಗಮಹೋತ್ಸವ ಆಯೋಜಿಸುವ ಮೂಲಕ ದೇಶ-ವಿದೇಶಗಳ ನಾಟಕಗಳನ್ನು ಬೆಂಗಳೂರಿನಲ್ಲಿ ಪ್ರಸ್ತುತಿ ಪಡಿಸು-ತ್ತಿರುವುದು ಶ್ಲಾಘನೀಯ' ಎಂದರು.

ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ ನಡೆಯುತ್ತಿರುವ ಭಾರತ ರಂಗ ಮಹೋತ್ಸವದಲ್ಲಿ ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಬಿ. ಸುರೇಶ, ಬಿ.ಟಿ. ಲಲಿತಾನಾಯಕ್, ಕೆ.ವಿ. ನಾಗರಾಜಮೂರ್ತಿ, ವೀಣಾ ಶರ್ಮಾ ಉಪಸ್ಥಿತರಿದ್ದರು

'ನಾನು ಮೊದಲು ಕವಿತೆಗಳನ್ನು ಬರೆದುಕೊಂಡಿದ್ದೆ. ನನ್ನನ್ನು ನಾಟಕಗಳಿಗೆ ಕರೆತಂದವರು ಸಿಜಿಕೆ, ಅವರು ಕನ್ನಡ ರಂಗಭೂಮಿಯ ದೊಡ್ಡ ದಂತಕಥೆ. ನನ್ನತಂಹ ನೂರಾರೂ ಕವಿಗಳನ್ನು, ನಾಟಕಕಾರರನ್ನಾಗಿ ರಂಗಭೂಮಿಗೆ ಪರಿಚಯಿಸಿದ ಕೀರ್ತಿ ಸಿಜಿಕೆ ಅವರಿಗೆ ಸಲ್ಲುತ್ತದೆ. ನಾನು ನಾಟಕಗಳನ್ನು ಬರೆಯಲು ಅವರ ಪ್ರೇರಣೆಯೇ ಮುಖ್ಯವಾಗಿತ್ತು. ಕವಿಯಾಗಿದ್ದ ನನ್ನನ್ನು ನಾಟಕಕಾರನ್ನಾಗಿ ಮಾಡಿದರು. ಭಾರತ ರಂಗ ಮಹೋತ್ಸವ ಬಹಳ ಚೆನ್ನಾಗಿ ನಡೆಯುತ್ತಿದೆ. ಈ ರಂಗ ಮಹೋತ್ಸವಕ್ಕೆ ಸಹಸ್ರಾರು ಪ್ರೇಕ್ಷಕರು ಆಗಮಿಸುತ್ತಿದ್ದಾರೆ ಎಂದು ಹೇಳಿದರು.

ರಂಗ ಸಂಪದ ಜೆ. ಲೋಕೇಶ್, ನಾಗರಾಜಮೂರ್ತಿ ಅವರು ಪ್ರಾಸ್ತಾವಿಕ-ವಾಗಿ ಮಾತನಾಡಿದರು. ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ, ಉತ್ಸವದ ನಿರ್ದೇಶಕ ಬಿ. ಸುರೇಶ್ ಇದ್ದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳು-2, ನಂ.14/ 3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಕೆಐಎಡಿಬಿ/ಕೆಆರ್‌ಐಡಿಇ/ಭೂಸ್ವಾ/132/2024-25 ದಿನಾಂಕ: 22.01.2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ /ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು **"ಬೆಂಗಳೂರು ಉಪ-ನಗರ ರೈಲ್ವೆ ಯೋಜನೆಗಾಗಿ"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ: **ಸಿಐ 172 ಎಸ್‌ಪಿಕ್ಯೂ (ಇ) 2024 ದಿನಾಂಕ: 09-01-2025** ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ:16-01-2025** ರಂದು ಪ್ರಕಟಣೆ ಹೊರಡಿಸಿದೆ ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ ಅನುಭವದಾರರುಗಳಿಗೆ/ ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು-2, ಕೆಐಎಡಿಬಿ **(ಕೆ.ಆರ್.ಐ.ಡಿ.ಇ.,) ನಂ.14/3,** 1ನೇ ಮಹಡಿ, ಅರವಿಂದಭವನ, ನೃಪತುಂಗ ರಸ್ತೆ, ಬೆಂಗಳೂರು-1 ರವರ ಕಛೇರಿಯಲ್ಲಿ **ದಿನಾಂಕ:18-02-2025 ರಂದು ಬೆಳಿಗ್ಗೆ 11.00 ಗಂಟೆಗೆ** ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು-ಬದಲು, ಆಧಾರ, ಹಕ್ಕುಬಿಡುಗಡೆ ವಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ-ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗದಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ.	ಗುರುತಿನ ಸಂಖ್ಯೆ	ಖಾತಾದಾರರ ಹೆಸರು	ಎಲ್‌ಎ/ಸಿಟಿಎಸ್ ಸರ್ವೆ ನಂಬರ್	ಸ್ವತ್ತಿನ ಒಟ್ಟು ವಿಸ್ತೀರ್ಣ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ-ಚ.ಮೀ.
ವಿಚಾರಣೆ ದಿನಾಂಕ: 18.02.2025			ವಿಚಾರಣೆ ಸಮಯ : ಬೆಳಿಗ್ಗೆ 11.00 ರಿಂದ		
ಗ್ರಾಮ: ಲಿಂಗರಾಜಪುರ	ಹೋಬಳಿ: ಕಸಬಾ	ತಾಲ್ಲೂಕು : ಬೆಂಗಳೂರು ಉತ್ತರ	ಜಿಲ್ಲೆ : ಬೆಂಗಳೂರು ನಗರ		
1	C2/R/4/200-300/Lingarajapura/ Station/01	ಸುನೀಲ್ ಮತ್ತು ಚಂದ್ರ	ಎಲ್‌ಎ-73 ಸಿಟಿಎಸ್-386	-	45.78
2	C2/R/4/200-300/Lingarajapura/ Station/02	ಪದ್ಮವತಿ ಕೋಂ ಡಿ. ವೇಣುಗೋಪಾಲ್			17.94
3	C2/R/4/200-300/Lingarajapura/ Station/03	ಪಿ. ನಾರಾಯಣಸ್ವಾಮಿ			14.66
4	C2/R/4/100-200/Lingarajapura/ Station/01	ಅಲೆಕ್ಸ್ ಕುರುವಿಲ್ಲಾ	ಎಲ್‌ಎ-73 ಸಿಟಿಎಸ್-387	-	86.44
5	C2/R/4/200-300/Lingarajapura/ Station/01	ಅಲೆಕ್ಸ್ ಕುರುವಿಲ್ಲಾ	79/1	11536.80	382.14
ಗ್ರಾಮ: ಕಾಚರಕನಹಳ್ಳಿ	ಹೋಬಳಿ: ಕಸಬಾ	ತಾಲ್ಲೂಕು : ಬೆಂಗಳೂರು ಉತ್ತರ	ಜಿಲ್ಲೆ : ಬೆಂಗಳೂರು ನಗರ		
6	C2/R/5/1-2/Kacharakanahalli/01	ಸಿದ್ಧಾರ್ಥ ಪಿ.ಯು. ಕಾಲೇಜು	113	15078.80	224.60
7	C2/R/5/1-2/Kacharakanahalli/02	ರಸ್ತೆ			190.98
8	C2/5-6/KKH/01	ಮದ್ದುಲಕ್ಷ್ಮಿ ಕೋಂ ಎನ್ ಲಕ್ಷ್ಮಿಪತಿ	136/3	-	81.00
9	C2/5/8-5/KKH/01	ಮದ್ದುಲಕ್ಷ್ಮಿ ಕೋಂ ಎನ್ ಲಕ್ಷ್ಮಿಪತಿ	134/3	-	144.00
ಗ್ರಾಮ: ಗುಡ್ಡದಹಳ್ಳಿ	ಹೋಬಳಿ: ಕಸಬಾ	ತಾಲ್ಲೂಕು : ಬೆಂಗಳೂರು ಉತ್ತರ	ಜಿಲ್ಲೆ : ಬೆಂಗಳೂರು ನಗರ		
10	C2/R/10/500-600/ GUDDADHAHALLI/01	ಪ್ರಕಾಶ್ ಗೋವರ್ಧನ್ ಸಿ.ಎಂ.	5/1	8298.40	58.41
ಗ್ರಾಮ: ಮತ್ತಿಕೆರೆ	ಹೋಬಳಿ: ಯಶವಂತಪುರ	ತಾಲ್ಲೂಕು : ಬೆಂಗಳೂರು ಉತ್ತರ	ಜಿಲ್ಲೆ : ಬೆಂಗಳೂರು ನಗರ		
11	C2/R/15/700-750/ MATHIKERE/01	ಹರೀಶ್ ಬೋಪಣ್ಣ, ಬಿಜೊಯ್ ವರ್ಗೀಸ್	82	8298.40	393.00
ಗ್ರಾಮದ: ಬಾಣಸವಾಡಿ	ಹೋಬಳಿ: ಕೆ.ಆರ್.ಪುರಂ	ತಾಲ್ಲೂಕು : ಬೆಂಗಳೂರು ಪೂರ್ವ	ಜಿಲ್ಲೆ : ಬೆಂಗಳೂರು ನಗರ		
12	C2/R/4/100-200/BANASAWADI/ STATION/01	1. ಪ್ರಭಾಕರ್ ರೆಡ್ಡಿ ಬಿನ್ ಜಿ. ಪಾಪರೆಡ್ಡಿ 2. ಬಿಎನ್. ಗೀತಾ ಕೋಂ ಪ್ರಭಾಕರ್ ರೆಡ್ಡಿ	128	24794	515.79
13	C2/R/4/100-200/BANASAWADI/ STATION/02	ಪಿ.ಲಕ್ಷ್ಮೀನಾರಾಯಣರೆಡ್ಡಿ ಬಿನ್ ಜಿ. ಪಾಪರೆಡ್ಡಿ			346.18
ಗ್ರಾಮ: ಶೆಟ್ಟಿಹಳ್ಳಿ	ಹೋಬಳಿ: ಯಶವಂತಪುರ	ತಾಲ್ಲೂಕು : ಬೆಂಗಳೂರು ಉತ್ತರ	ಜಿಲ್ಲೆ : ಬೆಂಗಳೂರು ನಗರ		
14	C2/R/23/1-2/SHETTIHALLI/02	ಹೆಚ್.ಎಸ್. ಮಹದೇವಪ್ಪ	52	-	95.97
15	C2/R/23/1-0/SHETTIHALLI/01	ಹೆಚ್.ಎಸ್. ಮಹದೇವಪ್ಪ	80	-	19.52
ಗ್ರಾಮ: ಮೇದರಹಳ್ಳಿ	ಹೋಬಳಿ: ಯಶವಂತಪುರ	ತಾಲ್ಲೂಕು : ಬೆಂಗಳೂರು ಉತ್ತರ	ಜಿಲ್ಲೆ : ಬೆಂಗಳೂರು ನಗರ		
16	C2/R/23/1-050/ MYDARAHALLI/01	1. ಪಾಂಡುರಂಗ, 2. ಶ್ರೀನಿವಾಸರೆಡ್ಡಿ ಬಿನ್ ಎಂ. ಶ್ರೀನಿವಾಸರೆಡ್ಡಿ	40	ಪಹಣಿ ಯಂತೆ	447.70

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿಗಳು-2, ಕೆಐಎಡಿಬಿ(ಕೆ.ಆರ್.ಐ.ಡಿ.ಇ.), ನೃಪತುಂಗ ರಸ್ತೆ, ಬೆಂಗಳೂರು-560 001.

ವಾಸಾಸಂಇ/ಯುನಿ-ಸಿ.ಪಿ/4777/ಕೆಎಸ್‌ಎಂಸಿಎ/2024-25

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 39 ಯುಬಿಎಲ್ 2024-25

ದಿನಾಂಕ : 27-01-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ದಕ್ಷಿಣ ಹುಬ್ಬಳ್ಳಿ - ಧಾರವಾಡ ಸೆಕ್ಷನ್ : 2.3 ಕಿ.ಮೀ. ಉದ್ದಕ್ಕಾಗಿ ಪ್ರಿಕಾಸ್ಟ್ ಆರ್‌ಸಿಸಿ ಸುತ್ತುಗೋಡೆಯ ನಿರ್ಮಾಣ.	ರೂ. 2,47,49,441/-
2	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ - ಲೋಂಡಾ ಸೆಕ್ಷನ್ : ನವಲೂರು - ಧಾರವಾಡ ಕಿ.ಮೀ.486/600 ನಿಲ್ದಾಣದ ನಡುವೆ ಕಿ.ಮೀ.486/600 ನಲ್ಲಿ ಪಾದಚಾರಿ ಸಬ್‌ವೇ (5.0 x 3.2ಮೀ) ನಿರ್ಮಾಣ.	ರೂ. 2,02,44,595/-
3	ಹುಬ್ಬಳ್ಳಿ ವಿಭಾಗ : **ಸಬ್‌ವರ್ಕ್-1 :** ಪರಕನಹಟ್ಟಿ ಹಾಲ್ಟ್ ನಿಲ್ದಾಣದಲ್ಲಿ ಹೈ ಲೆವೆಲ್ ಪ್ಲಾಟ್‌ಫಾರಂನ ಉದ್ದೇಶಿತ ನಿರ್ಮಾಣ (ಉದ್ದೇಶಿತ ಉದ್ದ 560ಮೀ x ಅಗಲ 6.0ಮೀ) **ಸಬ್‌ವರ್ಕ್-2 :** ಖಾನಾಪೂರ, ದೇಸೂರ, ಸುಳೇಭಾವಿ ಮತ್ತು ಪಾಚ್ಛಾಪೂರದಲ್ಲಿ ಟ್ರ್ಯಾಕ್ ಮೆಷೀನ್ ರೆಸ್ಟ್ ಹೌಸ್‌ನ ಉದ್ದೇಶಿತ ನಿರ್ಮಾಣ. **ಸಬ್‌ವರ್ಕ್-3 :** ಪರಕನಹಟ್ಟಿಯಲ್ಲಿ ಕಡಿಮೆ ವೆಚ್ಚದ ಪ್ಲಾಟ್‌ಫಾರಂ ಶೆಲ್ಟರ್‌ಗಳನ್ನು ಒದಗಿಸುವುದು.	ರೂ. 6,01,69,447/-
4	ಹುಬ್ಬಳ್ಳಿ ವಿಭಾಗ : **ಸಬ್‌ವರ್ಕ್-1 :** ಸವಣೂರು - ಸಹಾಯಕ ವಿಭಾಗೀಯ ಇಂಜಿನಿಯರ್ / ಕೇಂದ್ರ / ವ್ಯಾಪ್ತಿಯ ಅಡಿಯಲ್ಲಿನ ಸವಣೂರು ನಲ್ಲಿ ಸಿಬ್ಬಂದಿ ವಸತಿಗೃಹ ವಿಧ-2ರ (4 ಯೂನಿಟ್‌ಗಳು) ಉದ್ದೇಶಿತ ನಿರ್ಮಾಣ. **ಸಬ್‌ವರ್ಕ್-2 :** ಬಾಗಲಕೋಟೆ ಆರೋಗ್ಯ ಘಟಕಕ್ಕೆ ಅಭಿವೃದ್ಧಿಗಳು, ಪಿಎಂಇ ಕೊಠಡಿ ಮಾರ್ಪಾಡು ಕಾಮಗಾರಿಗಳು.	ರೂ. 1,31,71,842/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25-02-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ

ಪಿಯುಬಿ/751/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಬಿ-ಎಸ್‌ಜಿ-ಪಿಆರ್‌ಓಜೆ-ಆಗ್ಮೆಂಟೇಷನ್

ದಿನಾಂಕ : 27-01-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯಲ್ಲಿ ಐಪಿ-ಎಂಪಿಎಲ್‌ಎಸ್ ನೆಟ್‌ವರ್ಕ್ ನಲ್ಲಿ ಎಲ್‌ಎಎನ್‌ನೊಂದಿಗೆ ಸಂವಹನ ಮೂಲಸೌಕರ್ಯವನ್ನು ಹೆಚ್ಚಿಸುವುದು.	ರೂ. 12,45,05,316.79

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21-02-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಯೋಜನೆ/ಬೆಂಗಳೂರು

ಪಿಯುಬಿ/748/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

SIRIGANDHA HOUSE BUILDING CO-OPERATIVE SOCIETY LTD.

(ನೋಂದಣಿ ಕ್ರಮಾಂಕ:HSG.1/28/HHS/38527/2009-10)

"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು-560040. ದೂ.080-23184471 / 7795990451

ಪ್ರಕಟಣೆ

ಮಾನ್ಯ ಸದಸ್ಯರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸಂಘದ 5 ವರ್ಷದ ಅವಧಿಯ ಆಡಳಿತ ಮಂಡಳಿಗೆ ದಿನಾಂಕ: 23.02.2025 ರಂದು ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಪುಣ್ಯಕೋಟಿ, #1587, 3ನೇ ಮುಖ್ಯರಸ್ತೆ, ಚಂದ್ರಬಡಾವಣೆ, ಬೆಂಗಳೂರು-560040 ಇಲ್ಲಿ ಚುನಾವಣೆಯನ್ನು ನಡೆಸಲು ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದರ ಅನ್ವಯ ದಿನಾಂಕ: 15.02.2025 ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಚುನಾವಣಾ ನೋಟೀಸ್‌ಗಳನ್ನು ಅರ್ಹ ಸದಸ್ಯರಿಗೆ ಈಗಾಗಲೇ ಅಂಚೆ ದಾಖಲಾತಿ ಮೂಲಕ ಕಳುಹಿಸಲಾಗಿದೆ. ಚುನಾವಣಾ ನೋಟೀಸು ತಲುಪದ ಅರ್ಹ ಸದಸ್ಯರು ಈ ಪತ್ರಿಕಾ ಪ್ರಕಟಣೆಯನ್ನು ಚುನಾವಣಾ ನೋಟೀಸ್ ಎಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ.

ಸಹಿ/- (ಡಿ. ಪ್ರಭಾವತಿ) ರಿಟರ್ನಿಂಗ್ ಆಫೀಸರ್
ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ಚಂದ್ರ ಬಡಾವಣೆ, ಬೆಂಗಳೂರು ಹಾಗೂ ಅಧೀಕ್ಷಕರು,
ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು-560 052.

ದಿನಾಂಕ: 03.02.2025
ಸ್ಥಳ: ಬೆಂಗಳೂರು

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು - 562110

ದೂರವಾಣಿ: 080-29599998 e-mail : forest.brzp@gmail.com

ಸಂ: ಎ3/ಬಿಯುಡಿ/ಹಸಿರೀಕರಣ/ಟೆಂಡರ್/ಸಿಆರ್- /2024-25 ದಿನಾಂಕ: 31.01.2025

ಇ-ಟೆಂಡರ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ 2024-25ನೇ ಸಾಲಿನಲ್ಲಿ ಹಸಿರೀಕರಣ ಕಾಮಗಾರಿಗಳನ್ನು ರಸ್ತೆಬದಿ ನೆಡುತೋಪು ಯೋಜನೆಡಿ ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಅರಣ್ಯ ವಿಭಾಗ/ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ-ಪ್ರೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 08.02.2025 ಸಂಜೆ 5.30 ರವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 10.02.2025ರ ಅಪರಾಹ್ನ 12.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳನ್ನು ಯಶಸ್ವಿಯಾಗಿ ಪೂರೈಸಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಸಿಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 12.02.2025 ರಂದು ಅಪರಾಹ್ನ 12.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: 15.02.2025ರ ಸಾಯಂಕಾಲ 5.30 ಗಂಟೆವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು (Auto extension) ತಾಂತ್ರಿಕ ಬಿಡ್‌ನ್ನು ದಿನಾಂಕ: 17.02.2025 ರಂದು ಮಧ್ಯಾನ 12.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 18.02.2025 ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ

ವಾಸಾಸಂಇ/ವಾಪ್ರ/4768/ಆಕಾರ್/2024-25

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Security & Detectives

WANTED URGENTLY REQUIRED GENERAL MANAGER AND CEO FOR 35 YEARS OLD SECURITY AGENCY. EXPERIENCE IN SECURITY FIELD NEED APPLY. CONTACT:C N PATIL. PHONE: 9844012530

PERSONAL

Change of Name

I, MANJEGOWDA, residing at Bengaluru-85 have changed my name as MANJEGOWDA HOSUR HANUMEGOWDA, vide affidavit dated 03/02/2025 before Notary K.S. Bammappanavar, Bengaluru

I CHIRAG SOMAIAH Residing at A2-2031, Assets East Point, Gear intl School road, off Marathalli road, Bellandur, Bengaluru-103, have changed my name to N.CHIRAG SOMAIAH Vide affidavit dated 03-02-2025 Before Notary LEELA Bangalore.

Lost

LOST

I, Prashanth K.V., R/at No. 502, 6th Main, 7th Cross, Jagadish Nagar, New Thippasadra Post, B'lore-75, have lost registration property paper belonging to my father late Sri K. Venkatesh Babu Document / Site No. 2155/B, HAL 3rd Stage, B.M. Kaval. while shifting the house. Finders please contact: 9945375459.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY

@ 550/-* PER SQCM

SINGLE / DOUBLE / MULTIPLE COLUMN

www.dhclassifieds.com BOOK NOW

For more details contact:

+91 9901641752 | +91 9845114560 | +91 9900428036

ಮಹಿಳೆಗೆ ಕಿರುಕುಳ ಕಾನ್‌ಸ್ಟೆಬಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಗೆ ಕಿರುಕುಳ ನೀಡುತ್ತಿದ್ದ ಆರೋಪದ ಅಡಿ ಇಂದಿರಾನಗರ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ಹಾಗೂ ಇತರರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಸಂತನಗರದ ಪೊಲೀಸ್ ಕ್ವಾಟ್ರರ್ಸ್ ನಿವಾಸಿ ರೇಖಾ ಅವರು ನೀಡಿದ ದೂರಿನ ಮೇರೆಗೆ ಇಂದಿರಾನಗರ ಠಾಣೆಯ ಕಾನ್‌ಸ್ಟೆಬಲ್ ಮನೋಜ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗು-ತ್ತಿದೆ ಎಂದು ಪೊಲೀಸರು ಹೇಳಿದರು.

ಸದ್ಯ ಕಾನ್‌ಸ್ಟೆಬಲ್ ನಾಪತ್ತೆ ಆಗಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೂರುದಾರೆ ರೇಖಾ ಅವರ ಪತಿ ಅಪಘಾತದಲ್ಲಿ ಮೃತಪಟ್ಟಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆ ಸಲ್ಲಿಸಲು ನ್ಯಾಯಾಲಯಕ್ಕೆ ಹೋಗಿದ್ದ ವೇಳೆ ಮನೋಜ್ ಪರಿಚ-ಯವಾಗಿತ್ತು. ಬಳಿಕ ಇಬ್ಬರೂ ಸ್ನೇಹಿತರಾಗಿದ್ದು, ನಂತರ ಪ್ರೀತಿಗೆ ತಿರುಗಿ, ಕಳೆದ ವರ್ಷ ಮದುವೆ ಆಗಿದ್ದರು' ಎಂದು ಮೂಲಗಳು ತಿಳಿಸಿವೆ.

'ಕೆಲವು ದಿನಗಳ ಹಿಂದೆ ಪೊಲೀಸ್ ಕ್ವಾಟ್ರಸ್‌ಗೆ ಬಂದಿದ್ದ ಮನೋಜ್ ಅವರ ಸಹೋದರಿಯರು ರೇಖಾಗೆ ನಿಂದಿಸಿದ್ದರು. ಅದಾದ ಮೇಲೆ ಮನೋಜ್ ಹಾಗೂ ರೇಖಾ ಮಧ್ಯೆ ಗಲಾಟೆ ಆರಂಭವಾಗಿತ್ತು. ವಿಚ್ಛೇದನ ಕೊಡುವಂತೆ ಮನೋಜ್ ಪೀಡಿಸುತ್ತಿದ್ದರು. ಹಲ್ಲೆಯನ್ನೂ ನಡೆಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪರಿಕ್ರಮ ಎಫ್‌ಸಿಗೆ ಜಯ

ಬೆಂಗಳೂರು: ಪರಿಕ್ರಮ ಎಫ್‌ಸಿ ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಸೋಮವಾರ ರೆಬೆಲ್ಸ್ ಎಫ್‌ಸಿ ವಿರುದ್ಧ 3-1 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡದ ಹಾಹೊಮಿನ್‌ಥಾಂಗ್ ಕಿಪ್‌ಗೆನ್ (12ನೇ ನಿ.), ನಾಂಗ್‌ಲೆನ್‌ಥಾಂಗ್ ಸಿಂಗ್‌ಸಿತ್ (46ನೇ ನಿ.) ಮತ್ತು ಎ.ಎಸ್. ಸುಹಾಸ್ ಎಬೆನ್‌ನೀಜೆರ್ (90 + 5ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡ ಎದುರಾಳಿ ಎಎಸ್‌ಸಿ ಮತ್ತು ಸೆಂಟರ್ ತಂಡದ ವಿರುದ್ಧ ಡ್ರಾ ಮಾಡಿಕೊಂಡಿತು.

ಎಫ್‌ಎಫ್ ತಂಡಕ್ಕೆ ಜಯ: ಎಫ್‌ಎಫ್ ತಂಡ ಕೆಎಸ್‌ಎಫ್‌ಎ ಎ ಡಿವಿಷನ್ ಮಹಿಳಾ ಲೀಗ್‌ನಲ್ಲಿ ಸೋಮವಾರ ಆಫ್‌ಸೈಡ್ ಟ್ರ್ಯಾಪ್ ಎಫ್‌ಎ ವಿರುದ್ಧ 1-0 ಗೋಲಿನಿಂದ ಗೆದ್ದುಕೊಂಡಿತು. ಇನ್ನೊಂದು ಪಂದ್ಯದಲ್ಲಿ ಕೆಂಪ್ ಜೂನಿಯರ್ಸ್ ಎಫ್‌ಸಿ 2-0 ಗೋಲುಗಳಿಂದ ಯಂಗ್ ಬ್ಲೂಸ್ ಎಲೈಟ್ ಎಫ್‌ಸಿ ತಂಡವನ್ನು ಮಣಿಸಿತು. ಕೆಂಪ್ ಸ್ಕೋರರ್ಸ್ ತಂಡದ ಅದ್ವಿಕಾ (45ನೇ ನಿ.) ಮತ್ತು ಚೈತನ್ಯ (56ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

28 ವರ್ಷಗಳಿಂದ ನ್ಯಾಯಾಲಯದ ಮುಂದೆ ಬಾಕಿ: ಸುಪ್ರೀಂ ಕೋರ್ಟ್‌ಗೆ ರಾಜ್ಯ ಸರ್ಕಾರ

ಅರಮನೆ ಆಸ್ತಿ: ತುರ್ತು ವಿಚಾರಣೆಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಸುಪ್ರೀಂ ಕೋರ್ಟ್

ನವದೆಹಲಿ: ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ–1996 ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರ ಪೀಠದ ಮುಂದೆ ತುರ್ತು ವಿಚಾರಣೆಗಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಮತ್ತು ಕರ್ನಾಟಕದ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದರು.

ಈ ವಿಷಯವು 28 ವರ್ಷಗಳಿಂದ ನ್ಯಾಯಾಲಯದ ಮುಂದೆ ಬಾಕಿ ಇದೆ ಎಂದು ವಕೀಲರು ಹೇಳಿದರು. ಅಗತ್ಯ ಕ್ರಮಕ್ಕಾಗಿ ರಿಜಿಸ್ಟ್ರಾರ್ ಅವರನ್ನು ಸಂಪರ್ಕಿಸುವಂತೆ ನ್ಯಾಯಪೀಠವು ಸೂಚಿಸಿತು.

ಅರಮನೆ ಮೈದಾನ ಪ್ರದೇಶದ ಬಳಕೆ ಮತ್ತು ನಿಯಂತ್ರಣದ ಅಧಿಕಾರವನ್ನು ರಾಜ್ಯ ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಉದ್ದೇಶಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಲು ಸಚಿವ ಸಂಪುಟ ಸಭೆ ಇತ್ತೀಚೆಗೆ ತೀರ್ಮಾನಿಸಿತ್ತು.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ನ್ಯಾಯಾಂಗ ನಿಂದನೆ ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಆ ಆದೇಶದ ಪ್ರಕಾರ ಕರ್ನಾಟಕ ಸ್ಟಾಂಪ್ ಕಾಯ್ದೆಯ ಸೆಕ್ಷನ್ 45 ಬಿ ಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತ್ತು.

ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ ಟಿಡಿಆರ್ (ಅಭಿವೃದ್ಧಿ ಹಕ್ಕು ವರ್ಗಾವಣೆ) ₹3,014 ಕೋಟಿ ನೀಡಬೇಕು ಎಂದು ಸುಪ್ರೀಂಕೋರ್ಟ್ ಆದೇಶ ನೀಡಿತ್ತು. ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ತೀರ್ಮಾನಿಸಿತ್ತು.

ಎಎಬಿ ಚುನಾವಣೆ: ಹೈಕೋರ್ಟ್‌ನಲ್ಲಿ ಮತಗಟ್ಟೆ ಕೋರಿ ರಿಟ್

ಬೆಂಗಳೂರು: ಇದೇ 16ರಂದು ನಡೆಯುತ್ತಿರುವ ಎಎಬಿ (ಬೆಂಗಳೂರು ವಕೀಲರ ಸಂಘ) ಚುನಾವಣೆಯಲ್ಲಿ ಹೈಕೋರ್ಟ್ ಆವರಣದಲ್ಲಿಯೂ ಸದಸ್ಯರು ಮತ ಚಲಾಯಿಸಲು ಅನುವು ಮಾಡಿಕೊಡಬೇಕು. ಹೆಚ್ಚುವರಿ ಮತಗಟ್ಟೆ ಸ್ಥಾಪಿಸಲು ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ಘಟಕದ ಎಎಬಿ ಪದಾಧಿಕಾರಿಗಳು ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಹೈಕೋರ್ಟ್ ವಕೀಲರೂ ಆದ ಎಂ.ಚಾಮರಾಜ್, ಎಸ್.ರಾಜು, ಬಿ.ಬಾಲಕೃಷ್ಣ ಮತ್ತು ಕೆ.ಚಂದ್ರಕಾಂತ ಪಾಟೀಲ ಅವರು ಸಲ್ಲಿಸಿರುವ ಈ ಅರ್ಜಿ (ಡಬ್ಲ್ಯು.ಪಿ 3221/2025) ಮಂಗಳವಾರ (ಫೆ.04) ನ್ಯಾಯಮೂರ್ತಿ ಆರ್. ದೇವದಾಸ್ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿದೆ.

ಮೀಸಲು ಅರ್ಜಿ ವಿಲೇವಾರಿ: 'ಎಎಬಿ ಆಡಳಿತ ಮಂಡಳಿಯಲ್ಲಿ, ಹಿಂದುಳಿದ ವರ್ಗಗಳು ಮತ್ತು ಎಸ್‌ಸಿ–ಎಸ್‌ಟಿ ಸಮುದಾಯದ ವಕೀಲರಿಗೆ ಶೇ 50ರಷ್ಟು ಮೀಸಲಾತಿ ಹಾಗೂ ರೊಟೇಶನ್ ಆಧಾರದಲ್ಲಿ ಅವಕಾಶ ಕಲ್ಪಿಸಬೇಕು' ಎಂದು ಕೋರಲಾಗಿದ್ದ ಅರ್ಜಿಗಳನ್ನು ವಿಲೇವಾರಿ ಮಾಡಿರುವ ಹೈಕೋರ್ಟ್, 'ಈ ಸಂಬಂಧ ಆದೇಶಿಸಲು ಈ ನ್ಯಾಯಾಲಯಕ್ಕೆ ಅಧಿಕಾರವಿಲ್ಲ' ಎಂದು ಸ್ಪಷ್ಟಪಡಿಸಿದೆ.

ಈ ಸಂಬಂಧ, 'ಅಖಿಲ ಭಾರತ ಹಿಂದುಳಿದ ವರ್ಗಗಳ ವಕೀಲರ ಸಂಘ' ಮತ್ತು 'ರಾಜ್ಯ ಎಸ್‌ಸಿ–ಎಸ್‌ಟಿ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ವಕೀಲರ ಒಕ್ಕೂಟ' ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಮಾಹಿತಿ ಆಯುಕ್ತರ ನೇಮಕ ಪ್ರಶ್ನಿಸಿ ರಿಟ್: ಇಂದು ವಿಚಾರಣೆ

ಹೈಕೋರ್ಟ್

ಬೆಂಗಳೂರು: ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ. ಪ್ರಸಾದ್ ಹಾಗೂ ಆಯುಕ್ತರಾಗಿ ಕೆ.ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ. ಚನ್ನಾಳ, ಎಸ್.ರಾಜಶೇಖರ, ಕೆ.ಬದ್ರುದ್ದೀನ್ ಮತ್ತು ಬಿ.ಆರ್. ಮಮತಾ ಅವರ ನೇಮಕಾತಿ ಪ್ರಶ್ನಿಸಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತಂತೆ ಹುದ್ದೆಯ ಆಕಾಂಕ್ಷಿಯಾಗಿದ್ದ ಜೆ.ಪಿ.ನಗರ 7ನೇ ಹಂತದ ನಿವಾಸಿಯಾದ ಸಾಮಾಜಿಕ ಕಾರ್ಯಕರ್ತ ಕೆ.ಮಲ್ಲಿಕಾರ್ಜುನ ರಾಜು ಸಲ್ಲಿಸಿರುವ ಅರ್ಜಿಯು ನ್ಯಾಯಮೂರ್ತಿ ಆರ್.ದೇವದಾಸ್ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ಮಂಗಳವಾರ (ಫೆ.04) ವಿಚಾರಣೆಗೆ ನಿಗದಿಯಾಗಿದೆ.

'ಮಂಗಳವಾರವೇ (ಫೆ.4) ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಿಗದಿಯಾಗಿದ್ದು, ಅಷ್ಟರೊಳಗೆ ಈ ಅರ್ಜಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು. ಇಲ್ಲವಾದಲ್ಲಿ ಅರ್ಜಿ ನಿಷ್ಪ್ರಯೋಜಕವಾಗುತ್ತದೆ' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಹೊಸ ಮಾರ್ಗಸೂಚಿ ರೂಪಿಸಲು ಕಾನೂನು ವಿವಿಗೆ ನಿರ್ದೇಶನ

ಬೆಂಗಳೂರು: 'ಪರೀಕ್ಷಾ ಅಕ್ರಮಗಳನ್ನು ತಡೆಯಲು ಹಾಗೂ ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಿಸಲು ಹೊಸ ಮಾರ್ಗಸೂಚಿ ರೂಪಿಸಿ' ಎಂದು ಹೈಕೋರ್ಟ್, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿದೆ.

ಕಾನೂನು ವಿದ್ಯಾರ್ಥಿ ಎಚ್.ಎಂ.ರಾಹುಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಪರೀಕ್ಷಾ ಮೇಲ್ವಿಚಾರಕರು ಬಾಡಿ ಕ್ಯಾಮರಾ ಧರಿಸಬೇಕು. ಪರೀಕ್ಷೆಗಳನ್ನು ಪಾರದರ್ಶಕ ರೀತಿಯಲ್ಲಿ ನಡೆಸಲು ಗರಿಷ್ಠ ಪ್ರಮಾಣದಲ್ಲಿ ತಂತ್ರಜ್ಞಾನ ಬಳಸಿಕೊಳ್ಳಬೇಕು ಮತ್ತು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸುವ ಅಂಶಗಳಿರಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

'ಹೊಸ ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯದ ಜತೆ ಸಂಯೋಜನೆ ಹೊಂದಿರುವ ಎಲ್ಲಾ ಕಾನೂನು ಕಾಲೇಜುಗಳಲ್ಲಿ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಬೇಕು' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ತೆರಿಗೆ ಪಾವತಿಸದ ಐಷಾರಾಮಿ ಕಾರು ವಶ

ತೆರಿಗೆ ಪಾವತಿಸದೇ ಸಂಚರಿಸುತ್ತಿದ್ದ ಐಷಾರಾಮಿ ಕಾರುಗಳನ್ನು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ನೇತೃತ್ವದ ತಂಡ ವಶಕ್ಕೆ ಪಡೆಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ರಾಜ್ಯಗಳಲ್ಲಿ ನೋಂದಣಿ ಮಾಡಿಕೊಂಡು ರಾಜ್ಯದಲ್ಲಿ ಮೋಟಾರು ವಾಹನ ತೆರಿಗೆ ಪಾವತಿಸದೇ ಸಂಚರಿಸುತ್ತಿದ್ದ ಪೋರ್ಷೆ, ಬಿಎಂಡಬ್ಲ್ಯೂ, ಬೆಂಜ್, ಔಡಿ, ಔಸ್ಟಿನ್, ರೇಂಜ್ ರೋವರ್ ಸೇರಿದಂತೆ 30 ದುಬಾರಿ ಬೆಲೆಯ ಐಷಾರಾಮಿ ಕಾರುಗಳನ್ನು ಸಾರಿಗೆ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ನೇತೃತ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಬಿ. ಶ್ರೀನಿವಾಸ್ ಪ್ರಸಾದ್, ದೀಪಕ್, ಶ್ರೀನಿವಾಸಪ್ಪ ಮತ್ತು ರಂಜಿತ್ ಅವರನ್ನು ಒಳಗೊಂಡ 41 ಅಧಿಕಾರಿಗಳ ತಂಡ ಕಾರ್ಯಾಚರಣೆ ನಡೆಸಿತ್ತು.

ವಶಪಡಿಸಿಕೊಂಡಿರುವ ಕಾರುಗಳಿಂದ ಸುಮಾರು ₹3 ಕೋಟಿ ತೆರಿಗೆ ವಸೂಲಿಗೆ ನೋಟೀಸ್ ನೀಡಲಾಗಿದೆ ಎಂದು ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಬೆಂಗಳೂರು ವಿ.ವಿ: ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪಾವನಾ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ವಿದ್ಯಾರ್ಥಿನಿ ಎಚ್.ಎನ್. ಪಾವನಾ(21) ನೇಣು ಹಾಕಿಕೊಂಡು ಸೋಮವಾರ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ.

ಮೈಸೂರು ಜಿಲ್ಲೆ, ಎಚ್.ಡಿ.ಕೋಟೆ ತಾಲ್ಲೂಕಿನ ಹೆಬ್ಬಲಗುಪ್ಪೆ ಗ್ರಾಮದ ಪಾವನಾ ಅವರು, ಎರಡನೇ ವರ್ಷದ ಸ್ನಾತಕೋತ್ತರ ಪದವಿ ಓದುತ್ತಿದ್ದರು. ಜ್ಞಾನಭಾರತಿ ಆವರಣದ ರಮಾಬಾಯಿ ಮಹಿಳಾ ವಿದ್ಯಾರ್ಥಿ ನಿಲಯದ ಕೊಠಡಿ ಸಂಖ್ಯೆ 124ರಲ್ಲಿ ನೆಲಸಿದ್ದರು.

'ಸೋಮವಾರ ಬೆಳಿಗ್ಗೆ 11ರ ಸುಮಾರಿಗೆ ಕೊಠಡಿಯಲ್ಲಿ ಅಳವಡಿಸಿರುವ ಫ್ಯಾನ್‌ಗೆ ದುಪ್ಪಟ್ಟಾದಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ನೇಹಿತೆಯರು ತರಗತಿ ಮುಗಿಸಿಕೊಂಡು ವಾಪಸ್ ಬಂದು ನೋಡಿದಾಗ ಪಾವನಾ ಅವರು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿತ್ತು. ತಕ್ಷಣವೇ ಅವರು ಹಾಸ್ಟೆಲ್ ವಾರ್ಡನ್‌ಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ಪರಿಣಿತರು ಬಂದು ಪರಿಶೀಲನೆ ನಡೆಸಿದ್ದಾರೆ. ವಿದ್ಯಾರ್ಥಿನಿಯ ಪೋಷಕರಿಗೆ ಮಾಹಿತಿ ನೀಡಲಾಗಿದೆ. ಅವರು ಬಂದ ಬಳಿಕ ದೂರು ಪಡೆದು ತನಿಖೆ ನಡೆಸಲಾಗುವುದು. ಮೊಬೈಲ್ ವಶಕ್ಕೆ ಪಡೆದು ಕರೆಗಳ ವಿವರ ಪರಿಶೀಲನೆ ನಡೆಸಲಾಗುವುದು. ಸದ್ಯ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಲಾಗಿದೆ. ಪೋಷಕರ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ಕೈ ಕೊಯ್ದುಕೊಂಡಿದ್ದ ವಿದ್ಯಾರ್ಥಿನಿ: 'ಪಾವನಾ ಅವರು ಯುವಕನನ್ನು ಪ್ರೀತಿಸುತ್ತಿದ್ದರು. ಇತ್ತೀಚೆಗೆ ಪಾವನಾ ಅವರನ್ನು ಆ ಯುವಕ ಕಡೆಗಣಿಸಿದ್ದ ಎನ್ನಲಾಗಿದೆ. ಯುವಕನ ಜನ್ಮ ದಿನಾಚರಣೆ ಮಂಗಳವಾರ ಇತ್ತು. ಜನ್ಮ ದಿನಾಚರಣೆಯನ್ನು ಒಟ್ಟಿಗೆ ಆಚರಣೆ ಮಾಡೋಣ ಎಂದು ಯುವತಿ ಮನವಿ ಮಾಡಿದ್ದಳು. ಇದಕ್ಕೆ ಯುವಕ ಒಪ್ಪಿರಲಿಲ್ಲ. ನಾನು ಅನಾಥಾಶ್ರಮವೊಂದರಲ್ಲಿ ಆಚರಣೆ ನಡೆಸಿಕೊಳ್ಳುವುದಾಗಿ ಹೇಳಿದ್ದ. ಇದರಿಂದ ಯುವತಿ ನೊಂದಿದ್ದರು. ಸೋಮವಾರ ಬೆಳಿಗ್ಗೆ ತರಗತಿಗೆ ಹಾಜರಾಗಿದ್ದರು. ನಂತರ, ಕೊಠಡಿಗೆ ಬಂದು ಕೈ ಕೊಯ್ದುಕೊಂಡಿದ್ದರು. ನಂತರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡ ಕೊಠಡಿಯಲ್ಲಿ ಮರಣ ಪತ್ರ ದೊರಕಿದೆ. ಅದನ್ನು ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಪಾದಚಾರಿ ಮಾರ್ಗದಲ್ಲಿ ವಾಹನ: ಡಿ.ಎಲ್ ಅಮಾನತು

ಜಾಗೃತಿ ಮೂಡಿಸಲು ಸಂಚಾರ ವಿಭಾಗದ ಪೊಲೀಸರು ಬಳಸಿರುವ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು : ಸಂಚಾರ ನಿಯಮಗಳನ್ನು ಉಲ್ಲಂಘಿಸಿ ಪಾದಚಾರಿ ಮಾರ್ಗದ ಮೇಲೆ ವಾಹನ ಚಾಲನೆ ಮಾಡುವವರ ಚಾಲನಾ ಪರವಾನಗಿ (ಡಿ.ಎಲ್) ಅಮಾನತುಗೊಳಿಸಲು ಪೊಲೀಸರು ನಿರ್ಧರಿಸಿದ್ದಾರೆ.

ಸಂಚಾರ ನಿಯಮಗಳ ಕುರಿತು ಜಾಗೃತಿ ಹಾಗೂ ವಿಶೇಷ ಕಾರ್ಯಾಚರಣೆ ಕೈಗೊಂಡರೂ ನಿಯಮ ಉಲ್ಲಂಘಿಸುವವರ ಸಂಖ್ಯೆ ಕಡಿಮೆಯಾಗಿಲ್ಲ. ಅದರಲ್ಲೂ ಸಂಚಾರ ದಟ್ಟಣೆ ವೇಳೆ ಪಾದಚಾರಿ ಮಾರ್ಗದ ಮೇಲೆ ದ್ವಿಚಕ್ರ ವಾಹನ ಓಡಿಸುವವರ ವಿರುದ್ಧ ಸಂಚಾರ ವಿಭಾಗದ ಪೊಲೀಸರು ದಂಡ ವಿಧಿಸುತ್ತಲೇ ಇದ್ದಾರೆ. ಆದರೆ, ದಂಡಕ್ಕೂ ಬಗ್ಗದ ವಾಹನ ಸವಾರರ ವಿರುದ್ಧ ಡಿ.ಎಲ್ ಅಮಾನತು ಅಸ್ತ್ರ ಪ್ರಯೋಗಿಸಲು ಸಂಚಾರ ವಿಭಾಗದ ಪೊಲೀಸರು ನಿರ್ಧರಿಸಿದ್ದಾರೆ.

ಸಂಚಾರ ವಿಭಾಗದ ಹಿರಿಯ ಪೊಲೀಸ್ ಅಧಿಕಾರಿಗಳು ಸಭೆ ನಡೆಸಿ, ಮೊದಲ ಬಾರಿಗೆ ಡಿ.ಎಲ್ ಅಮಾನತು ಮಾಡುವ ನಿರ್ಧಾರ ಕೈಗೊಂಡಿದ್ದಾರೆ.

'ಪಾದಚಾರಿ ಮಾರ್ಗದ ಮೇಲೆ ವಾಹನ ಚಲಾಯಿಸುವವರಿಗೆ ದಂಡ ವಿಧಿಸಲಾಗುತ್ತಿತ್ತು. ಆದರೆ, ನೂತನ ನಿಯಮದ ಪ್ರಕಾರ ಇನ್ಮುಂದೆ ಪಾದಚಾರಿ ಮಾರ್ಗದ ಮೇಲೆ ವಾಹನ ಚಲಾಯಿಸಿದರೆ ಮೊದಲ ಬಾರಿಗೆ ದಂಡ ವಿಧಿಸಲಾಗುತ್ತದೆ. ಮತ್ತೆ ನಿಯಮ ಉಲ್ಲಂಘಿಸಿದರೆ ಅಂಥವರ ಚಾಲನಾ ಪರವಾನಗಿ ಅಮಾನತುಗೊಳಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸು ಮಾಡಲಾಗುವುದು' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಘನತ್ಯಾಜ್ಯ ಸಂಗ್ರಹಣೆ ಗುತ್ತಿಗೆ: ನಿಗದಿತ ಮೊತ್ತಕ್ಕಿಂತ ಶೇ 60ರಷ್ಟು ಹೆಚ್ಚು ನಮೂದು

ಗುತ್ತಿಗೆ ಪ್ರಕ್ರಿಯೆಯಲ್ಲಿ ವಂಚನೆ ಶಂಕೆ

ಪ್ರವಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯಲ್ಲಿ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಘನತ್ಯಾಜ್ಯ ಸಂಗ್ರಹಣೆಗೆ ಸಂಬಂಧಿಸಿದಂತೆ ಆಹ್ವಾನಿಸಿದ್ದ ಟೆಂಡರ್ ಪ್ರಕ್ರಿಯೆಯಲ್ಲಿ ವಂಚನೆಯ ಶಂಕೆ ವ್ಯಕ್ತವಾಗಿದ್ದು, ಪ್ರಕ್ರಿಯೆ ಸ್ಥಗಿತಗೊಂಡಿದೆ.

ಪ್ರಕರಣವು ಕೇಂದ್ರ ಅಪರಾಧ (ಸಿಸಿಬಿ) ವಿಭಾಗದ ಮೆಟ್ಟಿಲೇರಿದೆ. ಸಿಸಿಬಿಯ ಹೆಚ್ಚುವರಿ ಪೊಲೀಸ್ ಕಮಿಷನರ್ (ಅಪರಾಧ) ಸೂಚನೆ ಮೇರೆಗೆ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲಾಗಿದೆ.

ಆರಂಭದಲ್ಲಿ ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಆ ದೂರು ಆಧರಿಸಿ ಠಾಣೆಯ ಇನ್‌ಸ್ಪೆಕ್ಟರ್ ವಿಚಾರಣೆ ನಡೆಸಿದ್ದರು. ಅದಾದ ಮೇಲೆ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಸಂಸ್ಥೆಯು ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಘನ ತ್ಯಾಜ್ಯ ಸಂಗ್ರಹಣೆಗೆ ಇ–ಸಂಗ್ರಹಣಾ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಿತ್ತು. ಈ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡುವುದು ಸೂಕ್ತ ಎಂದು ಪೊಲೀಸ್ ಅಧಿಕಾರಿಗಳು ನಿರ್ಧರಿಸಿದ್ದರು. ಸಿಸಿಬಿಯಲ್ಲಿ ಪ್ರತ್ಯೇಕ ಪೊಲೀಸ್ ತಂಡ ತನಿಖೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

89 ಪ್ಯಾಕೇಜ್‌ಗಳಾಗಿ ವಿಂಗಡಣೆ: 'ಘನ ತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಾಣಿಕೆಗೆ ಪಾಲಿಕೆಯ 225 ವಾರ್ಡ್‌ಗಳನ್ನು 89 ಪ್ಯಾಕೇಜ್‌ಗಳಾಗಿ ವಿಂಗಡಿಸಿ, ಕಾರ್ಯನಿರ್ವಹಣೆ ಮಾಡಲು ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವು ಗುತ್ತಿಗೆದಾರರು, ಒಂದು ತಂಡ ರಚಿಸಿಕೊಂಡು ಗುಂಪಾಗಿ ಬಿಡ್ ಸಲ್ಲಿಸಿದ್ದರು. ತಾಂತ್ರಿಕ ಮೌಲ್ಯಮಾಪನದಲ್ಲಿ ಟೆಂಡರ್ ನಿಬಂಧನೆ ಹಾಗೂ ನಿಯಮಗಳನ್ನು ಪಾಲಿಸದೆ ಗುತ್ತಿಗೆದಾರರು ಬಿಡ್‌ಗಳನ್ನು ಸಲ್ಲಿಸಿದ್ದಾರೆ. ಟೆಂಡರ್ ಅಂದಾಜಿನ ಮೊತ್ತಕ್ಕಿಂತ ಶೇ 50ರಿಂದ ಶೇ 60ರಷ್ಟು ಹೆಚ್ಚು ದರ ನಮೂದಿಸಿದ್ದರು. ಈ ಟೆಂಡರ್ ಅನ್ನು ಅನುಷ್ಠಾನಕ್ಕೆ ತಂದರೆ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲಿದೆ' ಎಂದು ವಿಷನ್ ಮ್ಯಾನ್ ಪವರ್, ಎಸ್‌ಎಲ್‌ವಿ ಟ್ರೇಡರ್ಸ್ ಹಾಗೂ ಇತರ 15 ಏಜೆನ್ಸಿಗಳು ನೀಡಿರುವ ದೂರು ಆಧರಿಸಿ, ಪ್ರಕರಣ ದಾಖಸಿಕೊಳ್ಳಲಾಗಿದೆ.

ಟೆಂಡರ್ ಪ್ರಕ್ರಿಯೆ ನಡೆಸಲು ಸಾಧ್ಯವಾಗದೇ ಹಳೆಯ ವ್ಯವಸ್ಥೆಯೇ ಮುಂದುವರೆದಿದೆ. ಇದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಿ ವಂಚನೆಯಾಗಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

₹2.10 ಕೋಟಿ ಅವ್ಯವಹಾರದ ಆರೋಪ: ತನಿಖೆಗೆ ಆದೇಶ

ಬೆಂಗಳೂರು: ಗಾಂಧಿನಗರ ವಿಭಾಗದಲ್ಲಿ ಘನತಾಜ್ಯ ಸಂಗ್ರಹಣೆ ಮತ್ತು ಸಾಗಾಣೆಯ ಬಿಲ್ ಪಾವತಿಯಲ್ಲಿ ಕಾನೂನುಬಾಹಿರವಾಗಿ ಎಟಿಆರ್ ಬಿಲ್ ಹ್ಯಾಕ್ ಮಾಡಿ ₹2.10 ಕೋಟಿ ಅವ್ಯವಹಾರ ಮಾಡಲಾಗಿದೆ ಎಂಬ ಆರೋಪದ ಕುರಿತು ಸಮಗ್ರ ತನಿಖೆ ನಡೆಸಲು ವಿಶೇಷ ಆಯುಕ್ತ ಸುರಳ್ಕರ್ ವಿಕಾಸ ಕಿಶೋರ್ ಅವರನ್ನು ನೇಮಿಸಲಾಗಿದೆ.

ಅಗತ್ಯ ಅಧಿಕಾರಿ ಮತ್ತು ಸಿಬ್ಬಂದಿ ನಿಯೋಜಿಸಿಕೊಂಡು ವಾರದೊಳಗೆ ವಿವರವಾದ ವರದಿ ಸಲ್ಲಿಸುವಂತೆ ಸುರಳ್ಕರ್ ಅವರಿಗೆ ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶಿಸಿದ್ದಾರೆ.

ಮಹಾನಗರ ಪಾಲಿಕೆಯ 27 ವಿಧಾನಸಭಾ ಕ್ಷೇತ್ರಗಳ ಪೈಕಿ 26 ಕ್ಷೇತ್ರಗಳ ವ್ಯಾಪ್ತಿಯಲ್ಲಿ ಗುತ್ತಿಗೆದಾರರು ಬೆಳಿಗ್ಗೆ ತ್ಯಾಜ್ಯ ವಿಲೇವಾರಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾತ್ರ 3–4 ವರ್ಷಗಳಿಂದ ಅನಧಿಕೃತ ವ್ಯಕ್ತಿಗಳು ಪಶ್ಚಿಮ ವಲಯದ ಹಣಕಾಸು ಶಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿದ್ದಾರೆ. ಕಿರಿಯ ಆರೋಗ್ಯ ಪರೀವೀಕ್ಷಕ ಕೃಷ್ಣ ಅವರು ತ್ಯಾಜ್ಯ ವಿಲೇವಾರಿ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರದೇ, ಬಿಲ್ ಪಾವತಿಸಿಕೊಳ್ಳುತ್ತಿದ್ದಾರೆ ಎಂದು ವೇಣುಗೋಪಾಲ್ ಮತ್ತು ಎನ್.ಆರ್. ರಮೇಶ್ ದೂರು ಸಲ್ಲಿಸಿದ್ದರು.

ದೂರಿನಲ್ಲಿರುವ ಆರೋಪಗಳ ಬಗ್ಗೆ ತನಿಖೆಗೆ ಆದೇಶ ಹೊರಡಿಸಲಾಗಿದೆ.

ಕ್ಷೇಮ ಕುಶಲ ಓದಿರಿ...

ಅತಿವೇಗದ ಚಾಲನೆ: ₹2.30 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ವಿಭಾಗದ ಪೊಲೀಸರು ಕಾರ್ಯಾಚರಣೆ ನಡೆಸಿ, ಮದ್ಯ ಸೇವಿಸಿ ಚಾಲನೆ ಮಾಡಿದ 800 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನಗರದಲ್ಲಿ ಪಾನಮತ್ತ ಹಾಗೂ ಅತಿವೇಗದ ವಾಹನ ಚಾಲನೆ ತಡೆಯಲು ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದು, ನಿಯಮ ಉಲ್ಲಂಘಿಸಿದವರ ವಿರುದ್ಧ ವಾರದಲ್ಲಿ ಒಂದು ಸಾವಿರಕ್ಕೂ ಅಧಿಕ ಪ್ರಕರಣಗಳನ್ನು ದಾಖಲಿಸಿ, ದಂಡ ವಿಧಿಸಿದ್ದಾರೆ.

ಜನವರಿ 27 ರಿಂದ ಫೆಬ್ರುವರಿ 2ರವರೆಗೆ ನಗರದ 50 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಈ ವೇಳೆ 62,300 ವಾಹನಗಳನ್ನು ಪರಿಶೀಲಿಸಿ, ಆ ಪೈಕಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದ 800 ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅದೇ ರೀತಿ ಅತಿವೇಗದ ಚಾಲನೆ ಮಾಡಿದ 228 ವಾಹನಗಳ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ, ₹2.30 ಲಕ್ಷ ದಂಡ ವಿಧಿಸಲಾಗಿದೆ ಎಂದು ಸಂಚಾರ ಪೊಲೀಸ್ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲು

'ಬೆದರಿಕೆ ಹಾಕಿ ಆಸ್ತಿ ಪತ್ರ ಕದ್ದೊಯ್ದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿ ಮೃತಪಟ್ಟ ನಂತರ ಪತ್ನಿಗೆ ಬೆದರಿಕೆ ಹಾಕಿ ಆಸ್ತಿ ದಾಖಲೆಗಳನ್ನು ಕದ್ದೊಯ್ದ ಆರೋಪದಡಿ ಮೂವರ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುರುಬರಹಳ್ಳಿಯ ನಿವಾಸಿ ತ್ರಿಮೂರ್ತಿ, ನಂದಿನಿ ಲೇಔಟ್ ನಿವಾಸಿಗಳಾದ ನಾಗರಾಜ್ ಹಾಗೂ ಸಿದ್ದರಂಗಸ್ವಾಮಿ ವಿರುದ್ಧ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಾದ ಬೆನ್ನಲ್ಲೇ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

36 ವರ್ಷ ವಯಸ್ಸಿನ ಮಹಿಳೆ ದೂರು ನೀಡಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಲಾರಿ ಚಾಲಕ ಸೋಮಶೇಖರ್ ಎಂಬವರನ್ನು 20 ವರ್ಷಗಳ ಹಿಂದೆ ಮದುವೆ ಆಗಿದ್ದೆ. ಪದವೀಧರನಾಗಿದ್ದು, ನನ್ನ ಬಳಿ ಸಾಕಷ್ಟು ಆಸ್ತಿ ಇರುವುದಾಗಿ ಮದುವೆಗೂ ಮುನ್ನ ಪತಿ ನನ್ನ ಬಳಿ ಹೇಳಿಕೊಂಡಿದ್ದರು. ದಾಂಪತ್ಯ ಜೀವನ ಉತ್ತಮವಾಗಿತ್ತು. ಈ ಮಧ್ಯೆ ಪತಿಯ ಸಂಬಂಧಿಯೂ ಆದ ಆರೋಪಿ ನಾಗರಾಜ್, ನನಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ. ನಾಗರಾಜ್ ಮಾತನ್ನು ನಾನು ಕೇಳದೇ ಇದ್ದಾಗ, ಪತಿಯ ಬಳಿ ನನ್ನ ಚಾರಿತ್ರ್ಯದ ಕುರಿತು ಮೂವರೂ ಸೇರಿಕೊಂಡು ಚಾಡಿ ಹೇಳುತ್ತಿದ್ದರು' ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಆರೋಪಿಗಳ ಮಾತಿನಿಂದ ಸಂಶಯಗೊಂಡಿದ್ದ ಪತಿಯು ಡಿಸೆಂಬರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಪತಿ ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭದಲ್ಲಿ ನಾನು ಗೋಕರ್ಣಕ್ಕೆ ತೆರಳಿದ್ದೆ. ಆಗ ಮನೆಗೆ ಬಂದಿದ್ದ ಮೂವರು ಆರೋಪಿಗಳು, ಆಸ್ತಿ ದಾಖಲೆ ಪತ್ರ, ₹15 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ನಾನು ಪ್ರವಾಸದಿಂದ ಮನೆಗೆ ಬಂದಾಗ, ಪತಿಯ ಸಾವಿಗೆ ನೀನೇ ಕಾರಣ. ನಿನ್ನ ವಿರುದ್ಧ ಪ್ರಕರಣ ದಾಖಲಿಸುತ್ತೇವೆ ಎಂದು ಬೆದರಿಕೆ ಹಾಕಿದ್ದರು. ಅನೈತಿಕ ಸಂಬಂಧವಿದೆ ಎಂದು ಸುದ್ದಿ ಹಬ್ಬಿಸುತ್ತೇವೆ. ಹಾಗೆ ಮಾಡದಿರಲು, ಆಸ್ತಿ ಪತ್ರಕ್ಕೆ ಸಹಿ ಮಾಡು ಎಂದು ಬೆದರಿಕೆ ಹಾಕಿದ್ದರು. ಬಲವಂತದಿಂದ ಕರಾರು ಪತ್ರಕ್ಕೆ ಸಹಿ ಹಾಕಿಸಿಕೊಂಡಿದ್ದರು' ಎಂದು ಮಹಿಳೆ ದೂರಿನಲ್ಲಿ ವಿವರಿಸಿದ್ದಾರೆ.

ಬೆದರಿಕೆ, ಮಾನಹಾನಿ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಇಬ್ಬರು ಸಾವು

ಮಂಡ್ಯ: ಚಾಲಕನ ನಿಯಂತ್ರಣ ತಪ್ಪಿ ಕಾರು ವಿಶ್ವೇಶ್ವರಯ್ಯ ನಾಲೆಗೆ ಉರುಳಿಬಿದ್ದ ಪರಿಣಾಮ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟು, ಮತ್ತೊಬ್ಬ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ನಾಪತ್ತೆಯಾಗಿರುವ ಘಟನೆ ತಾಲ್ಲೂಕಿನ ತಿಬ್ಬನಹಳ್ಳಿ ಬಳಿ ಸೋಮವಾರ ನಡೆದಿದೆ.

311 ಸಂಚಾರ ನಿಯಮ ಉಲ್ಲಂಘನೆ ಸವಾರನಿಗೆ ₹1.61 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಕೂಟರ್ ಬೆಲೆ ಸುಮಾರು ₹50 ಸಾವಿರ. ಆದರೆ, ಅದರ ಮಾಲೀಕ ಸಂಚಾರ ಉಲ್ಲಂಘನೆಗೆ ಸಂಬಂಧಿಸಿದಂತೆ ಪಾವತಿಸಬೇಕಾದ ದಂಡದ ಮೊತ್ತ ₹ 1.61 ಲಕ್ಷ.

ಸ್ಕೂಟರ್ ಬೆಲೆಗಿಂತ ದಂಡದ ಮೊತ್ತವೇ ಅಧಿಕವಾಗಿದೆ.

ಪದೇ ಪದೇ ಸಂಚಾರ ನಿಯಮ ಉಲ್ಲಂಘಿಸಿ, ನಾಪತ್ತೆ ಆಗುತ್ತಿದ್ದ ಆರೋಪಿಯನ್ನು ಸಿಟಿ ಮಾರುಕಟ್ಟೆ ಸಂಚಾರ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಸ್ಕೂಟರ್ ಸಹ ವಶಕ್ಕೆ ಪಡೆದಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್ ಖಾತೆಯಲ್ಲಿ ಸಾರ್ವಜನಿಕರಿಂದ ಬಂದ ದೂರು ಆಧರಿಸಿ, ಕಲಾಸಿಪಾಳ್ಯದ ಪೆರಿಯಾಸ್ವಾಮಿ ಎಂಬವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಫೆಬ್ರುವರಿ 2023ರಿಂದ 311 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಬಾಕಿ ಇರುವುದು ತನಿಖೆ ವೇಳೆ ಪತ್ತೆಯಾಗಿದೆ.

ಕೆಎ 05 ಜೆಎಕ್ಸ್ 1344 ನೋಂದಣಿ ಸಂಖ್ಯೆ ಹೊಂದಿದ್ದ ಸ್ಕೂಟರ್ ಮಾಲೀಕ, ದುಬಾರಿ ಮೊತ್ತದ ದಂಡ ಪಾವತಿಸಬೇಕಿದೆ.

ಹೆಲ್ಮೆಟ್ ಧರಿಸದಿರುವುದು, ಸಿಗ್ನಲ್ ಜಂಪ್ ಮಾಡುವುದು ಸೇರಿದಂತೆ ಹಲವು ನಿಯಮ ಉಲ್ಲಂಘನೆಗಳಿಗೆ ದಂಡ ವಿಧಿಸಲಾಗಿದೆ. ನೋಟಿಸ್ ಸಹ ನೀಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ರಥಸಪ್ತಮಿ ಹಬ್ಬದ ಅಂಗವಾಗಿ ಸೂರ್ಯ ನಮಸ್ಕಾರ: ಉದಯ್ ಬಿ. ಗರುಡುಚಾರ್, ಆಯೋಜನೆ: ಗರುಡ ಫೌಂಡೇಶನ್ ಬೆಂಗಳೂರು, ಪತಂಜಲಿ ಯೋಗ ಶಿಕ್ಷಣ ಸಂಸ್ಥೆ, ಸ್ಥಳ: ನ್ಯಾಷನಲ್ ಕಾಲೇಜಿನ ಆಟದ ಮೈದಾನ, ಬಸವನಗುಡಿ, ಬೆಳಿಗ್ಗೆ 5.30ರಿಂದ

ವಿಶ್ವ ಕ್ಯಾನ್ಸರ್ ದಿನ–2025 ಜಾಗೃತಿ ಜಾಥಾ: ಅತಿಥಿಗಳು: ವಸಿಷ್ಠ ಸಿಂಹ, ವೈ. ನವೀನ್ ಭಟ್, ನವೀನ್, ಆಯೋಜನೆ ಮತ್ತು ಸ್ಥಳ: ಕಿದ್ವಾಯಿ ಸ್ಮಾರಕ ಗಂಧಿ ಸಂಸ್ಥೆ, ಎಂ.ಎಚ್. ಮರೀಗೌಡ ರಸ್ತೆ, ಬೆಳಿಗ್ಗೆ 7.30



ವಸಿಷ್ಠ ಸಿಂಹ

ಲಿವಿಂಗ್ ಲೈಟ್ಲಿ: ಮಾತು ಕಥೆ: ಆಯೋಜನೆ: ಸೆಂಟರ್ ಫಾರ್ ಪೆಸ್ಟೊರಾಲಿಸ್ಮ್, ಸಹಜೀವನ್, ಸ್ಥಳ: ಇಂದಿರಾ ಗಾಂಧಿ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಓಪನ್ ಹಾರ್ಟ್–2025: ಅತಿಥಿಗಳು: ಐಶ್ವರ್ಯಾ ಡಿಕೆಎಸ್., ಸಂಯುಕ್ತಾ ಹೊರನಾಡು, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 11

ಸಂಯುಕ್ತಾ ಹೊರನಾಡು

ರಜತ ಬ್ರಹ್ಮ ರಥೋತ್ಸವ: ರುದ್ರಾಭಿಷೇಕ, ನಿತ್ಯಹೋಮ, ನವಗ್ರಹಪೂಜಾ, ಯಾತ್ರಾದಾನ, ಸ್ವಾಮಿಯ ರಜತ ಬ್ರಹ್ಮರಥೋತ್ಸವ, ಆಯೋಜನೆ ಮತ್ತು ಸ್ಥಳ: ವಲ್ಲೀದೇವಸೇನಾಸಮೇತ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯಪುರ, ಮಧ್ಯಾಹ್ನ 12.15ರಿಂದ

ಸವಿತಾ ಮಹರ್ಷಿ ಜಯಂತಿಯ ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಸವಿತಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಶಿವರಾಜ ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ಭಾರತ ರಂಗ ಮಹೋತ್ಸವ ಅಂತರರಾಷ್ಟ್ರೀಯ ನಾಟಕೋತ್ಸವ: ಉತ್ಸವದ ಗೌರವ: ಬಿ.ಎಲ್. ಶಂಕರ್, 'ತಾಜಮಹಲ್ ಕ ಟೆಂಡರ್' ನಾಟಕ ಪ್ರದರ್ಶನದ ಪ್ರಸ್ತುತಿ: ರಾಷ್ಟ್ರೀಯ ನಾಟಕ ಶಾಲೆ ನವದೆಹಲಿ, ನಿರ್ದೇಶನ: ಚಿತ್ತರಂಜನ್ ತ್ರಿಪಾಠಿ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5ರಿಂದ

60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ಗಾಯನ: ನಾಗಮಣಿ ಶ್ರೀನಾಥ್, ಪಿಟೀಲು: ಸಿಂಧು ಸುಚೇತನ್, ಮೃದಂಗ: ತುಮಕೂರ್ ಬಿ. ರವಿಶಂಕರ್, ಘಟ: ಶರತ್ ಕೌಶಿಕ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6

ಕಂತು ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾತ್ ಎಲ್. ಬಡಿಗೇರ, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ್, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕ್ಷೇಮ ಕುಶಲ

ಸರ್ಪಸುತ್ತು ಎಂಬ ಹರ್ಪಿಸ್ ಜೋಸ್ಟರ್



ಡಾ. ವಿನಯ ಶ್ರೀನಿವಾಸ್

ಕುಟುಂಬದ ಸ್ನೇಹಿತೆಯೊಬ್ಬರು 'ಸೊಂಟದ ಭಾಗದಲ್ಲಿ ವಿಪರೀತ ನೋವು, ಉರಿ ಮತ್ತು ಸ್ಪರ್ಶಜ್ಞಾನದಲ್ಲಿಯೂ ವ್ಯತ್ಯಾಸ ಎನ್ನಿಸುತ್ತಿದೆ, ಏನಾದರೂ ಮಾತ್ರೆ ಹೇಳ್ತೀಯಾ' ಎಂದು ಕರೆ ಮಾಡಿದ್ದರು. ನಾನು ನೋವುನಿವಾರಕ ಮಾತ್ರೆಯೊಂದನ್ನು ಸೂಚಿಸಿದ್ದೆ. ಎರಡು ದಿನಗಳ ನಂತರ ಆಕೆ ಮತ್ತೆ ಕರೆ ಮಾಡಿ ಆ ಭಾಗದಲ್ಲಿ ಸಣ್ಣ ಸಣ್ಣ ಗುಳ್ಳೆಗಳಾದಂತಿದೆ ಎಂದರು. ಅವರ ಆ ಮಾತನ್ನು ಕೇಳುತ್ತಲೇ ಇದು ಬಹುಶಃ ಹರ್ಪಿಸ್ ಜೋಸ್ಟರ್ ಇರಬಹುದು ಎಂದು ಯೋಚಿಸಿ, ಕೂಡಲೇ ಹತ್ತಿರದ ಚರ್ಮರೋಗತಜ್ಞರಲ್ಲಿ ಸಲಹೆ ಪಡೆಯಲು ತಿಳಿಸಿದ್ದೆ.

'ವ್ಯಾಯಾಮ ಮಾಡುವಾಗ ಕುತ್ತಿಗೆಯ ಸ್ನಾಯುಗಳು ಉಳುಕಿವೆ' ಎಂದು ಒಂದು ವಾರದಿಂದ ಮುಲಾಮನ್ನು ಹಚ್ಚಿಕೊಳ್ಳುತ್ತಿದ್ದ ಮತ್ತೊಬ್ಬ ಆತ್ಮೀಯರಿಗೂ ಆ ಭಾಗದಲ್ಲಿ ಕೆಂಪನೆಯ ಕೀವು ತುಂಬಿದ ಗುಳ್ಳೆಗಳು ಕಾಣಿಸಿದ್ದು ನಾಲ್ಕಾರು ದಿನಗಳ ನಂತರವೇ. ಹೌದು, ಈ ದಿನಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿರುವ ಹರ್ಪಿಸ್ ಜೋಸ್ಟರ್ ಬಗ್ಗೆ ಪ್ರತಿಯೊಬ್ಬರೂ ತಿಳಿದಿರುವುದು ಸೂಕ್ತ. ಇದು ಒಂದು ವೈರಾಣುವಿನಿಂದ ಉಂಟಾಗುವ ಸಮಸ್ಯೆ. ಸೂಕ್ತ ಔಷಧೋಪಚಾರದಿಂದ ಇದನ್ನು ಸಂಪೂರ್ಣ ಗುಣಪಡಿಸುವುದು ಸಾಧ್ಯ. ಬಾಲ್ಯದಲ್ಲಿ ಚಿಕನ್ ಪಾಕ್ಸ್ (ಅಮ್ಮ, ದಡಾರ), ವಯಸ್ಕರಲ್ಲಿ ಹರ್ಪಿಸ್ ಜೋಸ್ಟರ್ ಕಾರಣ 'ವ್ಯಾರಿಸೆಲ್ಲಾ ಜೋಸ್ಟರ್' ಎಂಬ ವೈರಾಣು. ರೋಗಿಯು ಕೆಮ್ಮಿದಾಗ, ಸೀನಿದಾಗ ಬಾಯಿ ಹಾಗೂ ಮೂಗಿನಿಂದ ಹೊರಬರುವ ಸ್ರವಿಕೆಯಲ್ಲಿ ಈ ವೈರಾಣುಗಳಿದ್ದು ಸಂಪರ್ಕದಲ್ಲಿರುವವರನ್ನು ಉಸಿರಿನ ಮೂಲಕ ತಲುಪಬಲ್ಲವು. ಹಾಗಾಗಿಯೇ ಚಿಕನ್ ಪಾಕ್ಸ್‌ನಿಂದ ಬಳಲುವ ರೋಗಿಯನ್ನು ಮೊದಲ ಏಳರಿಂದ ಹತ್ತು ದಿನಗಳವರೆಗೆ ಪ್ರತ್ಯೇಕವಾಗಿರಿಸುವುದು ಸೂಕ್ತ. ಕಾಯಿಲೆಯಿಂದ ಬಳಲುವವರಲ್ಲಿ ಹೊಟ್ಟೆ, ಬೆನ್ನು, ಕೈ, ಕಾಲುಗಳ ಮೇಲೆ ನೀರಿನಂತಹ ಸ್ರವಿಕೆ ಮತ್ತು ಕೀವು ತುಂಬಿದ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಈ ಗುಳ್ಳೆಗಳ ಸುತ್ತಲೂ ಕೆಂಪಗಿನ ಉರಿಯೂತದ ಚಿಹ್ನೆ ಇರುವುದಷ್ಟೇ ಅಲ್ಲದೆ, ವಿಪರೀತ ನೋವಿನಿಂದಲೂ ಕೂಡಿರುತ್ತದೆ. ಸಾಮಾನ್ಯವಾಗಿ ಯಾವುದೇ ಅಪಾಯಕರ ಪರಿಣಾಮಗಳಿಗೆ ಎಡೆಮಾಡಿಕೊಡದ ಈ ಸಮಸ್ಯೆ ಹೆಚ್ಚಿನ ಸಂದರ್ಭಗಳಲ್ಲಿ ಸ್ವಯಂ ನಿಯಂತ್ರಣಕ್ಕೆ ಬರುತ್ತದೆ. ಒಮ್ಮೆ ಚಿಕನ್ ಪಾಕ್ಸ್‌ನಿಂದ ಬಳಲಿದ ವ್ಯಕ್ತಿ ಜೀವಿತಾವಧಿಯವರೆಗೂ ಅದರ ವಿರುದ್ಧ ರೋಗನಿರೋಧಕ ಶಕ್ತಿಯನ್ನು ಹೊಂದುತ್ತಾನೆ. ಆದರೆ, ಈ ವೈರಾಣುಗಳು ಶರೀರದ ವಿವಿಧ ನರಗಳಲ್ಲಿ ಸುಪ್ತವಾಗಿದ್ದು, ನಿಷ್ಕ್ರಿಯವಾಗಿರುತ್ತವೆ. ಮುಂದೆ ವಯಸ್ಸಾದಾಗ ಹಲವು ಕಾರಣಗಳಿಂದಾಗಿ ಈ ವೈರಾಣುಗಳು ಮತ್ತೆ ಕ್ರಿಯಾಶೀಲಗೊಳ್ಳುತ್ತವೆ. ವಯೋಸಹಜ ರೋಗನಿರೋಧಕ ಶಕ್ತಿಯ ಕ್ಷೀಣಿಸುವಿಕೆ, ರೋಗನಿರೋಧಕ ವ್ಯವಸ್ಥೆಯನ್ನು ಮಾರ್ಪಾಡು ಮಾಡುವ ಔಷಧಗಳ ಬಳಕೆ, ಇತರ ಸಮಸ್ಯೆಗಳಿಗಾಗಿ ಸ್ಟಿರಾಯ್ಡ್ ಬಳಕೆ, ವ್ಯಕ್ತಿ ಕ್ಯಾನ್ಸರ್ ಅಥವಾ ಕ್ಷಯರೋಗದಿಂದ ಬಳಲಿದಾಗ ಈ ಸ್ತಬ್ಧಗೊಂಡ ವೈರಾಣುಗಳು ಮತ್ತೆ ಮೊದಲಿನಂತೆ ಚುರುಕಾಗಿ ನರಗಳಲ್ಲಿ ಉರಿಯೂತವನ್ನು ಉಂಟುಮಾಡುತ್ತವೆ. ಈ ಸಮಸ್ಯೆಯನ್ನೇ 'ಹರ್ಪಿಸ್ ಜೋಸ್ಟರ್' ಅಥವಾ ಸಾಮಾನ್ಯ ಭಾಷೆಯಲ್ಲಿ 'ಸರ್ಪಸುತ್ತು' ಎಂದು ಕರೆಯುತ್ತಾರೆ.

ಲಸಿಕೆಯನ್ನು ಪಡೆಯಿರಿ

ಮಕ್ಕಳಿಗೆ ಒಂದು ವರ್ಷ ತುಂಬುವಾಗ ಮಕ್ಕಳತಜ್ಞರ ಸಲಹೆಯ ಮೇರೆಗೆ ಚಿಕನ್ ಪಾಕ್ಸ್ ಕಾಯಿಲೆಗೆ ಲಸಿಕೆಯನ್ನು ಕೊಡಿಸಬೇಕು. ಅಂತೆಯೇ ಐವತ್ತು ತುಂಬಿದ ವಯಸ್ಕರಿಗೂ ಹರ್ಪಿಸ್ ಜೋಸ್ಟರ್ ಲಸಿಕೆ ಲಭ್ಯವಿದ್ದು, ವೈದ್ಯರ ಸಲಹೆಯನ್ನು ಪಡೆದು ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ಪೌಷ್ಟಿಕ ಆಹಾರಸೇವನೆಯಿಂದ ದೇಹದ ರೋಗನಿರೋಧಕ ವ್ಯವಸ್ಥೆಯನ್ನು ಸದೃಢಗೊಳಿಸಿಕೊಳ್ಳುವುದೂ ಮುಖ್ಯ.

ಲಕ್ಷಣಗಳೇನು?

ಈ ಬಾರಿ ಗುಳ್ಳೆಗಳು ಉದ್ದನೆಯ ನರಗಳು ಚಾಚಿದಲ್ಲೆಲ್ಲಾ ಕಾಣಿಸಿಕೊಳ್ಳುತ್ತವೆ. ಗುಂಪುಗುಂಪಾಗಿ ಕಂಡುಬರುವ ಈ ಗುಳ್ಳೆಗಳಲ್ಲಿ ನೀರಿನಂತಹ ಅಥವಾ ಕೀವಿನಂತಹ ಸ್ರಾವ ತುಂಬಿದ್ದು ಸುತ್ತಲಿನ ಚರ್ಮ ಕೆಂಬಣ್ಣವನ್ನು ಹೊಂದಿರುತ್ತದೆ. ಯಾವ ನರದಲ್ಲಿನ ವೈರಾಣುಗಳು ಕ್ರಿಯಾಶೀಲವಾಗಿರುತ್ತವೆಯೋ ಆ ನರದ ಪೂರೈಕೆ ಇರುವ ದೇಹದ ಭಾಗದಲ್ಲೆಲ್ಲಾ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಹೆಚ್ಚಿನ ಸಂದರ್ಭಗಳಲ್ಲಿ ಎದೆ, ಬೆನ್ನು, ಹೊಟ್ಟೆ, ಸೊಂಟದ ಭಾಗಗಳ ನರಗಳು ಉರಿಯೂತಕ್ಕೊಳಗಾಗಿ ಅಲ್ಲಿಯೇ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಈ ಗುಳ್ಳೆಗಳು ವಿಪರೀತ ನೋವು, ಉರಿಯಿಂದ ಕೂಡಿರುವುದಲ್ಲದೆ, ಆ ಭಾಗದ ಸ್ನಾಯುಗಳ ಚಲನೆಯೂ ಯಾತನೆಯನ್ನು ತರುತ್ತದೆ. ಒಮ್ಮೊಮ್ಮೆ ಕಣ್ಣುಗಳ ಮತ್ತು ಮುಖದ ನರಗಳೂ ಸಮಸ್ಯೆಗೆ ಗುರಿಯಾಗಬಹುದು. ಕೂಡಲೇ ಚಿಕಿತ್ಸೆ ಮಾಡದಿದ್ದರೆ ಅಪಾಯವಾಗಬಹುದು.

ಚಿಕಿತ್ಸೆ

ಉರಿ ಅಥವಾ ಗುಳ್ಳೆಗಳು ಕಾಣಿಸಿಕೊಂಡ ಆರಂಭದ ಹಂತದಲ್ಲಿಯೇ ವೈದ್ಯರ ಸಲಹೆಯನ್ನು ಪಡೆಯುವುದು ಸೂಕ್ತ. ವೈರಾಣುಗಳನ್ನು ಕೊಲ್ಲಲು 'ವೈರಿಸೈಡಲ್' ಔಷಧಗಳ ಬಳಕೆ ಉತ್ತಮ. ಜೊತೆಯಲ್ಲಿ ಉರಿಯೂತವನ್ನು ಕಡಿಮೆ ಮಾಡಲು ಮತ್ತು ನೋವನ್ನು ನಿಯಂತ್ರಿಸಲು ಔಷಧಗಳು ಬೇಕಾಗಬಹುದು. ಸಾಮಾನ್ಯವಾಗಿ ಏಳರಿಂದ ಹತ್ತು ದಿನಗಳ ಒಳಗಾಗಿ ಗುಳ್ಳೆಗಳು ಕಂದುಬಣ್ಣಕ್ಕೆ ತಿರುಗಿ ಒಣಗಲು ತೊಡಗುತ್ತವೆ. ಹರ್ಪಿಸ್ ಜೋಸ್ಟರ್ ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಸಂಭವ ಕಡಿಮೆ. ಆದರೆ ವಿಪರೀತ ಉರಿ ಮತ್ತು ನೋವಿನಿಂದ ಕೂಡಿರುತ್ತದೆ. ಜನಸಾಮಾನ್ಯರಲ್ಲಿರುವ ಮೂಢನಂಬಿಕೆಗಳಿಂದಾಗಿ ಚಿಕಿತ್ಸೆ ಪಡೆಯುವಲ್ಲಿ ವಿಳಂಬ ಮಾಡುವುದರಿಂದಲೂ ಯಾತನೆ ಹೆಚ್ಚಾಗುತ್ತದೆ.

ಗುಣಲಕ್ಷಣಗಳನ್ನು ಗುರುತಿಸಿ, ಆರಂಭದಲ್ಲಿಯೇ ವೈದ್ಯರ ಸಲಹೆ ಮತ್ತು ಚಿಕಿತ್ಸೆ ಪಡೆಯದೇ ಇದ್ದವರಲ್ಲಿ ಗುಳ್ಳೆಗಳು ಗುಣವಾದ ಬಳಿಕವೂ ತೀವ್ರತರವಾದ ನೋವು ಮತ್ತು ಉರಿ ಉಳಿದುಕೊಳ್ಳಬಹುದು. ಇದನ್ನು 'ಪೋಸ್ಟ್ ಹರ್ಪಿಟಿಕ್ ನ್ಯೂರಾಲ್ಜಿಯ' ಎಂದು ಗುರುತಿಸುತ್ತೇವೆ. ಇಂತಹ ಸಂಭವನೀಯ ಅಪಾಯಗಳಿಂದ ಪಾರಾಗಲು ವೈದ್ಯರ ಸಲಹೆ ಮತ್ತು ಚಿಕಿತ್ಸೆ ಅತ್ಯಗತ್ಯ.

❖

ಬೇಗ ಮಲಗಿರಿ ಬೇಗ ಏಳಿರಿ

ಡಾ. ಸತ್ಯನಾರಾಯಣ ಭಟ್ ಪಿ.

ಆಯುರ್ವೇದ ಶಿಕ್ಷಣದಲ್ಲಿ ಒಂದು ಮಾತು ಹೀಗಿದೆ: 'ಬ್ರಾಹ್ಮಿಮುಹೂರ್ತೇ ಉತ್ತಿಷ್ಠೇತ್ ಸ್ವಸ್ಥೋ ರಕ್ಷಾರ್ಥಮಾಯುಷಃ'. ಎಂದರೆ ತನ್ನ ಆಯುಷ್ಯರಕ್ಷಣೆಗಾಗಿ ಮನುಷ್ಯನು ಬ್ರಾಹ್ಮಿ ಮುಹೂರ್ತದಲ್ಲಿ ನಿದ್ದೆಯಿಂದ ಏಳಬೇಕು. ನಿರಕ್ಷರಿ, ಆದರೆ ಮಹತ್ವಾಕಾಂಕ್ಷಿ ನಮ್ಮಮ್ಮನಿಗೆ ತಿಳಿದಿದ್ದು ಮುಂಜಾವಿನ ಅಧ್ಯಯನದಿಂದ ವಿದ್ಯೆ ತಲೆಗೆ ಹತ್ತುತ್ತದೆ ಎಂದಷ್ಟೇ. ಆಕೆಗೆ ಈ ಬೀಜ ಬಿತ್ತಿದ್ದು ಮೌಖಿಕ ಪರಂಪರೆಯ ಜ್ಞಾನ. ಹಾಸ್ಟೆಲ್‌ನ ನಿಲಯಪಾಲಕರಿಗೆ ಈ ಸಂಗತಿ ಬೋಧನೆಯಾದುದು ಆಚಾರ್ಯರ ಮುಖೇನ. ಶಿಕ್ಷಣದ ಹಂತದಲ್ಲಿ ನಮ್ಮಂತಹ ಬಡವಿದ್ಯಾರ್ಥಿಗಳಿಗೆ ನಿಃಸ್ವಾರ್ಥವಾಗಿ ಅಂದು ಅವರು ಈ ಶಿಕ್ಷೆ ಹೇರುತ್ತಿದ್ದುದು ನಿಜ. ಅದು ನಮ್ಮ ಸೌಭಾಗ್ಯ. ಮುಂಜಾವಿನ ಸವಿ ನಿದ್ದೆಯು ಅಮ್ಮನ ಪರಿಭಾಷೆಯಲ್ಲಿ ಕಲಿ, ಅಂದರೆ ಕೆಟ್ಟದ್ದು. ಅದು ನಮ್ಮನ್ನು ಓಲೈಸುವುದಂತೆ. ಮತ್ತೂ ಮತ್ತೂ ಮಲಗೋ ಎಂದು ಹೇಳುವುದಂತೆ. ನಮ್ಮ ನಿಲಯ ಪಾಲಕರಿಗದು ಶಿಸ್ತು. ಮುಂಜಾವಿನದು ಪ್ರಾರ್ಥನೆ ಸಮಯ, ಕಲಿಕೆಯ ಸಮಯ.

ಯಾವುದು ಬ್ರಾಹ್ಮ ಮುಹೂರ್ತ? ರಾತ್ರಿಯ ಕೊನೆಯ ನಾಲ್ಕು ಘಟಿಕಾ ಕಾಲವಿದಂತೆ. ಕೊನೆಯ ಭಾಗವೇ ಬ್ರಾಹ್ಮಿ ಮುಹೂರ್ತ. 'ರಾತ್ರೇ ಚತುರ್ದಶೋ ಮುಹೂರ್ತೋ ಬ್ರಾಹ್ಮ ಮುಹೂರ್ತಃ' ಎಂದು ಹೇಳಿದ್ದು ವಾಗ್ಭಟ. 'ರಾತ್ರೇಶ್ಚ ಪಶ್ಚಿಮೇ ಯಾಮೇ ಮುಹೂರ್ತೋ ಬ್ರಾಹ್ಮ' ಎಂಬ ವ್ಯಾಖ್ಯೆ ಹಲಾಯುಧಕೋಶದ್ದು. ರವಿಯಸ್ತ, ಉದಯದೊಂದಿಗೆ ಕಾಲ ಕಾಲಕ್ಕೆ ಕೊಂಚ ಬದಲು. ಸರಿಸುಮಾರು ನಾಲ್ಕೂವರೆ ಬೆಳಗಿನ ಸಮಯ ಎಂದಿಟ್ಟುಕೊಳ್ಳಿ. ಆಯುಷ್ಯರಕ್ಷಣೆಗೆ ಈ ಹೊತ್ತಿಗೆ ಏಳಬೇಕು ಎಂದು ಆಯುರ್ವೇದದ ಗ್ರಂಥಗಳು ಸಾರಿ ಸಾರಿ ಹೇಳುತ್ತವೆ.

ಮಾಗಿಯ ಚಳಿಗಾಲದ ಮುಂಜಾವಿ ಸಂಗಮಸ್ನಾನಕ್ಕೆ ನಮ್ಮ ಹಿರಿಯರು ಕೊಟ್ಟ ಮನ್ನಣೆಯ ಹಿಂದೆ ವಿಜ್ಞಾನವಿದೆ. ಚಳಿಗಾಲಕ್ಕೆ 'ಸೈಲೆಂಟ್ ಕಿಲ್ಲರ್' ಎಂಬ ಕುಖ್ಯಾತಿ ಇದೆ; ಅದು ನಿಮಗೆ ಗೊತ್ತೆ? 'ವಿಂಟರ್ ಮಿಡ್ ನೈಟ್ ಹಾರ್ಟ್ ಅಟ್ಯಾಕ್'. ಇವೆಲ್ಲ ಹಿಂದೆಯೇ ತಿಳಿದಿತ್ತೇ ನಮ್ಮವರಿಗೆ? 'ಉತ್ತಿಷ್ಠತಃ, ಜಾಗ್ರತಃ!' ಗುರಿ ಮುಟ್ಟುವ ತನಕ ವಿರಮಿಸದಿರಿ. ಚಳಿಗಾಲದ ನಡಿಗೆಯನ್ನು ಎದುರು ಬೀಸುವ ಬೀಸುಗಾಳಿಗೆ ಮಾತ್ರ ಒಡ್ಡಿಕೊಳ್ಳದಿರಿ. ಹಾಗೂ ಅದನ್ನು ಮೈಗೂಡಿಸಿಕೊಂಡಿರಾ ? ಹಾಗಾದರೆ ಶಿಸ್ತಾಗಿ ಬೆಚ್ಚನೆಯ ಬಟ್ಟೆಯನ್ನು ಧರಿಸಿ, ಮಫ್ಲರ್ ಸುತ್ತಿಕೊಂಡು ನಡಿಗೆಗೆ ಹೊರಡಿರಿ. ಮುಂಜಾವಿನ ಸಮಯದಲ್ಲಿ ಎದ್ದು ಕೆಲಸದಲ್ಲಿ ತೊಡಗಿದ್ದೇ ಆದರೆ ನಿಮಗೆ ಲಹರಿ (ಮೂಡ್) ಕೆಡುವ ಸಂಭವ ಕಡಿಮೆ ಎನ್ನುತ್ತದೆ ವಿಜ್ಞಾನ. ಜೊತೆಗೆ ಖಿನ್ನತೆಯೂ ಕಾಡದಂತೆ. ಈ ಚಟುವಟಿಕೆಯಿಂದ ಹಸಿವೆಯಂತೂ ಕ್ಲುಪ್ತಕಾಲದಲ್ಲಿ ಉಂಟಾಗುತ್ತದೆ. ಸ್ನಾನದ ದಿನಚರಿಯಿಂದ ಮೈಮನಗಳಿಗೆ ಮುದವಾಗುತ್ತದೆ. ನಮ್ಮ ಶರೀರದ ಅರ್ಧ ಶ್ರಮಹಾರೀ ಎಂದರೆ ಸ್ನಾನ; ಪೂರ್ಣ ಶ್ರಮಹಾರೀ ನಿದ್ರಾ ಎಂಬ ಸುಭಾಷಿತವನ್ನು ನೆನಪಿಡಿರಿ. ಬೆಳಗಿನ ಇಂಥ ಶಿಸ್ತಿನಿಂದ ಮನದುಂಬಿ ನಿಧಾನವಾಗಿ ಉಪಾಹಾರವನ್ನು ಸ್ವೀಕರಿಸಲೂ ಸಮಯ ದೊರೆಯುತ್ತದೆ. ದೇವತಾರ್ಚನೆಯಂತಹ ಧನಾತ್ಮಕ ಸಂಗತಿಗಳಿಗೆ ನೀವು ಸಮಯ ಕೊಡಲೂ ಸುಲಭ ಸಾಧ್ಯವಾಗುತ್ತದೆ. ಮಾತ್ರವಲ್ಲ, ಕೆಲಸದ ಪಾಳಿಗೆ ಎದ್ದೋಡುವ ಲಗುಬಗೆಯ ಅವಸರವೂ ಖಂಡಿತ ನಿಮಗಿರುವುದಿಲ್ಲ.

ವಿಜ್ಞಾನಿಗಳ ಅಂಬೋಣದಂತೆ ಮುಂಜಾವಿನ ಎಚ್ಚರ ಮತ್ತು ಚಟುವಟಿಕೆಯಿಂದ ದೇಹದ ರೋಗನಿರೋಧಕಶಕ್ತಿ ಹೆಚ್ಚಳವಾಗುವುದಂತೆ. ವ್ಯಾಯಾಮವಂತೂ ದೇಹದಲ್ಲಿ ಇನ್ಸುಲಿನ್‌ನ ಅಂಶ ಸುರಿತಕ್ಕೆ ಅನುವು ಮಾಡಿಕೊಡುತ್ತದೆ. ಒತ್ತಡವಿಲ್ಲದ ದಿನಚರಿಗೆ ಅದರಿಂದ ಅವಕಾಶವಾಗುವುದೂ ಖಂಡಿತ. ಒಂದು ವೇಳೆ ರಾತ್ರಿಯ ನಿದ್ದೆ ಸರಿಯಾಗದಿದ್ದರೆ ಮಾತ್ರ ಮುಂಜಾವಿನ ನಿದ್ದೆಗೆ ಉಪಯುಕ್ತ. ಅಪರೂಪಕ್ಕೆ ಅಂತಹ ನಿದ್ದೆಗೆಡುವ ಪ್ರಸಂಗವಿದ್ದರೆ ಪರವಾಗಿಲ್ಲ. ಆದರೆ, ಅದು ಅಪರೂಪದ ದಿನಚರಿಯಾಗಿರಲಿ. ನಿತ್ಯದ ಎಚ್ಚರ ಮತ್ತು ಚಟುವಟಿಕೆಗೆ ಸದಾ ಕಾಲ ಆದ್ಯತೆಯನ್ನು ನೀಡಿರಿ.

ಇಡಿಯ ದಿನದ ಕೆಲಸದ ಪಾಳಿಯ ಬಗ್ಗೆ ಯೋಚನೆ ಮಾಡಲು ಸಹ ಮುಂಜಾವಿನ ಎಚ್ಚರದಿಂದ ಅವಕಾಶ ಖಂಡಿತ. ಮಲಮೂತ್ರಾದಿಗಳನ್ನು ಹೊರಗೆ ಹಾಕಲು ಗಡಿಬಿಡಿಯೂ ಇರುವುದಿಲ್ಲ. ಅಂತಹ ನಿಯಮಿತ ದಿನಚರಿಯಿಂದ ಆಹಾರಸೇವನೆ ಮತ್ತು ಮಲಪ್ರವೃತ್ತಿಯ ಶಿಸ್ತು ತಾನಾಗಿಯೇ ರೂಢಿಸಿಕೊಳ್ಳಲಾದೀತು. ಗ್ರಂಥಗಳು ಸಾರಿ ಸಾರಿ ಹೇಳುವ ಮಾತೊಂದಿದೆ. 'ಸರ್ವಮನ್ಯಂ ಪರಿತ್ಯಜ್ಯ ಶರೀರಮನುಪಾಲಯೇತ್'. ಎಂದರೆ ಉಳಿದ ಎಲ್ಲವನ್ನೂ ತ್ಯಜಿಸಿ ಬಿಡಿ. ದೇಹಾರೋಗ್ಯದತ್ತ ಗಮನವಿಡಿ. ಏಕೆಂದರೆ ಆರೋಗ್ಯದ ಅಭಾವದಿಂದ ಎಲ್ಲವೂ ಅಭಾವವೇ – ಎಂಬ ನಿತ್ಯಸತ್ಯವೇ ನಮ್ಮ ಪೂರ್ವಿಕರು ಕಂಡುಕೊಂಡಿದ್ದ ನಿತ್ಯಸತ್ಯ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) $\tan\theta$ ಮತ್ತು $\cot\theta$ ಗಳ ಗುಣಲಬ್ಧವು....................

(A) 0 (B) 1
(C) $\sin\theta$ (D) –1

Ans: $\tan\theta \times \cot\theta$

$= \tan\theta \times \frac{1}{\tan\theta} = 1$

$\therefore$ (B) 1

2) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ...

(A) $-\frac{5}{6}$ (B) $\frac{5}{6}$
(C) $-\frac{1}{6}$ (D) $\frac{1}{6}$

ಉತ್ತರ: (D)

3) (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳು

(A) (3, 5) (B) (7, 3)
(C) (3, 4) (D) (8, 3)

ಉತ್ತರ: (A) (3, 5)

4) ಚಿತ್ರದಲ್ಲಿ ತೋರಿಸಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು



(A) $x + y = 1$ ಮತ್ತು $2x - y = 1$
(B) $2x + y = 2$ ಮತ್ತು $x + y = 2$
(C) $2x - y = 2$ ಮತ್ತು $4x - y = 4$
(D) $y - x = 0$ ಮತ್ತು $x - y = 1$

ಉತ್ತರ:-(ಸಿ) 2x-y=2 ಮತ್ತು 4x-y=4

5) (3, -2) ಮತ್ತು (4, 5) ಬಿಂದುಗಳನ್ನು ಸೇರಿಸುವ ರೇಖೆಯ ಇಳಿಜಾರು................

(A) 3 (B) 5
(C) 7 (D) 8

ಉತ್ತರ : (C) 7

6) ಕೊಟ್ಟಿರುವ ಚಿತ್ರದಲ್ಲಿ $\sin\theta$ ದ ಬೆಲೆಯು...........



(A) $\frac{1}{2}$ (B) $\frac{\sqrt{3}}{2}$
(C) $\sqrt{3}$ (D) $\frac{2}{\sqrt{3}}$

ಉತ್ತರ:– (ಎ) ½

7) ಈ ಕೆಳಗಿನ ದತ್ತಾಂಶಗಳ ಸರಾಸರಿಯು...................

ಅಂಕಗಳು	1	3	5	7

(A) 16 (B) 5
(C) 1.6 (D) 4

ಉತ್ತರ:– (ಡಿ)4

8) ΔABC ನಲ್ಲಿ, AB= 6√3cm, AC= 12cm ಮತ್ತು BC=6 cm. ಆದರೆ B ಯು................

(A) 120° (B) 60°
(C) 90° (D) 45°

ಉತ್ತರ:– (ಸಿ) 90°

ಪರಿಹಾರ:– ΔABCದಲ್ಲಿ, AB = 6√3 cm, AC = 12cm ಮತ್ತು BC = 6 cm. (ದತ್ತ)



$AB^2 = 108$
$AC^2 = 144$
ಮತ್ತು $BC^2 = 36$
$AB^2 + BC^2 = AC^2$

ಕೊಟ್ಟಿರುವ ತ್ರಿಭುಜ ΔABC ಪೈಥಾಗೋರಸ್ ಪ್ರಮೇಯದ ಲಕ್ಷಣಗಳನ್ನು ಹೊಂದಿದೆ, ಹೀಗಾಗಿ ಇದೊಂದು ಲಂಬಕೋನ ತ್ರಿಭುಜವಾಗಿದೆ. ಹೀಗಾಗಿ ∠Bವು ಲಂಬಕೋನವಾಗಿದೆ.

$\therefore \angle B = 90°$

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

REVISION: MODEL QUESTIONS

16. Derive an expression for impedance and current in LCR series circuit using phasor diagram.

Ans:- *(.......Contd)*

The current lags behind the potential difference V_L by angle of $\pi/2$, so V_L is represented by OB perpendicular to the direction of I.

The current leads the potential difference V_C by an angle of $\pi/2$, so V_C is represented by OF perpendicular to the direction of I.

Since V_L and V_C are in opposite phase, so their resultant ($V_L - V_C$) is represented by OD (Here, $V_L > V_C$).

The resultant of V_R and ($V_L - V_C$) is given by OH.

The magnitude of OG is given by

$$OH = \sqrt{(OA)^2 + (OD)^2} = \sqrt{V_R^2 + (V_L - V_C)^2}$$

Phasor-diagram Solution of Series LCR circuit

$$\Rightarrow V = \sqrt{V_R^2 + (V_L - V_C)^2}$$

$$V = \sqrt{I^2R^2 + (IX_L - IX_C)^2} = I\sqrt{R^2 + (X_L - X_C)^2}$$

$$(\text{or})\ \frac{V}{I} = \sqrt{R^2 + (X_L - X_C)^2}$$

But $\frac{V}{1} = Z$, where Z is the effective opposition of LCR circuit to A.C. called impedance of the circuit.

$\therefore$ Impedance (Z) of LCR circuit is given by,

$Z = \sqrt{R^2 + (X_L - X_C)^2}$ the general relation for impedance.

Extra information

The above relation is known to be

Clearly, (i) if X_L and X_C both are equal i.e., $X_L = X_C$, then $Z = R$ i.e. expression for pure resistive circuit,

(ii) If $X_L = 0$, then $Z = \sqrt{R^2 + X_C^2}$ i.e. expression for series RC circuit.

(iii) If $X_C = 0$, then $Z = Z = \sqrt{R^2 + X_L^2}$ i.e. expression for series RL circuit.

$$\text{Again, } I = \frac{V}{Z} \Rightarrow I = \frac{V}{\sqrt{R^2 + (X_L - X_C)^2}} = \frac{V}{\sqrt{R^2 + \left(L\omega - \frac{1}{C\omega}\right)^2}}$$

$$\left(\because X_L = L\omega \text{ and } X_C = \frac{1}{C\omega}\right)$$

Let ϕ be the phase angle between V and I, then from Figure already shown-

$$\tan\phi = \frac{V_L - V_C}{V_R} = \frac{IX_L - IX_C}{IR} = \frac{X_L - X_C}{R}$$

Putting $X_L = L\omega$ and $X_C = \frac{1}{C\omega}$, we get $\tan\phi = \frac{\left(L\omega - \frac{1}{C\omega}\right)}{R}$

Also $\cos\phi = \frac{R}{Z} = \frac{R}{\sqrt{R^2 + (X_L - X_C)^2}}$

17) Write any three properties of electric field lines.

Ans:- Three properties of electric field lines are:

1) Originate from positive charges and end on negative charges: Electric field lines always start at a positive charge and terminate at a negative charge.

2) Never intersect: Electric field lines can never cross each other at any point in space.

3) Density indicates field strength: Where the field lines are closer together, the electric field strength is stronger, and where they are further apart, the field is weaker.

18) Give any three results of experimental study of photoelectric effect.

Ans:- Three results of the experimental study of the photoelectric effect are:

Threshold frequency: There is a minimum frequency of light, called the threshold frequency, below which no electrons are emitted.

Kinetic energy: The kinetic energy of emitted electrons increases linearly with the frequency of light.

Number of emitted electrons: The number of emitted electrons increases with the intensity of light.

19) **(a)What is Bohr's Model of an Atom?**

Ans:- The Bohr model of the atom was proposed by Neil Bohr in 1915. It came into existence with the modification of Rutherford's model of an atom. Rutherford's model introduced the nuclear model of an atom, in which he explained that a nucleus (positively charged) is surrounded by negatively charged electrons.

Introduction to the Bohr Model:- Bohr theory modified the atomic structure model by explaining that electrons move in fixed orbitals (shells) and not anywhere in between and he also explained that each orbit (shell) has a fixed energy. Rutherford explained the nucleus of an atom and Bohr modified that model into electrons and their energy levels.



Bohr's Model of an Atom

Bohr's model consists of a small nucleus (positively charged) surrounded by negative electrons moving around the nucleus in orbits. Bohr found that an electron located away from the nucleus has more energy, and the electron which is closer to nucleus has less energy

(b) Write the three postulates of Bohr's atom model

Postulates of Bohr's Model of an Atom

*In an atom, electrons (negatively charged) revolve around the positively charged nucleus in a definite circular path called orbits or shells.

*Each orbit or shell has a fixed energy and these circular orbits are known as orbital shells.

*The energy levels are represented by an integer (n=1, 2, 3…) known as the quantum number. This range of quantum number starts from nucleus side with n=1 having the lowest energy level. The orbits n=1, 2, 3, 4… are assigned as K, L, M, N…. shells and when an electron attains the lowest energy level, it is said to be in the ground state.

*The electrons in an atom move from a lower energy level to a higher energy level by gaining the required energy and an electron moves from a higher energy level to lower energy level by losing energy.



ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಕಲ ಸಿದ್ಧತೆ: ಸಚಿವ ಮಧು ಬಂಗಾರಪ್ಪ ಹೇಳಿಕೆ

'ವೆಬ್‌ಕಾಸ್ಟಿಂಗ್' ಕೃಪಾಂಕ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿದ ವೆಬ್ ಕಾಸ್ಟಿಂಗ್‌ನಿಂದ ಕುಸಿದ ಫಲಿತಾಂಶ ಸುಧಾರಿಸಲು ಕಳೆದ ವರ್ಷ ನೀಡಿದ್ದ ಶೇ 10 ಕೃಪಾಂಕವನ್ನು ಪ್ರಸಕ್ತ ಸಾಲಿನಲ್ಲಿ ಮುಂದುವರಿಸುವುದಿಲ್ಲ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಮಕ್ಕಳ ಜತೆ ಸಂವಾದದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿ ವೆಬ್‌ಕಾಸ್ಟಿಂಗ್ ಭಯ ಹೋಗಲಾಡಿಸಲು ಶಿಕ್ಷಣ ಇಲಾಖೆ ನಿರಂತರ ಕಾರ್ಯಕ್ರಮಗಳನ್ನು ರೂಪಿಸಿದೆ. ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲೂ ವಿಶೇಷ ಕಾಳಜಿ ವಹಿಸಲಾಗಿದೆ. ಎಲ್ಲ ಮಕ್ಕಳನ್ನೂ ಮಾನಸಿಕವಾಗಿ ಸದೃಢಗೊಳಿಸಲಾಗಿದೆ. ಸತತ ಮಾರ್ಗದರ್ಶನ, ಯೋಜಿತ ಕಲಿಕೆಯ ಫಲವಾಗಿ ಮಕ್ಕಳ ಕಲಿಕಾ ಮಟ್ಟದಲ್ಲಿ ಹೆಚ್ಚಳವಾಗಿದೆ. ಫಲಿತಾಂಶ ವೃದ್ಧಿಸುವ ವಿಶ್ವಾಸ ಮೂಡಿದೆ. ಹಾಗಾಗಿ, ಕೃಪಾಂಕದ ಅಗತ್ಯವಿಲ್ಲ ಎಂದರು.

ವೆಬ್‌ಕಾಸ್ಟಿಂಗ್ ಕೃಪಾಂಕ ರದ್ದು ಮಾಡಲಾಗಿದೆ. ಆದರೆ, ಕೋವಿಡ್ ನಂತರ ಶಾಲೆಗಳು ಮುಚ್ಚಿದ್ದರಿಂದ ಮಕ್ಕಳಿಗೆ ಆದ ಕಲಿಕಾ ನಷ್ಟವನ್ನು ಸರಿದೂಗಿಸಲು ನೀಡಲಾಗಿದ್ದ ಶೇ 10 ಕೃಪಾಂಕವನ್ನು ರದ್ದು ಮಾಡುವ ಕುರಿತು ನಿರ್ಧಾರ ತೆಗೆದುಕೊಂಡಿಲ್ಲ. ಈ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಈ ಬಾರಿಯ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಪಂಚಾಯಿತಿ ಸಿಇಒ ನೇತೃತ್ವದಲ್ಲಿ ಶೈಕ್ಷಣಿಕ ಪ್ರಗತಿಗೆ ಅಗತ್ಯವಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 'ಒಂದು ದಿನಕ್ಕೆ ಒಂದು ಅಂಕ' ಕಾರ್ಯಕ್ರಮದ ಅಡಿ 100 ದಿನಗಳಲ್ಲಿ ಮಕ್ಕಳನ್ನು ಪರೀಕ್ಷೆಗೆ ಪೂರ್ಣ ಪ್ರಮಾಣದಲ್ಲಿ ಸಿದ್ಧಗೊಳಿಸಲಾಗುತ್ತಿದೆ. ಗುಂಪು ಅಧ್ಯಯನ, ಹೆಚ್ಚುವರಿ ಬೋಧನೆ ಮೂಲಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನೂ ಇತರೆ ಮಕ್ಕಳ ಮಟ್ಟಕ್ಕೆ ತರಲಾಗಿದೆ. ಶಾಲೆಗಳಿಗೆ ಉಚಿತ ವಿದ್ಯುತ್ ಪೂರೈಕೆಯ ಫಲವಾಗಿ ರಾತ್ರಿ ವೇಳೆಯೂ ಆಸಕ್ತರಿಗೆ ಅಧಿಕ ಅವಧಿಯ ಓದಿಗೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ಎಚ್. ಬಸವರಾಜೇಂದ್ರ, ಸಮಗ್ರ ಶಿಕ್ಷಣ ಕರ್ನಾಟಕ ಯೋಜನಾ ನಿರ್ದೇಶಕ ಕೂರ್ಮಾರಾವ್ ಉಪಸ್ಥಿತರಿದ್ದರು.

ಮಾರ್ಗದರ್ಶಿ ಕೈಬಿಡಿ ಬಿಡುಗಡೆ

ಮಕ್ಕಳಿಗಾಗಿ ಮಾರ್ಗದರ್ಶಿ ಕೈಬಿಡಿ ಬಿಡುಗಡೆ ಮಾಡಲಾಗಿದೆ. ಓದಿಗೆ ಮೀಸಲಿಡುವ ಸಮಯ, ವಿಷಯವಾರು ಎಷ್ಟು ಅಂಕದ ಪ್ರಶ್ನೆಗಳಿಗೆ ಎಷ್ಟು ಸಮಯದಲ್ಲಿ ಹೇಗೆ ಉತ್ತರ ಬರೆಯಬೇಕು ಎಂಬ ಮಾಹಿತಿ ನೀಡಲಾಗಿದೆ. ಬೆಳಿಗ್ಗೆ 5ರಿಂದ ರಾತ್ರಿ 11ರವರೆಗಿನ ಕಲಿಕಾ ವೇಳಪಟ್ಟಿ ನೀಡಲಾಗಿದೆ.

ಆರೋಗ್ಯ, ಧ್ಯಾನ, ವಿಶ್ರಾಂತಿ, ವ್ಯಾಯಾಮ ಕುರಿತು ಸಮಯ ನಿಗದಿ ಮಾಡಲಾಗಿದೆ. ಪರೀಕ್ಷಾ ಭಯ ಹೋಗಲಾಡಿಸಲು ಆದ್ಯತೆ ನೀಡಲಾಗಿದೆ. ಖುಷಿಯಾಗಿ ಪರೀಕ್ಷೆ ಬರೆಯುವಷ್ಟು ಸಜ್ಜುಗೊಳಿಸಲಾಗಿದೆ. ಮೂರು ಪರೀಕ್ಷೆಗಳನ್ನು ಬರೆಯಲು ಅವಕಾಶ ಇರುವ ಕಾರಣ ಮಕ್ಕಳು ಒತ್ತಡಕ್ಕೆ ಒಳಗಾಗುವ ಸಾಧ್ಯತೆಯೂ ಕಡಿಮೆಯಾಗಿದೆ ಎಂದು ಹೇಳಿದರು.

ಹಿಜಾಬ್ ಧರಿಸಿ ಬಂದವರಿಗೆ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ನೀಡುವ ವಿಚಾರ ಚರ್ಚೆ ಮಾಡಿಲ್ಲ. ಈ ಕುರಿತು ಗೃಹ ಸಚಿವರು ನಿರ್ಧಾರ ತೆಗೆದುಕೊಳ್ಳುವರು

ಮಧು ಬಂಗಾರಪ್ಪ
ಶಾಲಾ ಶಿಕ್ಷಣ ಸಚಿವ

'ತಪ್ಪು ತಿದ್ದಿಕೊಳ್ಳದೆ ಅಭಿವೃದ್ಧಿಗೆ ಅಡ್ಡಿ ಎನ್ನುತ್ತೀರೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ವರದಿಯಲ್ಲಿ ಹಾಗೂ 13 ನೇ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ನೀಡಿರುವ 3 ನೇ ವರದಿಯಲ್ಲೂ ಕುದುರೆಮುಖ ಕಬ್ಬಿಣ ಅದಿರು ಕಂಪನಿ (ಕೆಐಒಸಿಎಲ್) ಪರಿಸರಕ್ಕೆ ಮಾಡಿರುವ ಹಾನಿಯ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಈಶ್ವರ ಖಂಡ್ರೆ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಐಒಸಿಎಲ್ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಸೂಕ್ತ ಅನುಮತಿ ಪಡೆಯದೇ ನಿಯಮ ಉಲ್ಲಂಘಿಸಿದೆ. ಮಾಡಿರುವ ತಪ್ಪು ಸರಿಪಡಿಸಿಕೊಂಡು, ದಂಡ ಪಾವತಿಸಿ ಎಂದು ಹೇಳಿದರೆ ಅದು ಅಭಿವೃದ್ಧಿಗೆ ಅಡ್ಡಿ ಮಾಡುವ ರಾಜಕೀಯ ಆಗುತ್ತದೆಯೇ' ಎಂದು ಅವರು ಪ್ರಶ್ನಿಸಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೆಂಗಳೂರಿಗೆ ಬಂದಾಗಲೆಲ್ಲಾ ಎಚ್‌ಎಂಟಿ ಮತ್ತು ಕುದುರೆಮುಖ ಕಬ್ಬಿಣ ಅದಿರು ಕಂಪನಿ ವಿಚಾರದಲ್ಲಿ ಆರೋಪ ಮಾಡುವುದನ್ನು ಬಿಟ್ಟು, ರಾಜ್ಯದ ಹಿತದ ಬಗ್ಗೆ ಚಿಂತಿಸಲಿ. ಕುದುರೆಮುಖ ಕಬ್ಬಿಣ ಅದಿರು ಕಂಪನಿ ವಿಚಾರದಲ್ಲಿ ಕೆಐಒಸಿಎಲ್ ಮಾಡಿರುವ ತಪ್ಪುಗಳನ್ನು ಮುಚ್ಚಿಕೊಳ್ಳಲು ಕುಮಾರಸ್ವಾಮಿ ಕರ್ನಾಟಕ ಸರ್ಕಾರದ ಮೇಲೆ ಮಿಥ್ಯಾರೋಪ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಬೆರೆಸುವುದು ಸರಿಯಲ್ಲ. ಕೆಐಒಸಿಎಲ್ ಈ ಹಿಂದೆ ಗಣಿಗಾರಿಕೆ ನಡೆಸುವಾಗ ಸರಿಪಡಿಸಲು ಸಾಧ್ಯವೇ ಆಗದಷ್ಟು ಪರಿಸರ ಹಾನಿ ಮಾಡಿದೆ. ಪರಿಸರ ಹಾನಿಯ ಮೊತ್ತ ಸೇರಿ ₹1,400 ಕೋಟಿ ಬಾಕಿ ಪಾವತಿ ಮಾಡಿಲ್ಲ. ತನ್ನ ತಪ್ಪು ಸರಿಪಡಿಸಲು ತಯಾರಿಲ್ಲದ ಕಂಪನಿಗೆ ಮತ್ತಷ್ಟು ಪರಿಸರ ಹಾನಿ ಮಾಡಲು ಬಿಡಬೇಕೆ ಎಂದರು.

ಕೆಐಒಸಿಎಲ್ ಅಕ್ರಮವಾಗಿ ಲಕ್ಯಾ ಜಲಾಶಯದ ಎತ್ತರ ಹೆಚ್ಚಿಸಿ, ಅರಣ್ಯ ಮುಳುಗಡೆ ಮಾಡಿತ್ತು. ಕುದುರೆಮುಖ ಕಬ್ಬಿಣ ಅದಿರು ಕಂಪನಿ ಎನ್‌ಪಿವಿ (ನಿವ್ವಳ ಹಾಲಿ ಮೌಲ್ಯ) ಮೊತ್ತ, ಬಡ್ಡಿ ಸೇರಿ ಸುಮಾರು ₹1349.52 ಕೋಟಿ ಗಳನ್ನು ಅರಣ್ಯ ಇಲಾಖೆಗೆ ಪಾವತಿಸಬೇಕಿದೆ. ಇದರ ಜತೆಗೆ 1334 ಹೆಕ್ಟೇರ್ ಭೂಮಿಯನ್ನು ಅರಣ್ಯ ಇಲಾಖೆಗೆ ಹಿಂತಿರುಗಿಸಬೇಕಿದೆ. ಕುಮಾರಸ್ವಾಮಿ ಅವರು ಅರಣ್ಯ ಇಲಾಖೆಗೆ ಕಟ್ಟಬೇಕಾದ ಬಾಕಿ ಮತ್ತು ಹಿಂತಿರುಗಿಸಬೇಕಾದ ಭೂಮಿಯ ಬಗ್ಗೆ ಏಕೆ ಮಾತನಾಡುತ್ತಿಲ್ಲ ಎಂದು ಖಂಡ್ರೆ ಪ್ರಶ್ನಿಸಿದರು.

ಕೇಂದ್ರ ಉಕ್ಕು ಸಚಿವಾಲಯದಡಿ ಬರುವ ಎನ್‌ಎಂಡಿಸಿಗೆ ಉಕ್ಕು ಕಾರ್ಖಾನೆ ಸ್ಥಾಪಿಸಲು 2014 ರಲ್ಲಿಯೇ ಬಳ್ಳಾರಿ ಬಳಿ ವೇಣಿವೀರಾಪುರದಲ್ಲಿ 2857 ಎಕರೆ ಜಮೀನು ನೀಡಲಾಗಿದೆ. ಉಕ್ಕು ಕಾರ್ಖಾನೆ ಆರಂಭಿಸಿದರೆ 50 ಸಾವಿರ ಜನರಿಗೆ ಉದ್ಯೋಗ ಲಭಿಸುತ್ತದೆ. ಕೆಐಒಸಿಎಲ್ ಮುಚ್ಚಿದರೆ 300 ಕಾರ್ಮಿಕರಿಗೆ ತೊಂದರೆ ಆಗುತ್ತದೆ ಎನ್ನುತ್ತಿದ್ದ ಕುಮಾರಸ್ವಾಮಿ ಈಗ 1,000 ಕಾರ್ಮಿಕರು ಎನ್ನುತ್ತಿದ್ದಾರೆ. ವೇಣಿವೀರಾಪುರದಲ್ಲಿ ಕಾರ್ಖಾನೆ ಆರಂಭಿಸಿದರೆ ಉದ್ಯೋಗ ನೀಡಬಹುದು ಎಂದು ಹೇಳಿದರು.

'ರಿಯಲ್ ಎಸ್ಟೇಟ್ ದಂಧೆಗೆ ಸರ್ಕಾರ ಅವಕಾಶ ಕೊಡಬೇಕೆ?'

ಎಚ್‌ಎಂಟಿ ವಶದಲ್ಲಿರುವ ಪೀಣ್ಯ ಪ್ಲಾಂಟೇಷನ್ ಅರಣ್ಯ ಜಮೀನಿನ ಮಂಜೂರಾತಿಯ ಬಗ್ಗೆಯೇ ಅನುಮಾನವಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಎಚ್‌ಎಂಟಿ ತನಗೆ ಮಂಜೂರಾಗಿದೆ ಎಂದು ಒದಗಿಸಿರುವ ದಾಖಲೆಯಲ್ಲಿ ಸರ್ವೆ ನಂಬರ್ ಮತ್ತು ಮಂಜೂರಾದ ದಿನಾಂಕವೂ ಇಲ್ಲ. 443 ಎಕರೆ ಭೂಮಿ ಮಂಜೂರಾತಿ ಬಗ್ಗೆ ಅಥವಾ ಅರಣ್ಯೇತರ ಉದ್ದೇಶಕ್ಕೆ ಸರ್ಕಾರಿ ಆದೇಶ ಆಗಿರುವ ಯಾವುದೇ ಗೆಜೆಟ್ ಅಧಿಸೂಚನೆ ಇಲ್ಲ. ಹೀಗಿದ್ದೂ ಪ್ರಸ್ತುತ ಮುಚ್ಚಿ ಹೋಗಿರುವ ಎಚ್‌ಎಂಟಿ ಅರಣ್ಯ ಜಮೀನನ್ನು ಖಾಸಗಿ ಬಿಲ್ಡರ್‌ಗಳು ಸೇರಿ ಹಲವು ಕಂಪನಿಗಳಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದೆ. ಎಚ್‌ಎಂಟಿ ರಿಯಲ್ ಎಸ್ಟೇಟ್ ದಂಧೆ ನಡೆಸಲು ಸರ್ಕಾರ ಅವಕಾಶ ಕೊಡಬೇಕೇ ಎಂದು ಅವರು ಪ್ರಶ್ನಿಸಿದರು.

ಕ್ಯಾನ್ಸರ್ ಚಿಕಿತ್ಸೆಗೆ ನೂತನ ಶಸ್ತ್ರಚಿಕಿತ್ಸಾ ವಿಧಾನಗಳು: ಕ್ಯಾನ್ಸರ್ ನಿರ್ವಹಣೆಯಲ್ಲಿ ಮೂಡಿದ ಆಶಾಕಿರಣ

ಡಾ ರಾಹುಲ್ ಎಸ್ ಕನಕ, ಕನ್ಸಲ್ಟೆಂಟ್ - ಸರ್ಜಿಕಲ್ ಆಂಕೊಲಾಜಿ, ಮಣಿಪಾಲ್ ಆಸ್ಪತ್ರೆ, ಯಶವಂತಪುರ, ಸರ್ಜಾಪುರ ಮತ್ತು ಹೆಬ್ಬಾಳ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಹೊಸ ಕ್ರಾಂತಿ ತಂದಿರುವ ನೂತನ ಶಸ್ತ್ರಚಿಕಿತ್ಸಾ ಕ್ರಮಗಳ ಬಗ್ಗೆ ಹಂಚಿಕೊಂಡ ಅಮೂಲ್ಯವಾದ ಒಳನೋಟಗಳು

ಅವಲೋಕನ: ಇತ್ತೀಚಿನ ವರ್ಷಗಳಲ್ಲಿ, ವಿಶೇಷವಾಗಿ ಶಸ್ತ್ರಚಿಕಿತ್ಸೆಯ ಕ್ಷೇತ್ರದಲ್ಲಿ ಕ್ಯಾನ್ಸರ್ ಚಿಕಿತ್ಸೆಯು ಗಮನಾರ್ಹ ರೂಪಾಂತರಗಳಿಗೆ ಒಳಗಾಗಿದೆ. ಈ ಹಿಂದೆ ಕ್ಯಾನ್ಸರ್ ಚಿಕಿತ್ಸೆಯು ಅಧಿಕೃತವಾಗಿ ಶಸ್ತ್ರಚಿಕಿತ್ಸೆಗಳ ಮೂಲಕ ಗೆಡ್ಡೆಗಳನ್ನು (ಅಥವಾ ಅವಶ್ಯವಿದ್ದಲ್ಲಿ ಗೆಡ್ಡೆ ಬೆಳೆದಂತಹ ಅಂಗವನ್ನು) ತೆಗೆದುಹಾಕುವುದರ ಮೇಲೆ ಕೇಂದ್ರೀಕೃತವಾಗಿತ್ತು. ಈ ರೀತಿಯ ಶಸ್ತ್ರಚಿಕಿತ್ಸೆಗಳಿಂದ ಹೆಚ್ಚಿನ ಪ್ರಕರಣಗಳಲ್ಲಿ ಭಾದಿತರು ದೈಹಿಕವಾಗಿ ಮತ್ತು ಮಾನಸಿಕವಾಗಿ ವೇದನೆ ಅನುಭವಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ, ತಂತ್ರಜ್ಞಾನ ಮತ್ತು ನವೀನ ಕಾರ್ಯವಿಧಾನಗಳ ಪ್ರಗತಿಯೊಂದಿಗೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳು ಹೆಚ್ಚು ನಿಖರ, ಕಡಿಮೆ ಆಕ್ರಮಣಕಾರಿ, ಮತ್ತು ಹೆಚ್ಚು ರೋಗಿ ಸ್ನೇಹಿಯಾಗಿವೆ. ಈ ಪ್ರಗತಿಗಳು ಬಾಧಿತರ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಬದುಕುಳಿಯುವ ಸಾಧ್ಯತೆಯ ಪ್ರಮಾಣವನ್ನು, ಮತ್ತು ಒಟ್ಟಾರೆ ರೋಗಿಗಳ ಫಲಿತಾಂಶಗಳನ್ನು ಸುಧಾರಿಸಿ, ಕ್ಯಾನ್ಸರ್ ವಿರುದ್ಧ ಹೋರಾಡುವವರಿಗೆ ಹೊಸ ಭರವಸೆಯ ಬೆಳಕಾಗಿವೆ.

ಕ್ಯಾನ್ಸರ್ ಚಿಕಿತ್ಸೆಯನ್ನು ಮರುರೂಪಿಸುತ್ತಿರುವ ಶಸ್ತ್ರಚಿಕಿತ್ಸಾ ವಿಧಾನಗಳಲ್ಲಿನ ಅದ್ಭುತ ಪ್ರಗತಿಗಳು:

1. ಅಂಗ-ಸಂರಕ್ಷಣಾ ಶಸ್ತ್ರಚಿಕಿತ್ಸೆಗಳು (Limb Sparing Surgery)
2. ಸೈಟೋರೆಡಕ್ಷನ್ ಮತ್ತು HIPEC
3. ರೊಬೊಟಿಕ್-ನೆರವಿನ ಕ್ಯಾನ್ಸರ್ ಶಾಸ್ತ್ರಚಿಕಿತ್ಸೆಗಳು (Robotic Assisted Onco-Surgery)
4. ಸ್ತನ-ಸಂರಕ್ಷಣಾ ಶಸ್ತ್ರಚಿಕಿತ್ಸೆ (Breast Preservation Surgery)

ಅಂಗ-ಸಂರಕ್ಷಣಾ ಶಸ್ತ್ರಚಿಕಿತ್ಸೆಗಳು

ಹಿಂದೆ, ಕೈಕಾಲುಗಳಲ್ಲಿ ಕ್ಯಾನ್ಸರ್ ಎಂದರೆ ರೋಗ ಹರಡುವುದನ್ನು ತಡೆಯಲು ಅಂಗಚ್ಛೇದನ ಮಾಡಲಾಗುತ್ತಿತ್ತು. ಅಂಗ ಸಂರಕ್ಷಣಾ ಶಸ್ತ್ರಚಿಕಿತ್ಸೆಯು ಅಂಗಚ್ಛೇದನದ ಅಗತ್ಯವಿಲ್ಲದೆ, ಮೂಳೆಗಳು, ಸ್ನಾಯುಗಳು ಅಥವಾ ಮೃದು ಅಂಗಾಂಶಗಳಲ್ಲಿನ ಕ್ಯಾನ್ಸರ್ ಗೆಡ್ಡೆಗಳನ್ನು ತೆಗೆಯುವ ಶಸ್ತ್ರಚಿಕಿತ್ಸಾ ಕ್ರಮವಾಗಿದೆ. ಸಂಪೂರ್ಣ ಪೀಡಿತ ಅಂಗವನ್ನು ತೆಗೆದುಹಾಕುವ ಬದಲು, ಗೆಡ್ಡೆ ಮತ್ತು ಸುತ್ತಮುತ್ತಲಿನ ಅಂಗಾಂಶವನ್ನು ಮಾತ್ರ ತೆಗೆದುಹಾಕಲು ಈ ನವೀನ ತಂತ್ರಗಳನ್ನು ಬಳಸಲಾಗುತ್ತದೆ.

ಈ ವಿಧಾನವು, ಅಂಗವನ್ನು ಕಾಪಾಡುವುದಷ್ಟೇ ಅಲ್ಲದೆ, ಅದರ ಕಾರ್ಯವನ್ನು ಮತ್ತು ಗೆಡ್ಡೆಯನ್ನು ತೆಗೆದುಹಾಕಿದ ನಂತರ, ದೇಹದ ಇನ್ನಿತರೇ ಆರೋಗ್ಯಕರ ಮೂಳೆ ಅಥವಾ ಕೃತಕ ವಸ್ತುಗಳನ್ನು ಉಪಯೋಗಿಸಿ ಪೀಡಿತ ಪ್ರದೇಶವನ್ನು ಪುನರ್ನಿರ್ಮಾಣ ಮಾಡಲು ಅನುವು ಮಾಡಿಕೊಡುತ್ತದೆ. ಈ ಕ್ರಮದೊಂದೊಗೆ ಶಸ್ತ್ರಚಿಕಿತ್ಸೆಯ ನಂತರವೂ ಬಾಧಿತರು ತಮ್ಮ ದೈಹಿಕ ನೋಟ ಮತ್ತು ಅಂಗ ಕಾರ್ಯವನ್ನು ಕಳೆದುಕೊಳ್ಳದೆ, ವೇಗವಾಗಿ ಚೇತರಿಸಿಕೊಂಡು, ಮಾನಸಿಕವಾಗಿಯೂ ಯೋಗಕ್ಷೇಮದಿಂದ ಜೀವಿಸಬಹುದಾಗಿದೆ. ದೀರ್ಘಕಾಲೀನ ಉತ್ತಮ ಫಲಿತಾಂಶಗಳೊಂದಿಗೆ,

ಚಿಕಿತ್ಸೆಯ ನಂತರವೂ ಹೆಚ್ಚು ಸಾಮಾನ್ಯ ಜೀವನವನ್ನು ನಡೆಸುವ ಭರವಸೆಯನ್ನು ಸಹ ನೀಡುತ್ತವೆ ಈತ್ತೀಚಿನ ದಿನಗಳಲ್ಲಿ, 90-95 % ಕೈ-ಕಾಲುಗಳಲ್ಲಿ ಸಂಭವಿಸುವ ಒಸ್ಟಿಯೋಸಾರ್ಕೋಮಾ (ಒಂದು ತರದ ಮೂಳೆಯ ಕ್ಯಾನ್ಸರ್) ಪ್ರಕರಣಗಳಿಗೆ ಇದೆ ಆಯ್ಕೆಯ ಶಾಸ್ತ್ರಚಿಕಿತ್ಸೆಯಾಗಿದೆ.

ಸೈಟೋರೆಡಕ್ಷನ್ ಮತ್ತು HIPEC

ಸಾಂಪ್ರದಾಯಿಕವಾಗಿ, ಜಠರಗರುಳಿನ ಪೆರಿಟೋನಿಯಂ (ಕಿಬ್ಬೊಟ್ಟೆಯ ಕುಹರದ ಒಳಪದರ) ಮತ್ತು ಮಹಿಳೆಯರ ಸಂತಾನೋತ್ಪತ್ತಿ ಅಂಗಗಳ ಪದರಿನ ಕ್ಯಾನ್ಸರ್ ಹೊಂದಿರುವ ರೋಗಿಗಳಿಗೆ ಕಿಮೊಥೆರಪಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಇಲ್ಲಿ ಕ್ಯಾನ್ಸರ್ ಮರುಕಳಿಸುವ ಸಂಭವ ಜಾಸ್ತಿ ಇದ್ದು, ಇದರಿಂದಾಗಿ ಚಿಕಿತ್ಸೆಯ ಫಲಿತಾಂಶಗಳು ಅಷ್ಟೊಂದು ಸಮಾಧಾನಕಾರವಾಗಿರಲಿಲ್ಲ. ಹೈಪರ್ಥರ್ಮಿಕ್ ಇಂಟ್ರಾಪೆರಿಟೋನಿಯಲ್ ಕಿಮೊಥೆರಪಿ (HIPEC) ನೊಂದಿಗೆ ಸಂಯೋಜಿಸಲ್ಪಟ್ಟ ಸೈಟೊರೆಡಕ್ಟಿವ್ ಸರ್ಜರಿ (CRS) ಕೆಲವು ರೀತಿಯ ಜಠರಗರುಳಿನ ಮತ್ತು ಸ್ತ್ರೀರೋಗ ಕ್ಯಾನ್ಸರ್ ಸೇರಿದಂತೆ ಪೆರಿಟೋನಿಯಂ (ಕಿಬ್ಬೊಟ್ಟೆಯ ಕುಹರದ ಒಳಪದರ) ಗೆ ಹರಡಿರುವ ಕ್ಯಾನ್ಸರ್‌ಗಳಿಗೆ ವಿಶೇಷ ಚಿಕಿತ್ಸೆಯಾಗಿದೆ.

ಈ ವಿಧಾನದಲ್ಲಿ, ಗೋಚರ ಗೆಡ್ಡೆಯನ್ನು ಸಾಧ್ಯವಾದಷ್ಟು ತೆಗೆದುಹಾಕಿ, ಉಳಿದಿರುವ ಸೂಕ್ಷ್ಮದರ್ಶಕ ಕ್ಯಾನ್ಸರ್ ಕೋಶಗಳನ್ನು ಗುರಿಯಾಗಿಸಲು ಹೊಟ್ಟೆ (ಅಥವಾ ಕೆಬ್ಬೊಟ್ಟೆ) ಯ ಕುಹೂರವನ್ನು (cavity) ಶಾಖ-ಸಕ್ರಿಯ ಕಿಮೊಥೆರಪಿ ಔಷಧಿಗಳಿಂದ ತುಂಬಿಸಲಾಗುತ್ತದೆ. ಈ ಮೂಲಕ ಕುಹರದೊಳಗಿನ ಕ್ಯಾನ್ಸರ್ ಕೋಶಗಳನ್ನು ನೇರವಾಗಿ ನಾಶಪಡಿಸಬಹುದಾಗಿದೆ. ಈ ಚಿಕಿತ್ಸೆಯು ಉತ್ತಮ ಫಲಿತಾಂಶವನ್ನು ಹೊಂದಿದ್ದು, ಬದುಕುಳಿಯುವಿಕೆಯ ಪ್ರಮಾಣವನ್ನು ಗಮನಾರ್ಹವಾಗಿ ಸುಧಾರಿಸುತ್ತದೆ. ಈ ವಿಧಾನದ ಮತ್ತೊಂದು ಲಾಭವೆಂದರೆ, ಈ ಹಿಂದೆ ಚಿಕಿತ್ಸೆ ನೀಡಲು ಅಸಾಧ್ಯ ಎಂದು ಪರಿಗಣಿಸಲಾದ ಮುಂದುವರಿದ ಹಂತದಲ್ಲಿರುವ (advanced stage) ಕ್ಯಾನ್ಸರ್ ಗಳ ಚಿಕಿತ್ಸೆಗೂ ಇದು ಸೂಕ್ತವಾಗಿದೆ.

ರೊಬೊಟಿಕ್-ನೆರವಿನ ಕ್ಯಾನ್ಸರ್ ಶಾಸ್ತ್ರಚಿಕಿತ್ಸೆಗಳು (Robotic Assisted Onco-Surgery): ರೊಬೊಟಿಕ್-ನೆರವಿನ ಶಸ್ತ್ರಚಿಕಿತ್ಸೆಯು ಹೆಚ್ಚು ನಿಖರವಾದ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಶಸ್ತ್ರಚಿಕಿತ್ಸಕರಿಂದ ನಿಯಂತ್ರಿಸಲ್ಪಡುವ ಸುಧಾರಿತ ರೋಬೋಟಿಕ್ ವ್ಯವಸ್ಥೆಗಳನ್ನು ಬಳಸುತ್ತದೆ. ಈ ವ್ಯವಸ್ಥೆಗಳು ಸಾಂಪ್ರದಾಯಿಕ ವಿಧಾನಗಳಿಗಿಂತ ವರ್ಧಿತ ದೃಷ್ಟಿ, 3D ವೀಕ್ಷಣೆಗೆ ಅನುಮತಿ, ಹೆಚ್ಚಿನ ಕೌಶಲ್ಯ ಮತ್ತು ಹೆಚ್ಚಿನ ನಿಯಂತ್ರಣವನ್ನು ಒದಗಿಸಿ ಅಂಗಗಳ ಸಂರಕ್ಷಣೆಯಲ್ಲಿ ಸಾಟಿಯಿಲ್ಲದ ನಿಖರತೆಯನ್ನು ನೀಡುತ್ತದೆ. ಇನ್ನು ರೋಗಿಗಳಿಗೂ, ಶೀಘ್ರ ಚೇತರಿಕೆ ಮತ್ತು ಕಡಿಮೆ ಆಸ್ಪತ್ರೆ ವಾಸ, ಕಡಿಮೆ ನೋವು, ಮತ್ತು ಕನಿಷ್ಠ ಶಸ್ತ್ರಚಿಕಿತ್ಸೆಯ ಕುರುಹು ಒಳಗೊಂಡಂತೆ ಅನೇಕ ಪ್ರಯೋಜನಗಳನ್ನು ನೀಡುತ್ತದೆ.

ರೊಬೊಟಿಕ್ ಶಸ್ತ್ರಚಿಕಿತ್ಸೆಯ ಸಹಾಯದಿಂದ ಪ್ರಾಸ್ಟೇಟ್ ಮತ್ತು ಶ್ವಾಸಕೋಶದ ಕ್ಯಾನ್ಸರ್ ಛೇದನದಂತಹ ಸಂಕೀರ್ಣ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳನ್ನು ಹೆಚ್ಚು ಸುರಕ್ಷಿತ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದಾಗಿದೆ.

ಸ್ತನ-ಸಂರಕ್ಷಣಾ ಶಸ್ತ್ರಚಿಕಿತ್ಸೆ (Breast Preservation Surgery)

ಈ ಹಿಂದೆ, ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಸಾಮಾನ್ಯವಾಗಿ ಸಂಪೂರ್ಣ ಸ್ತನವನ್ನು ತೆಗೆದುಹಾಕುವುದರ ಜೊತೆಗೆ ವ್ಯಾಪಕವಾದ ದುಗ್ಧರಸ ಗ್ರಂಥಿಯನ್ನು ತೆಗೆದುಹಾಕುವುದನ್ನು ಒಳಗೊಂಡಿತ್ತು. ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಲ್ಲಿನ ಇತ್ತೀಚಿನ ಪ್ರಗತಿಗಳು ಸಾಧ್ಯವಾದಷ್ಟು ಸ್ತನ ಅಂಗಾಂಶವನ್ನು ಸಂರಕ್ಷಿಸಿ ಕ್ಯಾನ್ಸರ್ ಅನ್ನು ತೆಗೆದುಹಾಕುವುದರ ಮೇಲೆ ಕೇಂದ್ರೀಕರಿಸುತ್ತವೆ. ಇದು ವಿಕಿರಣಶೀಲ ಮಾರ್ಕರ್‌ಗಳೊಂದಿಗೆ ಗೆಡ್ಡೆಯ ಗಾತ್ರ ಕಡಿತ, ಸ್ತನ-ಸಂರಕ್ಷಿಸುವ ಶಸ್ತ್ರಚಿಕಿತ್ಸೆಗಳು ಮತ್ತು ಸೆಂಟಿನೆಲ್ ದುಗ್ಧರಸ ಗ್ರಂಥಿಯ (ಕ್ಯಾನ್ಸರ್ ಹರಡುವ ಸಾಧ್ಯತೆಯಿರುವ ಮೊದಲ ಕೆಲವು ದುಗ್ಧರಸ ಗ್ರಂಥಿಗಳ) ಬಯಾಪ್ಸಿ/ಎಕ್ಸೈಶನ್‌ನಲ್ಲಿ ಸುಧಾರಿತ ತಂತ್ರಗಳನ್ನು ಒಳಗೊಂಡಿದೆ.

ಈ ನೂತನ ಶಾಸ್ತ್ರಚಿಕಿತ್ಸಾಕ್ರಮದ ಪ್ರಯೋಜನಗಳ ಬಗ್ಗೆ ಮಾತನಾಡುವುದಾದರೆ, ರೋಗಿಗಳಿಗೆ, ಈ ಶಸ್ತ್ರಚಿಕಿತ್ಸೆಗಳು ಕಡಿಮೆ ಆಕ್ರಮಣಶೀಲವಾಗಿರುತ್ತವೆ, ಸ್ತನ ತಗೆಯುವ ಅಗತ್ಯೆಯನ್ನು ಇದು ಹೊರಟಗಿಸುವುದರಿಂದ ಉತ್ತಮ ಸೌಂದರ್ಯವರ್ಧಕ ಫಲಿತಾಂಶವನ್ನು ನೀಡುತ್ತದೆ, ಮತ್ತು ತ್ವರಿತವಾಗಿ ಚೇತರಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತವೆ. ವ್ಯಾಪಕವಾಗಿ ದುಗ್ಧರಸ ಗ್ರಂಥಿಗಳನ್ನೂ ತಗೆದು ಹಾಕುವ ಅಗತ್ಯತೆಯನ್ನೂ ಇದು ನಿವಾರಿಸುವುದರಿಂದ ಲಿಂಫೆಡೆಮಾದಂತಹ ತೊಡಕುಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಬಹು ಮುಖ್ಯವಾಗಿ, ದೈಹಿಕ ಮತ್ತು ಭಾವನಾತ್ಮಕ ಯೋಗಕ್ಷೇಮದ ಪ್ರಜ್ಞೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ

ಕ್ಯಾನ್ಸರ್ ಆರೈಕೆಯ ಭವಿಷ್ಯವು ನಿಜಕ್ಕೂ ಭರವಸೆದಾಯಕವಾಗಿದೆ. ಉನ್ನತ ದರ್ಜೆಯ ಸಂಶೋಧನೆಗಳು ಮತ್ತು ಚಿಕಿತ್ಸೆಯಲ್ಲಿ ತಂತ್ರಜ್ಞಾನದ ಅಧಿಕೃತ ಅಳವಡಿಕೆಯಿಂದಾಗಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯ ಪ್ರಪಂಚವು ಹೊಸ ದಿಗಂತದತ್ತ ನೋಡುತ್ತಿದೆ. ಅಂಗ-ಸ್ಪೇರಿಂಗ್ ಶಸ್ತ್ರಚಿಕಿತ್ಸೆಗಳು, HIPEC, ರೊಬೊಟಿಕ್-ನೆರವಿನ ಶಸ್ತ್ರಚಿಕಿತ್ಸೆಗಳು ಮತ್ತು ಸ್ತನ ಕ್ಯಾನ್ಸರ್ ಸಂರಕ್ಷಣಾ ತಂತ್ರಗಳಂತಹ ಅದ್ಭುತ ಪ್ರಗತಿಗಳು ಕ್ಯಾನ್ಸರ್ ಪೀಡಿತರಲ್ಲಿ ಹೊಸ ಭರವಸೆ ಮತ್ತು ಉತ್ಸುಕತೆಯನ್ನು ತರುತ್ತಿವೆ. ಈ ಆವಿಷ್ಕಾರಗಳು ಹೆಚ್ಚು ಪರಿಣಾಮಕಾರಿ ಚಿಕಿತ್ಸೆಗಳನ್ನು ಒದಗಿಸುವುದಲ್ಲದೆ, ಕಡಿಮೆ ಚೇತರಿಕೆಯ ಸಮಯಗಳು, ಕಡಿಮೆ ತೊಡಕುಗಳು ಮತ್ತು ಉತ್ತಮ ಫಲಿತಾಂಶಗಳೊಂದಿಗೆ ಉನ್ನತ ಜೀವನದ ಗುಣಮಟ್ಟವನ್ನು ನೀಡಲು ಆದ್ಯತೆ ನೀಡುತ್ತವೆ. ತಂತ್ರಜ್ಞಾನದ ಪ್ರಗತಿ ಮತ್ತು ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಲ್ಲಿ ಇನ್ನಷ್ಟು ರೋಮಾಂಚಕಾರಿ ಬೆಳವಣಿಗೆಗಳನ್ನು ನಾವು ನಿರೀಕ್ಷಿಸಬಹುದು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಹಳೆ ಪ್ರಕರಣಕ್ಕೆ 2018ರ ಕಾಯ್ದೆಯಡಿ ರಕ್ಷಣೆ ಹೇಗೆ: ಎಚ್‌ಡಿಕೆಗೆ ಸುಪ್ರೀಂ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಾರ್ವಜನಿಕ ಸೇವಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು ಎಂದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಗೆ 2018ರಲ್ಲಿ ತಿದ್ದುಪಡಿ ತರಲಾಗಿದೆ. ಆದರೆ, ಅದಕ್ಕೂ ಮುಂಚಿನ ಪ್ರಕರಣಕ್ಕೆ ಈ ಕಾಯ್ದೆಯಡಿ ರಕ್ಷಣೆ ಹೇಗೆ ಪಡೆಯುತ್ತೀರಿ' ಎಂದು ಕೇಂದ್ರ ಭಾರಿ ಕೈಗಾರಿಕೆ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿರುವ ಎರಡು ವಿಭಿನ್ನ ಜಮೀನುಗಳನ್ನು ಕುಮಾರಸ್ವಾಮಿ (2006, 2007) ಡಿನೋಟಿಫಿಕೇಷನ್ ಮಾಡಿದ್ದಾರೆ ಎಂದು ಪ್ರಕರಣ ದಾಖಲಾಗಿತ್ತು. ಈ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಕುಮಾರಸ್ವಾಮಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಪ್ರಕ್ರಿಯೆಗಳನ್ನು ರದ್ದುಗೊಳಿಸಲು ಹೈಕೋರ್ಟ್ 2020ರಲ್ಲಿ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಸೋಮವಾರ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಹಾಗೂ ಮನಮೋಹನ್, '2012 ರಲ್ಲಿ ನೀವು ಏನಾದರೂ ಮಾಡಿರಬಹುದು. ಕಾಯ್ದೆಗೆ 2018ರಲ್ಲಿ ತಿದ್ದುಪಡಿ ಮಾಡಲಾಯಿತು. ಅಂತಹ ಸಂದರ್ಭದಲ್ಲಿ ವಿಚಾರಣೆಗೆ ಅನುಮೋದನೆ ಇನ್ನೂ ಅಗತ್ಯವಿದೆ ಎಂದು ನೀವು ಹೇಳಬಹುದೇ?' ಎಂದು ಕೇಳಿತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19 ಗಮನಿಸಿ ಹೈಕೋರ್ಟ್ ತೀರ್ಪು ನೀಡಿದೆ. ಆ ಪ್ರಕಾರ, ವಿಚಾರಣೆಗೆ ಪೂರ್ವಾನುಮತಿ ಅಗತ್ಯವಿಲ್ಲ ಎಂದು ಹೇಳಿದೆ' ಎಂದು ಪೀಠ ಹೇಳಿತು. ಫೆಬ್ರುವರಿ 25ರಂದು ಪ್ರಕರಣದ ವಿಚಾರಣೆ ನಡೆಸುವುದಾಗಿ ಪೀಠ ಹೇಳಿತು.

'ಅರಣ್ಯ ಸಚಿವರ ಟಿಪ್ಪಣಿಗೆ ಮಾನ್ಯತೆಯಿಲ್ಲ'

ಪ್ರಜಾವಾಣಿ ವಾರ್ತೆ

ಶಿರಸಿ: 'ಅರಣ್ಯ ಹಕ್ಕು ಕಾಯಿದೆಯ ಅಡಿ ಸೌಲಭ್ಯಕ್ಕಾಗಿ ಪಟ್ಟಾ ಜಮೀನು (ಕಂದಾಯ ಭೂಮಿ) ಹೊಂದಿರುವವರೂ ಅರ್ಜಿ ಹಾಕಿದ್ದರೆ ಪರಿಶೀಲಿಸಿ ಕೈಬಿಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಸೂಚಿಸಿದ ಟಿಪ್ಪಣಿಗೆ ಕಾನೂನು ಮಾನ್ಯತೆ ಇಲ್ಲ. ಕಾನೂನಿಗೆ ಸಂಬಂಧಿಸಿ ನಿಯಮ ರಚಿಸಲು ಕೇಂದ್ರ ಸರ್ಕಾರಕ್ಕೆ ಮಾತ್ರ ಅವಕಾಶವಿದೆ' ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ನಗರದ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಕಾರ್ಯಾಲಯದಲ್ಲಿ ಸೋಮವಾರ ಅವರು ಅರಣ್ಯ ಸಚಿವರು ಹೊರಡಿಸಿದ ಟಿಪ್ಪಣಿಯನ್ನು ಪ್ರದರ್ಶಿಸಿ ಮಾತನಾಡಿದರು. ಕಾನೂನು ತಿರುಚಿ, ಅರಣ್ಯ ಭೂಮಿ ಹಕ್ಕು ಕಾಯಿದೆ ಅನುಷ್ಠಾನದಲ್ಲಿ ಪದೇ ಪದೇ ಹಸ್ತಕ್ಷೇಪ ಮಾಡುತ್ತಿರುವ ಅರಣ್ಯ ಸಚಿವರ ಹೇಳಿಕೆಯಿಂದ ಅರಣ್ಯವಾಸಿಗಳಲ್ಲಿ ಮತ್ತು ಅನುಷ್ಠಾನದ ಅರಣ್ಯ ಹಕ್ಕು ಸಮಿತಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಸಚಿವರ ಈ ನಡವಳಿಕೆ ಕುರಿತು ಮುಖ್ಯಮಂತ್ರಿಗೆ ಪತ್ರ ಬರೆಯಲಾಗುವುದು' ಎಂದು ಹೇಳಿದರು.

'ಅರಣ್ಯ ಹಕ್ಕು ಕಾಯಿದೆಯಲ್ಲಿ ಅರ್ಜಿ ಸಲ್ಲಿಸಿದ ಅರಣ್ಯವಾಸಿಯು ಕಂದಾಯಭೂಮಿ ಹೊಂದಿದಲ್ಲಿ, ಅರಣ್ಯ ಭೂಮಿ ಮೇಲೆ ಅವಲಂಬಿತನಾಗಿರುವ ಕುರಿತು ದೃಢೀಕರಿಸಬೇಕು ಮತ್ತು ಗ್ರಾಮ ಸಭೆಯಲ್ಲಿ ಅದು ದೃಢೀಕರಣಗೊಂಡಲ್ಲಿ ಕಂದಾಯ ಭೂಮಿ ಹೊಂದಿರುವವರು ಸಹಿತ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಸಾಗುವಳಿ ಹಕ್ಕಿಗೆ ಅರ್ಹನಾಗಿರುತ್ತಾನೆ ಎಂದು ಕೇಂದ್ರ ಬುಡಕಟ್ಟು ಸಚಿವಾಲಯ 2008 ಹಾಗೂ 2010ರಲ್ಲಿ ಸ್ಪಷ್ಟೀಕರಣ ನೀಡಿದೆ' ಎಂದು ಹೇಳಿದರು.

ಸರ್ಕಾರಿ ಕಾಲೇಜಿನಲ್ಲಿ ಸರಸ್ವತಿ ವಿಗ್ರಹ ಪ್ರತಿಷ್ಠಾಪನೆ, ಹೋಮ

ಪ್ರಜಾವಾಣಿ ವಾರ್ತೆ

ಕೊರಟಗೆರೆ (ತುಮಕೂರು): ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಸೋಮವಾರ ಸರಸ್ವತಿದೇವಿ ವಿಗ್ರಹ ಪ್ರತಿಷ್ಠಾಪಿಸಲಾಯಿತು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಕಾಲೇಜು ಸಿಬ್ಬಂದಿ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳ ಮೂಲಕ ಕಾಲೇಜು ಆವರಣದಲ್ಲಿ ಸರಸ್ವತಿ ವಿಗ್ರಹ ಪ್ರತಿಷ್ಠಾಪಿಸಿ, ಲೋಕಾರ್ಪಣೆ ಮಾಡಲಾಯಿತು.

ಸರ್ಕಾರಿ ಕಾಲೇಜು ಆವರಣದಲ್ಲಿ ಮುಂಜಾನೆಯಿಂದಲೇ ಆಗಮಿಕರು ಪೂಜೆ, ಹೋಮ, ಹವನ ಹಾಗೂ ಅಭಿಷೇಕ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

'ವಿದ್ಯೆ ಕಲಿಯುವ ಸ್ಥಳ ದೇಗುಲವಿದ್ದಂತೆ. ವಿದ್ಯಾರ್ಥಿಗಳಲ್ಲಿ ನಾಡಿನ ಸಂಸ್ಕೃತಿ ಹಾಗೂ ಧಾರ್ಮಿಕ ಭಾವನೆ ಮೂಡಿಸುವ ದೃಷ್ಟಿಯಿಂದ ಆವರಣದಲ್ಲಿ ಶಾರದಾ ದೇವಿ ವಿಗ್ರಹ ಪ್ರತಿಷ್ಠಾಪಿಸಲಾಗಿದೆ' ಎಂದು ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಂ.ಜಿ.ಸುಧೀರ್ ಹೇಳಿದರು.

'ಗ್ರಾಮೀಣ ಭಾಗದ ವಿದ್ಯಾರ್ಥಿಗಳೆ ಹೆಚ್ಚು ಕಲಿಯುತ್ತಿರುವ ಕಾಲೇಜನ್ನು ಯಾವುದೇ ಖಾಸಗಿ ಕಾಲೇಜಿಗೆ ಕಡಿಮೆ ಇಲ್ಲದಂತೆ ಸೌಲಭ್ಯ ಒದಗಿಸಲಾಗುತ್ತಿದೆ. ಕಲಿಕಾ ಸ್ಥಳದಲ್ಲಿ ಶ್ರದ್ಧಾ ಭಕ್ತಿ ಮೂಡಲಿ ಎಂಬ ಮಹದಾಸೆಯಿಂದ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ' ಎಂದು ಪ್ರಾಂಶುಪಾಲ ಈರಪ್ಪ ನಾಯ್ಕ ಹೇಳಿದರು.

ಕೊರಟಗೆರೆ ಪಟ್ಟಣದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಸರಸ್ವತಿ ವಿಗ್ರಹ ಪ್ರತಿಷ್ಠಾಪಿಸಲಾಯಿತು. ಪ್ರಾಂಶುಪಾಲ ಈರಪ್ಪ ನಾಯ್ಕ ಸೇರಿದಂತೆ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಇದ್ದಾರೆ

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎನ್.ಪದ್ಮನಾಭ್, ಸುಷ್ಮಾರಾಣಿ, ಎಸ್.ಸುಶಾಂತ್ ವಾಸುಪಾಲ್, ಸಾಯಿ ಹರ್ಷಿತ, ಎಲ್.ನಾರಾಯಣ್, ರಂಗಶ್ಯಾಮಯ್ಯ, ಬಾಲಾಜಿ ದರ್ಶನ್, ಶಾಂಭವಿ, ಭಾಗ್ಯಮ್ಮ, ಚೈತಾಲಿ, ದೀಪಾ, ಜ್ಯೋತಿ, ಗಿರಿಜಮ್ಮ, ಗೋವಿಂದರಾಜು, ಶಿವರಾಮಯ್ಯ, ರಮೇಶ್, ಕೆ.ವಿ. ಪುರುಷೋತ್ತಮ್, ಡಿ.ಎಂ.ರಾಘವೇಂದ್ರ, ನವೀನ್ ಕುಮಾರ್, ಚಿನ್ನಿವೆಂಕಟಶೆಟ್ಟಿ, ರಾಧಾಕೃಷ್ಣ ಶ್ರೇಷ್ಠಿ ಇದ್ದರು.

ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಿಕೆಶಿ

ಪತ್ರಕರ್ತರಿಗೆ ನಿವೇಶನ ನೀಡಲು ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಪತ್ರಕರ್ತರಿಗೆ ಆದ್ಯತೆ ಮೇರೆಗೆ ನಿವೇಶನ ನೀಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ. ಸದ್ಯದಲ್ಲಿಯೇ ಅದರ ಬಗ್ಗೆ ಮಾಹಿತಿ ನೀಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ 2023 ಮತ್ತು 2024ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ವಿತರಿಸುವ ಯೋಜನೆ ಜಾರಿ ಮಾಡಲಾಗಿದೆ. ಆರೋಗ್ಯ ವಿಮೆ ಒದಗಿಸುವ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಜೊತೆಗೆ ಪತ್ರಕರ್ತರು ಗೌರವಯುತವಾಗಿ ಬದುಕಲು ನಿವೇಶನ ಅಗತ್ಯ. ಯಾರ್ಯಾರಿಗೋ ನಿವೇಶನಗಳನ್ನು ಮೀಸಲಿಡುತ್ತೇವೆ. ಪತ್ರಕರ್ತರಿಗೂ ನಿವೇಶನ ಮೀಸಲಿಡಬೇಕು' ಎಂದು ಹೇಳಿದರು.

ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳಲ್ಲಿ ಮಾತ್ರವಲ್ಲ, ಖಾಸಗಿ ಬಡಾವಣೆಗಳಲ್ಲಿ ನಿವೇಶನಗಳಿಗೆ ಅನುಮೋದನೆ ನೀಡುವಾಗ ಅದರಲ್ಲಿ ಪತ್ರಕರ್ತರಿಗೆ ನಿಗದಿತ ಪ್ರಮಾಣದ ನಿವೇಶನ ಮೀಸಲಿಡಬೇಕು ಎಂಬ ಷರತ್ತು ವಿಧಿಸಬೇಕು ಎಂದರು.

'ಸಾಮಾನ್ಯರನ್ನು ದೊಡ್ಡ ನಾಯಕರನ್ನಾಗಿ ಮಾಡುವ, ದೊಡ್ಡವರನ್ನು ಹಳ್ಳಕ್ಕೆ ಹಾಕುವ ಶಕ್ತಿ ಮಾಧ್ಯಮಕ್ಕೆ ಇದೆ. ಸುಳ್ಳು ಸುದ್ದಿಗಳನ್ನು ನಿಯಂತ್ರಿಸುವುದು ಹೇಗೆ ಎಂಬ ಬಗ್ಗೆ ನೀವೇ ಚಿಂತನೆ ನಡೆಸಬೇಕು' ಎಂದು ಹೇಳಿದರು.

'ಟಿಎಸ್‌ಆರ್ ಪ್ರಶಸ್ತಿ, ಮೊಹರೆ ಹಣಮಂತರಾಯ ಪ್ರಶಸ್ತಿ ಪ್ರಶಸ್ತಿ ಸಹಿತ ವಿವಿಧ ಪ್ರಶಸ್ತಿಗಳನ್ನು ಹಿಂದಿನ ಸರ್ಕಾರ ನೀಡಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಎಲ್ಲ ಪ್ರಶಸ್ತಿ ಪ್ರದಾನ ನಡೆಯುತ್ತಿದೆ' ಎಂದರು.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮಾತನಾಡಿ, 'ಪತ್ರಕರ್ತರಿಗೆ ಆರೋಗ್ಯ ವಿಮೆ ಒದಗಿಸುವ ಯೋಜನೆಯ ಬಗ್ಗೆ ಈಗಾಗಲೇ ಎರಡು ಬಾರಿ ಸಭೆ ನಡೆಸಿ ಚರ್ಚಿಸಲಾಗಿದೆ. ಕೆಲವೇ ದಿನಗಳಲ್ಲಿ ಜಾರಿಗೆ ಬರಲಿದೆ' ಎಂದು ತಿಳಿಸಿದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನುಂ ಮಾತನಾಡಿ, 'ವಾರ್ಷಿಕ ಪ್ರಶಸ್ತಿಯ ಗೌರವಧನವನ್ನು ₹25 ಸಾವಿರದಿಂದ ₹50 ಸಾವಿರಕ್ಕೆ ಹೆಚ್ಚಿಸಲಾಗಿದೆ. ಜೀವಮಾನದ ಸಾಧನೆ ಪ್ರಶಸ್ತಿಯ ಮೊತ್ತವನ್ನು ₹1 ಲಕ್ಷಕ್ಕೆ ಏರಿಸಲಾಗಿದೆ' ಎಂದು ವಿವರಿಸಿದರು.

ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್, ಮುಖ್ಯಮಂತ್ರಿಯವರ ಕಾರ್ಯದರ್ಶಿ ಬಿ.ಬಿ. ಕಾವೇರಿ, ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಹನಾ ಎಂ. ಹಾಗೂ ಅಕಾಡೆಮಿ ಸದಸ್ಯರು ಭಾಗವಹಿಸಿದ್ದರು.

'ಪ್ರಜಾವಾಣಿ'ಯ ಪ್ರಭು ಬ. ಅಡವಿಹಾಳ, ಶಶಿಕಾಂತ್ ಎಸ್. ಶೆಂಬಳ್ಳಿ, ಕೆ. ಓಂಕಾರ ಮೂರ್ತಿ, ಡಿ.ಎಂ. ಕುರ್ಕೆ ಪ್ರಶಾಂತ್, ಸಂಧ್ಯಾ ಹೆಗಡೆ ಅವರು ಸೋಮವಾರ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸ್ವೀಕರಿಸಿದರು

86 ಮಂದಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ

'ಪ್ರಜಾವಾಣಿ'ಯ ಶಶಿಕಾಂತ್ ಶೆಂಬೆಳ್ಳಿ, ಸಂಧ್ಯಾ ಹೆಗಡೆ, ಕೆ. ಓಂಕಾರಮೂರ್ತಿ, ಡಿ.ಎಂ. ಕುರ್ಕೆ ಪ್ರಶಾಂತ್, ಪ್ರಭು ಬ. ಅಡವಿಹಾಳ, 'ಡೆಕ್ಕನ್ ಹೆರಾಲ್ಡ್'ನ ಮಧು ಜವಳಿ, ಶಿಲ್ಪಾ ಪಿ. ಸೇರಿದಂತೆ 86 ಪತ್ರಕರ್ತರಿಗೆ 2023 ಮತ್ತು 2024ನೇ ಸಾಲಿನ ಮಾಧ್ಯಮ ಅಕಾಡೆಮಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

'ಇಂದು ಸಂಜೆ' ಪತ್ರಿಕೆಯ ಪ್ರಧಾನ ವರದಿಗಾರ ಅ.ಚ.ಶಿವಣ್ಣ ಮತ್ತು 'ವಾರ್ತಾಭಾರತಿ'ಯ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕರ್ನಾಟಕದಲ್ಲಿ ಮಾಧ್ಯಮಗಳಿಗೆ ಇರುವಷ್ಟು ಸ್ವಾತಂತ್ರ್ಯ ದೇಶದ ಬೇರೆ ಯಾವುದೇ ರಾಜ್ಯದಲ್ಲಿ ಇಲ್ಲ. ಪತ್ರಕರ್ತರು ಸತ್ಯವನ್ನು ಗೌರವಿಸುವ ಕೆಲಸ ಮಾಡಬೇಕು

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಕಾರಿನಲ್ಲಿ ₹1.18 ಕೋಟಿ ಮೌಲ್ಯದ ಗಾಂಜಾ ಪತ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ರಾಜೇಶ್ವರ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಪಲ್ಟಿಯಾದ ಕಾರಿನಲ್ಲಿ ₹1.18 ಕೋಟಿ ಮೌಲ್ಯದ 118 ಕೆ.ಜಿ ಗಾಂಜಾ ಪತ್ತೆಯಾಗಿದೆ.

ಕಾರು ತೆಲಂಗಾಣದಿಂದ ಮಹಾರಾಷ್ಟ್ರದ ಕಡೆಗೆ ಹೋಗುತ್ತಿತ್ತು. ಹೆದ್ದಾರಿಯಲ್ಲಿನ ಸೇತುವೆಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಆಗ ಅದರಲ್ಲಿನ ಗಾಂಜಾದ ಪೊಟ್ಟಣಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಇದನ್ನು ಕಂಡ ಗ್ರಾಮಸ್ಥರು, ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಅದರಲ್ಲಿದ್ದ ಇಬ್ಬರನ್ನು ಹಿಡಿದು ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತ್ಯಾಚಾರ ಆರೋಪಿಗಳ ಖುಲಾಸೆ

ಒಂದನೇ ಪುಟದಿಂದ...

'ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಹಲವು ಕ್ರಮ ಕೈಗೊಳ್ಳಲಾಗಿದೆ. ಮಹಿಳಾ ಸಹಾಯವಾಣಿ (1091) ಹಾಗೂ ಮಕ್ಕಳ ಸಹಾಯವಾಣಿಗಳು (1098) ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿವೆ. ಪ್ರತಿ ವರ್ಷ ಮಕ್ಕಳ ಸಹಾಯವಾಣಿಗೆ 11 ಸಾವಿರ ಕರೆಗಳು ಬರುತ್ತಿವೆ. ಈ ಕರೆಗಳಿಗೆ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅತ್ಯಾಚಾರ ಪ್ರಕರಣಗಳು ಬಹುತೇಕ ಪರಿಚಯಸ್ಥರು, ಸ್ನೇಹಿತರು ಹಾಗೂ ಸಂಬಂಧಿಕರಿಂದ ನಡೆದಿರುವುದು ತನಿಖೆಯಿಂದ ಗೊತ್ತಾಗಿದೆ. ಈ ಪ್ರಕರಣಗಳಲ್ಲಿ ಸರಿಯಾದ ಸಾಕ್ಷ್ಯ ಸಂಗ್ರಹಿಸುವಲ್ಲಿ ಪೊಲೀಸ್ ಇಲಾಖೆ ನಿರಂತರವಾಗಿ ಕ್ರಮ ಕೈಗೊಳ್ಳುತ್ತಲೇ ಇದೆ. ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಯ ಹೇಳಿಕೆ ಅತಿಮುಖ್ಯ. ಕೆಲವು ಪ್ರಕರಣಗಳಲ್ಲಿ ಒತ್ತಡ ಹಾಗೂ ಭೀತಿಯಿಂದ ಸಂತ್ರಸ್ತೆಯರು ಹೇಳಿಕೆ ಬದಲಿಸುತ್ತಾರೆ. ಅಲ್ಲದೇ ನ್ಯಾಯಾಧೀಶರ ಎದುರು ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 164ರ ಅಡಿ ಸ್ವಯಂ ಹೇಳಿಕೆ ದಾಖಲಿಸಲು ಕೆಲವರು ಹಿಂದೇಟು ಹಾಕುತ್ತಾರೆ. ಇದರಿಂದ ತನಿಖೆಗೆ ತೊಂದರೆ ಆಗುತ್ತಿದೆ. ಆರೋಪಿಗಳು ಖುಲಾಸೆಗೊಳ್ಳುತ್ತಾರೆ' ಎಂದು ಅವರು ಹೇಳುತ್ತಾರೆ.

ಕಳೆದ ಐದು ವರ್ಷಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಅತ್ಯಾಚಾರ ಪ್ರಕರಣಗಳು

ಜಿಲ್ಲೆ	ಅತ್ಯಾಚಾರ
ಬೆಂಗಳೂರು ನಗರ	714
ಬೆಳಗಾವಿ	108
ಬೆಂ. ಗ್ರಾಮಾಂತರ	88
ಹಾಸನ	84
ಮಂಗಳೂರು ನಗರ	73
ಚಿಕ್ಕಬಳ್ಳಾಪುರ	69
ಯಾದಗಿರಿ	67
ಕಲಬುರಗಿ	65
ಮೈಸೂರು ನಗರ	68
ಚಾಮರಾಜನಗರ	43

ಕೆಪಿಎಸ್‌ಸಿ: ಪ್ರಕ್ರಿಯೆ ಮುಂದುವರಿಸಿ– ಕೆಎಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗವು 2024ರ ಡಿಸೆಂಬರ್ 29ರಂದು 384 ಹುದ್ದೆಗಳ ಭರ್ತಿಗೆ ನಡೆಸಿದ್ದ ಪೂರ್ವಭಾವಿ ಮರು ಪರೀಕ್ಷೆಯ ಫಲಿತಾಂಶ ಪ್ರಕಟಣೆಗೆ ಇದ್ದ ಅಡ್ಡಿ ನಿವಾರಣೆಯಾಗಿದ್ದು, ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಲು ಕರ್ನಾಟಕ ಆಡಳಿತ ನ್ಯಾಯಮಂಡಳಿಯು (ಕೆಎಟಿ), ಕರ್ನಾಟಕ ಲೋಕಸೇವಾ ಆಯೋಗಕ್ಕೆ ಅನುಮತಿ ನೀಡಿದೆ.

ಈ ಸಂಬಂಧ ಕೃಷ್ಣ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೆಎಟಿ ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠವು ಈ ಕುರಿತಂತೆ ಆದೇಶಿಸಿದೆ.

'ಕಾನೂನಿನ ಪ್ರಕಾರ ಆಯ್ಕೆ ಪ್ರಕ್ರಿಯೆ ಮುಂದುವರಿಸಲು ಕೆಪಿಎಸ್‌ಸಿಗೆ ನಿರ್ದೇಶಿಸಲಾಗುತ್ತಿದೆ. ಅರ್ಜಿದಾರರಿಗೆ ಯಾವುದೇ ತೊಂದರೆಗಳಿದ್ದರೆ, ಮುಂದಿನ ವಿಚಾರಣೆಯ ದಿನಾಂಕದಂದು ಅದನ್ನು ತಿಳಿಸಲು ಸ್ವತಂತ್ರರಿದ್ದಾರೆ' ಎಂದು ತಿಳಿಸಿರುವ ಪೀಠವು ವಿಚಾರಣೆಯನ್ನು ಮಾರ್ಚ್ 6ಕ್ಕೆ ಮುಂದೂಡಿದೆ.

'ಪೂರ್ವಭಾವಿ ಮರು ಪರೀಕ್ಷೆ ಪ್ರಶ್ನೆ ಪತ್ರಿಕೆಯ ಅನುವಾದದಲ್ಲಿ ಪುನಃ ಲೋಪಗಳಾಗಿವೆ. ಇದರಿಂದ ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಹಾಗಾಗಿ, ಪರೀಕ್ಷೆಯನ್ನು ರದ್ದುಪಡಿಸಿ ಹೊಸದಾಗಿ ಪರೀಕ್ಷೆ ನಡೆಸಲು ನಿರ್ದೇಶಿಸಬೇಕು. ಮಧ್ಯಂತರ ಕ್ರಮವಾಗಿ ಫಲಿತಾಂಶ ಪ್ರಕಟಣೆಗೆ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ರಾಜ್ಯಪಾಲರ ಅಂಗಳಕ್ಕೆ 'ಸುಗ್ರೀವಾಜ್ಞೆ'

ಒಂದನೇ ಪುಟದಿಂದ...

'ಸುಗ್ರೀವಾಜ್ಞೆಯ ಕರಡಿನಲ್ಲಿ 3 ವರ್ಷ ಜೈಲು ಶಿಕ್ಷೆ ಎಂದು ಉಲ್ಲೇಖಿಸಲಾಗಿತ್ತು. ಆದರೆ, ಕಾನೂನು ಇನ್ನಷ್ಟು ಬಿಗಿಗೊಳಿಸುವ ಉದ್ದೇಶದಿಂದ ಜೈಲು ಶಿಕ್ಷೆಯ ಪ್ರಮಾಣವನ್ನು 10 ವರ್ಷದವರೆಗೆ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ. ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರ ನೋಂದಣಿ ಕಡ್ಡಾಯ ಸೇರಿದಂತೆ ಇತರ ಎಲ್ಲ ಅಂಶಗಳು ಸುಗ್ರೀವಾಜ್ಞೆಯಲ್ಲಿದೆ' ಎಂದೂ ಅವರು ವಿವರಿಸಿದರು.

ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ವಿರುದ್ಧ ದೂರಿತ್ತ ಸಂಸದ ಸುಧಾಕರ್ • ರಾಜಧಾನಿಗೆ ಧಾವಿಸಿದ ಯತ್ನಾಳ ಬಣ

ದೆಹಲಿಗೆ ತಲುಪಿದ ಬಿಜೆಪಿ ಬಣ ಜಗಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಕೆಲವು ತಿಂಗಳಿಂದೀಚೆಗೆ ತಾರಕಕ್ಕೇರಿದ ಬಿಜೆಪಿಯ 'ಬಣ ಜಗಳ' ರಾಷ್ಟ್ರ ರಾಜಧಾನಿ ದೆಹಲಿಗೆ ವರ್ಗಾವಣೆಗೊಂಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಬಿ.ವೈ.ವಿಜಯೇಂದ್ರ ಅವರನ್ನು ಯಾವುದೇ ಕಾರಣಕ್ಕೂ ಮುಂದುವರೆಸಬಾರದು ಎಂದು ಸಮರ ಸಾರಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಬಣದ ಸದಸ್ಯರು ದೆಹಲಿಯಲ್ಲಿ ಠಿಕಾಣಿ ಹೂಡಿದ್ದು, ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರುವ ತಂತ್ರ ಆರಂಭಿಸಿದ್ದಾರೆ.

ಯತ್ನಾಳ ಬಣದ ಶಾಸಕ ರಮೇಶ ಜಾರಕಿಹೊಳಿ, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಮಾಜಿ ಸಚಿವ ಶ್ರೀಮಂತ ಪಾಟೀಲ ಮತ್ತು ಎನ್.ಆರ್.ಸಂತೋಷ್ ಅವರು ಸೋಮವಾರ ಸಂಜೆಯೇ ದೆಹಲಿಗೆ ತಲುಪಿದರು. ಯತ್ನಾಳ ಮತ್ತು ಉಳಿದ ಸದಸ್ಯರು ಮಂಗಳವಾರ ದೆಹಲಿಗೆ ಹೋಗಲಿದ್ದಾರೆ. ವರಿಷ್ಠರ ಭೇಟಿಗೆ 3–4 ದಿನಗಳು ಕಾದು, ಅಹವಾಲು ಸಲ್ಲಿಸಲು ಅವಕಾಶ ಸಿಕ್ಕಿದಾಗ ಅಸಮಾಧಾನಿತರೆಲ್ಲ ಒಟ್ಟಾಗಿ ದೂರು ನೀಡಲು ತೀರ್ಮಾನಿಸಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ, ಹೊಂದಾಣಿಕೆ ರಾಜಕಾರಣ ಮಾಡಿಕೊಳ್ಳದ, ಭ್ರಷ್ಟಾಚಾರರಹಿತ ಮತ್ತು ಹಿಂದುತ್ವದ ಪರವಾಗಿರುವವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು. ಕುಟುಂಬ ರಾಜಕಾರಣ ಮುಂದುವರೆಸಲು ಅವಕಾಶ ನೀಡಬಾರದು ಎಂಬ ಬೇಡಿಕೆಯನ್ನು ಸಲ್ಲಿಸಲು ಯತ್ನಾಳ ಬಣ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶದ ಬಳಿಕ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ನಡೆಯಲಿದ್ದು, ಅದಕ್ಕೂ ಮುನ್ನ ರಾಜ್ಯ ಘಟಕಗಳ ಅಧ್ಯಕ್ಷರ ಚುನಾವಣೆಯೂ ನಡೆಯಬೇಕಿದೆ. ಚುನಾವಣೆಯಲ್ಲಿ ತಮ್ಮ ಬಣದಿಂದ ಒಬ್ಬರನ್ನು ಕಣಕ್ಕೆ ಇಳಿಸಲಾಗುವುದು ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಆ ಬಗ್ಗೆ ದೆಹಲಿಯಲ್ಲಿ ಸಂಸದರು, ಕೇಂದ್ರ ಸಚಿವರ ಜತೆ ಮಾತುಕತೆ ನಡೆಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ನಡ್ಡಾಗೆ ಸುಧಾಕರ್ ದೂರು: ಸಂಸದ ಡಾ.ಕೆ.ಸುಧಾಕರ್ ಅವರು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಸೋಮವಾರ ಭೇಟಿ ಮಾಡಿ ವಿಜಯೇಂದ್ರ ಅವರ ವಿರುದ್ಧ ದೂರು ನೀಡಿದರು.

'ವಿಜಯೇಂದ್ರ ಅವರು 2028ಕ್ಕೆ ಮುಖ್ಯಮಂತ್ರಿ ಆಗಲು ಈಗಲೇ ತಯಾರಿ ನಡೆಸಿಕೊಂಡಿದ್ದಾರೆ. ಯಾರಿಗೆಲ್ಲ ಟಿಕೆಟ್ ಕೊಡಬೇಕು ಎಂಬ ಲೆಕ್ಕಾಚಾರವನ್ನೂ ಹಾಕಿಕೊಂಡಿದ್ದಾರೆ. ಪಕ್ಷದಲ್ಲಿ ಎಲ್ಲರೂ ಬೇಸತ್ತಿದ್ದಾರೆ. ಯಾರನ್ನೂ ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಈಗಲೇ ಕಡಿವಾಣ ಹಾಕದಿದ್ದರೆ ಪಕ್ಷಕ್ಕೆ ದೊಡ್ಡ ಮಟ್ಟದ ಅನಾಹುತ ಆಗುತ್ತದೆ ಎಂದು ನಡ್ಡಾ ಅವರಿಗೆ ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಪಕ್ಷಕ್ಕೆ ಹಾನಿ ಆಗುವುದನ್ನು ಈಗಲೇ ತಪ್ಪಿಸಬೇಕು. ಅವರ ಹಸ್ತಕ್ಷೇಪವನ್ನು ತಡೆಯಬೇಕು. ಇಲ್ಲವಾದರೆ ಮುಂದೆ ಆಗಬಹುದಾದ ಅನಾಹುತ ತಡೆಯುವುದು ಕಷ್ಟವಾಗಬಹುದು' ಎಂದೂ ಹೇಳಿದ್ದಾರೆ.

'ಬಿಎಸ್‌ವೈ ಕುಟುಂಬ ಮುಕ್ತ ಬಿಜೆಪಿ'

ಯತ್ನಾಳ

ವಿಜಯಪುರ: 'ಯಡಿಯೂರಪ್ಪ ಕುಟುಂಬದಿಂದ ಬಿಜೆಪಿಯನ್ನು ಸಂಪೂರ್ಣ ಮುಕ್ತ ಮಾಡಬೇಕು, ಹಿಂದುತ್ವ-ಪರವಾಗಿರುವ ನಾಯಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಹಾಗೂ ಭ್ರಷ್ಟಾಚಾರ ರಹಿತ ನಾಯಕತ್ವವನ್ನು ಕರ್ನಾಟಕಕ್ಕೆ ಕೊಡಬೇಕು ಎಂಬ ಮೂರು ಪ್ರಮುಖ ಬೇಡಿಕೆಗಳನ್ನು ವರಿಷ್ಠರ ಮುಂದೆ ಇಡಲಾಗುವುದು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯ ಘಟಕದ ಅಧ್ಯಕ್ಷ ಆಯ್ಕೆ ವಿಷಯವಾಗಿ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಲು ಮಂಗಳವಾರ ದೆಹಲಿಗೆ ನಮ್ಮ ತಂಡ ತೆರಳುತ್ತಿದೆ' ಎಂದರು.

'ಯಡಿಯೂರಪ್ಪ ಕುಟುಂಬ ರಾಜ್ಯದಲ್ಲಿ ಸಾಕಷ್ಟು ಲೂಟಿ ಮಾಡಿದೆ, ನಕಲಿ ಸಹಿ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಶಾಮೀಲಾಗಿ ಕರ್ನಾಟಕದಲ್ಲಿ ಬಿಜೆಪಿಯನ್ನು ಮುಗಿಸುವ ಕೆಲಸ ವಿಜಯೇಂದ್ರ ಮಾಡುತ್ತಿದ್ದಾರೆ ಎಂಬುದನ್ನು ವರಿಷ್ಠರ ಗಮನಕ್ಕೆ ತರಲಾಗುವುದು' ಎಂದು ಹೇಳಿದರು.

'ಬಿಜೆಪಿಯಲ್ಲಿ ತಟಸ್ಥ ಇದ್ದವರು ಇದುವರೆಗೆ ಎರಡೂ ಕಡೆ ಆಟ ಆಡುತ್ತಿದ್ದರು. ಇದೀಗ ನಮ್ಮೊಂದಿಗೆ ಸೇರಿಕೊಂಡಿದ್ದಾರೆ. ರಾಜ್ಯದ ಸಂಸದರು ನಮ್ಮೊಂದಿಗೆ ಸೇರಿದ್ದಾರೆ. ವಿಜಯೇಂದ್ರ ವಿರುದ್ಧ ಪಕ್ಷದ ಹೈಕಮಾಂಡ್‌ಗೆ ದೂರು ನೀಡಲು ಇದೀಗ ದೊಡ್ಡ ತಂಡವೇ ಸಿದ್ಧವಾಗಿದೆ' ಎಂದರು.

ಪಕ್ಷಕ್ಕೆ ಎಷ್ಟು ಹಾನಿಯಾಗಬೇಕೋ ಅಷ್ಟು ಆಗಿದೆ: ಬಿವೈವಿ

ಶಿವಮೊಗ್ಗ: 'ಆಂತರಿಕ ಗೊಂದಲಗಳು, ಬಹಿರಂಗ ಹೇಳಿಕೆಗಳಿಂದ ಪಕ್ಷಕ್ಕೆ ಎಷ್ಟು ಹಾನಿಯಾಗಬೇಕೋ ಅಷ್ಟು ಆಗಿದೆ. ನನಗೆ ಜವಾಬ್ದಾರಿಯ ಅರಿವಿದೆ. ಹೀಗಾಗಿ ನಮ್ಮ ಮುಖಂಡರು ಹಾಗೂ ಪಕ್ಷದ ವಿರುದ್ಧ ಈವರೆಗೂ ಬಹಿರಂಗ ಹೇಳಿಕೆ ನೀಡಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದೇನೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಯಾರು ಎಂಬುದು ಇನ್ನೊಂದೇ ವಾರದಲ್ಲಿ ಗೊತ್ತಾಗಲಿದೆ. ನಂತರ ಪಕ್ಷದಲ್ಲಿನ ಎಲ್ಲ ಗೊಂದಲಗಳಿಗೂ ಮುಕ್ತಿ ದೊರೆಯಲಿದೆ' ಎಂದು ಹೇಳಿದರು.

'ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದೇನೆ' ಎಂದು ಸುದ್ದಿಗಾರರಿಗೆ ತಿಳಿಸಿದ ಅವರು, 'ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಮಂಡಲ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರ ಆಯ್ಕೆ ವ್ಯವಸ್ಥಿತವಾಗಿ ಹಾಗೂ ವರಿಷ್ಠರ ಅಣತಿಯಂತೆಯೇ ನಡೆದಿದೆ' ಎಂದರು.

'ನನ್ನ ಕಾರ್ಯವೈಖರಿ ಬಗ್ಗೆ ಎಲ್ಲರಿಗೂ ಗೊತ್ತು. ಎಲ್ಲರ ಸಹಕಾರದೊಂದಿಗೆ ಅಧ್ಯಕ್ಷನಾಗಿ ಮುಂದುವರೆಯುವೆ. ಪಕ್ಷವನ್ನು ಮತ್ತೆ ಬಲಪಡಿಸುವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಐದು ಬಾರಿ ಬೇಕಾದರೂ ಅಧ್ಯಕ್ಷರಾಗಲಿ'

ಗದಗ: 'ಹೈಕಮಾಂಡ್‌ನ ಸೂಚನೆ ಇದ್ದರೆ ಪುನಃ ಬಿ.ವೈ.ವಿಜಯೇಂದ್ರ ಅವರೇ ರಾಜ್ಯಾಧ್ಯಕ್ಷರಾಗಲಿ. ಅವರು ಹೇಳಿದರೆ ಮಾತನಾಡುವವರು ಯಾರಿದ್ದಾರೆ? ಇನ್ನು ಐದು ಬಾರಿ ಬೇಕಾದರೂ ಅಧ್ಯಕ್ಷರಾಗಲಿ, ಯಾರು ಬೇಡ ಅನ್ನುತ್ತಾರೆ?' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವ್ಯಂಗ್ಯಭರಿತ ಧ್ವನಿಯಲ್ಲಿ ಕುಟುಕಿದರು.

'ಎರಡನೇ ಬಾರಿಗೂ ನಾನೇ ರಾಜ್ಯಾಧ್ಯಕ್ಷ ಆಗುತ್ತೇನೆ' ಎಂಬ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಸೋಮವಾರ ಅಸಮಾಧಾನದ ಧ್ವನಿಯಲ್ಲೇ ಸುದ್ದಿಗಾರರಿಗೆ ಉತ್ತರಿಸಿದರು.

'ಪಕ್ಷದ ವರಿಷ್ಠರು ಏನು ಹೇಳಿದರೂ ದೇಶ ಹಾಗೂ ರಾಜ್ಯದವರು ಕೇಳುತ್ತಾರೆ. ಇಂತಹ ಸಂದರ್ಭದಲ್ಲಿ ನಾವು ಮಾತನಾಡಿ ಏನಾಗುವುದಿದೆ? ರಾಷ್ಟ್ರೀಯ ನಾಯಕರು ಯಾರಿಗೆ ಮೂಗುದಾರ ಹಾಕಿ ಏನು ಗಟ್ಟಿ ಮಾಡಬೇಕೋ ಆ ಕೆಲಸ ಮಾಡುತ್ತಾರೆ' ಎಂದು ಹೇಳಿದರು.

'ಯಾರ್‍ಯಾರು ಏನೇನು ಆಗಬೇಕು ಎಂಬುದರ ಬಗ್ಗೆ ಈಗಾಗಲೇ ಚರ್ಚೆನಡೆಯುತ್ತಿವೆ. ಬೆಂಗಳೂರು ಕಡೆಗೆ ಹೋದರೆ ಅಶ್ವತ್ಥನಾರಾಯಣ್ ಅವರಿಗೆ ಪಾರ್ಟಿ ಅಧ್ಯಕ್ಷರಾಗಬೇಕು ಎಂಬ ಆಸೆ ಮನಸ್ಸಿನಲ್ಲಿ ಇರಬಹುದು. ವಿಜಯಪುರದಲ್ಲಿ ಯತ್ನಾಳ ಅವರಿಗೆ ಆಸೆ ಇರಬಹುದು. ಬೆಳಗಾವಿ ಭಾಗದಲ್ಲಿ ರಮೇಶ ಜಾರಕಿಹೊಳಿಗೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶ್ರೀರಾಮುಲು ಅಧ್ಯಕ್ಷರಾಗಬೇಕು ಎಂಬುದು ಕೂಡ ಇರಬಹುದು. ಆದರೆ, ಇದಕ್ಕೆಲ್ಲಾ ಸೂತ್ರ ಏನು? ನನ್ನ ಮನಸ್ಸಿನಲ್ಲಿ ಏನೇ ಇರಬಹುದು. ಆದರೆ, ಮೂಗುದಾರ ಅಂದರೆ ಹೈಕಮಾಂಡ್, ರಾಷ್ಟ್ರೀಯ ನಾಯಕರು' ಎಂದರು. 'ಮನಸ್ಸಿನಲ್ಲಿರುವ ಭಾವನೆಗಳನ್ನು ಹೇಳಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಎಲ್ಲೋ ಒಂದು ಕಡೆ ಸುಧಾಕರ್‌ಗೆ ನೋವಾಗಿತ್ತು ಅವರು ಹೇಳಿದ್ದಾರೆ. ರಮೇಶಣ್ಣ ಮತ್ತು ಯತ್ನಾಳ ಅವರು ಅನಿಸಿಕೆಗಳನ್ನು ಹೇಳಿಕೊಂಡಿದ್ದಾರೆ. ನನ್ನ ಅನಿಸಿಕೆ ಇದಕ್ಕೂ ಮುಂಚೆಯೇ ಹೇಳಿಕೊಂಡಿದ್ದೇನೆ. ಮುಂದೆ ಏನೂ ಹೇಳುವುದಿಲ್ಲ ಅಂತ ಹೇಳಿದ್ದೇನೆ' ಎಂದರು.

ಸುದ್ದಿ 2 ನಿಮಿಷ

ತರಳಬಾಳು ಹುಣ್ಣಿಮೆ ಮಹೋತ್ಸವ ಇಂದಿನಿಂದ

ಚಿತ್ರದುರ್ಗ: ಸಿರಿಗೆರೆಯ ತರಳಬಾಳು ಬೃಹನ್ಮಠದಿಂದ ಆಯೋಜಿಸಿರುವ 'ತರಳಬಾಳು ಹುಣ್ಣಿಮೆ' ಮಹೋತ್ಸವ ಫೆ.4ರಿಂದ 12ರವರೆಗೆ ತಾಲ್ಲೂಕಿನ ಭರಮಸಾಗರದಲ್ಲಿ ನಡೆಯಲಿದೆ.

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭಕ್ಕೆ 200 ಎಕರೆ ಪ್ರದೇಶದಲ್ಲಿ ನೂತನ ಮಹಾಮಂಟಪ, ಸಭಾವೇದಿಕೆ, ಪುಸ್ತಕ ಮಾರಾಟ ಮಳಿಗೆ, ಕೃಷಿ ಪ್ರದರ್ಶನ ಮಳಿಗೆ, ಕ್ರೀಡಾ ಅಂಕಣಗಳು ಹಾಗೂ ಕುಸ್ತಿ ಅಖಾಡ ಸಿದ್ಧಗೊಂಡಿದೆ.

9 ದಿನ ನಡೆಯುವ ಮಹೋತ್ಸವದಲ್ಲಿ ಮಠಾಧೀಶರು, ರಾಜಕಾರಣಿಗಳು ಪಾಲ್ಗೊಳ್ಳಲಿದ್ದಾರೆ. ಇದೇ ಮೊದಲ ಬಾರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

ಫೆ.4ರಂದು ಸಂಜೆ 4.30ಕ್ಕೆ ಭರಮಸಾಗರದ ಭರಮಣ್ಣ ನಾಯಕನ ಕೆರೆಯಲ್ಲಿ ತೆಪ್ಪೋತ್ಸವ ನಡೆಯಲಿದೆ. ಆ ಮೂಲಕ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ದೊರೆಯಲಿದೆ.

ಫೆ.12ರಂದು ಸಮಾರೋಪ ಸಮಾರಂಭ ನಿಗದಿಯಾಗಿದೆ. ಅಂದು ಶ್ರೀಗಳ ಬೆಳ್ಳಿಪಲ್ಲಕ್ಕಿ ಉತ್ಸವ, ಸದ್ಧರ್ಮ ಸಿಂಹಾಸನಾರೋಹಣ ಸಮಾರಂಭ ಜರುಗಲಿವೆ. ಉತ್ಸವದ ಅಂಗವಾಗಿ ಶ್ರೀಗಳು ಹುತಾತ್ಮ ವೀರಯೋಧರ ಕುಟುಂಬಗಳ ಸದಸ್ಯರಿಗೆ ತಲಾ ₹1 ಲಕ್ಷ ಆರ್ಥಿಕ ನೆರವು ನೀಡಲಿದ್ದಾರೆ.

2ನೇ ಗುಂಪಿಗೆ ಸೇರಿಸಲು ಮೊಗೇರರ ಆಗ್ರಹ

ಮಂಗಳೂರು: ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಕಲ್ಪಿಸುವಾಗ ಮೊಗೇರರನ್ನು ನಾಲ್ಕನೇ ಗುಂಪಿನ ಬದಲು ಎರಡನೇ ಗುಂಪಿನಲ್ಲಿ ಸೇರಿಸಬೇಕು ಎಂದು ರಾಜ್ಯ ಮೊಗೇರರ ಸಂಘವು ಒತ್ತಾಯಿಸಿದೆ.

ಇಲ್ಲಿ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಸಂಘದ ಅಧ್ಯಕ್ಷ ನಂದರಾಜ್ ಸಂಕೇಶ್, 'ಮೊಗೇರ ಜಾತಿಯು ದಕ್ಷಿಣ ಕನ್ನಡ– ಉಡುಪಿ ಜಿಲ್ಲೆಗಳಲ್ಲಿನ ಹೊಲೆಯ ಸಮುದಾಯದ ಉಪ ವಿಭಾಗ. ಪರಿಶಿಷ್ಟ ಜಾತಿಯ 101 ಜಾತಿಗಳಲ್ಲೇ ಅತೀ ಕೆಳಮಟ್ಟದಲ್ಲಿದೆ' ಎಂದರು.

'2011ರ ಜನಗಣತಿ ಪ್ರಕಾರ ರಾಜ್ಯದಾದ್ಯಂತ ಮೊಗೇರರ ಸಂಖ್ಯೆ 82,807. ಅದು ಈಗ 1.5 ಲಕ್ಷ ದಾಟಿದೆ. ಒಳಮೀಸಲಾತಿ ಕುರಿತು ಮಾಧುಸ್ವಾಮಿ ನೇತೃತ್ವದ ಸಮಿತಿ ರಚಿಸಿದ್ದ ಕರಡಿನಲ್ಲಿ ಅಲೆಮಾರಿ ಸಮುದಾಯಗಳನ್ನು ಒಳಗೊಂಡ ನಾಲ್ಕನೇ ಗುಂಪಿನಲ್ಲಿ ಮೊಗೇರರನ್ನು ತಪ್ಪಾಗಿ ಸೇರಿಸಲಾಗಿದೆ. ನಾವು ಅಲೆಮಾರಿಗಳಲ್ಲ. ಮೀಸಲಾತಿಯಲ್ಲಿ ಶೇ 1ರಷ್ಟು ಪಾಲನ್ನು ಮಾತ್ರ ಹೊಂದಿರುವ ನಾಲ್ಕನೇ ಗುಂಪಿನಲ್ಲಿ 89 ಜಾತಿಗಳಿವೆ. 1.5 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಮೊಗೇರರಿಗೆ ಇದರಿಂದ ಅನ್ಯಾಯ ಆಗುತ್ತದೆ. ಹಾಗಾಗಿ ಶೇ 5.5ರಷ್ಟು ಮೀಸಲಾತಿ ಸೌಲಭ್ಯ ಇರುವ ಎರಡನೇ ಗುಂಪಿಗೆ ಸೇರಿಸಬೇಕು' ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ವಿರುದ್ಧ ಮತ್ತೊಂದು ದೂರು

ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿಗೆ ಸ್ನೇಹಮಯಿ ಕೃಷ್ಣ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಟುಂಬದವರ ಹೆಸರಿನಲ್ಲಿ ಬೇನಾಮಿಯಾಗಿ ಅಕ್ರಮ ಭೂವ್ಯವಹಾರ ಮಾಡಿದ್ದು, ಅವರ ವಿರುದ್ಧ ತನಿಖೆ ಕೈಗೊಳ್ಳಬೇಕು' ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸೋಮವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಗೆ ದೂರು ಸಲ್ಲಿಸಿದರು.

ಸಿದ್ದರಾಮಯ್ಯ

'ಮೈಸೂರು ತಾಲ್ಲೂಕಿನ ಆಲನಹಳ್ಳಿ ಗ್ರಾಮದ ಸರ್ವೆ ನಂ 113/4ರಲ್ಲಿ 1 ಎಕರೆ ಭೂಮಿಯನ್ನು ಸಿದ್ದರಾಮಯ್ಯ ಅವರ ಬಾಮೈದ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಅವರು 1983ರ ಡಿ.15ರಂದು ಆಲನಹಳ್ಳಿಯ ಹನುಮೇಗೌಡ, ಹನುಮಯ್ಯ, ಕರಿಯಪ್ಪ ಹಾಗೂ ಕೆಂಪಮ್ಮ ಎಂಬುವರಿಂದ ಖರೀದಿಸಿದ್ದರು. 1996ರಲ್ಲಿ ಇದೇ ಜಮೀನನ್ನು ಮುಡಾ ಭೂಸ್ವಾಧೀನಪಡಿಸಿಕೊಂಡು ಅಂತಿಮ ಅಧಿಸೂಚನೆ ಹೊರಡಿಸಿತ್ತು. ಆದರೆ, 2006ರಲ್ಲಿ ಈ ಜಮೀನಿಗೆ ಮಲ್ಲಿಕಾರ್ಜುನ ಸ್ವಾಮಿ ಹೆಸರಿನಲ್ಲಿ 'ಅನ್ಯಕ್ರಾಂತ' ಆದೇಶ ಹೊರಡಿಸಲಾಗಿದೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

'ಅದೇ ಭೂಮಿಯನ್ನು ಅವರು 2010 ಅ.20ರಂದು ಸಹೋದರಿ, ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ದಾನಪತ್ರವಾಗಿ ನೋಂದಣಿ ಮಾಡಿದ್ದಾರೆ. 2010ರ ನ.11ರಂದು ಪಾರ್ವತಿ ಅವರು ಪುತ್ರ ಯತೀಂದ್ರಗೆ ದಾನವಾಗಿ ಕೊಟ್ಟಿದ್ದಾರೆ. 2011ರ ಮಾರ್ಚ್ 23ರಂದು ಯತೀಂದ್ರ ಬೇರೊಬ್ಬರಿಗೆ ಭೂಮಿಯನ್ನು ಮಾರಾಟ ಮಾಡಿದ್ದಾರೆ. ಆದರೆ, ಈಗಲೂ ಆರ್‌ಟಿಸಿಯಲ್ಲಿ ಮಲ್ಲಿಕಾರ್ಜುನ ಸ್ವಾಮಿ ಹೆಸರಿನಲ್ಲೇ ಇದ್ದು, ಕೃಷಿ ಭೂಮಿ ಎಂದು ಮುಂದುವರಿದಿದೆ' ಎಂದು ತಿಳಿಸಿದ್ದಾರೆ.

'1996ರಲ್ಲೇ ಅಂತಿಮ ಅಧಿಸೂಚನೆ ಹೊರಡಿಸಿದ್ದರೂ ಯಾವ ಕಾರಣದಿಂದ ಈ ಜಮೀನನ್ನು ಭೂಸ್ವಾಧೀನದಿಂದ ಕೈಬಿಡಲಾಯಿತು, ಇದಕ್ಕೆ ಪ್ರಭಾವ ಬೀರಿದ್ದು ಯಾರು? ಕೆಸರೆ ಗ್ರಾಮದ ಜಮೀನಿನ ದಾನಪತ್ರದ ಕುರಿತು ಹೇಳುವಾಗ ಈ ವಿಚಾರವನ್ನು ಮುಚ್ಚಿಟ್ಟಿದ್ದು ಏಕೆ? ಮಲ್ಲಿಕಾರ್ಜುನ ಸ್ವಾಮಿ ಅವರು ಈವರೆಗೆ ಈ ರೀತಿ ಎಷ್ಟು ಜಮೀನನ್ನು ಖರೀದಿಸಿ ಪಾರ್ವತಿ ಅವರ ಹೆಸರಿಗೆ ವರ್ಗಾಯಿಸಿದ್ದಾರೆ ಎಂಬ ಅಂಶಗಳ ಕುರಿತು ತನಿಖೆ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಸ್ನೇಹಮಯಿ ಕೃಷ್ಣ, 'ಪಾರ್ವತಿ ಅವರಿಗೆ ತವರು ಮನೆಯಿಂದ ದಾನವಾಗಿ ಜಮೀನು ನೀಡಬೇಕಿದ್ದರೆ ಈಗಿನ ಕಾನೂನಿನ ಪ್ರಕಾರ 'ವಿಭಾಗ ಪತ್ರ'ದ ರೂಪದಲ್ಲಿ ಕೊಡಬೇಕಿತ್ತು ಅಥವಾ ಒಂದೇ ದಾನಪತ್ರದಲ್ಲಿ ಎಲ್ಲವನ್ನೂ ಉಲ್ಲೇಖಿಸಬೇಕಿತ್ತು. ಆದರೆ, ಕೇವಲ ಮಲ್ಲಿಕಾರ್ಜುನ ಸ್ವಾಮಿ ಹೆಸರಿನಲ್ಲಿ ಖರೀದಿ ಆಗಿರುವ ಆಸ್ತಿಗಳನ್ನು ಪಾರ್ವತಿ ಹೆಸರಿಗೆ ವರ್ಗಾವಣೆ ಮಾಡಿರುವುದು ಅನುಮಾನಗಳಿಗೆ ಕಾರಣವಾಗಿದೆ. ಸಿದ್ದರಾಮಯ್ಯ ಅವರು ಪ್ರಭಾವ ಬಳಸಿಕೊಂಡು ಅಕ್ರಮ ಭೂವ್ಯವಹಾರ ನಡೆಸಿದ್ದಾರೆ' ಎಂದು ಆರೋಪಿಸಿದರು.

'ಸರ್ಕಾರಿ ಜಮೀನು ಒತ್ತುವರಿ; ಕ್ರಿಮಿನಲ್ ಪ್ರಕರಣ ದಾಖಲಿಸಿ'

ಎಸ್‌.ಆರ್. ಹಿರೇಮಠ

ಹುಬ್ಬಳ್ಳಿ: 'ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿ ಬಳಿ ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪ ಎದುರಿಸುತ್ತಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಅವರ ಸಂಬಂಧಿಕರು ಮತ್ತು ಅದರಲ್ಲಿ ಶಾಮೀಲಾಗಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಸಮಾಜ ಪರಿವರ್ತನ ಸಮುದಾಯದ ಮುಖ್ಯಸ್ಥ ಎಸ್.ಆರ್.ಹಿರೇಮಠ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಪ್ರಕರಣದ ತನಿಖೆಗೆ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವುದು ಸ್ವಾಗತಾರ್ಹ. ಇದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲು ತಂಡಕ್ಕೆ ಅಗತ್ಯ ದಾಖಲೆ, ಸಹಕಾರ ನೀಡಲಾಗುವುದು' ಎಂದು ಹೇಳಿದರು.

'ಪ್ರಕರಣದ ಕುರಿತು ತನಿಖೆ ನಡೆಸಿ, ವರದಿ ನೀಡಲು ಸರ್ಕಾರ ಮೂರು ತಿಂಗಳ ಕಾಲಾವಕಾಶ ಕೋರಿತ್ತು. ಆದರೆ, ನ್ಯಾಯಾಲಯ ತ್ವರಿತವಾಗಿ ತನಿಖೆ ಪೂರ್ಣಗೊಳಿಸಿ ವರದಿ ನೀಡುವಂತೆ ಸೂಚಿಸಿದೆ. ಇದು ನಮ್ಮ ಹತ್ತು ವರ್ಷಗಳ ಹೋರಾಟದ ಫಲ' ಎಂದರು.

'ಪ್ರಭಾವಿಗಳು ಈ ಪ್ರಕರಣದಲ್ಲಿ ಇದ್ದು, ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ಶೀಘ್ರ ತನಿಖೆ ಮುಗಿಸಿ ಒತ್ತುವರಿಯಾಗಿರುವ ಜಮೀನನ್ನು ಸರ್ಕಾರ ವಾಪಸ್ ತನ್ನ ಸುಪರ್ದಿಗೆ ಪಡೆಯಬೇಕು' ಎಂದು ಆಗ್ರಹಿಸಿದರು.

ಸ್ನೇಹಿತನ ಮೇಲೆ ಪೆಟ್ರೋಲ್ ಸುರಿದು ಬೆಂಕಿ: ಕೊಲೆ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಕುಂಬಾರಹಳ್ಳ ಗ್ರಾಮದಲ್ಲಿ ಹಣದ ವ್ಯವಹಾರಕ್ಕೆ ಸಂಬಂಧಿಸಿ ನಡೆದ ಜಗಳದಲ್ಲಿ ಆರೋಪಿ ಹನಗಂಡಿ ಗ್ರಾಮದ ಮಹನಿಂಗ ಶಿದರಾಯ ಬಿದರಿ ತನ್ನ ಸ್ನೇಹಿತ ಅಥಣಿ ತಾಲ್ಲೂಕಿನ ಜನವಾಡ ಗ್ರಾಮದ ಬಸಪ್ಪ ತಳವಾರ (33) ಎಂಬುವವರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಸೋಮವಾರ ಕೊಲೆ ಮಾಡಿದ್ದಾರೆ.

'ಕುಂಬಾರಹಳ್ಳ ಗ್ರಾಮದ ಮಾದೇವ ಹಿರೇಕುರಬರ ಎಂಬುವವರ ಮನೆಯಲ್ಲಿ ಇಬ್ಬರೂ ಸೇರಿ ಬಾಡಿಗೆ ಮನೆ ಮಾಡಿಕೊಂಡಿದ್ದರು. ಮದ್ಯ ಸೇವಿಸಿ ಹಣದ ವಿಚಾರಕ್ಕೆ ಸಂಬಂಧಿಸಿ ಜಗಳ ಮಾಡಿಕೊಂಡಿದ್ದರು. ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ದಲೈಲಾಮಾ ಆರೋಗ್ಯ ವಿಚಾರಿಸಿದ ಸಚಿವ

ಪ್ರಜಾವಾಣಿ ವಾರ್ತೆ

ಮೈಸೂರು: ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೈಲುಕುಪ್ಪೆಯ ಟಿಬೆಟನ್ ಕ್ಯಾಂಪ್‌ನಲ್ಲಿ ತಂಗಿರುವ 14ನೇ ಧರ್ಮಗುರು ದಲೈಲಾಮಾ ಅವರನ್ನು ಸೋಮವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಸಾಮಾಜಿಕ ಶಾಂತಿಯ ಜೊತೆಗೆ ಬುದ್ಧನ ತತ್ವಗಳನ್ನು ಪಸರಿಸುವ ಕೆಲಸ ಮಾಡುತ್ತಿರುವ ಅವರ ಕಾರ್ಯ ಮತ್ತು ವಿಚಾರಗಳ ಬಗ್ಗೆ ಕೆಲ ಹೊತ್ತು ಮಾತುಕತೆ ನಡೆಸಿದರು. ಅವರ ಬೇಡಿಕೆಗಳನ್ನು ಆಲಿಸಿ ಆತಿಥ್ಯ ಸ್ವೀಕರಿಸಿದರು. ಅಲ್ಲಿನ ಬೌದ್ಧ ಮಂದಿರವನ್ನು ವೀಕ್ಷಿಸಿದರು.

'6ನೇ ಗ್ಯಾರಂಟಿಗೆ ಪಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ 'ಆರನೇ ಗ್ಯಾರಂಟಿ' ಜಾರಿ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ನಡೆದಿದ್ದ ಚುನಾವಣೆ ಪ್ರಚಾರದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಆರನೇ ಗ್ಯಾರಂಟಿ (ಅಂಗನವಾಡಿ ಕಾರ್ಯಕರ್ತೆಯರಿಗೆ ತಿಂಗಳಿಗೆ ₹15 ಸಾವಿರ, ಸಹಾಯಕಿಯರಿಗೆ ₹10 ಸಾವಿರ) ಘೋಷಣೆ ಮಾಡಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಸಮೀಪಿಸಿದೆ. ಇನ್ನೂ ಯೋಜನೆ ಜಾರಿಗೆ ಬಂದಿಲ್ಲ. ತಕ್ಷಣವೇ ಯೋಜನೆ ಜಾರಿಗೊಳಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'2022ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಂತೆ ನಿವೃತ್ತರಾದ ಎಲ್ಲ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರ್ಯಾಚ್ಯುಟಿ ಸೌಲಭ್ಯ ನೀಡಬೇಕು' ಎಂದು ಒತ್ತಾಯಿಸಿದರು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸೇವೆಯನ್ನು 'ನಾಗರಿಕ ಸೇವೆ'ಗೆ ಸಮಾನವಾಗಿ ಪರಿಗಣಿಸಬೇಕು ಎಂದು ಗುಜರಾತ್ ಹೈಕೋರ್ಟ್ ಇತ್ತೀಚೆಗೆ ನಿರ್ದೇಶನ ನೀಡಿದೆ. ರಾಜ್ಯದಲ್ಲೂ 'ಸಿ' ಮತ್ತು 'ಡಿ' ದರ್ಜೆ ನೌಕರರ ಸ್ಥಾನಮಾನ ನೀಡುವ ಮೂಲಕ ಕಾಯಂ ಮಾಡಬೇಕು ಎಂದು ಆಗ್ರಹಿಸಿದರು.

ಎಐಟಿಯುಸಿ ರಾಜ್ಯ ಅಧ್ಯಕ್ಷ ಬಿ.ಅಮ್ಜದ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಜಯಮ್ಮ ವಹಿಸಿದ್ದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಭೇಟಿ ನೀಡಿ ಪ್ರತಿಭಟನಕಾರರ ಮನವಿ ಸ್ವೀಕರಿಸಿದರು. ನಂತರ ಪ್ರತಿಭಟನೆ ಕೈಬಿಡಲಾಯಿತು.

ಸಚಿವೆ ಲಕ್ಷ್ಮಿ ಭರವಸೆ: ಪ್ರತಿಭಟನೆ ಮುಂದೂಡಿಕೆ

ಇದೇ ಸ್ಥಳದಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಭರವಸೆ ಮೇರೆಗೆ ಪ್ರತಿಭಟನೆ ಮುಂದೂಡಿದೆ.

'ಸಚಿವರು ಕರೆ ಮಾಡಿ ಮಾತುಕತೆ ನಡೆಸಿದರು. ಅಪಘಾತದಲ್ಲಿ ಗಾಯಗೊಂಡು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಕಾರಣ ಪ್ರತಿಭಟನಾ ಸ್ಥಳಕ್ಕೆ ಬರಲು ಸಾಧ್ಯವಾಗಿಲ್ಲ ಎಂದು ಸಚಿವರು ಮನವಿ ಮಾಡಿಕೊಂಡರು. ಬಜೆಟ್‌ನಲ್ಲಿ ನ್ಯಾಯ ಕಲ್ಪಿಸುವ ಭರವಸೆ ನೀಡಿದ್ದಾರೆ. ಮಾನವೀಯತೆ ದೃಷ್ಟಿಯಿಂದ ಭಾನುವಾರ ರಾತ್ರಿಯೇ ಪ್ರತಿಭಟನೆ ಸ್ಥಗಿತಗೊಳಿಸಿ, ಕೆಲಸಕ್ಕೆ ಮರಳಿದ್ದೇವೆ' ಎಂದು ಅಧ್ಯಕ್ಷೆ ಬಿ.ಪ್ರೇಮಾ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಸೋಮವಾರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಲೈಂಗಿಕ ದೌರ್ಜನ್ಯ ಚನ್ನಗಿರಿ ಬಂದ್

ಪ್ರಜಾವಾಣಿ ವಾರ್ತೆ

ಚನ್ನಗಿರಿ (ದಾವಣಗೆರೆ): ಬಾಲಕಿಯರು ಸೇರಿ ಹಲವು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದಲ್ಲದೇ ಆ ದೃಶ್ಯಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಪ್ರಕರಣದ ಆರೋಪಿ ಅಮ್ಜದ್‌ನ ಕೃತ್ಯ ಖಂಡಿಸಿ ಸೋಮವಾರ ಕರೆನೀಡಿದ್ದ ಚನ್ನಗಿರಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಬಾಗಿಲು ಮುಚ್ಚಿದ್ದ ಅಂಗಡಿಗಳು

ಸಂಘ ಪರಿವಾರ, ಕನ್ನಡಪರ, ದಲಿತ ಹಾಗೂ ರೈತ ಸಂಘಟನೆಗಳು ಒಗ್ಗೂಡಿ ಕರೆನೀಡಿದ್ದ ಬಂದ್‌ಗೆ ಪಟ್ಟಣದ ಜನರು ಸ್ಪಂದಿಸಿದರು. ಸ್ವಯಂ ಪ್ರೇರಿತವಾಗಿ ಅಂಗಡಿಗಳ ಬಾಗಿಲು ಮುಚ್ಚಿ ಸಹಕರಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ- ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಸರ್ಕಾರಿ ಕಚೇರಿಗಳು ಮಾತ್ರ ಬಾಗಿಲು ತೆರೆದಿದ್ದವು. ಬಸ್ ಸಂಚಾರಕ್ಕೆ ತೊಂದರೆ ಆಗಲಿಲ್ಲ.

ವಿವಿಧ ಸಂಘಟನೆಗಳ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಆರೋಪಿಯ ಭಾವಚಿತ್ರ, ಪ್ರತಿಕೃತಿಗಳನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ವಕೀಲರು ನ್ಯಾಯಾಲಯದ ಕಲಾಪದಿಂದ ಹೊರಗುಳಿದರು. ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು, ತ್ವರಿತ ವಿಚಾರಣೆ ನಡೆಸಿ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

ಜೈಪುರ ಸಾಹಿತ್ಯ ಉತ್ಸವದ 18ನೇ ಆವೃತ್ತಿ ಸಂಪನ್ನ: ರಾಜಕೀಯ ದೂರ; ಪುಸ್ತಕ ಪ್ರೀತಿ ಅಪಾರ

ಸಾಹಿತ್ಯದ 'ವಸಂತ'ದಲ್ಲಿ ಬಹುತ್ವದ ಘಮ

ವಿಕ್ರಂ ಕಾಂತಿಕೆರೆ

ಜೈಪುರ: ಸಾಹಿತ್ಯ–ಚಿಂತನೆಯ ನೆಪದಲ್ಲಿ ಜಗತ್ತಿನ ವಿದ್ಯಮಾನಗಳ ಚರ್ಚೆಗೆ ವೇದಿಕೆಯಾಗುವ ಜೈಪುರ ಸಾಹಿತ್ಯ ಉತ್ಸವದ 18ನೇ ಆವೃತ್ತಿ, ಯುದ್ಧ ಮತ್ತು ತಟಸ್ಥ ನಿಲುವಿನ ಪರ-ವಿರುದ್ಧ ವಿಷಯ ಮಂಡನೆ ಮೂಲಕ ಸೋಮವಾರ ಸಂಪನ್ನಗೊಂಡಿತು.

ಜವಾಹರಲಾಲ್ ನೆಹರೂ ರಸ್ತೆಯ ಕ್ಲಾರ್ಕ್ಸ್ ಆಮೇರ್ ಹೋಟೆಲ್‌ನಲ್ಲಿ ಐದು ದಿನ ಚಿಂತಕರು ಮತ್ತು ಬರಹಗಾರರ ವಿಚಾರಧಾರೆ ಹರಿದ, ಮಾಹಿತಿ ವಿನಿಮಯಕ್ಕೆ ಹೊಸ ವೇದಿಕೆಗಳನ್ನು ಕಲ್ಪಿಸಿದ ಉತ್ಸವ ರಾಜಕಾರಣಿಗಳಿಂದಲೂ ವಿವಾದಗಳಿಂದಲೂ ದೂರ ಉಳಿಯಿತು.

ಪ್ರದೇಶ, ಲಿಂಗ, ಭಾಷೆ, ವರ್ಣ ಬೇರೆ ಬೇರೆಯಾಗಿದ್ದರೂ ಜ್ಞಾನದಾಹದ ಒಂದೇ ಗುರಿಯೊಂದಿಗೆ ಬಂದಿದ್ದ ವಿದೇಶದ ಬರಹಗಾರರು ಮತ್ತು ಪ್ರತಿನಿಧಿಗಳನ್ನು ಒಳಗೊಂಡು ಸಾಹಿತ್ಯ ಉತ್ಸವ ಪ್ರತಿದಿನವೂ ಜನಜಾತ್ರೆ ಆಗಿತ್ತು. ಪುಸ್ತಕ ಮೇಳದಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ಕಾಲಿಡಲು ಜಾಗವಿಲ್ಲದ ಸ್ಥಿತಿ, ನಾಲ್ಕು ಬಿಲ್ಲಿಂಗ್ ಕೌಂಟರ್‌ಗಳಲ್ಲಿ ಸ್ವಯಂ ಸೇವಕರಿಗೆ ಪ್ರತಿನಿಮಿಷವೂ ಬಿಡುವು ಇಲ್ಲದ ಕೆಲಸ.

ಅಮೆರಿಕದಲ್ಲಿ ಭಾರತದ ಪ್ರತಿಭೆ ಕುರಿತ ಗೋಷ್ಠಿಯಲ್ಲಿ ಎರಿಕ್ ಗಾರ್ಸೆಟಿ ಮತ್ತು ಮೀನಾಕ್ಷಿ ನರುಲಾ ಮಾತುಕತೆ ನಡೆಸಿದರು

ಸಂಗೀತ, ಸಾಹಿತ್ಯ, ಸಿನಿಮಾ, ರಂಗಭೂಮಿ, ಕ್ರೀಡೆ, ವಿಜ್ಞಾನ, ಪರಿಸರ, ಯುದ್ಧ ಮುಂತಾದ 90ಕ್ಕೂ ಹೆಚ್ಚು ವಿಷಯಗಳ ಚರ್ಚೆಗೆ ಸಾಕ್ಷಿಯಾದ ಉತ್ಸವ ಪುಸ್ತಕ ಪ್ರಕಾಶಕರು ಮತ್ತು ಬರಹಗಾರರ ಮುಖಾಮುಖಿ ಮತ್ತು ಒಪ್ಪಂದಗಳಿಗೆ ಸಹಿ ಮಾಡುವ ತಾಣವೂ ಆಯಿತು. 'ಬಸಂತ್' ಮಾಸದ ಸಂಭ್ರಮದಲ್ಲಿರುವ ಜೈಪುರದಲ್ಲಿ ಉತ್ಸವದ ಕೊನೆಯ ದಿನ ಆರಂಭಗೊಂಡದ್ದು ಹಿಂದುಸ್ತಾನಿ ಸಂಗೀತದೊಂದಿಗೆ. ದಿನದ ಗೋಷ್ಠಿಗಳು ಬದುಕು, ಕಲೆ, ಅಜಂತಾ ಗುಹೆಗಳ ಕೌತುಕ, ಅಮೆರಿಕದಲ್ಲಿ ಭಾರತೀಯರ ಪ್ರತಿಭೆ, ರಾಜಾಡಳಿತ ಮೊದಲಾದ ಪುಸ್ತಕಗಳ ಕುರಿತ ಚರ್ಚೆಗೆ ವೇದಿಕೆಯಾದವು.

'ಬೈಠಕ್'ನಲ್ಲಿ ನಡೆದ 'ಅಮೆರಿಕದಲ್ಲಿ ಭಾರತದ ಪ್ರತಿಭೆಗಳು' ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಲೇಖಕಿ ಮೀನಾಕ್ಷಿ ನರುಲಾ ಅಹಮ್ಮದ್, ಉತ್ಸಾಹ ಮತ್ತು ಬದ್ಧತೆ ಇಲ್ಲದೆ ಯಾವುದೂ ಸಾಧ್ಯವಿಲ್ಲ. ಅಮೆರಿಕದಲ್ಲಿ ಹೆಸರು ಮಾಡಿರುವ ಭಾರತೀಯರೆಲ್ಲರೂ ಉತ್ಸಾಹಿಗಳು ಎಂದರು.

ಗುಹಾಚಿತ್ರಗಳ ಸೊಬಗಿನ ಬಣ್ಣನೆ: ಅಜಂತಾ ಗುಹೆಗಳಲ್ಲಿರುವ ಪ್ರಾಚೀನ ಬೌದ್ಧ ಕಲೆಯ ಕುರಿತು 'ದರ್ಬಾರ್ ಹಾಲ್'ನಲ್ಲಿ ನಡೆದ ಸಂವಾದದಲ್ಲಿ ಗುಹಾಚಿತ್ರಗಳ ಸೊಬಗನ್ನು ಕಲಾ ಇತಿಹಾಸಕಾರ ಬಿನೋಯ್ ಕೆ ಬೆಹ್ಲ್ ಬಣ್ಣಿಸಿದರು.

ತಾವೇ ಸೆರೆಹಿಡಿದಿರುವ ಚಿತ್ರಗಳನ್ನು ಪ್ರದರ್ಶಿಸಿ ವಿವರಣೆ ನೀಡಿದ ಅವರು, ಆಧುನಿಕ ಕಲೆಯ ತಂತ್ರಗಳು ಅಜಂತಾ ಗುಹೆಗಳ ಪೇಂಟಿಂಗ್‌ಗಳಲ್ಲಿ ವ್ಯಕ್ತವಾಗಿದ್ದು ಬೌದ್ಧ ತತ್ವಗಳೆಲ್ಲವೂ ಅದರಲ್ಲಿ ಪಡಿಮೂಡಿವೆ ಎಂದರು.

'ಅಳುವ ಅವಕಾಶ ಕೈಚೆಲ್ಲುವುದಿಲ್ಲ'

ಮಾನವ್ ಕೌಲ್

'ಅಳು ಕೂಡ ನಗುವಿನಷ್ಟೇ ಸುಂದರ. ಹೀಗಾಗಿ ಅಳುವುದಕ್ಕೆ ಸಿಗುವ ಯಾವ ಅವಕಾಶವನ್ನೂ ನಾನು ಕೈಚೆಲ್ಲುವುದಿಲ್ಲ..'

ಬರಹಗಾರ, ನಟ, ರಂಗಕರ್ಮಿ ಮಾನವ್ ಕೌಲ್ ಆಡಿದ ಈ ಮಾತು ಸಭಿಕರನ್ನು ಭಾವುಕರನ್ನಾಗಿಸಿತು.

'ಫ್ರಂಟ್ ಲಾನ್'ನಲ್ಲಿ ನಡೆದ ಗೋಷ್ಠಿಯಲ್ಲಿ ಮಾತನಾಡಿದ ಅವರು 'ಸ್ಪೇನ್‌ಗೆ ತೆರಳಿದ್ದಾಗ ಸಣ್ಣ ಕೊಠಡಿಯಲ್ಲಿ ನಡೆಯುವ ಭಾವುಕವಾದ ನೃತ್ಯವೊಂದನ್ನು ನೋಡಿ ಅತ್ತುಬಿಟ್ಟೆ' ಎಂದರು.

ಮಾನವ ಸಂಬಂಧಗಳಲ್ಲಿ ಲೈಂಗಿಕತೆಗೆ ಮಹತ್ವವಿದೆ. ದೈಹಿಕ ಸಂಬಂಧದಲ್ಲಿ ಮಾನಸಿಕ ಸಂಬಂಧವನ್ನು ಪರಿಪೂರ್ಣವಾಗಿ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅದು ವೈಯಕ್ತಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಹಿಟ್ಲರ್‌ನ ವೈಯಕ್ತಿಕ ಸಂಬಂಧಗಳು ಹದಗೆಟ್ಟಿದ್ದವು. ಅದು ಆತನ ವರ್ತನೆಯಲ್ಲೂ ಪ್ರತಿಫಲನಗೊಳ್ಳುತ್ತಿತ್ತು ಎಂದು ಮಾನವ್ ಅಭಿಪ್ರಾಯಪಟ್ಟರು.

ಅರಿವಳಿಕೆ ಚುಚ್ಚುಮದ್ದು: ಆರು ತಿಂಗಳ ಮಗು ಸಾವು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬೊಮ್ಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಿಗದಿಗಿಂತ ಹೆಚ್ಚಿನ ಪ್ರಮಾಣದ ಅರಿವಳಿಕೆ (ಅನಸ್ತೇಷಿಯಾ) ಮದ್ದು ನೀಡಿದ ಪರಿಣಾಮ 6 ತಿಂಗಳ ಗಂಡು ಮಗು ಮೃತಪಟ್ಟಿರುವ ಆರೋಪ ಕೇಳಿಬಂದಿದೆ.

ತಾಲ್ಲೂಕಿನ ಹಂಗಳ ಗ್ರಾಮದ ಆನಂದ್-ಶುಭ ದಂಪತಿ ಪುತ್ರನ ಕಿವಿ ಚುಚ್ಚಿಸಲು ಬೊಮ್ಮಲಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದಿದ್ದರು. ಅಲ್ಲಿನ ವೈದ್ಯ ನಾಗರಾಜ್ ಮಗುವಿನ ಎರಡೂ ಕಿವಿಗಳಿಗೆ ಅರಿವಳಿಕೆ ಚುಚ್ಚುಮದ್ದು ನೀಡಿದ್ದು ಮಗು ಪ್ರಜ್ಞಾಹೀನ ಸ್ಥಿತಿಗೆ ತಲುಪಿದೆ. ಹೆಚ್ಚಿನ ಚಿಕಿತ್ಸೆಗೆ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮಗು ಮೃತಪಟ್ಟಿದೆ. 'ಮಗುವಿನ ಸಾವಿಗೆ ಅರಿವಳಿಕೆ ಚುಚ್ಚುಮದ್ದು ನೀಡಿದ ವೈದ್ಯರು ಕಾರಣ' ಎಂದು ಪೋಷಕರು ದೂರಿದ್ದಾರೆ.

'ಆ ವೈದ್ಯರನ್ನು ತಕ್ಷಣ ಸೇವೆಯಿಂದ ವಜಾಗೊಳಿಸಬೇಕು. ಮಗುವಿನ ಸಾವಿಗೆ ಸೂಕ್ತ ಪರಿಹಾರ ನೀಡಬೇಕು' ಎಂದು ಮಗುವಿನ ಸಂಬಂಧಿಗಳು ಒತ್ತಾಯಿಸಿದ್ದಾರೆ.

ಪ್ರತಿಕ್ರಿಯೆ: 'ಕಿವಿ ಚುಚ್ಚುವ ವೇಳೆ ನೋವಾಗಬಾರದು ಎಂದು ವೈದ್ಯರು ಅನಸ್ತೇಷಿಯಾ ಕೊಟ್ಟಿದ್ದಾರೆ. ನಂತರ ಮಗುವಿಗೆ ಫಿಟ್ಸ್ ಲಕ್ಷಣಗಳು ಕಾಣಿಸಿಕೊಂಡು ಅಸುನೀಗಿದೆ. ಮಗುವಿನ ಮರಣೋತ್ತರ ಪರೀಕ್ಷೆಯ ನಂತರ ಸಾವಿಗೆ ಸೂಕ್ತ ಕಾರಣ ತಿಳಿಯಲಿದ್ದು, ವೈದ್ಯರ ನಿರ್ಲಕ್ಷ್ಯ ದೃಢಪಟ್ಟರೆ ಕ್ರಮಕ್ಕೆ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು' ಎಂದು ಟಿಎಚ್‌ಒ ಡಾ.ಅಲೀಂ ಪಾಷಾ ಪ್ರತಿಕ್ರಿಯಿಸಿದರು.

ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಸಾಲಗಾರರಿಗೆ ಕಿರುಕುಳ ತಪ್ಪಿಸಲು ಪೊಲೀಸರಿಗೆ ಹೆಚ್ಚಿನ ಅಧಿಕಾರ

ಡಿಸಿಗಳ ಜತೆ ಸಿ.ಎಂ ಶೀಘ್ರ ಸಭೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಸಾಲಗಾರರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಲು ಸರ್ಕಾರ ಸುಗ್ರೀವಾಜ್ಞೆ ರೂಪಿಸಿದ್ದು, ಈ ಕುರಿತಂತೆ ಸದ್ಯದಲ್ಲೇ ಪೊಲೀಸ್ ಆಯುಕ್ತರು ಮತ್ತು ಅಧಿಕಾರಿಗಳ ಜತೆ ಮುಖ್ಯಮಂತ್ರಿ ಸಭೆ ನಡೆಸಲಿದ್ದಾರೆ. ನಂತರ ಜಿಲ್ಲಾಧಿಕಾರಿಗಳ ಜತೆ ಪ್ರತ್ಯೇಕ ಸಭೆ ನಡೆಸಲಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರೌಡಿಗಳನ್ನು ಬಳಸಿ ಬೆದರಿಸಿ, ಕಾನೂನು ಕೈಗೆ ತೆಗೆದುಕೊಂಡು, ದಬ್ಬಾಳಿಕೆ ನಡೆಸಿ ಸಾಲ ವಸೂಲಿಗೆ ಅವಕಾಶ ನೀಡುವುದಿಲ್ಲ. ಇದನ್ನು ನಿಯಂತ್ರಿಸಲು ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಲಾಗುವುದು' ಎಂದು ತಿಳಿಸಿದರು.

'ಸಾಲಗಾರರಿಗೆ ಕಿರುಕುಳ ನೀಡಿದ ಪ್ರಕರಣಗಳಲ್ಲಿ ಬೆಳಗಾವಿ, ಬೀದರ್, ಮೈಸೂರು, ರಾಮನಗರ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಈಗಾಗಲೇ ಎಫ್ಐಆರ್ ದಾಖಲಾಗಿದೆ. ಇಂತಹ ಪ್ರಕರಣಗಳಲ್ಲಿ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಹಾಗೂ ಸಹಕಾರ ಸಚಿವರು ಸೂಚಿಸಿದ್ದಾರೆ. ದೂರು ನೀಡಲು ಪ್ರತಿ ಜಿಲ್ಲಾ ಕಚೇರಿಯಲ್ಲಿ ಸಹಾಯವಾಣಿ ಆರಂಭಿಸಲಾಗಿದೆ' ಎಂದರು.

ಪಟ್ಟಿ ಕೊಡಲಿ: 'ಕರ್ನಾಟಕ ದಿವಾಳಿಯಾಗಿದೆ' ಎಂಬ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ ಎಂಬುದನ್ನು ಅವರು ಅರಿಯಬೇಕು. ರಾಜ್ಯ ಸರ್ಕಾರ ಅಷ್ಟು ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿಲ್ಲ. ನಾವು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಪ್ರಧಾನಮಂತ್ರಿ ಕೂಡ ನಮ್ಮ ರಾಜ್ಯ ದಿವಾಳಿಯಾಗಲಿದೆ ಎಂದು ಹೇಳಿದ್ದರು. ನಂತರ ನಡೆದ ಎಲ್ಲ ರಾಜ್ಯಗಳ ಚುನಾವಣೆಯಲ್ಲಿ ಅವರು ಗ್ಯಾರಂಟಿ ಯೋಜನೆ ನಕಲು ಮಾಡಿ ಯೋಜನೆಗಳನ್ನು ಘೋಷಿಸಿದ್ದಾರೆ.

ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಯಿಂದ ಬಳಲಿದ್ದ ಜನಸಾಮಾನ್ಯರಿಗೆ ನೆರವಾಗಲು ನಮ್ಮ ಸರ್ಕಾರ ಗ್ಯಾರಂಟಿ ಯೋಜನೆ ಘೋಷಣೆ ಮಾಡಿದೆಯೇ ಹೊರತು, ಮತಕ್ಕಾಗಿ ಅಲ್ಲ. ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿ ಹಾಗೂ ದಿವಾಳಿ ವಿಚಾರ ಪಕ್ಕಕ್ಕಿರಲಿ. ಬಜೆಟ್‌ನಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಏನು ನೀಡಿದೆ ಎಂದು ಪಟ್ಟಿ ಕೊಡಲಿ' ಎಂದು ಅವರು ಹೇಳಿದರು.

'ಯಾವ ಶಾಸಕರೂ ಸಂಪರ್ಕಿಸಿಲ್ಲ'

'ಯಾವ ಶಾಸಕರು ನಮ್ಮ ಸಂಪರ್ಕದಲ್ಲಿ ಇಲ್ಲ. ನಾನು ಯಾರ ಜತೆಗೂ ಮಾತನಾಡಿಲ್ಲ. ಜೆಡಿಎಸ್‌ನ ಅನೇಕ ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ಸೇರಲು ಮುಂದಾಗಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಜೆಡಿಎಸ್ ಶಾಸಕರು ನಿಮ್ಮ ಸಂಪರ್ಕದಲ್ಲಿ ಇದ್ದಾರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಜೆಡಿಎಸ್ ಶಾಸಕರ ವಿಚಾರವಾಗಿ ಮಾತನಾಡಿಲ್ಲ. ಜೆಡಿಎಸ್ ಕಾರ್ಯಕರ್ತರು ತಮ್ಮ ಭವಿಷ್ಯವನ್ನು ತಾವು ನೋಡಿಕೊಳ್ಳಬೇಕೆಂದು ಕರೆ ನೀಡಿದ್ದೇನೆ. ಆ ಕಾರ್ಯಕರ್ತರು ಕೂಡ ಎಷ್ಟು ದಿನ ಎಂದು ಕಾಯಲು ಸಾಧ್ಯ? ಅವರಿಗೂ ಜಾತ್ಯತೀತ ಸಿದ್ಧಾಂತದ ರಾಷ್ಟ್ರೀಯ ಪಕ್ಷದ ಅಗತ್ಯವಿದೆ' ಎಂದರು.

ರಾಣೆಬೆನ್ನೂರು: ಧರ್ಮಸ್ಥಳ ಸಂಘ ಸೇರಿ ಮೂವರ ವಿರುದ್ಧ ಎಫ್ಐಆರ್

ರಾಣೆಬೆನ್ನೂರು (ಹಾವೇರಿ): ಸಾಲ ವಾಪಸ್ ನೀಡುವಂತೆ ಮೈಕ್ರೊ ಫೈನಾನ್ಸ್ ಕಂಪನಿಯವರು ನೀಡುತ್ತಿದ್ದ ಕಿರುಕುಳದಿಂದ ಬೇಸತ್ತ ಸಲೂನ್ ಮಾಲೀಕ ಮಾಲತೇಶ ನಾಗಪ್ಪ ಅರಸೀಕೆರೆ (45) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ನಗರದ ಅಡವಿ ಆಂಜನೇಯ ಬಡಾವಣೆಯಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದ ಮಾಲತೇಶ, ಮೈಕ್ರೊ ಫೈನಾನ್ಸ್ ಕಂಪನಿಯವರ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಅವರ ಪತ್ನಿ ಗೀತಾ ದೂರು ನೀಡಿದ್ದಾರೆ. ಬೆಲ್‌ಸ್ಟಾರ್ ಕಂಪನಿಯ ಪ್ರತಿನಿಧಿ ಜ್ಯೋತಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸ್ವ-ಸಹಾಯ ಸಂಘದ ಅಂಜನಾ ಹಾಗೂ ಐಡಿಎಫ್‌ಸಿಯ ರಜಾಕ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಾಲತೇಶ ಅವರು ಸಲೂನ್ ಅಂಗಡಿ ನಡೆಸುತ್ತಿದ್ದರು. ಮನೆ ಮತ್ತು ಸಲೂನ್ ಅಂಗಡಿ ನಿರ್ವಹಣೆಗಾಗಿ ಧರ್ಮಸ್ಥಳ ಸ್ವ-ಸಹಾಯ ಸಂಘ, ಬೆಲ್‌ಸ್ಟಾರ್, ಐಡಿಎಫ್‌ಸಿ ಹಾಗೂ ಇತರೆ ಕಡೆಗಳಲ್ಲಿ ಒಟ್ಟು ₹ 6.45 ಲಕ್ಷ ಸಾಲ ಮಾಡಿದ್ದರು. ನಿತ್ಯವೂ ಸಲೂನ್ ಹಾಗೂ ಮನೆ ಬಳಿ ಬರುತ್ತಿದ್ದ ಆರೋಪಿಗಳು, ಸಾಲದ ಕಂತು ಕಟ್ಟುವಂತೆ ಕಿರುಕುಳ ನೀಡುತ್ತಿದ್ದರೆಂದು ಗೊತ್ತಾಗಿದೆ' ಎಂದು ಪೊಲೀಸರು ವಿವರಿಸಿದ್ದಾರೆ.

ರಾಣೆಬೆನ್ನೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಬಾಧೆ: ಇಬ್ಬರ ಆತ್ಮಹತ್ಯೆ

ಗೌರಿಬಿದನೂರು/ಗುಡಿಬಂಡೆ (ಚಿಕ್ಕಬಳ್ಳಾಪುರ): ಮೈಕ್ರೊ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಕೂಲಿ ಕಾರ್ಮಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆಟೊ ಚಾಲಕರಾಗಿದ್ದ ಗೌರಿಬಿದನೂರು ತಾಲ್ಲೂಕಿನ ಎಚ್.ನಾಗಸಂದ್ರದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎನ್.ಆರ್. ನರಸಿಂಹಯ್ಯ (58) ಸೋಮವಾರ ಜಮೀನಿನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಸ್ಪಂದನ, ನವಚೇತನ, ಗ್ರಾಮೀಣ ಕೂಟ, ಎಲ್ಎನ್‌ಟಿ ಫೈನಾನ್ಸ್, ಐಐಎಫ್ಎಲ್ ಫೈನಾನ್ಸ್ ಕಿರು ಹಣಕಾಸು ಸಂಸ್ಥೆಗಳಲ್ಲಿ ₹3.50 ಲಕ್ಷ ಸಾಲ ಪಡೆದಿದ್ದರು ಎಂದು ಮೃತರ ಪತ್ನಿ ಪ್ರಭಾವತಿ ದೂರಿನಲ್ಲಿ ತಿಳಿಸಿದ್ದಾರೆ.

ಹಣ ಕಟ್ಟಲು ಆಟೊ ಒತ್ತೆ ಕೂಡ ಇಟ್ಟಿದ್ದರು. ಅನಾರೋಗ್ಯದ ಕಾರಣ ಕಂತಿನ ಹಣ ಪಾವತಿಸಲು ಆಗಿರಲಿಲ್ಲ. ಇದರಿಂದ ಒತ್ತಡಕ್ಕೆ ಸಿಲುಕಿದ್ದರು. ಸೋಮವಾರ ಬೆಳಗ್ಗೆ ಸಾಲ ಮಾಡಿ ಹಣ ತರುವುದಾಗಿ ಹೇಳಿ ಹೋಗಿದ್ದ ಅವರು ಜಮೀನಿನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ಹೇಳಿದ್ದಾರೆ.

ಗುಡಿಬಂಡೆ ತಾಲ್ಲೂಕಿನ ಬೀಚಗಾನಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ಗಿರೀಶ್(26) ಸಾಲಬಾಧೆಯಿಂದ ಭಾನುವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಿಂತಾಮಣಿಯ ಕೋಟಕ್ ಮಹೇಂದ್ರ, ಬಾಗೇಪಲ್ಲಿಯ ಸ್ಪಂದನ ಫೈನಾನ್ಸ್, ಚೈತನ್ಯ ಫೈನಾನ್ಸ್, ಧರ್ಮಸ್ಥಳದ ಗ್ರಾಮಾಭಿವೃದ್ಧಿ ಸಂಘದಲ್ಲಿ ಸಾಲ ಪಡೆದಿದ್ದರು. ಇದಿಷ್ಟೇ ಅಲ್ಲದೆ ಕೆಲವು ವ್ಯಕ್ತಿಗಳಿಂದಲೂ ಲಕ್ಷಾಂತರ ರೂಪಾಯಿ ಕೈಸಾಲ ತೆಗೆದುಕೊಂಡಿದ್ದರು. ಒಟ್ಟು ₹13 ಲಕ್ಷ ಸಾಲ ಮಾಡಿದ್ದ ಪತಿ ಮಾನಸಿಕವಾಗಿ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗಿರೀಶ್ ಪತ್ನಿ ಗುಡಿಬಂಡೆ ಠಾಣೆಗೆ ದೂರು ನೀಡಿದ್ದಾರೆ.

ಮೈಕ್ರೊ ಫೈನಾನ್ಸ್ ನೌಕರ ಬಂಧನ

ತುಮಕೂರು: ಸಾಲದ ಕಂತು ಕಟ್ಟುವಂತೆ ಕಿರುಕುಳ ನೀಡುತ್ತಿದ್ದ ಎವಿಐಒಎಂ ಫೈನಾನ್ಸ್ ನೌಕರ ಹನುಮಂತರಾಯಪ್ಪ ಎಂಬುವರನ್ನು ಕೋರ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

'ಒಂದು ವಾರದಲ್ಲಿ ಬಡ್ಡಿ, ಅಸಲು ಕಟ್ಟದಿದ್ದರೆ ಮನೆಗೆ ಬೀಗ ಹಾಕಲಾಗುವುದು. ಮನೆ ಹರಾಜು ಮಾಡುತ್ತೇವೆ' ಎಂದು ಅವರು ಬೆದರಿಕೆ ಹಾಕಿದ್ದರು ಎಂದು ಗೌರಗೊಂಡನ ಹಳ್ಳಿಯ ವರಲಕ್ಷ್ಮಮ್ಮ ಎಂಬುವರ ಪುತ್ರ ದೂರು ನೀಡಿದ್ದರು. ಕೋರ ಠಾಣೆಯಲ್ಲಿ ಹನುಮಂತ ರಾಯಪ್ಪ ವಿರುದ್ಧ ಪ್ರಕರಣ ದಾಖಲಾಗಿತ್ತು.

ಫೈನಾನ್ಸ್‌ನಿಂದ ₹2.63 ಲಕ್ಷ ಸಾಲ ಪಡೆದಿದ್ದ ವರಲಕ್ಷ್ಮಮ್ಮ ನಾಲ್ಕು ತಿಂಗಳು ಹಣ ಪಾವತಿಸಿರಲಿಲ್ಲ. ಅವರ ಮನೆ ಗೋಡೆ ಮೇಲೆ 'ಈ ಸ್ವತ್ತು ಎವಿಐಒಎಂ ಅಧೀನದಲ್ಲಿರುತ್ತದೆ' ಎಂದು ಬರೆಸಲಾಗಿತ್ತು.

'ಮತ್ತೆ ಮನೆ ಹತ್ತಿರ ಬಂದು ಬೀಗ ಹಾಕಲು ಯತ್ನಿಸಿದರು. ಗ್ರಾಮಸ್ಥರು ಬೀಗ ಹಾಕದಂತೆ ತಡೆದಿದ್ದರು. ಸಾಲ ಪಾವತಿಸಿದರೂ ಇನ್ನೂ ₹3 ಲಕ್ಷ ಕಟ್ಟಬೇಕು ಎಂದು ಮನೆಯ ಗೋಡೆ ಮೇಲೆ ಬರೆದು ಅವಮಾನಿಸಿದ್ದರು' ಎಂದು ವರಲಕ್ಷ್ಮಮ್ಮ ಪುತ್ರ ಪ್ರವೀಣ್ ದೂರಿನಲ್ಲಿ ಉಲ್ಲೇಖಿಸಿದ್ದರು.

ರಥೋತ್ಸವ ಧಾರವಾಡದ ಸವದತ್ತಿ ರಸ್ತೆಯಲ್ಲಿ ಭಕ್ತರ ಹರ್ಷೋದ್ಗಾರಗಳ ನಡುವೆ ಮುರುಘಾಮಠದ ಮುರುಘೇಂದ್ರ ಶಿವಯೋಗಿಗಳ ರಥೋತ್ಸವ ಸೋಮವಾರ ಜರುಗಿತು ಚಿತ್ರ: ಬಿ.ಎಂ ಕೇದಾರನಾಥ

ಅಜಯ್ ಮಾಕನ್‌ಗೆ ₹31 ಲಕ್ಷ ಮೌಲ್ಯದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ಕಳೆದ ವರ್ಷ ಫೆಬ್ರುವರಿಯಲ್ಲಿ ರಾಜ್ಯ ಸಭೆಗೆ ಅವಿರೋಧವಾಗಿ ಆಯ್ಕೆಯಾಗಿರುವ ಕಾಂಗ್ರೆಸ್‌ನ ಅಜಯ್ ಮಾಕನ್ ಅವರಿಗಾಗಿ ₹ 31 ಲಕ್ಷ ವೆಚ್ಚದಲ್ಲಿ ಇನ್ನೊವಾ ಹೈಬ್ರಿಡ್- ಹೈಕ್ರಾಸ್ ವಾಹನ ಖರೀದಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬಿಡದಿಯಲ್ಲಿರುವ ಟೊಯೊಟೊ ಕಿರ್ಲೋಸ್ಕರ್ ಪ್ರೈವೇಟ್ ಕಂಪನಿಯಿಂದ ಈ ವಾಹನ ಖರೀದಿಸಲು ಕೆಟಿಪಿಪಿ ಕಾಯ್ದೆಯಡಿ ವಿನಾಯಿತಿ ಕಲ್ಪಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧಿಸೂಚನೆ ಹೊರಡಿಸಿದೆ. ಮಾಕನ್ ಅವರು ಎಐಸಿಸಿ ಖಜಾಂಚಿ ಆಗಿದ್ದಾರೆ.

ಯುಜಿಸಿ ಕರಡು ನಿಯಮ ವಿರೋಧಕ್ಕೆ ನಾಳೆ ಸಭೆ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕುಲಪತಿಗಳ ನೇಮಕ ಒಳಗೊಂಡಂತೆ ಪ್ರಕಟಿಸಿರುವ ಕರಡು ನಿಯಮಗಳ ಕುರಿತು ಚರ್ಚಿಸಲು ಫೆ. 5ರಂದು ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಸಚಿವರ ರಾಷ್ಟ್ರೀಯ ಸಮಾವೇಶ ಆಯೋಜಿಸಲಾಗಿದೆ.

ಸಮಾವೇಶದಲ್ಲಿ ಕಾಶ್ಮೀರ, ಹಿಮಾಚಲ ಪ್ರದೇಶ, ಜಾರ್ಖಂಡ್, ತೆಲಂಗಾಣ, ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ಭಾಗವಹಿಸುತ್ತಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾವೇಶ ಉದ್ಘಾಟಿಸುವರು, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಉಪಸ್ಥಿತ-ರಿರುವರು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾಹಿತಿ ನೀಡಿದ್ದಾರೆ.

ದೆಹಲಿ ಚುನಾವಣೆ ಕಾರಣ ಅಲ್ಲಿನ ಸಚಿವರು ಪಾಲ್ಗೊಳ್ಳುತ್ತಿಲ್ಲ. ಕೆಲ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಎನ್‌ಡಿಎ ಜೊತೆ ಮೈತ್ರಿಯ ಕಾರಣಕ್ಕಾಗಿ ಬಹಿರಂಗ ವಿರೋಧವನ್ನು ವ್ಯಕ್ತಪಡಿಸಿ ಎಂದು ಹೇಳಿದ್ದಾರೆ.

'ವಿಧಾನಸೌಧ' ಸಾಹಿತ್ಯ ಉತ್ಸವ 27ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನಸೌಧದ ಆವರಣದಲ್ಲಿ ಸಾಹಿತ್ಯ ಉತ್ಸವ, ಸಾಂಸ್ಕೃತಿಕ ಉತ್ಸವ, ಪುಸ್ತಕ ಮೇಳ, ಆಹಾರ ಮೇಳಗಳನ್ನು ಇದೇ 28ರ ಬದಲು, ಇದೇ 27ರಿಂದ ಮಾರ್ಚ್ 3 ರ ವರೆಗೆ ಹಮ್ಮಿಕೊಳ್ಳಲು ನಿರ್ಧರಿಸ-ಲಾಗಿದೆ.

'ಈ ಸಾಹಿತ್ಯ ಉತ್ಸವಕ್ಕೆ ಸೂಕ್ತ ಹೆಸರು ಹಾಗೂ ಲಾಂಛನ ರಚಿಸಲು ಸಾರ್ವಜನಿಕರಿಗೆ ಮುಕ್ತ ಆಹ್ವಾನ ನೀಡಲಾಗಿದೆ. ಉತ್ತಮ ಹೆಸರು ಸೂಚಿಸುವವರಿಗೆ ಹಾಗೂ ಲಾಂಛನ ರಚಿಸುವವರಿಗೆ ಸೂಕ್ತ ಬಹುಮಾನವಿದೆ. ಆಸಕ್ತರು ಹೆಸರು ಅಥವಾ ಲಾಂಛನವನ್ನು ಸಚಿವಾಲಯಕ್ಕೆ ಇ-ಮೇಲ್ ಮಾಡಬಹುದು (secy-kla-kar@nic.in) ಅಥವಾ ವಾಟ್ಸ್ ಆ್ಯಪ್ (9448108798) ಮೂಲಕವೂ ಕಳುಹಿಸಬಹುದು' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಉತ್ಸವದಲ್ಲಿ150 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಪುಸ್ತಕ ಬಿಡುಗಡೆಗೂ ವೇದಿಕೆ ಕಲ್ಪಿಸುತ್ತೇವೆ' ಎಂದರು.

ವಿದ್ಯುದ್ದೀಪಾಲಂಕಾರ: 'ವಿಧಾನ ಸೌಧಕ್ಕೆ ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ತಾತ್ಕಾಲಿಕವಾಗಿ ವಿದ್ಯುದ್ದೀಪಾಲಂಕಾರ ಮಾಡಲಾಗುತ್ತಿದೆ. ಅದರ ಬದಲು ಇದಕ್ಕೆ ಶಾಶ್ವತ ವ್ಯವಸ್ಥೆ ರೂಪಿಸಿ ಪ್ರತಿ ಶನಿವಾರ ಭಾನುವಾರವೂ ವಿದ್ಯುದ್ದೀಪಾಲಂಕಾರ ಮಾಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಹಣಕಾಸು ಇಲಾಖೆ ಜೊತೆ ಚರ್ಚಿಸಿದ್ದೇನೆ. ಈ ಪ್ರಸ್ತಾವಕ್ಕೆ ಸರ್ಕಾರವೂ ಒಪ್ಪಿದೆ. ಶೀಘ್ರವೇ ಇದಕ್ಕೆ ಟೆಂಡರ್ ಕರೆಯಲಾಗುತ್ತದೆ' ಎಂದು ಯು.ಡಿ.ಖಾದರ್ ತಿಳಿಸಿದರು.

ಬೀದಿನಾಯಿ ಹಾವಳಿ ನಿಯಂತ್ರಣ: 'ವಿಧಾನ ಸೌಧದ ಆವರಣದಲ್ಲಿ ಬೀದಿನಾಯಿ ಹಾವಳಿ ನಿಯಂತ್ರಣದ ಬಗ್ಗೆ ಶೀಘ್ರವೇ ಸಭೆ ನಡೆಸಲಿದ್ದೇವೆ. ಪ್ರಾಣಿ ದಯಾ ಸಂಘದವರನ್ನೂ ಕರೆಸಿ ಸಮಾಲೋಚನೆ ನಡೆಸಿ ಕ್ರಮವಹಿಸುತ್ತೇವೆ' ಎಂದು ಹೇಳಿದರು.

'ಮೇಕ್ ಇನ್ ಇಂಡಿಯಾ ವಿಫಲ'

ಒಂದನೇ ಪುಟದಿಂದ...

ಭಾಷಣದ ನಡುವೆ ತಮ್ಮ ಮೊಬೈಲ್ ಫೋನ್ ತೋರಿಸುತ್ತಾ, 'ತಯಾರಿಕೆಯಲ್ಲಿ ನಾವು ಹಿಂದೆ ಬಿದ್ದಿದ್ದು, ಅದನ್ನು ಚೀನಾಕ್ಕೆ ಬಿಟ್ಟುಕೊಟ್ಟಿದ್ದೇವೆ. ಈ ಮೊಬೈಲ್ ಫೋನ್ 'ಮೇಡ್ ಇನ್ ಇಂಡಿಯಾ' ಅಲ್ಲ. ಇದರ ಎಲ್ಲ ಬಿಡಿ ಭಾಗಗಳು ಚೀನಾದಲ್ಲಿ ತಯಾರಾಗಿದ್ದು, ಅದನ್ನು ಭಾರತದಲ್ಲಿ ಜೋಡಿಸಲಾಗಿದೆ' ಎಂದರು.

'ನಾವು ಚೀನಾದ ಜತೆ ಗಡಿಯಲ್ಲಿ ಮಾತ್ರವಲ್ಲದೆ, ಮಾರುಕಟ್ಟೆಯಲ್ಲೂ ಹೋರಾಡುವ ಪರಿಸ್ಥಿತಿ ನಿರ್ಮಾಣ ವಾಗಿದೆ. ಚೀನಾದ ಮೋಟರ್, ಬ್ಯಾಟರಿಗಳ ವಿರುದ್ಧವೂ ಹೋರಾಡ ಬೇಕಾಗಿದೆ. ತಯಾರಿಕಾ ವಲಯದಲ್ಲಿ ಆಗುತ್ತಿರುವ ಕ್ರಾಂತಿಯ ಲಾಭವನ್ನು ಚೀನಾಕ್ಕೆ ಬಿಟ್ಟುಕೊಟ್ಟಿದ್ದೇವೆ' ಎಂದು ಟೀಕಿಸಿದರು.

ವಿದೇಶಾಂಗ ಸಚಿವರನ್ನು ಕಳುಹಿಸಬೇಕಿರಲಿಲ್ಲ: 'ಅಮೆರಿಕದ ಅಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲು ನಮ್ಮ ಪ್ರಧಾನಿಗೆ ಆಹ್ವಾನ ಸಿಗಲಿ ಎಂಬ ಉದ್ದೇಶದಿಂದ ವಿದೇಶಾಂಗ ಸಚಿವರನ್ನು 3-4 ಸಲ ಅಮೆರಿಕಕ್ಕೆ ಕಳುಹಿಸಬೇಕಾಗಿರಲಿಲ್ಲ' ಎಂದು ರಾಹುಲ್ ಅವರು ಹೇಳಿದರು.

ಇದಕ್ಕೆ ತಿರುಗೇಟು ನೀಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಸರ್ಕಾರದ ವಿದೇಶಾಂಗ ನೀತಿಯ ಬಗ್ಗೆ ಇಂತಹ ಆಧಾರರಹಿತ ಹೇಳಿಕೆಗಳನ್ನು ನೀಡುವಂತಿಲ್ಲ. ನಿಮ್ಮ ಹೇಳಿಕೆಗೆ ಸಾಕ್ಷ್ಯ ಒದಗಿಸಿ' ಎಂದು ಹೇಳಿದರು.

ಭಾಷಣದಲ್ಲಿ ಹೊಸತು ಇಲ್ಲ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣವು ಕಳೆದ ವರ್ಷದ ಭಾಷಣದಂತೆಯೇ ಇತ್ತು. ಸರ್ಕಾರ ನೀಡಿದ ಪಟ್ಟಿಯನ್ನೇ ಅವರು ಓದಿದ್ದಾರೆ ಎಂದು ಹೇಳಿದರು.

ಸಚಿವ ಸತ್ತಿದ್ದಾನೋ ಬದುಕಿದ್ದಾನೋ ಗೊತ್ತಿಲ್ಲ: ಶ್ರೀರಾಮುಲು ಆಕ್ರೋಶ

ಪ್ರಜಾವಾಣಿ ವಾರ್ತೆ

ಶ್ರೀರಾಮುಲು

ಕಂಪ್ಲಿ (ಬಳ್ಳಾರಿ ಜಿಲ್ಲೆ): 'ಬಳ್ಳಾರಿ ಬಿಮ್ಸ್‌ನಲ್ಲಿ ಈವರೆಗೆ ಹೆರಿಗೆಗೆ ದಾಖಲಾದ ಏಳೆಂಟು ಬಾಣಂತಿಯರು ಸತ್ತರೂ ಜಿಲ್ಲಾ ಉಸ್ತುವಾರಿ ಸಚಿವ ಭೇಟಿ ನೀಡಿಲ್ಲ. ಸಚಿವ ಸತ್ತಿದ್ದಾನೋ ಬದುಕಿದ್ದಾನೋ ಗೊತ್ತಿಲ್ಲ. ಅವರನ್ನು ಕೇಳೋರೆ ಇಲ್ಲದಂತಾಗಿದೆ' ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಕಿಡಿ ಕಾರಿದರು.

ಇಲ್ಲಿಯ ಮಾಜಿ ಶಾಸಕರ ಜನಸಂಪರ್ಕ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ ಕಂಪ್ಲಿ ಮತ್ತು ಕುರುಗೋಡು ಬಿಜೆಪಿ ಮಂಡಲ ನೂತನ ಅಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಅವರು ಮಾತನಾಡಿ, 'ಅವರಿಗೆ ದುರಹಂಕಾರ ಜಾಸ್ತಿ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಹೆಸರು ಹೇಳದೇ ಟೀಕಿಸಿದರು. 'ಬಾಣಂತಿಯರು, ನವಜಾತ ಶಿಶುಗಳು 'ಬಿಮ್ಸ್'ನಿಂದ ಆರೋಗ್ಯವಾಗಿ ಮರಳುತ್ತಾರೆ ಎನ್ನುವ ನಂಬಿಕೆಯೇ ಕುಸಿದಿದೆ' ಎಂದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಪೂರ್ವ ವಿಭಾಗ, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ಫೋನ್: 080–22265383 ವೆಬ್‌ಸೈಟ್: www.kiadb.in
ನಂ.: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–47/872/2024–25 ದಿನಾಂಕ: 03.02.2025

ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಪಿಡಬ್ಲ್ಯುಡಿ ದರ್ಜೆ 3 (ಸಿವಿಲ್) ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಮೈಸೂರು ಜಿಲ್ಲೆಯ ಕಡಕೋಳ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 8 ರ ಮುಂಭಾಗದಲ್ಲಿ ಹಾಲಿ ಆರ್‌ಸಿಸಿ ರಸ್ತೆ ಬದಿ ಚರಂಡಿಯ ಎತ್ತರವನ್ನು ಹೆಚ್ಚಿಸುವ ಕಾಮಗಾರಿ. (ಪರಿಶಿಷ್ಟ ಜಾತಿಗೆ ಮೀಸಲು)

● ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21.02.2025ರ ಸಂಜೆ 4:30 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆ.ಐ.ಎ.ಡಿ.ಬಿ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/4788/2024–25

KARNATAKA INDUSTRIAL AREAS DEVELOPMENT BOARD
(A Government of Karnataka Undertaking)
49, East Wing, 4th & 5th Floor, Khanija Bhavan Race Course Road Bengaluru – 560 001. Phone No. 080-22265383 website : ceoem@kiadb.in
No: KIAB/COF/TL/19453/ 2024-25 Date: 03.02.2025

NOTIFICATION TO THE BANKERS/FINANCIAL INSTITUTIONS

Govt of Karnataka has given a mandate to KIADB to acquire and develop (implementation of water supply schemes, providing basic infrastructure facilities viz. Roads, Drains, Electrical Infra, water supply infra etc in the Industrial Areas being developed) and allot the developed land to the prospective investors / industrialists. In view of this, KIADB is interested to borrow the loan to the tune of **Rs.5000 crore,** Govt of Karnataka shall be the guarantor.

KIADB invites applications from interested bankers (Nationalised as well as Scheduled Commercial Banks/ Financial Institutions registered with RBI) for discussions/interactions in connection with lending loan to KIADB.

The interested bankers / financial institutions shall submit their application either directly to the "Chief Executive Officer & Executive Member, KIADB, 4th Floor, No.49, East Wing, Khanija Bhavan, Race Course Road, Bengaluru-560001" or through Email id: **ceoem@kiadb.in** on or before **15/02/2025.**

The KIADB will invite the bankers / financial institutions who have submitted their applications for discussions / interactions and thereafter KIADB will intimate to submit their competitive quotes through Karnataka Public Procurement Portal **https://kppp.karnataka.gov.in.** For more details about KIADB please visit KIADB website **www.kiadb.in**

Sd/-
Chief Executive Officer & Executive Member
DIPR/CP/4783/Zen/2024-25

ಕರ್ನಾಟಕ ಸರ್ಕಾರ
ಚಿತ್ರದುರ್ಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋದನಾ ಸಂಸ್ಥೆ, ಚಿತ್ರದುರ್ಗ.
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ದೂ ಸಂ:08194–234710. ಇ ಮೇಲ್:–directorcimschitradurga@gmail.com
ಸಂ:ಚಿವೈಮಸ/2024–25 ದಿನಾಂಕ: 30.01.2025

ಪ್ರಕಟಣೆ

ಚಿತ್ರದುರ್ಗ ವೈದ್ಯಕೀಯ ಕಾಲೇಜಿಗೆ ಸರ್ಕಾರದ ಆದೇಶದನ್ವಯ ಮಂಜೂರಾಗಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ಈ ಕಛೇರಿಯ ಅಧಿಸೂಚನೆಗಳಲ್ಲಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ನೇರ ಸಂದರ್ಶನವನ್ನು ದಿನಾಂಕ:11/02/2025 ರಿಂದ 15/02/2025 ರವರೆಗೆ ಬೆಂಗಳೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ (BMCRI) 1ನೇ ಮಹಡಿ, ಗ್ರಂಥಾಲಯ ಕೇಂದ್ರ ಬ್ಲಾಕ್, ಕಲಾಸಿ ಪಾಳ್ಯ ಬೆಂಗಳೂರು ಇಲ್ಲಿ ಏರ್ಪಡಿಸಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಂತರ್ಜಾಲದಲ್ಲಿ :https://cmcrichitradurga.karnataka.gov.in/en ಪ್ರಕಟಿಸಿದಂತೆ ಸಂದರ್ಶನಕ್ಕೆ ಹಾಜರಾಗುವಂತೆ ಸೂಚಿಸಿದೆ.

DIPR/CTA/KSMCA/ 537/2024-25
ಸಹಿ/– ನಿರ್ದೇಶಕರು, ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಚಿತ್ರದುರ್ಗ.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:43:2024–25 ದಿನಾಂಕ:01–02–2025

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 12 ಕಾಮಗಾರಿ, 2023–24 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ– 01 ಕಾಮಗಾರಿ, 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) – 03 ಕಾಮಗಾರಿ, ಒಟ್ಟು 16 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕ್ರಮ ಸಂ.1 ರಿಂದ 13 ರ ಅಲ್ಪಾವಧಿ ಕಾಮಗಾರಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 05–02–2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 13–02–2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 13–02–2025 ಸಮಯ : 17.00 ಟೆಂಡರ್ ತೆರೆಯುವ ದಿನಾಂಕ : 15–02–2025 ಸಮಯ : 17.05

ವಾಸಾಇ/ದಾವಣಗೆರೆ/709/ ಕೆಎಸ್‌ಎಂಸಿಎ/2024–25
ಸಹಿ/–ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in
ಸಂಖ್ಯೆ: ಕರಅನಿನಿ/ಐಎಫ್‌ಬಿ/2024–25/22 ದಿನಾಂಕ: 03–02–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ (**QCBS**) ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳ ವಿನ್ಯಾಸಗಳ ಪ್ರೂಫ್ ಚೆಕ್ಕಿಂಗ್, ಯೋಜನಾ ನಿರ್ವಹಣೆ ಮತ್ತು ನಿರ್ಮಾಣ, ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಸಮಾಲೋಚನಾ ಸೇವೆಗಳನ್ನು ಒದಗಿಸಲು ಪ್ರಸಿದ್ಧ ಸಮಾಲೋಚಕರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: **"ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲ್ಲೂಕಿನ ಡೋಣಿ ನದಿ ಮಾರ್ಗವಾಗಿ ಮನಗೂಳಿ ಮತ್ತು ಬಿಜ್ಜಾಳ ನಡುವೆ ರಾ.ಹೆ.–61ರಲ್ಲಿನ ಚೈ. 58.00 ಮತ್ತು 58.10 ಕಿಮೀ ರಲ್ಲಿ ಸೇತುವೆಯ ಮರು–ನಿರ್ಮಾಣ". ಸೇತುವೆ ನಿರ್ಮಾಣ ಕಾಮಗಾರಿಯ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) :** ರೂ. 20.50 ಕೋಟಿಗಳು. **ಅರ್ನೆಸ್ಟ್ ಠೇವಣಿ ಹಣ** (ಇಎಂಡಿ): ರೂ. 30,000/–. **ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ** (ಮಳೆಗಾಲ ಸೇರಿದಂತೆ) **: 18 ತಿಂಗಳು.**

ಆಸಕ್ತ ಅರ್ಜಿದಾರರು ಸಂಪೂರ್ಣ ಪ್ರಸ್ತಾವನೆ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ಮುಖಾಂತರ ವೀಕ್ಷಿಸಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಎಂಡಿ ಜೊತೆಗೆ ತಾಂತ್ರಿಕ ಪ್ರಸ್ತಾವನೆಗಳನ್ನು ಮತ್ತು ಆರ್ಥಿಕ ಬಿಡ್‌ಗಳನ್ನು ಆರ್‌ಎಫ್‌ಪಿ ದಾಖಲೆಯಲ್ಲಿರುವ ಸೂಚನೆಯಂತೆ ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು: (ಎ) ಪೂರ್ವ ಬಿಡ್ ಆಕ್ಷೇಪಣೆಗಳು ಯಾವುದಾದರೂ ಇದ್ದಲ್ಲಿ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **07.02.2025ರ 17.00 ಗಂಟೆವರೆಗೆ.** ಅರ್ಜಿದಾರರು ಕೆಪಿಪಿ ಪೋರ್ಟಲ್ / ಇಮೇಲ್ **cekrdcl@gmail.com** ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು. (ಬಿ) ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **17.02.2025ರಂದು ಸಂಜೆ 5.30 ಗಂಟೆವರೆಗೆ.** (ಸಿ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19.02.2025ರಂದು ಬೆಳಿಗ್ಗೆ 11.30 ಗಂಟೆಗೆ.**

ಯಾವುದೇ ಕಾರಣ ನೀಡದೆ ಯಾವುದೇ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಹೊಂದಿರುತ್ತದೆ.

ಉಳಿದಂತೆ, ಬಿಡ್ ದಾಖಲೆಗಳಿಗೆ ಸಂಬಂಧಿಸಿದಂತೆ ಯಾವುದೇ ಸೇರ್ಪಡೆಗಳು / ಸ್ಪಷ್ಟೀಕರಣ / ಟೆಂಡರ್ ದಿನಾಂಕಗಳನ್ನು ಕೇವಲ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮತ್ತು ಕೆಆರ್‌ಡಿಸಿಎಲ್ ವೆಬ್‌ಸೈಟ್ **https://www.krdcl.in** ನಲ್ಲಿ ಮಾತ್ರ ಪ್ರಕಟಿಸಲಾಗುವುದು / ಅಪ್‌ಲೋಡ್ ಮಾಡಲಾಗುವುದು.

ಸಹಿ/– ಮುಖ್ಯ ಅಭಿಯಂತರರು, ಕರಅನಿನಿ ಬೆಂಗಳೂರು
DIPR/CP/YC/4772/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕವಿಪ್ರನಿನಿ/ಬಿ16/21723/2021–22(RL) ದಿನಾಂಕ: 01.02.2025

ಅಧಿಸೂಚನೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 01.02.2022ರ ಉದ್ಯೋಗ ಪ್ರಕಟಣೆಗನುಗುಣವಾಗಿ **ಸಹಾಯಕ ಇಂಜಿನಿಯರ್ (ವಿದ್ಯುತ್) (ಕೆ.ಕೆ/ಎನ್.ಕೆ.ಕೆ) ಮತ್ತು ಕಿರಿಯ ಇಂಜಿನಿಯರ್(ವಿ) (ಕೆ.ಕೆ/ಎನ್.ಕೆ.ಕೆ)** ಹುದ್ದೆಗೆ ಅಂತಿಮ ಕಾಯ್ದಿರಿಸಿದ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕಟ್–ಆಫ್ (Cut-Off) ಅಂಕಗಳೊಂದಿಗೆ ಕವಿಪ್ರನಿನಿ ಅಂತರ್ಜಾಲ **https://kptcl.karnataka.gov.in/Recruitment** ದಲ್ಲಿ ಪ್ರಕಟಿಸಲಾಗಿದೆ.

ಸಹಿ/– ನಿರ್ದೇಶಕರು, (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಕರ್ನಾಟಕ ಸರ್ಕಾರ
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15–03–2013
Website : www.kimskoppal.com
email :directorkimskoppal@gmail.com
Office : 08539 225522 Office : 08539-225523
ಸಂಖ್ಯೆ: ಕಿಮ್ಸ್/ಕೊಪ್ಪಳ/ಉಪಕರಣಗಳು/ಪಿಠೋಪಕರಣಗಳು/2024–25/903 ದಿನಾಂಕ: 01.02.2025

ಇ–ಟೆಂಡರ್ ಅಧಿಸೂಚನೆ

ಅರ್ಹ ಆಸಕ್ತ ಟೆಂಡರ್‌ದಾರರಿಂದ 1) ಬೋಧಕ ಆಸ್ಪತ್ರೆಯಲ್ಲಿ ಲಭ್ಯವಿರುವ ವಿವಿಧ ಪಿಠೋಪಕರಣಗಳ Tinkering, Painting ಮತ್ತು Repair ಕಾರ್ಯವನ್ನು ಒಂದು (01) ವರ್ಷದ ಅವಧಿಗೆ ನಿರ್ವಹಿಸಲು ಹಾಗೂ 2) Day Care Chemotherapy ಉಪಕರಣಗಳ ಪೂರೈಸಿಕೊಳ್ಳಲು ಕಿಮ್ಸ್ ಸಂಸ್ಥೆಯಿಂದ ಎರಡು ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣ ಕೋಶದ ವೆಬ್‌ಸೈಟ್ http://kppp.karnataka.gov.in ರಿಂದ ಪಡೆಯಬಹುದು. ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 05.02.2025, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.02.2025, ಟೆಂಡರ್‌ಗಳ ಅಂದಾಜು ಮೊತ್ತ– ವಿವಿಧ ಪಿಠೋಪಕರಣಗಳ Tinkering, Painting ಮತ್ತು Repair ಕಾರ್ಯವನ್ನು ನಿರ್ವಹಿಸಲು ರೂ. 15.67 ಲಕ್ಷಗಳು ಮತ್ತು Day Care Chemotherapy ಉಪಕರಣಗಳ ಪೂರೈಕೆಗಾಗಿ ಮೊತ್ತ ರೂ.26.75 ಲಕ್ಷಗಳು. ಟೆಂಡರ್‌ನ ವಿವರವಾದ ವೇಳಾಪಟ್ಟಿ, ಷರತ್ತು ಹಾಗೂ ನಿಬಂಧನೆಗಳನ್ನು ಟೆಂಡರ್ ದಾಖಲೆಯಲ್ಲಿ ವೀಕ್ಷಿಸಬಹುದು.

ಸಹಿ/– ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/715/ಕೆಎಸ್‌ಎಂಸಿಎ/2024–25

ನಗರಸಭಾ ಕಾರ್ಯಾಲಯ ಹೊಸಪೇಟೆ.
ಕ್ರಸಂ/ನಸಹೊ/ಎಮ್.ಆರ್.ಎಫ್/ಯಂತ್ರೋಪಕರಣಗಳು/ಟೆಂಡರ್/2024–25 ದಿನಾಂಕ: 29.01.2025

ಟೆಂಡರ್ ಪ್ರಕಟಣೆ(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

15th Finance, MPC and Non million plus ಅನುದಾನದಡಿಯಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 14.02.2025** ಸಂಜೆ 5.00 ಗಂಟೆ ವರೆಗೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 15.02.2025** ಸಂಜೆ 5.10 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 17.02.2025** ಸಂಜೆ 5.10 ಕ್ಕೆ, ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ–ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕೆಲಸದಂದು ಕಛೇರಿ ವೇಳೆಯಲ್ಲಿ ಕಾರ್ಯಾಲಯದ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಇಂಟೆಂಡ್ ನಂಬರ್: 01.DMA/2024-25/IND4154. **ಅಂದಾಜೂ ಮೊತ್ತ**: 66,75,020.00 **ಇ.ಎಂ.ಡಿ**: 13,3500.00. 02.DMA/2024-25/IND4155. **ಅಂದಾಜೂ ಮೊತ್ತ**: 64,29,280.00 **ಇ.ಎಂ.ಡಿ**: 12,9000.00. 03.DMA/2024-25/IND4156. **ಅಂದಾಜೂ ಮೊತ್ತ**: 38,73,450.00 **ಇ.ಎಂ.ಡಿ**: 77,500.00

ಸಹಿ/–ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಹೊಸಪೇಟೆ
ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/499

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602
ಸಂಖ್ಯೆ: ಡಿವೈಇಎಸ್/ಕ್ರಿಯೋ/ತಾಂ.ಶಾ/244/2024–25 ದಿನಾಂಕ : 28.01.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಮೈಸೂರು ಜಿಲ್ಲೆ ಕೆ.ಆರ್. ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಮೂಲಕ ಅರ್ಹ ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಮೈಸೂರು ಜಿಲ್ಲೆ ಕೆ.ಆರ್ ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ : ರೂ. 165.66 ಲಕ್ಷಗಳು, ಇಎಂಡಿ ಮೊತ್ತ : ರೂ. 2,48,498.00.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 11.02.2025 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12.02.2025 ಸಮಯ: 16.30 ಗಂಟೆ.

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
DIPR/CP/4756/Zen/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಮಿಂಚಿ ಹೋಗುವ ಮುನ್ನ ಹಂಚಿ ಬಾಳುವ ಬದುಕು
ಸಹ್ಯವಲ್ಲವೇನು?

-ಸಿದ್ಧಲಿಂಗಯ್ಯ

ಯುವ ವಿಶ್ವಕಪ್ ಜಯ: ಮಹಿಳಾ ಕ್ರಿಕೆಟ್‌ಗೆ ಮತ್ತಷ್ಟು ಹುರುಪು

ಭಾರತದ ಮಹಿಳಾ ಕ್ರಿಕೆಟ್ ವಲಯಕ್ಕೆ ಕರ್ನಾಟಕದ ಕೊಡುಗೆ ಗಮನಾರ್ಹ. ದೇಶದ ಮಹಿಳಾ ತಂಡದ ಮೊದಲ ನಾಯಕಿ ಶಾಂತಾ ರಂಗಸ್ವಾಮಿ ಅವರಿಂದ ಆರಂಭವಾಗಿ ಹಲವು ಆಟಗಾರ್ತಿಯರು ಬೆಳಗಿದ್ದಾರೆ. ಇದೀಗ ಈ ದಿಸೆಯಲ್ಲಿ ಬೆಂಗಳೂರಿನ ನಿಕಿ ಪ್ರಸಾದ್ ಹೆಜ್ಜೆ ಇರಿಸಿದ್ದಾರೆ. 19 ವರ್ಷದೊಳಗಿನ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ನಾಯಕಿಯಾಗಿ ಅವರು ಕರ್ನಾಟಕಕ್ಕೆ ಹೆಮ್ಮೆ ಮೂಡಿಸಿದ್ದಾರೆ. ಮಲೇಷ್ಯಾದ ಕ್ವಾಲಾಲಂಪುರದಲ್ಲಿ ನಡೆದ ಎರಡನೇ ವಿಶ್ವಕಪ್ ಟೂರ್ನಿಯಲ್ಲಿ ನಿಕಿ ಪ್ರಸಾದ್ ಬಳಗವು ಅಜೇಯ ಸಾಧನೆಯೊಡನೆ ಟ್ರೋಫಿಗೆ ಮುತ್ತಿಕ್ಕಿತು. 2023ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಚೊಚ್ಚಲ ಟೂರ್ನಿಯಲ್ಲಿ ಶಫಾಲಿ ವರ್ಮಾ ನಾಯಕತ್ವದ ತಂಡವು ಪ್ರಶಸ್ತಿ ಜಯಿಸಿತ್ತು. ಆ ಪ್ರಶಸ್ತಿಯನ್ನು ಉಳಿಸಿಕೊಳ್ಳುವಲ್ಲಿ ಈಗಿನ ತರುಣಿಯರ ಪಡೆ ಯಶಸ್ವಿಯಾಗಿದೆ. ಅಂದು ಶಫಾಲಿ ವರ್ಮಾ ಬಳಗದ ಸಾಧನೆ ಚಾರಿತ್ರಿಕವಾಗಿತ್ತು. ಈಗಿನ ಗೆಲುವು ಭಾರತದ ಮಹಿಳಾ ಕ್ರಿಕೆಟ್ ಬೆಂಚ್ ಶಕ್ತಿ ಏನು ಎಂಬುದನ್ನು ತೋರಿಸಿದೆ. ಏಕೆಂದರೆ ಎರಡು ವರ್ಷಗಳ ಹಿಂದಿನ ತಂಡದಲ್ಲಿ ಆಡಿದ್ದ ಶಫಾಲಿ ಮತ್ತು ರಿಚಾ ಘೋಷ್ ಅವರಿಗೆ ಭಾರತ ಸೀನಿಯರ್ ತಂಡದಲ್ಲಿ ಆಡಿದ ಅನುಭವ ಇತ್ತು. ವಿದೇಶಗಳಲ್ಲಿ ಹಲವಾರು ಪಂದ್ಯಗಳನ್ನು ಆಡಿದ್ದರು. ಆದರೆ, ಈ ಸಲ ಅಂತಹ ಅನುಭವಿಗಳ ಸಾಂಗತ್ಯ ತಂಡಕ್ಕೆ ಇರಲಿಲ್ಲ. ನಿಕಿ ಪ್ರಸಾದ್ ಸಹಿತ ಎಲ್ಲ ಆಟಗಾರ್ತಿಯರಿಗೆ ಇದು ಅಪೂರ್ವ ಅನುಭವ. ಹೀಗಾಗಿ, ಇದು ಸಾಧನೆಯೇ ಸರಿ. ಸೀನಿಯರ್ ವಿಭಾಗದ ಯಾವುದೇ ಮಾದರಿಯಲ್ಲಿ ಭಾರತದ ವನಿತೆಯರು ಇದುವರೆಗೂ ವಿಶ್ವಕಪ್ ಗೆದ್ದಿಲ್ಲ. ಇಂತಹ ಸಂದರ್ಭದಲ್ಲಿ ತರುಣಿಯರ ಬಳಗದ ಸಾಧನೆಯು ಕ್ರಿಕೆಟ್ ಅಭಿಮಾನಿಗಳ ಮನಸ್ಸಿಗೆ ತಂಪೆರೆದಿದೆ. ಮಹಿಳಾ ಕ್ರಿಕೆಟಿಗರಿಗೂ ಕೇಂದ್ರ ಗುತ್ತಿಗೆ ಮತ್ತು ಸಮಾನ ವೇತನದಂತಹ ಸೌಲಭ್ಯಗಳನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಇತ್ತೀಚೆಗಷ್ಟೇ ಜಾರಿಗೆ ತಂದಿದೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿಯೂ ಹೆಣ್ಣುಮಕ್ಕಳ ಕ್ರಿಕೆಟ್ ಕಲಿಕೆಗೆ ಅವಕಾಶಗಳು ಹೆಚ್ಚುತ್ತಿವೆ. ಇದರಿಂದಾಗಿ ಕ್ರಿಕೆಟ್ ಆಡಲು ಬಾಲಕಿಯರಿಗೆ ಪೋಷಕರಿಂದ ಪ್ರೋತ್ಸಾಹ ದೊರೆಯುತ್ತಿದೆ. ಜೊತೆಗೆ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕೂಡ ಜನಪ್ರಿಯಗೊಂಡಿರುವುದು ಹೆಣ್ಣುಮಕ್ಕಳನ್ನು ಕ್ರಿಕೆಟ್‌ನತ್ತ ಸೆಳೆಯುತ್ತಿದೆ.

ಈ ಗೆಲುವು ದೇಶದ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಶಕ್ತಿ ತುಂಬುವ ವಿಶ್ವಾಸ ಮೂಡಿಸಿದೆ

ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಗೊಂಗಡಿ ತ್ರಿಷಾ (309 ರನ್) ಪಾರಮ್ಯ ಮೆರೆದರು. ಹೈದರಾಬಾದಿನ 19 ವರ್ಷ ವಯಸ್ಸಿನ ತ್ರಿಷಾ ಏಳು ಪಂದ್ಯಗಳಲ್ಲಿ 77.25ರ ಸರಾಸರಿಯಲ್ಲಿ ರನ್ ಗಳಿಸಿದರು. ಅಲ್ಲದೆ ಯುವ ವಿಶ್ವಕಪ್ ಟೂರ್ನಿಯಲ್ಲಿ ಶತಕ ಹೊಡೆದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರರಾದರು. ಲೆಗ್‌ಸ್ಪಿನ್ನರ್ ಕೂಡ ಆಗಿರುವ ತ್ರಿಷಾ ಏಳು ವಿಕೆಟ್ ಪಡೆದರು. ಆರಂಭ ಆಟಗಾರ್ತಿಯಾಗಿ ತಮಿಳುನಾಡಿನ ಮದುರೆಯ ಜಿ. ಕಮಲಿನಿ ಅವರು ತಂಡಕ್ಕೆ ಉಪಯುಕ್ತ ಕೊಡುಗೆ ನೀಡಿದರು. ಬಾಲ್ಯದಲ್ಲಿ ಸ್ಕೇಟಿಂಗ್ ಪಟುವಾಗಿದ್ದ ಅವರು, ಭವಿಷ್ಯ ಅರಸಿ ಕ್ರಿಕೆಟ್‌ನತ್ತ ಒಲವು ತೋರಿದ್ದು ಈಗ ಫಲ ನೀಡುತ್ತಿದೆ. ಎಡಗೈ ಸ್ಪಿನ್-ಆಲ್‌ರೌಂಡರ್ ವೈಷ್ಣವಿ ಶರ್ಮಾ 17 ವಿಕೆಟ್ ಗಳಿಸಿದರು. ಮಲೇಷ್ಯಾ ವಿರುದ್ಧ ಹ್ಯಾಟ್ರಿಕ್ ಕೂಡ ಸಾಧಿಸಿದರು. ಕೇರಳದ ಕಲ್ಪಟ್ಟದವರಾದ ಬೌಲರ್ ವಿ.ಜೆ. ಜೋಶಿತಾ, ವಿಶಾಖಪಟ್ಟಣದ ಶಬ್ನಮ್ ಶಕೀಲ್, ದೆಹಲಿಯ ಪರುಣಿಕಾ ಸಿಸೋಡಿಯಾ ಹಾಗೂ ಮುಂಬೈನ ಆಯುಷಿ ಶುಕ್ಲಾ ಅವರು ಈಗ ಭರವಸೆ ಮೂಡಿಸಿರುವ ಪ್ರಮುಖ ಆಟಗಾರ್ತಿಯರು. ಮೇಲಿನ ಕ್ರಮಾಂಕದ ಮೂವರು ಬ್ಯಾಟರ್‌ಗಳೇ ಹೆಚ್ಚು ಸಮರ್ಥವಾಗಿ ಆಡಿದ್ದರಿಂದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಿಗೆ ಹೆಚ್ಚಿನ ಸವಾಲು ಎದುರಾಗಲಿಲ್ಲ. ನಿಕಿ ಪ್ರಸಾದ್ ಅವರ ನಾಯಕತ್ವದ ಕೌಶಲಕ್ಕೆ ಪೂರ್ಣ ಅಂಕ ಕೊಡಬಹುದು. ಮುಖ್ಯ ಕೋಚ್ ನೂಷಿನ್ ಅಲ್ ಖಾದಿರ್ ಮತ್ತು ನೆರವು ಸಿಬ್ಬಂದಿಯ ಶ್ರಮವೂ ಈ ಗೆಲುವಿನ ಹಿಂದಿದೆ. ಬೆಂಗಳೂರಿನ ಮಿಥಿಲಾ ವಿನೋದ್ ಕೂಡ ತಂಡದಲ್ಲಿ ಇದ್ದರು. ಈ ಗೆಲುವಿನಿಂದಾಗಿ ಸೀನಿಯರ್ ತಂಡ ಮತ್ತು ಡಬ್ಲ್ಯುಪಿಎಲ್ ತಂಡಗಳ ಕದ ತಟ್ಟುವ ಪ್ರತಿಭಾನ್ವಿತ ಆಟಗಾರರ ಸಂಖ್ಯೆ ಹೆಚ್ಚಲಿದೆ. ಇದರಿಂದಾಗಿ ಸೀನಿಯರ್ ಆಟಗಾರ್ತಿಯರು ಪೈಪೋಟಿ ಎದುರಿಸಬೇಕಾಗಬಹುದು. ಈ ಆರೋಗ್ಯಕರ ಸ್ಪರ್ಧೆಯು ದೇಶದ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಮತ್ತಷ್ಟು ಬಲ ತುಂಬಬಹುದು.

ದಿನದ ಟ್ವೀಟ್

ಇನ್ನೊಂದು ಹಗರಣಕ್ಕೆ ರಹದಾರಿ?

ಬೆಂಗಳೂರಿನ ತೆರಿಗೆದಾರರ ಹಣ ಬಳಸಿ ಮುಂದೆ ಇನ್ನೊಂದು ಹಗರಣ ನಡೆಯಲಿದೆ. ರಸ್ತೆಗುಂಡಿ ಮುಚ್ಚಲಾಗದ ಬಿಬಿಎಂಪಿ ಈಗ ರಸ್ತೆಗಳನ್ನು ದೂಳಿನಿಂದ ಮುಕ್ತಗೊಳಿಸಲು ಹೊರಟಿದೆ. ಬಿಬಿಎಂಪಿಯಲ್ಲಿ ಇನ್ನೂ ಎಷ್ಟು ಹಗರಣಗಳಿವೆ? ರಸ್ತೆಗುಂಡಿ ಮುಚ್ಚಲು ಇಟ್ಟಿದ್ದ ₹ 300 ಕೋಟಿ ಎಲ್ಲಿದೆ? ಯಾವುದಾದರೂ ರಸ್ತೆಗುಂಡಿಯನ್ನು ಅವರು ಮುಚ್ಚಿದರೇ?

(₹764 ಕೋಟಿ ವೆಚ್ಚದಲ್ಲಿ ಕಸ ಗುಡಿಸುವ (ಮೆಕ್ಯಾನಿಕಲ್ ಸ್ವೀಪಿಂಗ್) ಯಂತ್ರಗಳನ್ನು ವಿದೇಶದಿಂದ ಬಾಡಿಗೆಗೆ ಪಡೆಯಲು ಬಿಬಿಎಂಪಿ ಮುಂದಾಗಿರುವುದಕ್ಕೆ ಪ್ರತಿಕ್ರಿಯೆ)

ಬಸವರಾಜ್

ಕಿಡಿನುಡಿ

ಕಳೆದ ಮೂರು ದಿನಗಳಲ್ಲಿ ಇಬ್ಬರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆದಿದೆ. ರಾಯಚೂರು ಹಾಗೂ ಮಂಡ್ಯದಲ್ಲಿ ನಡೆದಿರುವ ಈ ಕೃತ್ಯಗಳು ನಿಜಕ್ಕೂ ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿವೆ... ಬೇರೆಯವರು ಇಂತಹ ದುಷ್ಕೃತ್ಯಗಳಿಗೆ ಕೈಹಾಕದಂತೆ ಕಠಿಣವಾದ ಕ್ರಮವನ್ನು ಸರ್ಕಾರ ಕೈಗೊಳ್ಳಲಿ...

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 4-2-2000

• 4 ಕೋಟಿ ಮೌಲ್ಯದ ಜಯಾ ಆಭರಣ ಕೋರ್ಟ್ ಪರಿಶೀಲನೆ

ಚೆನ್ನೈ, ಫೆ. 3 (ಪಿಟಿಐ)– ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ನಿವಾಸದಿಂದ ವಶಪಡಿಸಿಕೊಂಡ ಆಭರಣಗಳನ್ನು ಪರಿಶೀಲಿಸುವ ಕಾರ್ಯವನ್ನು ವಿಶೇಷ ನ್ಯಾಯಾಧೀಶರು ಇಂದು ಆರಂಭಿಸಿದರು.

ಕಸ್ಟಮ್ಸ್ ಇಲಾಖೆಯ ಮೌಲ್ಯಮಾಪಕರಾದ ವಾಸುದೇವನ್ ಅವರು ನ್ಯಾಯಾಧೀಶರ ಮುಂದೆ ಸಾಕ್ಷ್ಯ ನುಡಿದರು. ಇಲಾಖೆ 468 ಚಿನ್ನದ ಬಿಡಿ ಆಭರಣಗಳನ್ನು ವಶಪಡಿಸಿಕೊಂಡಿದ್ದು, ಇವುಗಳ ಮೌಲ್ಯ ಸುಮಾರು ನಾಲ್ಕು ಕೋಟಿ ರೂಪಾಯಿಗಳು ಎಂದು ಹೇಳಿದರು.

ಜಯಾ ವಿರುದ್ಧ ಇರುವ ಅಕ್ರಮ ಸಂಪತ್ತು ಕ್ರೋಡೀಕರಣ ಆರೋಪದ ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರು, ಆಭರಣಗಳನ್ನು ಪರಿಶೀಲಿಸುವ ಕಾರ್ಯವನ್ನು ನಾಳೆಯೂ ಮುಂದುವರಿಸುವರು.

ಚಿನ್ನದ ಬಳೆಗಳು, ಸರಗಳು, ಪದಕಗಳು, ಚಿನ್ನದಿಂದ ತಯಾರಿಸಿದ ವಜ್ರಖಚಿತ ವಾಚುಗಳು ಇದರಲ್ಲಿ ಸೇರಿವೆ. ಒಟ್ಟು 27 ಕೆ.ಜಿ. ಚಿನ್ನದ ಆಭರಣಗಳಿದ್ದು, ಇವುಗಳ ಮೌಲ್ಯ ಒಂದೂವರೆ ಕೋಟಿ ರೂಪಾಯಿ ಎಂದು ಹೇಳಲಾಗಿದೆ. ವಜ್ರದ ಆಭರಣಗಳ ಬೆಲೆ 3 ಕೋಟಿಗೂ ಅಧಿಕ ಎಂದು ವಾಸುದೇವನ್ ಸಾಕ್ಷ್ಯ ನುಡಿದರು.

• ತಬಲಾ ಮಾಂತ್ರಿಕ ಅಲ್ಲಾರಖಾ ಇನ್ನಿಲ್ಲ

ಮುಂಬೈ, ಫೆ. 3 (ಯುಎನ್‌ಐ)– ತಬಲಾದ ಮೇಲೆ ತಮ್ಮ ಮಾಂತ್ರಿಕ ಬೆರಳಾಡಿಸಿ ವಿಶ್ವದ ಲಕ್ಷಾಂತರ ಸಂಗೀತಪ್ರಿಯರ ಹೃದಯ ಗೆದ್ದ ತಬಲಾ ವಾದಕ ಉಸ್ತಾದ್ ಅಲ್ಲಾರಖಾ ಖಾನ್ (81) ಅವರ ಹೃದಯ ತೀವ್ರ ಆಘಾತದಿಂದ ಇಂದು ಶಾಶ್ವತ ಮೌನ ತಾಳಿತು.

ದಕ್ಷಿಣ ಮುಂಬೈನ ನೇಪಿಯನ್ ಸಾಗರ ರಸ್ತೆಯಲ್ಲಿನ ತಮ್ಮ 'ಸಿಮ್ಲಾ ಹೌಸ್' ನಿವಾಸದಲ್ಲಿ ಇಂದು ಬೆಳಗಿನ ಜಾವ ಅವರು ತೀವ್ರ ಹೃದಯಾಘಾತದಿಂದ ನಿಧನರಾದರು.

50 ವರ್ಷಗಳ ಹಿಂದೆ

ಮಂಗಳವಾರ, 4-2-1975

• ಬಾಹ್ಯಾಕಾಶದಲ್ಲಿ ಭಾಷಾ ಸಮಸ್ಯೆ

ಬೆಂಗಳೂರು, ಫೆ. 3– ಬರುವ ಜುಲೈನಲ್ಲಿ ನಡೆಯಲಿರುವ ಅಮೆರಿಕ-ರಷ್ಯಾ ಜಂಟಿ ಬಾಹ್ಯಾಕಾಶ ಯೋಜನೆಗೆಂದು ನಡೆಸುತ್ತಿರುವ ಅನೇಕ ತರಬೇತಿಗಳಲ್ಲಿ ರಷ್ಯನ್ ಮತ್ತು ಇಂಗ್ಲಿಷ್ ಭಾಷಾ ಶಿಕ್ಷಣವೂ ಸೇರಿದೆ.

ಬಾಹ್ಯಾಕಾಶದಲ್ಲಿ ಅಮೆರಿಕ ಮತ್ತು ರಷ್ಯಾದ ಗಗನನೌಕೆಗಳು ಕೂಡಿ ಎರಡೂ ದೇಶದ ಯಾತ್ರಿಗಳು ಪರಸ್ಪರ ಭೇಟಿಯಾದಾಗ ಯೋಗಕ್ಷೇಮ ವಿಚಾರಿಸಿ, ವಿಚಾರ ವಿನಿಮಯ ನಡೆಸಬೇಕಲ್ಲ.

ಈ ವಿಷಯ ಹೊರಬಿದ್ದದ್ದು ರಷ್ಯಾದ ಗಗನಯಾತ್ರಿ ಕರ್ನಲ್ ಯೂರಿ ಅರ್ತ್ಯುಖಿನ್ ಇಂದು ಇಲ್ಲಿ ಪತ್ರಕರ್ತರನ್ನು ಭೇಟಿಯಾದಾಗ. ಕರ್ನಲ್ ಅರ್ತ್ಯುಖಿನ್ ಅವರು ಸೋಯುಜ್–14 ಗಗನನೌಕೆಯಲ್ಲಿ ಫ್ಲೈಟ್ ಎಂಜಿನಿಯರ್ ಆಗಿದ್ದರು. ಪ್ರಸಕ್ತ ಮುಂಬೈನಲ್ಲಿ ರಷ್ಯಾದ ಬಾಹ್ಯಾಕಾಶ ಯಾನಗಳ ವಸ್ತುಪ್ರದರ್ಶನ ಉದ್ಘಾಟಿಸಲು ಭಾರತಕ್ಕೆ ಬಂದಿದ್ದಾರೆ.

• ಸ್ಕೂಟರ್, ಮೋಟರ್ ಸೈಕಲ್ ಸವಾರರಿಗೆ ತಲೆ ರಕ್ಷಣೆ ಕವಚ ಕಡ್ಡಾಯ

ಬೆಂಗಳೂರು, ಫೆ. 3– ಮೋಟರ್ ಸೈಕಲ್, ಸ್ಕೂಟರ್ ಮುಂತಾದ ಎರಡು ಚಕ್ರದ ಮೋಟರ್ ವಾಹನಗಳ ಸವಾರರು ಮತ್ತು ಅವುಗಳ ಹಿಂದಿನ ಸೀಟಿನಲ್ಲಿ ಕುಳಿತು ಸವಾರಿ ಮಾಡುವವರು ಮೇ 1ರಿಂದ ರಾಜ್ಯದಲ್ಲಿ ತಲೆ ರಕ್ಷಣೆ ಕವಚ (ಹೆಲ್ಮೆಟ್) ಧರಿಸಬೇಕಾಗಿದೆ.

ಆ ಬಗ್ಗೆ ಮೋಟರ್ ವಾಹನಗಳ ಕಾಯ್ದೆಯನ್ನು ತಿದ್ದುಪಡಿ ಮಾಡುವ ಕರಡು ಆಜ್ಞೆಯನ್ನು ಸರ್ಕಾರ ಇಂದು ಪ್ರಕಟಿಸಿತು.

ಅಂಥ ಸುರಕ್ಷಿತ ತಲೆ ಕವಚ ಧರಿಸದೆ ಸವಾರಿ ಮಾಡುವವರಿಗೆ 100 ರೂ. ಜುಲ್ಮಾನೆ.

ಈ ವಿಷಯಕ್ಕೆ ಮಹತ್ವವನ್ನೇ ನೀಡದೆ ಮುಗಿದುಹೋಗಿದೆ ದೆಹಲಿಯ ಚುನಾವಣಾ ಪ್ರಚಾರ!

ವಾಯುಮಾಲಿನ್ಯ ಮರೆಯಾಯಿತೆಲ್ಲಿ?

ವಿಶ್ಲೇಷಣೆ

ಯೋಗೇಂದ್ರ ಯಾದವ್

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ವಾಯುಮಾಲಿನ್ಯವು ಒಂದು ವಿಷಯವೇ ಆಗಿಲ್ಲ ಏಕೆ? ಸಾಮಾನ್ಯವಾಗಿ ಕುತೂಹಲ ವ್ಯಕ್ತಪಡಿಸುವುದಕ್ಕಿಂತ ಕಳವಳವನ್ನು ತೋರಿಸಲು ಈ ಪ್ರಶ್ನೆಯನ್ನು ಕೇಳಲಾಗುತ್ತದೆ. ರಾಜಕೀಯ ಆರೋಪ-ಪ್ರತ್ಯಾರೋಪಗಳ ಹೊಂಜುವಿನಲ್ಲಿ ಈ ಪ್ರಶ್ನೆಯ ಉತ್ತರವು ಕಳೆದುಹೋಗಿದೆ. ಎಲ್ಲಕ್ಕಿಂತ ಮುಖ್ಯವಾಗಿದ್ದ ಈ ಪ್ರಶ್ನೆಯ ಪ್ರಸ್ತಾಪವನ್ನೇ ಮಾಡದೆ ದೆಹಲಿ ಚುನಾವಣಾ ಪ್ರಚಾರವು ಮುಗಿದುಹೋಗಿದೆ. ಗಂಭೀರ ಸಮಸ್ಯೆ ಎಂಬಂತೆ ನಾವಿದನ್ನು ನೋಡಬೇಕಿದೆ. ಹಾಗೆ ಮಾಡಿದಾಗ, ಇದು ನಮ್ಮನ್ನು ಪ್ರಜಾತಂತ್ರ ಸಿದ್ಧಾಂತದ ಕೇಂದ್ರಕ್ಕೇ ಕರೆದೊಯ್ಯುತ್ತದೆ.

ಚುನಾವಣಾ ಫಲಿತಾಂಶವನ್ನು ನಿರ್ಧರಿಸುವಲ್ಲಿ ಅತ್ಯಂತ ನಿರ್ಣಾಯಕ ಅಲ್ಲದಿದ್ದರೂ ಅತ್ಯಂತ ದೊಡ್ಡ ವಿಚಾರವಾಗಿ ವಾಯುಮಾಲಿನ್ಯ ಇರಬೇಕಿತ್ತು ಎಂದು ನಿರೀಕ್ಷಿಸಲು ಹಲವು ಉತ್ತಮ ಕಾರಣಗಳಿವೆ. ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಸುರಕ್ಷಿತ ಎಂದು ಪರಿಗಣಿಸಿದ್ದಕ್ಕಿಂತ 20 ಪಟ್ಟು ಹೆಚ್ಚು ವಾಯುಮಾಲಿನ್ಯವು ದೆಹಲಿಯಲ್ಲಿ ಇದೆ. ಲಾಹೋರ್‌ನ ನಂತರ ಜಗತ್ತಿನಲ್ಲಿಯೇ ಅತಿ ಹೆಚ್ಚು ವಾಯುಮಾಲಿನ್ಯವು ರಾಷ್ಟ್ರ ರಾಜಧಾನಿಯಲ್ಲಿ ಇದೆ. ದೆಹಲಿಯಲ್ಲಿ ವಾಸಿಸುವ ಜನರು ವಾಯುಮಾಲಿನ್ಯದಿಂದಾಗಿ ತಮ್ಮ ಆಯುಷ್ಯದಲ್ಲಿ ಎಂಟರಿಂದ 10 ವರ್ಷಗಳನ್ನು ಕಳೆದುಕೊಳ್ಳುತ್ತಿದ್ದಾರೆ. ದೆಹಲಿಯ ಪೌರರು ತಾವು ಉಸಿರಾಡುತ್ತಿರುವ ಗಾಳಿಯ ಕುರಿತು ಪ್ರಶ್ನಿಸಲು ಮುಂದಾದರು ಎಂದು ಭಾವಿಸೋಣ; ಆಗ ಅವರು ವಾಯುಮಾಲಿನ್ಯದ ವಿರುದ್ಧ ಕ್ರಮ ಕೈಗೊಳ್ಳುವಂತೆ ನಗರವನ್ನು ಆಳುವವರನ್ನು ಆಗ್ರಹಿಸಬಹುದು. ಚುನಾವಣೆಯನ್ನು ಒಂದು ಅವಕಾಶವಾಗಿ ಭಾವಿಸಿ, ಆಳುವವರನ್ನು ಅವರು ಉತ್ತರದಾಯಿಗಳನ್ನಾಗಿ ಮಾಡಬಹುದು. ಹೀಗಾದಾಗ, ಪಕ್ಷಗಳು ಆಕರ್ಷಕ ಪರಿಹಾರಗಳನ್ನು ಜನರ ಮುಂದೆ ಪೈಪೋಟಿಯಲ್ಲಿ ಇರಿಸಬಹುದು; ಅತ್ಯುತ್ತಮ ಪರಿಹಾರಗಳನ್ನು ಮುಂದಿಡುವ ಪಕ್ಷವು ಗೆಲ್ಲುವ ಅವಕಾಶ ಹೆಚ್ಚಿರುತ್ತದೆ.

ಆದರೆ, ದೆಹಲಿಯಲ್ಲಿ ಈಗ ನಡೆಯುತ್ತಿರುವ ಚುನಾವಣೆಯಲ್ಲಿ ಅಂತಹುದೇನೂ ಘಟಿಸಿಲ್ಲ. ಈಗ ಇರುವ ಆರು ಯೋಜನೆಗಳ ಜೊತೆಗೆ ಇನ್ನೂ 15 ಗ್ಯಾರಂಟಿಗಳನ್ನು ದೆಹಲಿಯ ಮತದಾರರಿಗೆ ನೀಡುವುದಾಗಿ ಎಎಪಿ ಘೋಷಿಸಿದೆ. ಈ ದೀರ್ಘ ಪಟ್ಟಿಯಲ್ಲಿ ವಾಯುಮಾಲಿನ್ಯದ ವಿಚಾರ ಇಲ್ಲ. ಶುದ್ಧಗಾಳಿ ಇರಬೇಕು ಎನ್ನುವುದಕ್ಕಿಂತ ಪುನರಾಯ್ಕೆಯೇ ಹೆಚ್ಚು ಮಹತ್ವದ್ದು ಎಂದು ಈ ಪಕ್ಷ ಭಾವಿಸಿರುವುದು ವಿಷಾದನೀಯ. ಮಾಲಿನ್ಯವನ್ನು ಅರ್ಧದಷ್ಟು ಕಡಿತ ಮಾಡಲಾಗುವುದು ಎಂಬ ಅಂಶ ಬಿಜೆಪಿಯ ಪ್ರಣಾಳಿಕೆಯಲ್ಲಿ ಇದೆ. ಆದರೆ, ಹೆಚ್ಚು ಸ್ಪ್ರಿಂಕ್ಲರ್‌ಗಳು, 'ವಾಯು' ಉಪಕರಣಗಳ ಮೂಲಕ ಇದನ್ನು ಸಾಧಿಸಲಾಗುವುದು ಎಂಬುದಕ್ಕೆ ಅರ್ಥವೇ ಇಲ್ಲ. ಕಾಂಗ್ರೆಸ್ ಪಕ್ಷವು ಈ ಕುರಿತು ಇನ್ನೂ ಮಾತನಾಡಿಲ್ಲ. ದಿನವೂ ನಡೆಯುತ್ತಿರುವ ರಾಜಕೀಯ ಚರ್ಚೆಯ ವಾದ- ವಿವಾದಗಳಲ್ಲಿ ಯಮುನಾ ನದಿಯ ಮಾಲಿನ್ಯದ ವಿಚಾರ ಪ್ರಸ್ತಾಪವಾದಷ್ಟು ಕೂಡ ವಾಯುಮಾಲಿನ್ಯದ ಕುರಿತು ಯಾರೂ ಮಾತನಾಡುತ್ತಿಲ್ಲ. ಬೇಡಿಕೆ ಮತ್ತು ಪೂರೈಕೆ ಸಮತೋಲನವಿಲ್ಲದಿದ್ದರೆ 'ಮಾರುಕಟ್ಟೆ ವೈಫಲ್ಯ' ಎಂದು ಅರ್ಥ ಶಾಸ್ತ್ರಜ್ಞರು ಹೇಳುವ ಪರಿಭಾಷೆಗೆ ರಾಜಕೀಯವಾಗಿ ಸಮಾನಾರ್ಥಕ ಸ್ಥಿತಿ ಇದು. ಎಎಪಿ ಅಧಿಕಾರ ಉಳಿಸಿ ಕೊಳ್ಳಲಿದೆಯೇ ಎಂಬುದು ಗೊತ್ತಿಲ್ಲ. ಆದರೆ, ಎಎಪಿಯ ಗೆಲುವು ಅಥವಾ ಸೋಲಿಗೆ ದೆಹಲಿಯ ವಾಯುಮಾಲಿನ್ಯ ಕಾರಣ ಆಗದು ಎಂಬುದು ನಮಗೆ ತಿಳಿದಿದೆ.

ಅಸಮಾನತೆ ಕಣ್ಣಿಗೆ ಕಾಣಿಸದು, ಆದರೆ, ಮಾಲಿನ್ಯ ಎದ್ದು ಕಾಣಿಸುತ್ತಿದೆ. ಮಾಲಿನ್ಯದ ಪರಿಣಾಮಗಳು ಸಾಮಾನ್ಯ ಜನರ ಗ್ರಹಿಕೆಗೆ ನಿಲುಕುವಂತಿವೆ. ಪರಿಸರ ಪ್ರಜ್ಞೆಯು ಕರ್ನಾಟಕ ಅಥವಾ ಕೇರಳದಲ್ಲಿ ಇದ್ದಷ್ಟು ಗಾಢವಾಗಿ ಇಲ್ಲ ಎಂಬುದು ನಿಜ. ಆದರೆ, ದೇಶದ ಬಹುಪಾಲು ಭಾಗಗಳ ಜನರಿಗಿಂತ ಇಲ್ಲಿನ ಜನರಿಗೆ ಎಕ್ಯುಐ (ವಾಯು ಗುಣಮಟ್ಟ ಸೂಚ್ಯಂಕ) ಎಂದರೆ ಏನು ಎಂಬುದು ತಿಳಿದಿದೆ. ಒಂದು ವೇಳೆ ಅವರಿಗೆ ಗೊತ್ತಿಲ್ಲದೇ ಇದ್ದರೂ ಹೊಂಜು ಸಮಸ್ಯೆ ಅವರ ಕಣ್ಣೆದುರೇ ಇದೆ. ಅದಲ್ಲದೆ, 'ರಾಷ್ಟ್ರೀಯ' ಮಾಧ್ಯಮಗಳು ಈ ವಿಚಾರವನ್ನು ಸದಾ ಪ್ರಸ್ತಾಪಿಸುತ್ತಲೇ ಇರುತ್ತವೆ.

ಪ್ರಜಾಪ್ರಭುತ್ವದಲ್ಲಿ 'ಪೂರೈಕೆ'ಯ ವೈಫಲ್ಯಕ್ಕೆ ವಾಯುಮಾಲಿನ್ಯವು ಅತ್ಯುತ್ತಮ ಉದಾಹರಣೆಯಾಗಿದೆ. ಜನರ ನಿಜವಾದ ಅಗತ್ಯವೊಂದು ಬೇಡಿಕೆಯಾಗಿ ಪರಿವರ್ತನೆ ಆಗುತ್ತದೆ. ಈ ಬೇಡಿಕೆಯನ್ನು ಶಕ್ತಿಯುತವಾಗಿ ಮುಂದಿಡುವ ಕೆಲಸವೂ ಆಗಬಹುದು. ಹಾಗಿದ್ದರೂ ರಾಜಕೀಯ ಪಕ್ಷಗಳು ಇದಕ್ಕೆ ಸ್ಪಂದಿಸದೇ ಇರಬಹುದು. ಜನರ ಅಗತ್ಯಗಳು ಮತ್ತು ಬೇಡಿಕೆಗಳನ್ನು ಅತ್ಯುತ್ತಮವಾಗಿ ಮತ್ತು ಅತ್ಯಂತ ವಿಶ್ವಾಸಾರ್ಹವಾಗಿ ಪೂರೈಸಲು ರಾಜಕೀಯ ಪಕ್ಷಗಳ ಮಧ್ಯೆ ಪೈಪೋಟಿ ಏರ್ಪಟ್ಟಾಗ ಮಾತ್ರ ಅದು ಪರಿಣಾಮಕಾರಿಯಾದ ರಾಜಕೀಯ ವಿಚಾರವಾಗುತ್ತದೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಹೀಗೆ ಆಗುವುದಿಲ್ಲ. ಏಕೆಂದರೆ, ರಾಜಕೀಯ ಪಕ್ಷಗಳಲ್ಲಿ ಸಮಸ್ಯೆಗೆ ಪರಿಹಾರ ಇರುವುದಿಲ್ಲ ಅಥವಾ ಅವರಿಗೆ ಸಮಸ್ಯೆ ಪರಿಹರಿಸುವ ಮನಸ್ಸು ಇರುವುದಿಲ್ಲ. ಮುಂಚೂಣಿಯಲ್ಲಿರುವ ಸ್ಪರ್ಧಿಗಳು ಒಂದು ವಿಚಾರವನ್ನು ಪ್ರಚಾರದಿಂದ ಹೊರಗೇ ಇರಿಸಲು ಪ್ರಯತ್ನಿಸಿದರೆ ಮತದಾರರ ಮುಂದಿನ ಆಯ್ಕೆಗಳು ಸೀಮಿತವಾಗುತ್ತವೆ. ಅವರು ಹೊಸದೊಂದು ಪಕ್ಷಕ್ಕೆ ಬೆಂಬಲ ನೀಡಬಹುದು ಎಂದು ತಾತ್ವಿಕವಾಗಿ ಹೇಳಬಹುದು. ಆದರೆ, ಅಂತಹ ಅವಕಾಶಗಳು ವಿರಳ.

ಇದು, ದೆಹಲಿಯಲ್ಲಿರುವ ನಿಜವಾದ ಸಮಸ್ಯೆ. ದೆಹಲಿಯ ಮಾಲಿನ್ಯ ಸಮಸ್ಯೆಯು ಇನ್ನಷ್ಟು ತೀವ್ರಗೊಳ್ಳಲು ಎಎಪಿ ಮತ್ತು ಬಿಜೆಪಿ ನಡೆಗಳು ಕಾರಣ ಎಂದು ಹೇಳಬಹುದು. ಮಾಲಿನ್ಯವನ್ನು ಮೂರನೇ ಒಂದರಷ್ಟು ತಗ್ಗಿಸಲಾಗುವುದು ಎಂಬ 'ಗ್ಯಾರಂಟಿ'ಯನ್ನು 2020ರ ಚುನಾವಣೆ ಸಂದರ್ಭದಲ್ಲಿ ಎಎಪಿ ನೀಡಿತ್ತು. ಆದರೆ, ಅದನ್ನು ಈಡೇರಿಸಲು ಮಾಡಿದ ಕೆಲಸ ಬಹಳ ಕಡಿಮೆ. ನಗರದಲ್ಲಿ ಎರಡು ಕೋಟಿ ಮರಗಳನ್ನು ಬೆಳೆಸಲಾಗುವುದು ಎಂಬ ಭರವಸೆಯನ್ನು ಎಎಪಿ ನೀಡಿತ್ತು. ಆದರೆ, ಐದು ವರ್ಷಗಳಲ್ಲಿ ದೆಹಲಿಯಲ್ಲಿ ಮರಗಳ ಸಂಖ್ಯೆ ಇನ್ನಷ್ಟು ಕಡಿಮೆಯಾಗಿದೆ ಎಂದು ಅಂಕಿ ಅಂಶಗಳು ಹೇಳುತ್ತವೆ. ಬಿಜೆಪಿ ಕೂಡ ಹಲವು ಪ್ರಶ್ನೆಗಳಿಗೆ ಉತ್ತರಿಸಬೇಕಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಶುದ್ಧಗಾಳಿ ಕಾರ್ಯಕ್ರಮವು ಗಾಳಿಯನ್ನು ಶುದ್ಧೀಕರಿಸುವಲ್ಲಿ ವಿಫಲವಾಗಿದೆ. ದೆಹಲಿ ಮಹಾನಗರಪಾಲಿಕೆಯು ಕೊಳಕು ಮತ್ತು ಭ್ರಷ್ಟಾಚಾರಕ್ಕೆ ಅನ್ವರ್ಥದಂತೆ ಇದೆ.

ಶೀಲಾ ದೀಕ್ಷಿತ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ ಡೀಸೆಲ್ ಚಾಲಿತ ಬಸ್‌ಗಳನ್ನು ಸಿಎನ್‌ಜಿಯಾಗಿ ಪರಿವರ್ತಿಸಲಾಯಿತು. ದೆಹಲಿ ಸರ್ಕಾರವೊಂದು ಮಾಲಿನ್ಯ ತಡೆಗೆ ಏನಾದರೂ ಕ್ರಮ ಕೈಗೊಂಡಿದ್ದರೆ ಇದು ಮಾತ್ರ. ಈ ಕಾರ್ಯಸೂಚಿಯನ್ನು ಈಗ ಯಾರೊಬ್ಬರೂ ಮುಂದಕ್ಕೆ ಒಯ್ಯುತ್ತಿಲ್ಲ. ಎಲ್ಲರೂ ರೈತರನ್ನು ದೂರುತ್ತಿದ್ದಾರೆ. ಆದರೆ, ಗದ್ದೆಯಲ್ಲಿನ ಕೂಳೆಗೆ ಬೆಂಕಿ ಹಾಕುವುದನ್ನು ತಡೆಯಲು ರೈತರಿಗೆ ಸಮರ್ಪಕವಾದ ಪರಿಹಾರವನ್ನು ಯಾವ ಸರ್ಕಾರವೂ ನೀಡಿಲ್ಲ. ಕೈಗಾರಿಕೆ ಮತ್ತು ವಾಹನಗಳಿಂದ ಆಗುವ ಮಾಲಿನ್ಯವನ್ನು ಯಾವುದೇ ಸರ್ಕಾರ ಅಥವಾ ರಾಜಕೀಯ ಪಕ್ಷ ಗಂಭೀರವಾಗಿ ತೆಗೆದುಕೊಂಡಿಲ್ಲ. ಇದರಲ್ಲಿ ಸ್ಥಾಪಿತ ಹಿತಾಸಕ್ತಿಗಳು ಇವೆ. ಹಾಗಾಗಿ, ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ನ್ಯಾಯಾಲಯ ಆದೇಶ ನೀಡುವವರೆಗೆ ಕಾಯುವುದೇ ಸುರಕ್ಷಿತ. ಅಥವಾ ರಸ್ತೆಗೆ ನೀರು ಚಿಮುಕಿಸುವುದು ಅಥವಾ ಹೊಂಜು ಗೋಪುರ ನಿರ್ಮಾಣದಂತಹ ವಿನೋದಗಳಲ್ಲಿ ಭಾಗಿಯಾಗಬಹುದು. ಜೊತೆಗೆ, ಶೀಶ್‌ಮಹಲ್ ಮತ್ತು ರೋಹಿಂಗ್ಯಾ ಕುರಿತ ಚರ್ಚೆಯನ್ನು ಮುಂದುವರಿಸಬಹುದು.

ವಾಯುಮಾಲಿನ್ಯ ಅಥವಾ ದೆಹಲಿಯ ಕುರಿತ ಪಾಠವಷ್ಟೇ ಅಲ್ಲ ಇದು. ಕೋವಿಡ್‌ನಿಂದಾದ ಸಾವುಗಳು, ಬಡತನ, ಕಳಪೆ ಗುಣಮಟ್ಟದ ಶಿಕ್ಷಣ ಅಥವಾ ಆರೋಗ್ಯ ಸೇವೆಯಂತಹ ವಿಚಾರಗಳು ಚುನಾವಣಾ ವಿಷಯ ಏಕೆ ಆಗುವುದಿಲ್ಲ ಎಂಬುದರ ಕುರಿತ ಪ್ರಜಾಪ್ರಭುತ್ವದ ಸಿದ್ಧಾಂತದ ಪಾಠವೂ ಹೌದು. ಚುನಾವಣಾ ಪ್ರಜಾತಂತ್ರದಲ್ಲಿ ಹಲವು ವಿಚಾರಗಳು ಹೊಂದಿಕೆಯಾದಾಗ ಮಾತ್ರ ಜನರ ಇಚ್ಛೆ ನೆರವೇರುತ್ತದೆ. ಆದರೆ, ಹಾಗೆ ಆಗುವುದು ಬಹಳ ವಿರಳ. ಈಗಿನ ಪ್ರಜಾಪ್ರಭುತ್ವದಲ್ಲಿ, ಮತದಾರರು ಮುಂದಿಟ್ಟ ವಿಚಾರಗಳಿಗೆ ರಾಜಕೀಯ ಪಕ್ಷಗಳು ಮತ್ತು ನಾಯಕರು ಸ್ಪಂದಿಸುವುದೇ ಇಲ್ಲ. ಪಕ್ಷಗಳು ಮುಂದಿಡುವ ವಿಚಾರಗಳಿಗೆ ಮತದಾರರು ಸ್ಪಂದಿಸುತ್ತಾರೆ. ತಮಗೆ ಮುಖ್ಯವಾಗಿರುವ ವಿಚಾರಗಳನ್ನು ಕೈಗೆತ್ತಿಕೊಳ್ಳುವಂತೆ ಪೌರರು ಒಟ್ಟಾಗಿ ಬಲವಂತ ಮಾಡದೇ ಇದ್ದರೆ ಚುನಾವಣಾ ವ್ಯವಸ್ಥೆಯಿಂದ ಅವರಿಗೆ ಯಾವುದೇ ಲಾಭ ಇಲ್ಲ. ಮತದಾರರು ಚದುರಿದ ಸಾರ್ವಭೌಮರಾಗಿದ್ದು, ತಮ್ಮ ಮುಂದೆ ಇರುವುದರಲ್ಲಿಯೇ ಅವರು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ಚುರುಮುರಿ

ಅಕ್ಕನ ಲೆಕ್ಕ

• ಡಿ.ಎಸ್.ಲಿಂಗರಾಜು

'ಹಾಪ್‌ರೇಟ್- ಚೀಪ್‌ರೇಟ್ ಟೀವಿ, ಫೋನು, ಬ್ಯಾಟರಿ, ಪಾರಿನ್ ಕಾರು- ಬೈಕು ಬೇಕೇನಣ್ಣೆ' ಅಕ್ಕ ಬಜೆಟ್ ಬುಟ್ಟಿ ಹೊತುಗಂದು ಕೂಗ್ತಾ ಹೋಯ್ತಿದ್ಲು.

'ಅಲ್ಲಕಾ ತಂಗ್ಯವ್ವ, ಬೇಕಾ ಅಂತ ಕೂಗಿಕ್ಯಂದು ಹಂಗೇ ಹೋಯ್ತಿದ್ದೀಯೆ. ಇನ್ನೊಂದು ಮೂಟೇಲೂ ಏನದೆ ತೋರು' ಅಂತ ತುರೇಮಣೆ ಕೆಣಕಿದರು.

'ಆ ಮೂಟೆ ಮುಟ್ಟಿದ್ರೆ ಜ್ವಾಕೆ. ಅದು ಉತ್ತರದ ಬೀದಿಯೋರ್ದು ಕನಣ್ಣೆ. ಸಿಕ್ಕಿದ್ದು ತಕ್ಕಂದು ಸುಮ್ಮಗಿರಿ' ಅಂತಂದಳು.

'ತವರಿನ ಮ್ಯಾಲೆ ಮಮಕಾರ ಇರಲಿ ಕವ್ವ. ಬಿಹಾರ, ಉತ್ತರದೋರಿಗೆ ಕಾಸು ಭರಪೂರ. ನಮಗೆ ಕೊಡಬೇಕಾದ ಟ್ಯಾಕ್ಸು ಪಾಲಿಗೇ ಅಡರಗಾಲು ಹಾಕ್ತೀಯಲ್ಲ ತಾಯಿ' ತುರೇಮಣೆ ಬೇಜಾರಲ್ಲಿ ಹೇಳಿದರು.

'ನಿಮಗೇನಣ್ಣೆ ಚೆನ್ನಾಗಿ ದುಡೀತಿದ್ದರಿ. ಉತ್ತರದ ಅಣ್ತಮ್ಮಗಳು ಹೊಟ್ಗೆ-ಬಟ್ಗೆ ಇಲ್ಲದೆ ಕಣ್ಣು ಮೆಡ್ಡರಿಸಿಕ್ಯಂದು ಕೂತವೆ. ಅವರಿಗೆ ಕ್ವಟ್ರೆ ನಿಮಗ್ಯಾಕೆ ಉರಿ. ಪುಸ್ಕಟ್ಟೆ ಕೊಟ್ಟು ಕಾಸು ಅಲಾಕ್ ಮಾಡ್ತಿದ್ದೀರಿ. ನನ್ಯಾಕೆ ದೂರತಿರ. ಪರರ ಮನೆಗೆ ಹೋದ ಮ್ಯಾಲೆ ನಾಕು ಜನ ಸೈ ಅನ್ನಂಗೆ ಬಾಳ ಬೇಕಲ್ಲವುರಾ? ಟ್ಯಾಕ್ಸು ಕಡಮೆ ಮಾಡಿ ಕೈತುಂಬಾ ಕಾಸು ಕೊಟ್ಟುದವಿ' ಅಂದಳು ಅಕ್ಕ.

'ಅಭಿವೃದ್ಧಿ ಎಂಜಿನ್ನಿಗೆ ಉತ್ತೇಜನ ಅಂದುದಿಯ. ನಾವು ಬಾಡಿಗೆ ತಕ್ಕಂದ್ರೆ ಜಿಎಸ್‌ಟಿ ಕಟ್ಟಬಕು. ಕಾಲೇಜು ಡೊನೇಶನ್ನಿಗೆ ಇಲ್ಲವಂತೆ. ಹೋದ್ಸೊರ್ಸ ಭಾರೀ ಅನುದಾನ ಘೋಷಣೆ ಮಾಡಿದ್ರಿ, ಯಾವುದೂ ಕೊಡ್ನಿಲ್ಲ. ಅಚ್ಚೇ ದಿನ್ ಯಾವಾಗ ಬಂದದೋ ಕಾಣೆ' ತುರೇಮಣೆ ಮಾತಿಗೆ ಅಕ್ಕನಿಗೆ ಕ್ವಾಪ ಬಂತು.

'ಇದು ಊರೊಟ್ಟಿನ ಬಜೆಟ್ ಕನಣ್ಣೆ. ನಾವೂ ಸಾಲ ಮಾಡಿ ಕಾಸು ತರಬಕು. ನಿಮಗೂ ಸಾಲ ಕೊಡ್ತೀವಿ. ನಿಮ್ಮ ಹಣಕಾಸು ಆರೋಗ್ಯ ಕೆಟ್ಟು ಕುಲಾಕರ್ಮಾಗ್ಯದೆ. ಮೊದಲು ಅದ ಸರಿಮಾಡಿಕ್ಯಳಿ' ಅಕ್ಕ ತಿವಿದಳು.

'ಯಾಸೆಟ್ಟ ದೇಸದ ಜನಕ್ಕೆಲ್ಲಾ ತಲಾ ಹದಿನೈದು ಲಕ್ಷ ಕಾಸು ಕೊಡ್ತೀವಿ ಅಂದುತ್ತಲ್ಲ ಮೋದಿ ಮಾವ ಅದುನ್ನಾರು ಕೊಡ್ಸವ್ವ' ತುರೇಮಣೆ ಮಾತಿಗೆ ಅಕ್ಕ ಸಿಟಗಂದು ಬುಟ್ಟಿ ತಕ್ಕಂದು ಕಡೆದುಹೋದಳು.

ಸಂಗತ

ಆಗ ಅವರು, ಈಗ ಇವರು?

ಹೆಣ್ಣಿನ ಬಗ್ಗೆ ಗಂಡಿನಲ್ಲಿ ಅರಿವು ಬಿತ್ತಬೇಕಾದ ಹಾಗೂ ಹೆಣ್ಣಿನಲ್ಲಿ ಗಂಡಿನ ಕುರಿತಾದ ಚಿಂತನೆಯನ್ನು ಮೂಡಿಸಬೇಕಾದ ಹೊತ್ತು ಇದು

• ಸದಾಶಿವ್ ಸೊರಟೂರು

ಪುರುಷರ ಹಕ್ಕುಗಳ ಬಗೆಗಿನ ಚರ್ಚೆಯು ಇಂದು ನಿನ್ನೆಯದಲ್ಲ. ಅದು ಹೊಸತೂ ಅಲ್ಲ. ಆದರೆ ಇತ್ತೀಚೆಗೆ ಅಲ್ಲಲ್ಲಿ ಕಂಡುಬರುತ್ತಿರುವ ಕೆಲವು ಕೌಟುಂಬಿಕ ಅಪರಾಧ ಪ್ರಕರಣಗಳು ಮತ್ತು ಪುರುಷರ ಆತ್ಮಹತ್ಯೆ ಪ್ರಕರಣಗಳು ಪುರುಷರ ಹಕ್ಕಿನ ಬಗ್ಗೆ ದೊಡ್ಡ ಚರ್ಚೆಯನ್ನು ಹುಟ್ಟುಹಾಕಿವೆ. 2024ರ ಏಪ್ರಿಲ್‌ನಲ್ಲಿ ಭಾರತೀಯ ಪುರುಷರ ಹಕ್ಕುಗಳ ಸಂಘದವರು ದೇಶದ ಕೆಲವು ನಗರಗಳಲ್ಲಿ ಪ್ರತಿಭಟಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಪುರುಷರ ಬಗ್ಗೆ ಮಾತನಾಡುತ್ತಿದ್ದೇವೆ ಎಂದರೆ ಮಹಿಳೆಯರನ್ನು ಕಡೆಗಣಿಸುತ್ತಿದ್ದೇವೆ ಎಂದಲ್ಲ. ಹೆಣ್ಣಿನ ಸ್ಥಾನಮಾನ ಮತ್ತು ಹಕ್ಕುಗಳ ಬಗ್ಗೆ ಮಾತನಾಡುವಾಗ ಗಂಡಿನ ಪ್ರಸ್ತಾಪ ಹಾಗೂ ಪುರುಷರಿಂದ ಮಹಿಳೆಯರು ಅನುಭವಿಸಬೇಕಾಗಿ ಬರುವ ಕಷ್ಟಗಳ ಬಗ್ಗೆ ಮಾತನಾಡುವಾಗ ಅಲ್ಲಿ ಹೆಣ್ಣಿನ ಮಾತು ಬರುವುದು ಸಹಜ.

ನೂರಾರು ವರ್ಷಗಳ ಕಾಲ ಹೆಣ್ಣಿನ ಮೇಲೆ ನಡೆದ ದಬ್ಬಾಳಿಕೆ, ಶೋಷಣೆ, ಅವಳನ್ನು ನಡೆಸಿಕೊಂಡ ರೀತಿಗೆ ಯಾವ ನಾಳೆಗಳೂ ನಮ್ಮನ್ನು ಕ್ಷಮಿಸಲಾರವು. ಅವಳ ರಕ್ಷಣೆ, ಅವಳಿಗೆ ಕೊಡಬೇಕಾದ ಹಕ್ಕುಗಳು, ಸ್ವಾತಂತ್ರ್ಯದಂತಹವುಗಳ ಬಗ್ಗೆ ನಾವು ಇನ್ನೂ ಸಮಾಧಾನಕರ ಅನ್ನಿಸುವಷ್ಟನ್ನು ಸಾಧಿಸಿಲ್ಲ ಎಂಬುದು ನಿಜಕ್ಕೂ ಖೇದಕರ. ಅದಿನ್ನೂ ಬಾಕಿ ಇರುವಾಗಲೇ ಪುರುಷರ ಹಕ್ಕುಗಳ ಬಗೆಗಿನ ಹೋರಾಟ ಶುರುವಾಗಿದೆ.

ಪುರುಷನನ್ನು ಅತಿಯಾಗಿ ಮೆರೆಸಿದ್ದೇ ಹೆಣ್ಣಿನ ಸ್ಥಾನಮಾನ ಕುಸಿದುಹೋಗಲು ಕಾರಣ. ಅದು ಎಷ್ಟರ ಮಟ್ಟಿಗೆ ಹೋಗಿದೆ ಅಂದರೆ, ಗಂಡು ಇರಬೇಕಾದದ್ದೇ ಹಾಗೆ ಅನ್ನುವಷ್ಟರ ಮಟ್ಟಿಗೆ ಅದು ರೂಪುಗೊಂಡಿದೆ.

'ಪುರುಷ' ಎಂಬುವನು ಹುಟ್ಟುವುದಿಲ್ಲ, ಅವನನ್ನು ರೂಪಿಸಲಾಗುತ್ತದೆ. ಗಂಡು ಮಗುವಿನ ಮೇಲೆ 'ಪುರುಷ ನಡವಳಿಕೆ'ಗಳನ್ನು ಆರೋಪಿಸಲಾಗುತ್ತದೆ. ಅವನು ಅಳಬಾರದು, ಯಾವುದಕ್ಕೂ ಕುಗ್ಗಬಾರದು, ಹೆಚ್ಚು ಭಾವುಕನಾಗಬಾರದು, ಅವನಲ್ಲಿ ಒಂದು ಬಗೆಯ ದರ್ಪ ಇರಬೇಕು, ಹೆಚ್ಚು ದುಡಿಯಬೇಕು, ಹೆಚ್ಚು ಜವಾಬ್ದಾರಿ ಹೊರಬೇಕು, ಅವನು ಹೆಚ್ಚು ಕಷ್ಟಸಹಿಷ್ಣು, ಹೆಣ್ಣನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು... ಹೀಗೆ ಹಲವು ವಿಚಾರಗಳನ್ನು ಅವನ ಮೇಲೆ ಹೇರುತ್ತಾ ಹೋದಾಗ ಒಬ್ಬ ನಿರ್ಭಾವುಕ 'ಪುರುಷ' ರೂಪುಗೊಳ್ಳುತ್ತಾನೆ. ಅವನೊಳಗಿನ ಪುರುಷಾಹಂಕಾರ ಎದ್ದು ಕೂರುತ್ತದೆ.

ಅವನೊಳಗೆ ಈ ಬಗೆಯ ಮನೋಭಾವ ಬಿತ್ತುವವರು ಗಂಡಸರಷ್ಟೇ ಆಗಿರುವುದಿಲ್ಲ, ಹೆಂಗಸರೂ ಇರುತ್ತಾರೆ. ಹೆಂಡತಿಯನ್ನು ಹೇಗೆ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು ಅನ್ನುವ ಹಲವು ಪಾಠಗಳಲ್ಲಿ ಒಂದು ಪಾಠವು ಆ ಪತಿಯ ಅಮ್ಮನಿಂದಲೂ ಬಂದಿರಬಹುದು. ಗಂಡು ತನ್ನ ಈಗಿನ 'ಪುರುಷ' ಹೆಗ್ಗಳಿಕೆಯ ವ್ಯಕ್ತಿತ್ವವನ್ನು ಕಳೆದುಕೊಂಡರೆ ಅದು ಹೆಣ್ಣಿಗೆ ಇಷ್ಟವಾಗುವುದೇ?

ಈ ಪುರುಷ ಪ್ರಾಬಲ್ಯದಿಂದ ಹೆಣ್ಣು ಅನುಭವಿಸಿದ್ದು ಕಡಿಮೆಯೇನಲ್ಲ. ನೂರಾರು ವರ್ಷಗಳ ಕಾಲ ಹೆಣ್ಣು ಅನುಭವಿಸಿದ ನೋವಿಗೆ ಈಗ ಕಾನೂನಿನ ಮುಲಾಮು ಇದೆ. ಇಂತಹ ಕಾನೂನಿನ ದುರ್ಬಳಕೆ ಬಗ್ಗೆ ನಾವು ಈ ಸಂದರ್ಭದಲ್ಲಿ ಯೋಚಿಸಬೇಕಾಗುತ್ತದೆ.

ಉದಾಹರಣೆಗೆ ಹೇಳುವುದಾದರೆ, ಮಹಿಳೆಯು ಪತಿ ಹಾಗೂ ಪತಿಯ ಮನೆಯವರಿಂದ ದೌರ್ಜನ್ಯ ಅಥವಾ ಕ್ರೌರ್ಯಕ್ಕೆ ಒಳಗಾದಲ್ಲಿ ಶಿಕ್ಷಿಸುವ ಅವಕಾಶ ಇರುವ ಐಪಿಸಿ ಸೆಕ್ಷನ್ 498ಎ ದುರುಪಯೋಗದ ಬಗ್ಗೆ ಸುಪ್ರೀಂ ಕೋರ್ಟ್ ಪದೇ ಪದೇ ವ್ಯಕ್ತಪಡಿಸಿದ ಕಳವಳವನ್ನು ಇಲ್ಲಿ ಪ್ರಸ್ತಾಪಿಸಬಹುದು. ದುರುದ್ದೇಶಪೂರಿತ ದೂರುಗಳ ಸಾಧ್ಯತೆ ಇರುವುದರಿಂದ ಪ್ರಕರಣಗಳನ್ನು ಎಚ್ಚರಿಕೆಯಿಂದ ಪರಿಶೀಲಿಸುವ ಅಗತ್ಯವನ್ನು ಅದು ಒತ್ತಿ ಹೇಳಿದೆ. ಸುಮಾರು ಶೇ 20ರಷ್ಟು ಪ್ರಕರಣಗಳು ನಿಜವಲ್ಲದವು ಎಂದು ಹೇಳಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ, ನಿರಪರಾಧಿ ಪುರುಷರು ಸಾಮಾಜಿಕ ಕಳಂಕ, ನ್ಯಾಯ ಪ್ರಕ್ರಿಯೆಯಲ್ಲಿನ ವಿಳಂಬ ಹಾಗೂ ಮಾನಸಿಕ ಆತಂಕದಿಂದ ಬಳಲಬೇಕಾಗುತ್ತದೆ.

ಭಾರತೀಯ ಸಮಾಜದಲ್ಲಿ ಪುರುಷರು 'ಕುಟುಂಬದ ಪೋಷಕ' ಮತ್ತು 'ಭಾವನಾತ್ಮಕವಾಗಿ ಬಲವಾದ' ವ್ಯಕ್ತಿಯಾಗಿರಬೇಕು ಎಂದು ನಿರೀಕ್ಷಿಸಲಾಗುತ್ತದೆ. ಹಣಕಾಸಿನ ಸಮಸ್ಯೆ, ವೈವಾಹಿಕ ಸಂಬಂಧಗಳಲ್ಲಿ ಸಂವಹನದ ಕೊರತೆ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಮುಕ್ತವಾಗಿ ಸಹಾಯ ಕೇಳಲು ಸಾಧ್ಯವಾಗದಿರುವುದು– ಇವೆಲ್ಲವೂ ಪುರುಷರನ್ನು ನಿರಾಶೆಗೊಳಿಸುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಪ್ರಕಾರ 2021ರಲ್ಲಿ ದೇಶದಲ್ಲಿ ದಿನಕ್ಕೆ ಸರಾಸರಿ 32 ಪುರುಷರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಲ್ಲಿ ಅನೇಕರು ವೈವಾಹಿಕ ಸಮಸ್ಯೆಗಳು ಅಥವಾ ಕಾನೂನು ಸಮಸ್ಯೆಗಳನ್ನು ಉಲ್ಲೇಖಿಸಿರುತ್ತಾರೆ.

'ಬಿಡು, ಇಷ್ಟು ದಿನ ಹೆಣ್ಣು ಅನುಭವಿಸಲಿಲ್ಲವೇ?' ಅನ್ನುವ ಪ್ರಶ್ನೆಯು ಈಗ ಪುರುಷ ಎದುರಿಸುವ ಕೆಲವು ಸಂಕಷ್ಟಗಳಿಗೆ ಉತ್ತರವಲ್ಲ. ಆಗ ಅವರು, ಈಗ ಇವರು ಅನ್ನುವುದು ಪರಿಹಾರವಲ್ಲ. ಗಂಡಾಗಲಿ, ಹೆಣ್ಣಾಗಲಿ ಸಂಕಟವಿಲ್ಲದೆ ಬದುಕಬೇಕು.

ನಾವು ಸ್ತ್ರೀಸಂವೇದನೆಯನ್ನು ಹೆಣ್ಣಿನಲ್ಲಿ ಹುಡುಕ ಬಯಸುತ್ತೇವೆ. ಅದು ಪುರುಷರಲ್ಲೂ ಮಹಿಳೆಯರಲ್ಲೂ ಇರಬೇಕು. ಹೆಣ್ಣಿನ ಬಗ್ಗೆ ಗಂಡಿನ ಎದೆಯಲ್ಲಿ ಬಿತ್ತಬೇಕಾದ ಅರಿವಿನ ಬಗ್ಗೆ ಯೋಚಿಸಬೇಕಾಗುತ್ತದೆ. ಹೆಣ್ಣಿನಲ್ಲಿ ಗಂಡಿನ ಕುರಿತಾದ ಚಿಂತನೆಯನ್ನು ರೂಪಿಸಬೇಕಾಗುತ್ತದೆ. ಈ ದಿಸೆಯಲ್ಲಿ ನಮ್ಮ ಶಿಕ್ಷಣ ಕ್ರಮ ಬಲವಾಗಬೇಕು. ಸ್ತ್ರೀ ಸಮಾನತೆ ಮತ್ತು ಪುರುಷ ಸಮಾನತೆ ಅನ್ನುವ ಬದಲು ನಾವು ಲಿಂಗ ಸಮಾನತೆಯ ಕಡೆ ನೋಡಬೇಕಾಗುತ್ತದೆ. ಪ್ರಕೃತಿಯ ದೃಷ್ಟಿಯಲ್ಲಿ ಯಾರೂ ಹೆಚ್ಚಲ್ಲ, ಕಡಿಮೆಯೂ ಅಲ್ಲ.

ವಾಚಕರ ವಾಣಿ

ಎ.ಐ. ಹಾಜರಾತಿ: ಶೀಘ್ರ ಜಾರಿಯಾಗಲಿ

ಕಚೇರಿಗಳಿಗೆ ತಡವಾಗಿ ಬರುವಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬುದ್ಧಿ ಕಲಿಸುವ ಸಲುವಾಗಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿರುವುದು ಜನಸಮೂಹದ ಹಿತದೃಷ್ಟಿಯಿಂದ ಆಶಾದಾಯಕವಾದ ಸಂಗತಿ. ಯಾವುದೇ ಸರ್ಕಾರಿ ಕಚೇರಿಗೆ ಕೆಲಸಕ್ಕೆಂದು ಹೋದಾಗ ತಕ್ಷಣ ಕೆಲಸ ಮಾಡಿಕೊಡುವುದಿಲ್ಲ. 'ನಾಳೆ ಬನ್ನಿ', 'ಈಗ ಅಧಿಕಾರಿಗಳಿಲ್ಲ' ಎನ್ನುವಂತಹ ಸಬೂಬುಗಳನ್ನು ನೀಡುವುದೇ ಹೆಚ್ಚು. ಬೆಳಿಗ್ಗೆ ಕೆಲಸ ಆಗಿಲ್ಲ, ಮಧ್ಯಾಹ್ನವಾದರೂ ಮಾಡಿಸಿಕೊಳ್ಳೋಣವೆಂದರೆ ಊಟಕ್ಕೆಂದು ಹೋದವರು ವಿರಾಮದ ವೇಳೆ ಮುಗಿಯುವಷ್ಟರಲ್ಲಿ ಬರುವುದೇ ಇಲ್ಲ. ಎ.ಐ. ಆಧಾರಿತ ಹಾಜರಾತಿ ವ್ಯವಸ್ಥೆಯಾದರೂ ಈ ಬಗೆಯ ಅಶಿಸ್ತನ್ನು ನಿವಾರಿಸಬಹುದು.

ಅಂಬಿಕಾ ಬಿ.ಟಿ., ಹಾಸನ

ಜಾಗೃತಿ ಮೂಡಿಸಿ... ಅಮೂಲ್ಯ ಜೀವ ಉಳಿಸಿ

ದಾವಣಗೆರೆ ತಾಲ್ಲೂಕಿನ ಕುರ್ಕಿ ಗ್ರಾಮದ ಬಳಿ ಭದ್ರಾ ನಾಲೆಯಲ್ಲಿ ಇಬ್ಬರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಮುಳುಗಿ ಮೃತಪಟ್ಟಿರುವುದು ವರದಿಯಾಗಿದೆ (ಪ್ರ.ವಾ., ಫೆ. 3). ಪತ್ರಿಕೆಗಳಲ್ಲಿ ಪ್ರಕಟವಾಗುವ ಇಂತಹ ವರದಿಗಳು ದಿನನಿತ್ಯದ ಸುದ್ದಿ ಎಂಬಂತೆ ಕೆಲವರಿಗೆ ಭಾಸವಾಗಬಹುದು. ಆದರೆ ಹಾಗೆ ಸತ್ತವರ ಪೋಷಕರಿಗೆ ಮಾತ್ರ ಇಂತಹ ದಾರುಣ ಪ್ರಕರಣಗಳು ಶಾಶ್ವತ ನೋವನ್ನು ಉಂಟುಮಾಡುತ್ತವೆ. ಇಂತಹ ಸ್ಥಳಗಳಲ್ಲಿ ಎಚ್ಚರಿಕೆಯ ಬರಹ ಇರುವ ನಾಮಫಲಕಗಳು ಹಾಗೂ ಕಾವಲು ಸಿಬ್ಬಂದಿಯ ನೇಮಕದಂತಹ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಬೇಕು. ಇದರಿಂದ ಅತ್ಯಮೂಲ್ಯ ಜೀವಗಳು ಸಾವಿಗೀಡಾಗುವುದನ್ನು ತಪ್ಪಿಸಬಹುದು.

ಆಶಾ ಅಪ್ರಮೇಯ, ದಾವಣಗೆರೆ

ಶುದ್ಧ ನೀರು: ಬೇಕಾಗಿದೆ ಜಲಸಾಕ್ಷರತೆ

'ಶುದ್ಧ ನೀರು ಮರೀಚಿಕೆಯಾಗದಿರಲಿ' ಎಂದು ಪ.ರಾಮಕೃಷ್ಣ ಶಾಸ್ತ್ರಿ ಎಚ್ಚರಿಸಿದ್ದಾರೆ (ಸಂಗತ, ಫೆ. 3). 'ಬೃಹತ್ ಯೋಜನೆಗಳಿಂದ ರಾಜಕಾರಣಿಗಳಿಗೆ ರುಷುವತ್ತು ಸಿಗಬಹುದು, ಗುತ್ತಿಗೆದಾರರು, ಎಂಜಿನಿಯರುಗಳು ದುಡ್ಡು ಮಾಡಿಕೊಳ್ಳಬಹುದೇ ವಿನಾ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನವಾಗದು' ಎಂದು ಯಲ್ಲಪ್ಪ ರೆಡ್ಡಿ ಹೇಳಿದ್ದಾರೆ (ಪ್ರ.ವಾ., ಜ. 29). ಶುದ್ಧ ನೀರಿನ ಸಮಸ್ಯೆ ಬೃಹದಾಕಾರವಾಗಿ ಬೆಳೆಯುವಂತೆ ಮಾಡಿದ್ದರಿಂದಾಗಿ, ಕೆಲವು ಕಡೆ ಒಂದು ಲೀಟರ್ ಕುಡಿಯುವ ನೀರಿಗೆ ₹ 20 ಕೊಟ್ಟು ಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ. ಉಚಿತವಾಗಿ ದೊರೆಯುವ ಮಳೆನೀರನ್ನು ಬಾಟಲಿಯಲ್ಲಿ ತುಂಬಿ ಹೆಚ್ಚಿನ ಲಾಭ ಮಾಡಿಕೊಳ್ಳುವ ಮಾತುಗಳೂ ಕೇಳಿಬಂದಿವೆ.

ಜಲ ಸಚಿವಾಲಯದ ವರದಿಯಂತೆ, ದೇಶದ 302 ನದಿಗಳು ಒಳಚರಂಡಿ ನೀರಿನ ಮಿಶ್ರಣದಿಂದ ಮಲಿನವಾಗಿವೆ. ನಾನಾ ಕಾರಣಗಳಿಂದ ಅಂತರ್ಜಲ ಮಟ್ಟ ಕುಸಿದಿದೆ. ಸಾವಿರಾರು ಅಡಿ ಆಳದಿಂದ ತೆಗೆಯುವ ವಿಷಪೂರಿತ ಜಲವು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂತೆ ಆಗಿದೆ. ಇದೊಂದು ವಿಷವರ್ತುಲ. ಇದಕ್ಕೆ ಸುಲಭವಾದ, ಕಡಿಮೆ ವೆಚ್ಚದ ಪರಿಹಾರವೆಂದರೆ, ಮನೆಯ ತಾರಸಿ ಮೇಲೆ ಬೀಳುವ ಪರಿಶುದ್ಧ ಮಳೆನೀರನ್ನು ಶೋಧಿಸಿ ಸಂಪಿನಲ್ಲಿ ಸಂಗ್ರಹಿಸಿದರೆ, ಕುಟುಂಬದ ಕುಡಿಯುವ ಶುದ್ಧ ಜಲದ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಬಹುದು. ಇದಕ್ಕೆ ಜಲಸಾಕ್ಷರತೆ ಬೇಕಾಗಿದೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಬಿ.ಇಡಿ ಅಕ್ರಮ ಪ್ರವೇಶಾತಿ: ಬೀಳಲಿ ಕಡಿವಾಣ

2025- 26ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಕೋರ್ಸ್ ಪ್ರಾರಂಭವಾಗಿದೆ. ಮಾನ್ಯತೆ ಪಡೆದ ಬಿ.ಇಡಿ. ಕಾಲೇಜಿನ ಪ್ರತಿ ತಂಡದಲ್ಲಿ ಇರುವ ಸೀಟುಗಳಲ್ಲಿ ಶೇ 50ರಷ್ಟು ಸರ್ಕಾರಕ್ಕೆ ಹಾಗೂ ಇನ್ನುಳಿದ ಶೇ 50ರಷ್ಟು ಆಡಳಿತ ಮಂಡಳಿಯವರಿಗೆ ಮೀಸಲಾಗಿರುತ್ತವೆ. ಆದರೆ ಹಲವು ವರ್ಷಗಳಿಂದ ಹೀಗೆ ಕಾಲೇಜಿಗೆ ದಾಖಲಾಗುವವರಲ್ಲಿ ಕೆಲವರು ನಿಯತವಾಗಿ ತರಗತಿಗಳಿಗೆ ಬಾರದೆ, ಸಮನ್ವಯ ಸಮಿತಿ ಸದಸ್ಯರು ಕಾಲೇಜಿಗೆ ಭೇಟಿ ನೀಡುವ ಸಮಯದಲ್ಲಿ ಮಾತ್ರ ಹಾಜರಾಗುತ್ತಾರೆ. ನಂತರ ನೇರವಾಗಿ ಪರೀಕ್ಷೆ ಬರೆಯುತ್ತಾರೆ. ಹಾಜರಾತಿಯನ್ನು ದಾಖಲಿಸಲು ವಿಶ್ವವಿದ್ಯಾಲಯದವರು ಬಯೊಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸಿರುತ್ತಾರೆ. ಆದರೂ ನಿಗದಿಗಿಂತ ಹೆಚ್ಚಿನ ಶುಲ್ಕ ನೀಡುವವರಿಗೆ ಬಾಹ್ಯ ವಿದ್ಯಾರ್ಥಿಗಳಂತೆ ಬಿ.ಇಡಿ. ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುತ್ತಿದೆ. ಇದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ, ಕಳಪೆ ಗುಣಮಟ್ಟದ ಶಿಕ್ಷಕರು ತಯಾರಾಗುತ್ತಾರೆ. ಇದರಿಂದ ಸಹಜವಾಗಿಯೇ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತದೆ.

ಸುರೇಂದ್ರ ಪೈ, ಭಟ್ಕಳ

ಪರಭಾಷೆಯಲ್ಲಿ ಮಾತನಾಡುವ ಹಪಹಪಿಯೇಕೆ?

ಬೆಂಗಳೂರಿನ ಜಯನಗರದ ರಾಷ್ಟ್ರೀಕೃತ ಬ್ಯಾಂಕೊಂದಕ್ಕೆ ಸೋಮವಾರ ಕಾರ್ಯನಿಮಿತ್ತ ಹೋಗಿದ್ದೆ. ಅಲ್ಲಿದ್ದ ಮಹಿಳಾ ಸಿಬ್ಬಂದಿಯೊಂದಿಗೆ ಮಾತನಾಡುತ್ತಿದ್ದಾಗ, ಒಬ್ಬಾತ ಬಂದು ಆ ಮಹಿಳೆಯನ್ನು ಕುರಿತು ಹಿಂದಿಯಲ್ಲಿ 'ಮೇಡಂ, ಎ ಪ್ರಿಂಟರ್‌ಕು ಕಾಟ್ರೇಜ್ ಡಾಲ್ನಾ ಹೈ, ಸಾಬ್ ಬೋಲಾ ಹೈ' ಅಂದ. ಕೂಡಲೇ ಆ ಮಹಿಳೆಯು 'ರೀ ನನಗೆ ಕನ್ನಡ ಬರುತ್ತೆ, ಕನ್ನಡದಲ್ಲೇ ಹೇಳಿ' ಅಂದರು. ನಾನು ತಕ್ಷಣವೇ ಚಪ್ಪಾಳೆ ಹೊಡೆದು ಅವರಿಗೆ ಅಭಿನಂದನೆ ತಿಳಿಸಿದೆ. ನಂತರ ಅಲ್ಲಿಗೆ ಬಂದಿದ್ದಾತ 'ಕ್ಷಮಿಸಿ ಮೇಡಂ' ಎಂದು ಹೇಳಿ, ಕನ್ನಡದಲ್ಲೇ ಮಾತನಾಡಿ ತನ್ನ ಕಾರ್ಯ ಮುಗಿಸಿ ಹೋದ.

ಬ್ಯಾಂಕಿಗೆ ಹೋದಾಕ್ಷಣ ಇಂಗ್ಲಿಷ್ ಅಥವಾ ಹಿಂದಿಯಲ್ಲೇ ಮಾತನಾಡುವ ಕನ್ನಡಿಗರಿಂದಲೇ ಕನ್ನಡಕ್ಕೆ ಆಪತ್ತು. ಅದೇಕೋ ಪರಭಾಷೆಯಲ್ಲಿ ಮಾತನಾಡುವ ಹಪಹಪಿ ಹಲವರಿಗೆ. ಪಾನಿಪುರಿ ಅಂಗಡಿಯವನ ಬಳಿ ಸಹ 'ದೋ ಪ್ಲೇಟ್ ಪಾನಿಪುರಿ' ಎಂದೇ ಹೇಳುತ್ತಾರೆ. ಅವರಿಗೆ ಕನ್ನಡ ಬಾರದಿದ್ದರೆ, ಅಂತಹವರೊಡನೆ ಕನ್ನಡದಲ್ಲಿ ಸಂಭಾಷಿಸಿದರೆ ತಾನೆ ಅವರಿಗೂ ಕನ್ನಡ ಕಲಿಯುವ ಅವಕಾಶ ಸಿಗುವುದು. ಪರಭಾಷಿಕರು ಕನ್ನಡದ ಮೇಲೆ ದಬ್ಬಾಳಿಕೆ ಮಾಡುತ್ತಾರೆ ಎಂದು ಹಲುಬುವುದಕ್ಕಿಂತ ನಾವು ಕನ್ನಡವನ್ನು ಬಳಸಿ ಬೆಳೆಸಬೇಕಾದ ಅಗತ್ಯ ಹೆಚ್ಚಾಗಿದೆ. ಇಂತಹ ಪ್ರಕರಣಗಳನ್ನು ಕಂಡಾಗ, ಕನ್ನಡಿಗರೇಕೆ ಹೀಗೆ ಕರ್ನಾಟಕದಲ್ಲೇ ಕನ್ನಡ ಮಾತನಾಡಲು ಹಿಂಜರಿಯುತ್ತಾರೆ ಅಥವಾ ಪರಭಾಷೆ ಗೊತ್ತು ಎಂದು ತೋರಿಸಿಕೊಳ್ಳುವ ಚಪಲವೋ ಎಂಬ ಪ್ರಶ್ನೆ ಮೂಡುತ್ತದೆ. ಕನ್ನಡಿಗರು ಕರ್ನಾಟಕದಲ್ಲಿ ಎಲ್ಲರೊಡನೆ ಕನ್ನಡದಲ್ಲೇ ವ್ಯವಹರಿಸಲು ಆರಂಭಿಸಿದರೆ ಕನ್ನಡ ಭಾಷೆ ಉಳಿಯುತ್ತದೆ. ಆಗ ಪರಭಾಷಿಕರೂ ಕನ್ನಡ ಕಲಿಯುವ ಪರಿಸ್ಥಿತಿ ನಿರ್ಮಾಣ ಆಗುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೋದಿ ವರ್ಚಸ್ಸು V/S ಕೇಜ್ರಿವಾಲ್ ಬ್ರ್ಯಾಂಡ್

ದೆಹಲಿ ಚುನಾವಣೆ

• ಮಂಜುನಾಥ ಹೆಬ್ಬಾರ್

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) 2013ರ ನಂತರ ಸೋತೇ ಇಲ್ಲ. ಬಿಜೆಪಿ 1993ರ ನಂತರ ಗೆದ್ದೇ ಇಲ್ಲ. 15 ವರ್ಷ ದೆಹಲಿ ಆಳಿದ್ದ ಕಾಂಗ್ರೆಸ್ ಕಳೆದೆರಡು ಚುನಾವಣೆಗಳಲ್ಲಿ ಖಾತೆಯನ್ನೇ ತೆರೆದಿರಲಿಲ್ಲ. ಈ ಮೂರು ಪಕ್ಷಗಳು ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಅಣಿಯಾಗಿವೆ. ಎಎಪಿ ಮತ್ತೊಮ್ಮೆ ಅಧಿಕಾರ ಹಿಡಿದೀತೇ? ಬಿಜೆಪಿಯ 27 ವರ್ಷಗಳ ರಾಜಕೀಯ ವನವಾಸ ಅಂತ್ಯಗೊಂಡೀತೇ? ಕಾಂಗ್ರೆಸ್ ರಾಜಕೀಯ ಪುನರುಜ್ಜೀವನ ಕಂಡೀತೇ.... ಈ ಎಲ್ಲ ಪ್ರಶ್ನೆಗಳಿಗೆ ಇದೇ 8ರಂದು ಉತ್ತರ ಸಿಗಲಿದೆ. ದೆಹಲಿ ವಿಧಾನಸಭೆಗೆ ಬುಧವಾರ (ಫೆ.5) ಮತದಾನ ನಡೆಯಲಿದೆ. 2014ರ ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಎಲ್ಲ ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. 2015 ಹಾಗೂ 2020ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಎಎಪಿ ಆರ್ಭಟಕ್ಕೆ ಅದು ಧೂಳೀಪಟವಾಗಿತ್ತು. 2024ರ ಲೋಕಸಭಾ ಚುನಾವಣೆಯಲ್ಲಿ ಇಂಡಿಯಾ ಮೈತ್ರಿಕೂಟವನ್ನು ಬಿಜೆಪಿ ಹಿಮ್ಮೆಟ್ಟಿಸಿದೆ. ಲೋಕಸಭಾ ಚುನಾವಣೆಯಲ್ಲಿ ಒಟ್ಟಾಗಿದ್ದ ಎಎಪಿ–ಕಾಂಗ್ರೆಸ್‌ಗಳು ಈಗ ಪ್ರತ್ಯೇಕವಾಗಿ ಸ್ಪರ್ಧಿಸುತ್ತಿವೆ

ಚರ್ಚಿತ ವಿಚಾರಗಳು

- ಮೂರೂ ಪಕ್ಷಗಳಿಂದ ಗ್ಯಾರಂಟಿಗಳ ಘೋಷಣೆ
- ಭ್ರಷ್ಟಾಚಾರ ಹಗರಣ
- ದೆಹಲಿಯ ವಾಯುಮಾಲಿನ್ಯ, ಯಮುನಾ ನದಿ ಮಾಲಿನ್ಯ
- ಮೂಲಸೌಕರ್ಯ ಸಮಸ್ಯೆ
- ಕಾನೂನು ಮತ್ತು ಸುವ್ಯವಸ್ಥೆ

70 ಒಟ್ಟು ಕ್ಷೇತ್ರಗಳು | **36** ಸರಳ ಬಹುಮತಕ್ಕೆ ಅಗತ್ಯ ಸ್ಥಾನಗಳು | **1.55** ಕೋಟಿ ಒಟ್ಟು ಮತದಾರರು | **83.5** ಲಕ್ಷ ಪುರುಷರು | **71.7** ಲಕ್ಷ ಮಹಿಳೆಯರು | **1,261** ಲೈಂಗಿಕ ಅಲ್ಪಸಂಖ್ಯಾತರು



ಆಮ್ ಆದ್ಮಿ ಪಕ್ಷ

ಬಲ: ಪಕ್ಷವು ಹಿಂದಿನ ಎರಡು ಚುನಾವಣೆಗಳಲ್ಲಿ ಅಭೂತಪೂರ್ವ ಜಯ ಗಳಿಸಿ 10 ವರ್ಷಗಳಿಂದ ಅಧಿಕಾರದಲ್ಲಿದೆ. 'ಬ್ರ್ಯಾಂಡ್ ಕೇಜ್ರಿವಾಲ್' ಮತ ತಂದು ಕೊಡುವ ವಿಶ್ವಾಸ. ಈ ಚರಿಷ್ಮಾದ ಜತೆಗೆ 10 ವರ್ಷಗಳಿಂದ ಉಚಿತ ನೀರು ಹಾಗೂ ವಿದ್ಯುತ್ ಕೊಟ್ಟಿರುವುದರಿಂದ ಮತ ಬ್ಯಾಂಕ್ ಮತ್ತಷ್ಟು ಗಟ್ಟಿಯಾಗಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ವ್ಯವಸ್ಥೆ ಕಲ್ಪಿಸಿರುವುದರಿಂದ ಮಹಿಳಾ ಮತದಾರರು ಕೈಬಿಡುವುದಿಲ್ಲ ಎಂಬ ನಂಬಿಕೆ. ಈ ಸಲ ಮಹಿಳಾ ಸಮ್ಮಾನ್ ಯೋಜನೆ, ಸಂಜೀವಿನಿ ಯೋಜನೆ ಸೇರಿದಂತೆ 15 ಗ್ಯಾರಂಟಿಗಳನ್ನು ಪಕ್ಷ ಘೋಷಿಸಿದೆ. ವಿವಾದವೇನೇ ಇರಲಿ, ಹೊಸ ಯೋಜನೆಗಳಿಗೆ ಕೇಜ್ರಿವಾಲ್ ಪಕ್ಷ ನೋಂದಣಿ ಪ್ರಕ್ರಿಯೆ ಆರಂಭಿಸಿದಾಗ ಫಲಾನುಭವಿಗಳು ಅತ್ಯುತ್ಸಾಹದಿಂದ ಬಂದರು. ಜೈಲಿಗೆ ಹೋಗಿ ಬಂದ ಬಳಿಕವೂ ಕೇಜ್ರಿವಾಲ್ ಹಿಡಿತ ಪಕ್ಷದಲ್ಲಿ ಒಂದಿನಿತೂ ಕಡಿಮೆಯಾಗಿಲ್ಲ. 20 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿದರೂ ಯಾರೂ ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಲಿಲ್ಲ.'ಇಂಡಿಯಾ' ಮೈತ್ರಿಕೂಟದ ಹೆಚ್ಚಿನ ಪಕ್ಷಗಳ ಬೆಂಬಲದ ಬಲ ಸಿಕ್ಕಿದೆ.

ದೌರ್ಬಲ್ಯ: ಭ್ರಷ್ಟಾಚಾರ ವಿರೋಧಿ ಹೋರಾಟದಿಂದ ದಶಕದ ಹಿಂದೆ ಹುಟ್ಟಿಕೊಂಡ ಪಕ್ಷಕ್ಕೆ ಈಗ ಭ್ರಷ್ಟಾಚಾರದ ಕಳಂಕ ತಟ್ಟಿದೆ. ಕೇಜ್ರಿವಾಲ್ 'ಸರ್ವಾಧಿಕಾರಿ' ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿ ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್ ಅವರಂತಹ ನಾಯಕರು ಪಕ್ಷದಿಂದಲೇ ದೂರ ಹೋಗಿದ್ದಾರೆ. ಅಬಕಾರಿ ನೀತಿ ಹಗರಣದಿಂದ ಕೇಜ್ರಿವಾಲ್, ಮನೀಷ್ ಸಿಸೋಡಿಯಾ, ಸಂಜಯ್ ಸಿಂಗ್ ಅವರು ಜೈಲುವಾಸ ಅನುಭವಿಸಿದ್ದಾರೆ. ಮುಖ್ಯಮಂತ್ರಿ ನಿವಾಸ 'ಶೀಷ್‌ಮಹಲ್' ನವೀಕರಣ ಸೇರಿದಂತೆ ವೈಭವೋಪೇತ ಜೀವನಶೈಲಿಯ ಹಲವು ವಿವಾದಗಳು ಪಕ್ಷದ ಬೆನ್ನಿಗಂಟಿಕೊಂಡಿವೆ. ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿಯಾಗದ ಮೂಲಸೌಕರ್ಯ, ದೆಹಲಿ ಮಾಲಿನ್ಯ, ಸಂಚಾರ ದಟ್ಟಣೆಯಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಮುತುವರ್ಜಿ ವಹಿಸಿಲ್ಲ ಎಂಬ ಆರೋಪ. ಹಿಂದಿನ ಚುನಾವಣೆಗಳಲ್ಲಿ ನೀಡಿರುವ ಮೂರು ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ ಎಂದು ಕೇಜ್ರಿವಾಲ್ ಅವರೇ ಒಪ್ಪಿಕೊಂಡಿದ್ದಾರೆ. ಟಿಕೆಟ್ ವಂಚಿತ ಎಂಟು ಶಾಸಕರು ಸೇರಿದಂತೆ ಹಲವು ನಾಯಕರ ಪಕ್ಷಾಂತರದಿಂದ ಪಕ್ಷ ಸೊರಗಿದೆ.

ಬಿಜೆಪಿ

ಬಲ: ಪ್ರಧಾನಿ ನರೇಂದ್ರ ಮೋದಿಯೇ ಬಿಜೆಪಿಯ ಪ್ರಮುಖ ಶಕ್ತಿ. ಲೋಕಸಭಾ ಚುನಾವಣೆಯಲ್ಲಿ ಎಲ್ಲ ಏಳು ಕ್ಷೇತ್ರಗಳಲ್ಲಿ ಜಯಭೇರಿ, ಹರಿಯಾಣ ಹಾಗೂ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳಲ್ಲಿ ಜಯ ಸಾಧಿಸಿದ ಬಳಿಕ ಕಮಲ ಪಾಳಯದಲ್ಲಿ ಉತ್ಸಾಹ ಇಮ್ಮಡಿಸಿದೆ. ದೆಹಲಿ ಪಾಲಿಕೆ ಚುನಾವಣೆಯಲ್ಲೂ ಎಎಪಿಗೆ ಬಿಜೆಪಿ ಪ್ರಬಲ ಪೈಪೋಟಿ ನೀಡಿತ್ತು. 2014ರ ನಂತರದ ಮೂರು ಲೋಕಸಭಾ ಚುನಾವಣೆಗಳಲ್ಲೂ ಬಿಜೆಪಿ ಎಲ್ಲ ಸ್ಥಾನ ಗೆದ್ದುಕೊಂಡಿದೆ. ಜತೆಗೆ, ಕೇಂದ್ರ ನೇಮಕ ಮಾಡಿರುವ ಲೆಫ್ಟಿನೆಂಟ್ ಗವರ್ನರ್ ಅವರು ಎಎಪಿ ಸರ್ಕಾರದ ಜತೆಗೆ ಸಂಘರ್ಷದಿಂದಲೇ ಸುದ್ದಿಯಲ್ಲಿದ್ದವರು. ಸರ್ಕಾರದ 'ಹುಳುಕು'ಗಳನ್ನು ಬಯಲಿಗೆ ಎಳೆದು ಬಿಜೆಪಿಗೆ ಇನ್ನಷ್ಟು ಶಕ್ತಿ ತುಂಬಿದರು. ಸಣ್ಣ ಸಣ್ಣ ಗುಂಪುಗಳನ್ನು ತಲುಪುವ ರೀತಿಯಲ್ಲಿ ಚುನಾವಣಾ ಪ್ರಚಾರ ತಂತ್ರ. ಪ್ರತಿಯೊಂದು ಕ್ಷೇತ್ರಕ್ಕೆ ಕೇಂದ್ರ ಸಚಿವರ ನಿಯೋಜನೆ. ಪೂರ್ವಾಂಚಲಿಗಳು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಜೆಡಿಯು, ಎಲ್‌ಜೆಪಿ ನಾಯಕರಿಂದ ಪ್ರಚಾರ. ಎಎಪಿಯ ಯೋಜನೆಗಳನ್ನು ಸ್ಥಗಿತಗೊಳಿಸುವುದಿಲ್ಲ ಎಂದು ಮೋದಿ ಸೇರಿ ಪ್ರಮುಖ ನಾಯಕರು 'ವಾಗ್ದಾನ' ನೀಡುತ್ತಲೇ ಬಂದಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತರು ಸದ್ದಿಲ್ಲದೆ ನಡೆಸುತ್ತಿರುವ ಪ್ರಚಾರವು ಬಿಜೆಪಿಗೆ ಮತ್ತೊಂದು ಅನುಕೂಲಕರ ಅಂಶ.

ದೌರ್ಬಲ್ಯ: ಪಕ್ಷ ಗೆದ್ದರೆ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಗೆ ಪಕ್ಷ ಇನ್ನೂ ಉತ್ತರ ಕಂಡುಕೊಂಡಿಲ್ಲ. ದಶಕದಿಂದ ಉತ್ತರ ಹುಡುಕಿದರೂ ಫಲ ಸಿಕ್ಕಿಲ್ಲ. ಪಕ್ಷದ ಪ್ರಯೋಗಗಳಿಗೆ ಯಶ ಸಿಕ್ಕಿಲ್ಲ. ಕೇಜ್ರಿವಾಲ್‌ಗೆ ಸಮನಾಗಿ ನಿಲ್ಲುವ ನಾಯಕರು ಬಿಜೆಪಿಯ ರಾಜ್ಯ ಘಟಕದಲ್ಲಿ ಇಲ್ಲ. ಪಕ್ಷವನ್ನು ಗೆಲ್ಲಿಸಿಕೊಂಡು ಬರುವ ಹೊಣೆ ಕೇಂದ್ರದ ನಾಯಕರ ಮೇಲೆಯೇ ಬಿದ್ದಿದೆ. ಮಹಾರಾಷ್ಟ್ರ, ರಾಜಸ್ಥಾನ, ಹರಿಯಾಣ, ಮಹಾರಾಷ್ಟ್ರ, ಒಡಿಶಾ, ಛತ್ತೀಸಗಢ ವಿಧಾನಸಭಾ ಚುನಾವಣೆಗಳಲ್ಲಿ ಕಮಲ ಪಾಳಯವು ಸಿ.ಎಂ ಅಭ್ಯರ್ಥಿ ಘೋಷಿಸಿರಲಿಲ್ಲ. ಇಲ್ಲೂ ಘೋಷಿಸಿಲ್ಲ. ದೆಹಲಿಯಂತಹ ಮಹಾನಗರಕ್ಕಿಂತ ಉಳಿದ ಈ ರಾಜ್ಯಗಳ ಸನ್ನಿವೇಶ ಭಿನ್ನವಾಗಿತ್ತು.

2024ರ ಲೋಕಸಭಾ ಚುನಾವಣೆ ಫಲಿತಾಂಶ



2024ರ ಲೋಕಸಭಾ ಚುನಾವಣೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಮುನ್ನಡೆ

ದೆಹಲಿಯಲ್ಲಿರುವ ಏಳು ಲೋಕಸಭಾ ಕ್ಷೇತ್ರಗಳು ತಲಾ 10 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿವೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ **52** ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದರೆ, ಇಂಡಿಯಾ ಮೈತ್ರಿಕೂಟ **18** ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿತ್ತು.

ಕಾಂಗ್ರೆಸ್

ಬಲ: ದೆಹಲಿ ರಾಜಕಾರಣದಲ್ಲಿ ಎಎಪಿಯ ಪ್ರವೇಶದ ನಂತರ ನಿಶ್ಶಕ್ತಗೊಂಡಿರುವ ಕಾಂಗ್ರೆಸ್‌ಗೆ ಈ ಸಲದ ಚುನಾವಣೆಯಲ್ಲಿ ಗೆಲುವು ಸಾಧಿಸದಿದ್ದರೆ ಕಳೆದುಕೊಳ್ಳುವುದು ಏನೂ ಇಲ್ಲ. ಕಳೆದ ಚುನಾವಣೆಯಲ್ಲಿ ಪಕ್ಷದ ಮತ ಪ್ರಮಾಣವು ಶೇ 4ಕ್ಕೆ ಕುಸಿದಿತ್ತು. ಈ ಸಲ ಅದಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದರೆ ಅದೊಂದು ಸಾಧನೆಯೇ. ನಾಲ್ಕೈದು ಸೀಟು ಗೆದ್ದರೂ ಪಕ್ಷದ ಪಾಲಿಗೆ ಪುನರುಜ್ಜೀವನದ ಹೆಜ್ಜೆಯೇ. ಲೋಕಸಭೆಯಲ್ಲಿ ಸ್ಪರ್ಧಿಸಿದ ಮೂರು ಕ್ಷೇತ್ರಗಳಲ್ಲಿ ಸೋತರೂ ಪಕ್ಷದ ಮತ ಪ್ರಮಾಣ ಗಣನೀಯವಾಗಿ ಹೆಚ್ಚಾಗಿತ್ತು. ಚುನಾವಣೆ ವೇಳಾಪಟ್ಟಿ ಪ್ರಕಟವಾಗುವುದಕ್ಕೆ ಮುನ್ನವೇ ಪಕ್ಷವು ಬಹುತೇಕ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿತ್ತು. ಪ್ರಮುಖ ನಾಯಕರನ್ನು ಅಖಾಡಕ್ಕೆ ಇಳಿಸುವ ಮೂಲಕ ಪ್ರಬಲ ಸ್ಪರ್ಧೆ ಒಡ್ಡುವ ಸುಳಿವು ನೀಡಿದೆ. ಶೀಲಾ ದೀಕ್ಷಿತ್ ಅವರ 15 ವರ್ಷಗಳ ಆಡಳಿತದ ಬಗ್ಗೆ ಒಂದು ವರ್ಗದ ಜನರಿಗೆ ಈಗಲೂ ಸದ್ಭಾವನೆ ಇದೆ. ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಗುರಿಯಾಗಿಸಿಕೊಂಡು ಘೋಷಿಸಿರುವ ಐದು 'ಗ್ಯಾರಂಟಿ'ಗಳಿಂದ ಮತ ಶಿಕಾರಿಯಾಗಬಹುದು ಎಂಬುದು ಕೈ ನಾಯಕರ ಯೋಚನೆ.

ದೌರ್ಬಲ್ಯ: ಬಿಜೆಪಿ ಎದುರಿಸುತ್ತಿರುವ ಸಮಸ್ಯೆಯನ್ನೇ ಕಾಂಗ್ರೆಸ್ ಎದುರಿಸುತ್ತಿದೆ. ರಾಜ್ಯದಲ್ಲಿ ಪ್ರಭಾವಿ ನಾಯಕರೇ ಇಲ್ಲ. ಒಂದು ಕಾಲದಲ್ಲಿ ತಮ್ಮ ವರ್ಚಸ್ಸಿನಿಂದ ಪಕ್ಷಕ್ಕೆ ಮತ ತರುತ್ತಿದ್ದ ಅರವಿಂದರ್ ಸಿಂಗ್ ಲವ್ಲಿ, ಮತೀನ್ ಅಹಮದ್ ಅವರಂತಹ ನಾಯಕರು ರಾಜಕೀಯ ಭವಿಷ್ಯವನ್ನು ಬೇರೆ ಪಕ್ಷಗಳಲ್ಲಿ ಕಂಡುಕೊಂಡಿದ್ದಾರೆ. ಕಾಂಗ್ರೆಸ್‌ಗೆ ತಳಮಟ್ಟದ ಕಾರ್ಯಕರ್ತರ ಪಡೆ ಇಲ್ಲ. ಚುನಾವಣೆ ಬಗ್ಗೆ ಗಾಂಧಿ ಕುಟುಂಬಕ್ಕೆ ಹೆಚ್ಚು ಆಸಕ್ತಿ ಇದ್ದಂತಿಲ್ಲ. ಯುವಮತದಾರರಿಗೆ ಶೀಲಾ ದೀಕ್ಷಿತ್ ಹಾಗೂ ಅವರ ಆಡಳಿತದ ಬಗ್ಗೆ ಮಾಹಿತಿ ಇಲ್ಲ. 'ಇಂಡಿಯಾ' ಮೈತ್ರಿಕೂಟದ ಹೆಚ್ಚಿನ ಪಕ್ಷಗಳು ಎಎಪಿ ಬೆಂಬಲಕ್ಕೆ ನಿಂತಿರುವುದರಿಂದ ಕಾಂಗ್ರೆಸ್ ಏಕಾಂಗಿಯಾಗಿದೆ.

'ಗತವೈಭವ' ಶೂಟಿಂಗ್ ಪೂರ್ಣ

ಆಶಿಕಾ ರಂಗನಾಥ್, ದುಷ್ಯಂತ್

ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾದ ಅಂತಿಮ ಹಂತದ ಚಿತ್ರೀಕರಣ ಪೋರ್ಚುಗಲ್‌ನಲ್ಲಿ ನಡೆದಿದ್ದು, ಈ ವರ್ಷದ ಮೊದಲಾರ್ಧದಲ್ಲಿ ಸಿನಿಮಾ ತೆರೆಕಾಣಲಿದೆ.

ದುಷ್ಯಂತ್ ಹಾಗೂ ಆಶಿಕಾ ರಂಗನಾಥ್ ನಟಿಸಿರುವ ಈ ಸಿನಿಮಾದ ಚಿತ್ರೀಕರಣ 2022ರಲ್ಲಿ ಆರಂಭವಾಗಿತ್ತು. ಎಲ್ಲಾ ಪ್ರಕಾರದ ಸಿನಿಮಾಗಳ ಪ್ರಯೋಗ ಮಾಡಿರುವ ಸಿಂಪಲ್ ಸುನಿ, ಈ ಸಿನಿಮಾ ಮೂಲಕ ಪ್ರೇಮಕಥೆಯೊಂದನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯಲ್ಲಿ ತೆರೆಗೆ ತರುತ್ತಿದ್ದಾರೆ. ಫ್ಯಾಂಟಸಿ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಈ ಚಿತ್ರದಲ್ಲಿ ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ದುಷ್ಯಂತ್ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಸಿನಿಮಾದಲ್ಲಿ ಅವರೆತ್ತುವ ಅವತಾರಕ್ಕೆ ಪೂರಕವಾಗಿ ಆಶಿಕಾ ಕೂಡಾ ಹಲವು ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ದೇವಕನ್ಯೆಯಾಗಿ, ಪೋರ್ಚುಗೀಸ್ ಮರ್ಚೆಂಟ್ ಆಗಿ ಹೀಗೆ ನಾನಾ ಪಾತ್ರಗಳಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ ಆಶಿಕಾ.

'ಗತವೈಭವ' ಸಿನಿಮಾಗೆ ಕಥೆ-ಚಿತ್ರಕಥೆ ಮತ್ತು ಸಂಭಾಷಣೆಯನ್ನು ಸುನಿ ಅವರೇ ಬರೆದಿದ್ದಾರೆ. ಮಾತಾ ಮೂವಿ ಮೇಕರ್ಸ್ ಹಾಗೂ ಸುನಿ ಚಿತ್ರ ನಿರ್ಮಾಣ ಮಾಡುತ್ತಿದ್ದು, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಸಂಗೀತ ಚಿತ್ರಕ್ಕಿದೆ. ಮಡಿಕೇರಿ, ಮಂಗಳೂರು, ಪೋರ್ಚುಗಲ್‌ನಲ್ಲಿ ಸಿನಿಮಾದ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಚಿತ್ರತಂಡ ತೊಡಗಿಸಿಕೊಂಡಿದೆ.

ಮಾರ್ಚ್‌ನಲ್ಲಿ 'ಹೆಬ್ಬುಲಿ ಕಟ್'

'ಹೆಬ್ಬುಲಿ' ಸಿನಿಮಾದಲ್ಲಿ ನಟ ಸುದೀಪ್ ಅವರ ಕೇಶವಿನ್ಯಾಸ ತುಂಬಾ ಟ್ರೆಂಡ್ ಆಗಿತ್ತು. ಅದನ್ನು 'ಹೆಬ್ಬುಲಿ ಕಟ್' ಎಂದೇ ಕರೆಯಲಾಗುತ್ತಿತ್ತು. ಇದೇ ಹೆಸರು ಇದೀಗ ಸಿನಿಮಾ ಶೀರ್ಷಿಕೆಯಾಗಿದೆ. ನಟ ಸತೀಶ್ ನೀನಾಸಂ ಅವರ ಸತೀಶ್ ಪಿಕ್ಚರ್ ಹೌಸ್ ಅರ್ಪಿಸುತ್ತಿರುವ ಈ ಚಿತ್ರವನ್ನು ಭೀಮರಾವ್ ನಿರ್ದೇಶಿಸುತ್ತಿದ್ದಾರೆ.

ಇತ್ತೀಚೆಗೆ ಚಿತ್ರ ತುಣುಕುಗಳನ್ನು ಚಿತ್ರತಂಡ ಬಿಡುಗಡೆಗೊಳಿಸಿತು. ಮೌನೇಶ್ ನಟರಂಗ, ಅನನ್ಯ ನಿಹಾರಿಕ, ಮಹಾದೇವ ಹಡಪದ, ಉಮಾ ವೈ.ಜಿ., ವಿನಯ್ ಮಹಾದೇವನ್, ಮಹಾಂತೇಶ್ ಹಿರೇಮಠ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ. 'ಚಿತ್ರದ ನಾಯಕಿಗೆ ನಟ ಸುದೀಪ್ ಹಾಗೂ ಅವರ ಹೆಬ್ಬುಲಿ ಹೇರ್‌ಕಟ್ ಬಹಳ ಇಷ್ಟ. ಇದನ್ನರಿತ ನಾಯಕ ಆ ರೀತಿ ಕೇಶ ವಿನ್ಯಾಸ ಮಾಡಿಸಿಕೊಳ್ಳಲು ಮುಂದಾಗುತ್ತಾನೆ. ನಂತರದ ಘಟನೆಗಳು ಚಿತ್ರದ ಕಥಾಹಂದರ. ಹಾಸ್ಯದ ಜೊತೆಗೆ ಸಾಮಾಜಿಕ ಸಂದೇಶವೂ ಚಿತ್ರದಲ್ಲಿದೆ. ಮಾರ್ಚ್ ಮಾಸಾಂತ್ಯಕ್ಕೆ ಸಿನಿಮಾ ಬಿಡುಗಡೆ ಮಾಡಲಿದ್ದೇವೆ' ಎನ್ನುತ್ತಾರೆ ಭೀಮರಾವ್.

'ಸಾಮಾಜಿಕ ಅಸಮಾನತೆಯ ತಳಹದಿಯಲ್ಲಿ ಪ್ರೀತಿ, ದ್ವೇಷ ಮತ್ತು ಸಂಬಂಧಗಳನ್ನು ಅನ್ವೇಷಿಸುವ ಪ್ರಾಮಾಣಿಕ ಪ್ರಯತ್ನವಿದು. ಒಬ್ಬ ಶಾಲಾ ಹುಡುಗನ ಮುಗ್ಧತೆ ಮುಗುಳ್ನಗು ಹುಟ್ಟಿಸಿದರೆ, ಅವನಿರುವ ಸಮಾಜದ ವರ್ತನೆ ಗಂಟಲು ಬಿಗಿಯಾಗಿಸುತ್ತದೆ. ಉತ್ತರ ಕರ್ನಾಟಕದ ಈ ಕಥೆ ಹುಟ್ಟಿಸುವ ಪ್ರಶ್ನೆಗಳು ನಮ್ಮೆಲ್ಲರನ್ನೂ ಆತ್ಮಾವಲೋಕನಕ್ಕೆ ಒಡ್ಡುತ್ತವೆ' ಎಂದಿದ್ದಾರೆ ಸತೀಶ್ ನೀನಾಸಂ.'ಡೇರ್‌ಡೆವಿಲ್ ಮುಸ್ತಾಫಾ' ಚಿತ್ರದ ಚಿತ್ರಕಥೆ, ಸಂಭಾಷಣೆ ಬರೆದಿದ್ದ ಅನಂತ ಶಾಂದ್ರೇಯ ಈ ಸಿನಿಮಾಗೂ ಚಿತ್ರಕಥೆ ಬರೆದಿದ್ದಾರೆ. ದೀಪಕ್ ಯರಗೇರಾ ಛಾಯಾಚಿತ್ರ-ಗ್ರಹಣ, ನವನೀತ್ ಶ್ಯಾಮ 'ಹೆಬ್ಬುಲಿ ಕಟ್'ಗೆ ಸಂಗೀತ ಚಿತ್ರಕ್ಕಿದೆ.

ಮೌನೇಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಜನವರಿ 29ರಂದು ಪ್ರಯಾಗ್‌ರಾಜ್ ಮಹಾಕುಂಭ ಪ್ರದೇಶದಲ್ಲಿ ನಡೆದಿದ್ದ ಕಾಲ್ತುಳಿತದ ಬಗ್ಗೆ ಮಧ್ಯಪ್ರದೇಶದ ಬಾಗೇಶ್ವರ ಧಾಮದ ಪೀಠಾಧ್ಯಕ್ಷ ಧೀರೇಂದ್ರ ಶಾಸ್ತ್ರಿ ಅವರು ಭವಿಷ್ಯ ನುಡಿದಿದ್ದರು ಎಂದು ಹೇಳಿಕೊಂಡ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣ ಬಳಕೆದಾರರು ಇತ್ತೀಚೆಗೆ ಪೋಸ್ಟ್ ಮಾಡಿದ್ದಾರೆ. ಈ ಪೋಸ್ಟ್‌ನೊಂದಿಗೆ ಧೀರೇಂದ್ರ ಶಾಸ್ತ್ರಿ ಅವರು ಬರೆದಿದ್ದಾರೆ ಎನ್ನಲಾದ ಪತ್ರದ ಫೋಟೊವನ್ನೂ ಅಪ್‌ಲೋಡ್ ಮಾಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ. ಫೋಟೊ ನಿಜವಾದದ್ದಲ್ಲ.

'ಈ ಪತ್ರವು ಘಾಟ್‌ನಲ್ಲಿ ಸಿಕ್ಕಿದೆ. ಪಂಡಿತ್ ಧೀರೇಂದ್ರ ಕೃಷ್ಣ ಶಾಸ್ತ್ರಿ ಅವರು ತಮ್ಮ ದಿವ್ಯ ದೃಷ್ಟಿಯಿಂದ ಕಾಲ್ತುಳಿತ ಸಂಭವಿಸುವ ಮೊದಲೇ ಅದರ ಬಗ್ಗೆ ಬರೆದಿದ್ದರು. ಅವರು ಇದನ್ನು ಬರೆದ ರಾತ್ರಿ ಕಾಲ್ತುಳಿತ ಸಂಭವಿಸಿದೆ. ಅವರು ಸ್ನಾನ ಮಾಡಿದ ಸಂದರ್ಭದಲ್ಲಿ ಕಾಗದವು ಒದ್ದೆಯಾಗಿದ್ದರಿಂದ ಅದನ್ನು ಸ್ಥಳೀಯ ಆಡಳಿತಕ್ಕೆ ಕೊಡಲು ಸಾಧ್ಯವಾಗಿರಲಿಲ್ಲ' ಎಂದು ಆ ಪೋಸ್ಟ್‌ನಲ್ಲಿ ಹೇಳಲಾಗಿದೆ. ಈ ಫೋಟೊವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ಹಲವರು ಇದೇ ಪೋಸ್ಟ್ ಅನ್ನು ಹಂಚಿಕೊಂಡಿರುವುದು ತಿಳಿದು ಬಂತು. ಫೋಟೊವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹಲವು ಅನುಮಾನಗಳು ಬಂದವು. ಚಿತ್ರದ ಹಿನ್ನೆಲೆ ಬ್ಲರ್ ಆಗಿತ್ತು. ಅದು ಎಐ ಚಿತ್ರ ಆಗಿರಬಹುದು ಎಂಬ ಶಂಕೆ ವ್ಯಕ್ತವಾಯಿತು. ಚಿತ್ರವನ್ನು ವಾಸಿಟೈ ಎಂಬ ಎಐ ಪತ್ತೆ ಟೂಲ್‌ನಲ್ಲಿ ಹಾಕಿದಾಗ, ಅದು ಎಐ ಚಿತ್ರ ಎಂಬುದು ದೃಢಪಟ್ಟಿತು. ನಂತರ, ಹೈವ್ ಮಾಡರೇಷನ್ ಎಂಬ ಎಐ ಪತ್ತೆ ವೆಬ್‌ಸೈಟ್‌ನಲ್ಲಿ ಹಾಕಿದಾಗ, ಚಿತ್ರದಲ್ಲಿ ಎಐ ಅಂಶಗಳು ಇರುವುದನ್ನು ದೃಢಪಡಿಸಿತು. ಪೋಸ್ಟ್‌ನಲ್ಲಿ ಅಪ್‌ಲೋಡ್ ಮಾಡಿರುವುದು ಎಐ ಫೋಟೊ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 4, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಸಪ್ತಮಿ ಗಂ. 26-31 ನಕ್ಷತ್ರ: ಅಶ್ವಿನಿ ಗಂ. 21-50 ಯೋಗ: ಶುಭ ಗಂ. 24-06 ಕರಣ: ಗರ ಗಂ. 15-33, ಮಕರ ಮಾಸದ 21 ನೇ ದಿನ, ಮಳೆನಕ್ಷತ್ರ: ಶ್ರವಣ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 07-00 ಸೂರ್ಯಾಸ್ತ : 06-29
ಮುಸ್ಲಿಂ ದಿನಾಂಕ : 05 ಶಬನ್, ದಿನ ವಿಶೇಷ : ರಥ ಸಪ್ತಮಿ (ಪೂರ್ವಾರುಣೋದಯ)
ಅದೃಷ್ಟ ಸಂಖ್ಯೆ : 3, 12

ಮೇಷ: ಆಪ್ತರ ಸಕಾಲಿಕ ಸಹಾಯಕ್ಕೆ ಧನ್ಯವಾದ ತಿಳಿಸಲು ಮರೆಯದಿರಿ. ಸಂಪರ್ಕವನ್ನು ಭದ್ರ ಮಾಡಿಕೊಳ್ಳಿ. ಗೊಂದಲದಲ್ಲಿರುವ ನಿಮಗೆ ಒಳಿತಿನ ದಾರಿ ಸಿಗಲಿದೆ. ಆಭರಣಗಳ ಖರೀದಿ ನಡೆಸುವುದರಿಂದ ಸಂತೋಷವಾಗುವುದು.

ವೃಷಭ: ಕೆಲಸವು ನಿಧಾನಗತಿಯಲ್ಲಿ ಸಾಗುವ ಕಾರಣದಿಂದ ಯೋಜಿತ ಕಾರ್ಯವು ಬಾಕಿ ಉಳಿಯಲಿದೆ. ಮಾರಾಟ ಪ್ರತಿನಿಧಿಗಳಿಗೆ ಸ್ಪಂದನೆ ಸಿಗುವುದು. ರಾಜಕೀಯ ವ್ಯಕ್ತಿಗಳಿಗೆ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು.

ಮಿಥುನ: ಕೆಲಸಕ್ಕಾಗಿ ಉನ್ನತ ಅಧಿಕಾರಿಗಳನ್ನು ಕಾಣಲು ದಿನವಿಡೀ ಓಡಾಟ ನಡೆಸುವಿರಿ. ಸಜ್ಜನರ ಭೇಟಿಯಿಂದ ಜ್ಞಾನಾರ್ಜನೆ ಉಂಟಾಗಲಿದೆ. ವಿವಾದಕ್ಕೆ ಆಸ್ಪದವಾಗದಂತೆ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಫಲರಾಗುವಿರಿ.

ಕರ್ಕಾಟಕ: ನಿಮ್ಮ ವಾಕ್ಚಾತುರ್ಯವನ್ನು ಪ್ರದರ್ಶಿಸಲು ಸುವರ್ಣಾವಕಾಶ ಲಭಿಸುವುದು. ಅಧಿಕಾರಿಗಳ ಕೈಗೊಂಬೆಯಾಗಿರುವ ನಿಮಗೆ ಜವಾಬ್ದಾರಿಗಳು ಹೆಚ್ಚುವುದು. ಹಣಕಾಸಿನ ಪರಿಸ್ಥಿತಿ ನಿಮ್ಮನ್ನು ನಿದ್ದೆಗೆಡಿಸಲಿದೆ.

ಸಿಂಹ: ದೇಹದಲ್ಲಿ ಪಿತ್ತಾಧಿಕ್ಯದಿಂದ ಅಥವಾ ನಿದ್ದೆಯ ಅಭಾವದಿಂದ ಅನಾರೋಗ್ಯ ಉಂಟಾಗಬಹುದು. ನಾಳೆಯ ದಿನದ ಅಧಿಕವಾದ ಕೆಲಸಗಳ ಬಗ್ಗೆ ಗಮನ ಹರಿಸುವುದು ಉತ್ತಮ. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ಕನ್ಯಾ: ನಾನಾ ಕಡೆಗಳಿಂದ ಸಂಪಾದನೆ ಇರುವುದು. ಬರಬೇಕಾಗಿದ್ದ ಹಣ ಅಡಚಣೆಗಳಿಲ್ಲದೆ ಶೀಘ್ರದಲ್ಲಿ ಬರುವುದು. ಸ್ವಾದಿಷ್ಟ ಭೋಜನದ ಯೋಗ ಪ್ರಾಪ್ತವಾಗುವುದು. ಬುದ್ಧಿವಂತಿಕೆಯಿಂದ ಕೆಲಸವನ್ನು ನಿಮ್ಮದಾಗಿಸಿಕೊಳ್ಳಿರಿ.

ತುಲಾ: ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿವೆ. ಸಹೋದ್ಯೋಗಿಗಳಲ್ಲಿನ ವಿಚಾರ ವಿನಿಮಯದಿಂದ ಅಸೂಯೆ ಹುಟ್ಟಬಹುದು. ಖರ್ಚಿನಲ್ಲಿ ಹಿಡಿತವಿರುವುದು ಉತ್ತಮ.

ವೃಶ್ಚಿಕ: ನೀರಿನ ವ್ಯತ್ಯಾಸದಿಂದ ಕೆಮ್ಮು, ಕಫ ಉಂಟಾಗಬಹುದು. ಸರ್ಕಾರಿ ಕಚೇರಿಗಳಿಗೆ ಅಲೆದಾಟವಾದರೂ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುವುದು. ಕ್ರೀಡಾಪಟುಗಳಿಗೆ ಪ್ರಗತಿ ಕಂಡು ಬರುವುದು.

ಧನು: ಮನೆಯ ಕೌಟುಂಬಿಕ ವಿಷಯಗಳನ್ನು ತಂದೆಯೊಡನೆ ಚರ್ಚಿಸಿ ನಂತರದಲ್ಲಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಕೊಡು–ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವನ್ನು ಕಂಡು ಕೆಲಸಗಳನ್ನು ವೃದ್ಧಿಸಿಕೊಳ್ಳುವಿರಿ.

ಮಕರ: ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಉಪಯೋಗವಾಗಲಿದೆ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ . ಅಧಿಕಾರಿಗಳಿಗೆ ಕೆಲಸದಲ್ಲಿನ ಒತ್ತಡ ಹೆಚ್ಚಲಿದೆ.

ಕುಂಭ: ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆಗಳು ಅನುಭವಕ್ಕೆ ಬಂದಲ್ಲಿ ವೈದ್ಯರನ್ನು ಭೇಟಿ ಮಾಡಿ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಧಾರ್ಮಿಕ ಅಧ್ಯಯನದಲ್ಲಿ ಆಸಕ್ತಿ ಮೂಡುವುದು.

ಮೀನ: ಪ್ರಾಮಾಣಿಕವಾದ ಪ್ರಯತ್ನಬಲ ಹಾಗೂ ಒಳ್ಳೆಯತನ ಉಪಯೋಗಕ್ಕೆ ಬರದು. ಇಂದು ನ್ಯಾಯಮೂರ್ತಿಗಳಿಗೆ, ಆಡಳಿತಾಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ. ಮಾನಸಿಕ ಸ್ಥೈರ್ಯ ಹೆಚ್ಚಲಿದೆ.

ಸರ್ವೋದಯಕ್ಕೆ ಬರಲಿ ದೇವರು!

ನುಡಿ ಬೆಳಗು — 124

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ದೇವರು ಹಿಂದೆ ಭೂಮಿಗೆ ಭಾರ ಆದವರ ಸಂಹಾರಕ್ಕೆ ಅವತಾರ ಎತ್ತುತ್ತಿದ್ದ. ಕೆಟ್ಟವರ ನಾಶಕ್ಕೆ ದೇವರು ಅವತಾರ ಎತ್ತೋದು ಸಾಕು. ಈಗ ದೇವರು ಅವತಾರ ಎತ್ತಬೇಕಾಗಿದ್ದು ಸರ್ವೋದಯಕ್ಕೆ. ಸರ್ವರ ಏಳಿಗೆಗಾಗಿ ದೇವರು ಅವತಾರ ತೊಡಬೇಕಾಗಿದೆ. 'ತನುವೆಂಬ ಗುಡಿಯೊಳಗೆ ಮನವೆಂಬ ಸಿಂಹಾಸನವನಿಕ್ಕಿ ಘನಮಹಾಲಿಂಗವ ಮೂರ್ತಿಗೊಳಿಸಿ ಸಕಲ ಕರಣಂಗಳಿಂದೆ ಪೂಜೋಪಚಾರವ ಶೃಂಗರಿಸಬಲ್ಲರೆ ಘನಕ್ಕೆ ಘನಮಹಿಮನೆಂಬೆನಯ್ಯಾ ಅಖಂಡೇಶ್ವರಾ' ಎಂದು ಶರಣರು ಹೇಳಿದರು. ಎದೆಯಲ್ಲಿ ಸತ್ಯ ಅಥವಾ ದೇವರು ಇದ್ದರೆ ನೀವು ಆಡಿದ್ದು ಮಾಡಿದ್ದು ಎಲ್ಲವೂ ಪೂಜೆ ಆಗತೈತಿ. ಬದುಕೇ ಆರಾಧನೆಯಾಗತೈತಿ. ಸದಾಚಾರಿಯಾಗಿ ಬದುಕಬೇಕು. ಸತ್ಯವನ್ನು ಅರಿತರೆ ಅದು ಜ್ಞಾನ ಮಾರ್ಗ. ಸತ್ಯವನ್ನು ನಂಬಿದರೆ ಭಕ್ತಿ ಮಾರ್ಗ, ಸತ್ಯವನ್ನು ಆಚರಣೆ ಮಾಡಿದರೆ ಕರ್ಮ ಮಾರ್ಗ, ಇವೆಲ್ಲವನ್ನು ತಿಳಿದಿರಿ ಎಂದರೆ ಅದೇ ಮುಕ್ತಿ ಮಾರ್ಗ. ಅದನ್ನೇ ಜೀವನ್ ಮುಕ್ತಾವಸ್ಥೆ ಎಂದು ಕರೆದರು. ದೇವರು ನಿಮ್ಮ ಎದೆಯಲ್ಲಿ ಕುಳಿತರೆ ನೀವು ಏನು ಕೆಲಸ ಮಾಡಿದರೂ ಸದಾಚಾರ. ಸದಾಚಾರ ಎಂದರೆ ಸಂತರ ಜೀವನಾಚರಣೆ.

ಸರ್ ಎಂ.ವಿಶ್ವೇಶ್ವರಯ್ಯ ಅವರು ಎಷ್ಟು ಆಚಾರಶೀಲರು! ಅವರು ಕೆಆರ್‌ಎಸ್ ಕಟ್ಟಿದರು. ಇದರಿಂದ ಮಂಡ್ಯ ಮತ್ತು ಸುತ್ತಮುತ್ತಲಿನ ಪ್ರದೇಶ ನೀರಾವರಿ ಆಯಿತು. ಅಲ್ಲಿ ಈಗ ಬೆಳೆದ ತೆಂಗು, ಬಾಳೆ, ಕಬ್ಬು, ಭತ್ತ ಎಲ್ಲವನ್ನೂ ನೋಡಿ ಜನ ಇದು ಕಬ್ಬು, ಬಾಳೆ ಎಂದು ಹೇಳೋದಿಲ್ಲ. ಇದೆಲ್ಲ ವಿಶ್ವೇಶ್ವರಯ್ಯ ಅಂತಾರೆ. ಅವರು ಕನ್ನಂಬಾಡಿ ಕಟ್ಟೆ ಕಟ್ಟುವಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅರಸರಾಗಿದ್ದರು. ಅವರಿಗೆ ಕನ್ನಂಬಾಡಿ ಕಟ್ಟೆಯ ನಕ್ಷೆಯನ್ನು ನೀಡಿ ಇದನ್ನು ಅನುಷ್ಠಾನಗೊಳಿಸಿದರೆ ಜನರಿಗೆ ಉಪಯೋಗವಾಗತೈತಿ ಅಂದಾಗ ಒಡೆಯರ್ ಒಪ್ಪಿದರು. ಆಗ ಒಬ್ಬರು ವಿಶ್ವೇಶ್ವರಯ್ಯ ಅವರಿಗೆ 'ಮಹಾರಾಜರ ಹತ್ತಿರ ಹೋಗಲು ಜನ ಹೆದರುತ್ತಾರೆ. ನೀವು ಅವರಿಗೆ ಒತ್ತಾಯ ಮಾಡುತ್ತೀರಿ. ಆದೇಶ ಮಾಡುವ ರೀತಿಯಲ್ಲಿ ಮಾತನಾಡುತ್ತೀರಿ. ಇಷ್ಟು ಧೈರ್ಯ ನಿಮಗೆ ಎಲ್ಲಿಂದ ಬಂತು' ಅಂತ ಕೇಳಿದರು. ಅದಕ್ಕೆ ವಿಶ್ವೇಶ್ವರಯ್ಯ, 'ಮಹಾರಾಜರಿಗೆ ಸತ್ಯವನ್ನು ಹೇಳುವ ಧೈರ್ಯ ನನಗೆ ಹೇಗೆ ಬಂತು ಎಂದರೆ, ನಾನು ದಿನಾ ಮಹಾರಾಜರ ಬಳಿಗೆ ಹೋಗುವಾಗ ನನ್ನ ಜೇಬಿನಲ್ಲಿ ರಾಜೀನಾಮೆ ಪತ್ರ ಇಟ್ಟುಕೊಂಡೇ ಹೋಗ್ತೀನಿ' ಅಂದರಂತೆ. ನಾವು ಅರ್ಜಿ ಇಟ್ಟುಕೊಂಡು ಹೋಗ್ತೀವಿ. ಅವರು ರಾಜೀನಾಮೆ ಪತ್ರ ಇಟ್ಟುಕೊಂಡು ಹೋಗುತ್ತಿದ್ದರು. ಸತ್ಯದ ಆಚರಣೆ ಇದ್ದರೆ ಮಾತ್ರ ಇಂತಹ ಧೈರ್ಯ ಬರುತ್ತದೆ. ನಮಗೆ ಯಾಕೆ ಧೈರ್ಯ ಇಲ್ಲ ಎಂದರೆ, ನಮ್ಮಲ್ಲಿ ಸತ್ಯದ ಕೊರತೆ ಇದೆ. ಸತ್ಯದ ಆಚರಣೆ ಇಲ್ಲ ಅವರೆಲ್ಲ ಸತ್ಯದ ಆಚರಣೆಯಿಂದ ಜಗತ್ತು ಕಟ್ಟಿದರೇ ವಿನಾ ಅನುದಾನದಿಂದ ಕಟ್ಟಲಿಲ್ಲ.

ಕೊಪ್ಪಳ ಬಳಿ ಕಿನ್ನಾಳ ಅಂತ ಊರೈತಿ. ಅಲ್ಲಿ ಗಣಪತಿ ಇಟ್ಟಿದ್ದರು. ಅದಕ್ಕೆ ವಂತಿಗೆ ಸಂಗ್ರಹಿಸಿದ್ದರು. ಆದರೆ, ಗಣಪತಿ ಇಟ್ಟು ಡಿಜೆ ಹಚ್ಚಿ ಕುಣಿಯಲಿಲ್ಲ. ಸಂಗ್ರಹವಾದ ಹಣದಲ್ಲಿ ಊರ ರಸ್ತೆಯನ್ನು ತಾವೇ ದುರಸ್ತಿ ಮಾಡಿದರು. ಸರ್ಕಾರದ ಅನುದಾನಕ್ಕೆ ಕಾಯಲಿಲ್ಲ. ಅನುದಾನದಿಂದ ಕಟ್ಟುವುದಲ್ಲ, ಆಚರಣೆಯಿಂದ ಜಗತ್ತನ್ನು ಕಟ್ಟಬೇಕು. ಅದಕ್ಕೆ ಸತ್ಯದ ಆಚರಣೆ ಬಹಳ ಮುಖ್ಯ.

ಪದಬಂಧ 5943

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವರನ ಒತ್ತಾಯ! (3)
5.ಕುಂತಿ ಪುತ್ರನ ಕಿವಿ! (2)
6.ಈ ಪರಿ ನಡೆದ ಮದುವೆ (4)
7.ಸುಳ್ಳು ವೇಷ ಕಟ್ಟಿ ಮೋಸ ಮಾಡುವಿಕೆ (6)
9.ಏಳು ದಿನಗಳ ಅವಧಿ (2)
10.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ! (2)
11.ಕೊಳದ ಹತ್ತಿರ ಕಾಣಿಸಿದ ದೊಡ್ಡ ಲೋಹದ ಪಾತ್ರೆ (6)
14.ಜೊತೆಯಲ್ಲಿ ವಾಸಿಸುವುದು (4)
15.ಜರೂರಾಗಿ ಹಾಕಿದ ಸಹಿ (2)
16.ನೂರರ ಗುಂಪು (3)

ಮೇಲಿಂದ ಕೆಳಕ್ಕೆ

1.ಬೇರೆ ಬೇರೆ ಜಾತಿಗಳು ಬೆರೆಯುವಿಕೆ (5)
2.ಮೋಸಕ್ಕೊಂದು ಪರ್ಯಾಯ ಪದ (4)
3.ಸಂಪೂರ್ಣವಾಗಿ ಪಕ್ವವಾಗಿರುವುದು (4)
4.ಭೂಮಧ್ಯರೇಖೆಯ ಉತ್ತರ ಅಥವಾ ದಕ್ಷಿಣಕ್ಕೆ ಸೂರ್ಯನು ಪ್ರಯಾಣ ಮಾಡುವ ಮಾರ್ಗ (3)
8.ಕಿತ್ತಳೆಯ ಹಣ್ಣು (3)
10.ಬುದ್ಧಿಭ್ರಮಣೆಯಾದವನು (5)
11.ಕೋಟೆಯ ರಕ್ಷಕ (4)
12.ಹತ್ತನೆಯ ಒಂದು ಭಾಗ (4)
13.ಪ್ರಯಾಸದಿಂದ ಆದ ಹೆರಿಗೆ (3)



5942ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ವಾಗ್ದಾನ 4.ಪ್ಲುತ 6.ಮಿತವ್ಯಯ 7.ಸಕಾಲ 9.ಜಾಗೃತಿ 10.ಸೋದಾಹರಣ 11.ಕುರುಡಿ 13.ಮಣಕ 15.ವರಮಾನ 16.ಲಕ್ಷ 17.ಲಶುನ

ಮೇಲಿಂದ ಕೆಳಕ್ಕೆ:
1.ಸ್ವಾಮಿಕಾರ್ಯ 2.ವಾಯಸ 3.ನಕುಲ 5.ತರಗತಿ 8.ಕಾಲಹರಣ 9.ಜಾಣ 10.ಸೋಡಿ 11.ಕುತೂಹಲ 12.ನಸುನಗು 13.ಮರಾಲ 14.ಕವನ

ಸುಡೊಕು 6328

	4				7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6327 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಷೇರುಪೇಟೆ ವಹಿವಾಟು 319
ಹಿಂದಿನ ಅಂತ್ಯ 77,505 — ಇಂದಿನ ಅಂತ್ಯ 77,186



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,482
ಇಂದಿನ ಅಂತ್ಯ	23,361
▼	121
ದಿನದ ಕನಿಷ್ಠ	23,222

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹515
12ಕ್ಕೆ	₹70
ಮೈಸೂರು	
100ಕ್ಕೆ	₹517

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕಿ) ₹522-701
ದ್ವಿತಳಿ (ಪ್ರ.ಕಿ) ₹285-895

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹189
ಆರ್‌ಎಸ್‌ಎಸ್-5 ₹184
ಗುಡ್ ಲಾಟ್ ₹179
(ಪ್ರತಿ ಕೆಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ಸಂಸ್ಕರಿತ)	₹1360 (1400)
ಸೋಯಾ (ಸಂಸ್ಕರಿತ)	₹1260 (1260)
ಸೂರ್ಯಕಾಂತಿ (ಸಂಸ್ಕರಿತ)	₹1365 (1350)
ಪಾಮೋಲಿನ್	₹1320 (1300)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹14000-14000
ತಿಪಟೂರು	₹13800-14529

ವಿನಿಮಯ ದರ

$ ಡಾಲರ್	87.17
£ ಪೌಂಡ್	107.20
€ ಯುರೊ	89.20
¥ ಯೆನ್ (100ಕ್ಕೆ)	56

ತಯಾರಿಕಾ ವಲಯ ಪ್ರಗತಿ ಏರಿಕೆ

6 ತಿಂಗಳ ಗರಿಷ್ಠಕ್ಕೆ ಸೂಚ್ಯಂಕ: ಎಸ್ ಆ್ಯಂಡ್ ಪಿ ಗ್ಲೋಬಲ್

ನವದೆಹಲಿ (ಪಿಟಿಐ): 'ದೇಶದ ತಯಾರಿಕಾ ವಲಯದ ಪ್ರಗತಿ ಜನವರಿ ತಿಂಗಳಲ್ಲಿ 6 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ವರದಿ ಸೋಮವಾರ ತಿಳಿಸಿದೆ.

2024ರ ಡಿಸೆಂಬರ್‌ನಲ್ಲಿ ಸೂಚ್ಯಂಕವು 56.4ರಷ್ಟಿತ್ತು. ಆದರೆ, ಜನವರಿಯಲ್ಲಿ ಸೂಚ್ಯಂಕವು 57.7ಕ್ಕೆ ಏರಿಕೆ ಆಗಿದೆ. ರಫ್ತಿಗೆ ಬೇಡಿಕೆ ಹೆಚ್ಚಿದ್ದರಿಂದ ಸೂಚ್ಯಂಕ ಹೆಚ್ಚಳವಾಗಿದೆ ಎಂದು ತಿಳಿಸಿದೆ. ಡಿಸೆಂಬರ್‌ನಲ್ಲಿ ದಾಖಲಾಗಿದ್ದ ಸೂಚ್ಯಂಕವು ಒಂದು ವರ್ಷದ ಕನಿಷ್ಠ ಮಟ್ಟವಾಗಿತ್ತು.

ಸೂಚ್ಯಂಕಗಳು 50ಕ್ಕಿಂತ ಕಡಿಮೆ ಇದ್ದರೆ ಪ್ರಗತಿ ಇಲ್ಲ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಹೆಚ್ಚಿದ್ದರೆ ಬೆಳವಣಿಗೆ ಇದೆ ಎಂದು ಪರಿಗಣಿಸಲಾಗುತ್ತದೆ.

'ಭಾರತದ ತಯಾರಿಕಾ ವಲಯದ ಚಟುವಟಿಕೆಗಳು ಜನವರಿಯಲ್ಲಿ ಏರಿಕೆಗೊಂಡಿವೆ. ದೇಶೀಯ ಮತ್ತು ರಫ್ತು ಬೇಡಿಕೆ ಸದೃಢವಾಗಿವೆ. ಹೊಸ ಬೇಡಿಕೆಗಳು ಬೆಳವಣಿಗೆಗೆ ಸಹಕಾರ ನೀಡಿದವು' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ದೇಶೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಬೇಡಿಕೆಯಿಂದ ಪ್ರಗತಿ ಸಾಧ್ಯವಾಗಿದೆ ಎಂದು ಸರಕುಗಳ ತಯಾರಕರು ಹೇಳಿದ್ದಾರೆ. ಶೇ 32ರಷ್ಟು ಕಂಪನಿಗಳು ಮುಂಬರುವ ದಿನಗಳಲ್ಲಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆ ಹೊಂದಿವೆ. ಹೆಚ್ಚಿದ ಬೇಡಿಕೆ, ಉತ್ತಮ ಗ್ರಾಹಕ ಸಂಬಂಧ, ಅನುಕೂಲಕರ ಆರ್ಥಿಕ ಸ್ಥಿತಿ, ಮಾರುಕಟ್ಟೆ ಪ್ರಯತ್ನಗಳಿಂದಾಗಿ ಪ್ರಗತಿ ಸಾಧ್ಯವಾಗಿದೆ ಎಂದು ಹೇಳಿದ್ದಾರೆ.

ಹೆಚ್ಚಿದ ಮಾರಾಟದಿಂದ ಕಂಪನಿಗಳು ಹೆಚ್ಚುವರಿ ಸಿಬ್ಬಂದಿ ನೇಮಕಕ್ಕೆ ಮುಂದಾಗಿವೆ. ತಯಾರಿಕಾ ವಲಯದ ಹಣದುಬ್ಬರ ಸತತ ಎರಡನೇ ತಿಂಗಳೂ ಇಳಿಕೆಯಾಗಿದೆ. ಇದು ತಯಾರಕರ ಮೇಲೆ ಮೇಲೆ ಒತ್ತಡವನ್ನು ಕಡಿಮೆ ಮಾಡಿದೆ ಎಂದು ಭಂಡಾರಿ ಹೇಳಿದ್ದಾರೆ.

ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ಮುಂಬೈ ಧಾರಣೆ (ಶೇಂಗಾ)
03-02-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1410)
ಒಂದು ವಾರದ ಡೆಲಿವರಿ	1365 (1405)
ಪಾಮ್ ವಾರದ ಡೆಲಿವರಿ	1318 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1295 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಚಿನ್ನ 10ಗ್ರಾಂ ₹**82,700** (81,900)
ಬೆಳ್ಳಿ ಕೆ.ಜಿ ₹**93,350** (92,700)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45500-49500
ಕುಮಟ	
ಚಾಲಿ	32269-36999
ಚಿಪ್ಪು	16689-25689
ಕೋಕ	6199-19999
ಫ್ಯಾಕ್ಟರಿ	3589-24129
ಹಳೆಚಾಲಿ	35569-37699
ಹೊಸಚಾಲಿ	27019-32499
ಶಿವಮೊಗ್ಗ	
ಬೆಟ್ಟೆ	45699-55399
ಗೊರಬಲು	18100-26009
ರಾಶಿ	30899-50699
ಸರಕು	52999-62100
ಸಿದ್ದಾಪುರ	
ಬಿಳಿಗೋಟು	22589-24689
ಚಾಲಿ	32399-37929
ಕೋಕ	19299-26219
ಹೊಸಚಾಲಿ	22699-34619
ಕೆಂಪುಗೋಟು	18609-22599
ರಾಶಿ	41099-49399
ತಟ್ಟಿಬೆಟ್ಟೆ	27889-45099
ಶಿರಸಿ	
ಬೆಟ್ಟೆ	27869-37699
ಬಿಳಿಗೋಟು	15009-28699
ಚಾಲಿ	35399-39409
ಕೆಂಪುಗೋಟು	13019-22218
ರಾಶಿ	43499-47209
ಯಲ್ಲಾಪುರ	
ಅಪಿ	70795-78489
ಬಿಳಿಗೋಟು	12499-26840
ಚಾಲಿ	27969-38609
ಕೋಕ	4899-17561
ಕೆಂಪುಗೋಟು	17651-30499
ರಾಶಿ	39599-64699
ತಟ್ಟಿಬೆಟ್ಟೆ	28901-38989
ಕಾರ್ಕಳ	
ಹೊಸತು	25000-36500
ಹಳತು	30000-45500

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಇನ್ವೆಸ್ಟ್ ಕರ್ನಾಟಕ: 18 ದೇಶಗಳ ಸುಮಾರು 2,000 ಹೂಡಿಕೆದಾರರು ಭಾಗಿ– ಡಿ.ಕೆ.ಶಿವಕುಮಾರ್

'₹10 ಲಕ್ಷ ಕೋಟಿ ಹೂಡಿಕೆ ನಿರೀಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 12ರಿಂದ ಆರಂಭವಾಗುವ 'ಇನ್ವೆಸ್ಟ್ ಕರ್ನಾಟಕ 2025' ಜಾಗತಿಕ ಹೂಡಿಕೆದಾರರ ಸಮಾವೇಶದ ಮೂಲಕ ಸುಮಾರು ₹10 ಲಕ್ಷ ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆ ಆಗಬಹುದು ಎಂದು ಅಂದಾಜು ಮಾಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಪೂರ್ವಭಾವಿ ಸಿದ್ಧತಾ ಪರಿಶೀಲನಾ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.11ರ ಸಂಜೆಯೇ ಸಮಾವೇಶ ಉದ್ಘಾಟಿಸಲಾಗುವುದು ಎಂದರು.

ಮುಖ್ಯಾಂಶಗಳು
- ಫೆ. 12ರಿಂದ 14 ರವರೆಗೆ ಸಮಾವೇಶ
- 16 ದೇಶಗಳಿಗೆ ಭೇಟಿ ನೀಡಿ ಆಹ್ವಾನ ನೀಡಿದ ಸರ್ಕಾರ
- ಸಮಾವೇಶದ ಉದ್ಘಾಟನೆ ಬಳಿಕ ಒಡಂಬಡಿಕೆಗಳಿಗೆ ಸಹಿ

18 ದೇಶಗಳ ಸುಮಾರು 2,000 ಹೂಡಿಕೆದಾರರು ಈ ಸಮಾವೇಶದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿದ್ದಾರೆ. ವಿವಿಧ ದೇಶಗಳ 60ಕ್ಕೂ ಹೆಚ್ಚು ಗಣ್ಯರು ಭಾಗವಹಿಸುವರು. 9 ದೇಶಗಳು ತಮ್ಮ ಪೆವಿಲಿಯನ್‌ಗಳನ್ನು ತೆರೆಯಲು ಮುಂದೆ ಬಂದಿವೆ. 10 ದೇಶಗಳ ಉನ್ನತಮಟ್ಟದ ಕೈಗಾರಿಕಾ ವಲಯದ ನಾಯಕರು ತಾಂತ್ರಿಕ ವಲಯದ ಗೋಷ್ಠಿಗಳಲ್ಲಿ ಭಾಗವಹಿಸುವರು ಎಂದು ಹೇಳಿದರು.

3 ಲಕ್ಷ ಡಾಲರ್ ಮೊತ್ತದ ಬಹುಮಾನ

ಹಲವು ಹೂಡಿಕೆದಾರರು ಬೆಂಗಳೂರು ಸೇರಿ ಹೊರಗಿನ ಜಿಲ್ಲೆಗಳಲ್ಲಿ ಸಾಕಷ್ಟು ಉದ್ಯೋಗ ಸೃಷ್ಟಿಗೆ ಒತ್ತನ್ನು ನೀಡಿದ್ದಾರೆ. ಇವರಿಗೆ ಮೂರು ಲಕ್ಷ ಡಾಲರ್ (₹2.61 ಕೋಟಿ) ಮೊತ್ತದ ಬಹುಮಾನ ನೀಡಲಾಗುವುದು. ನವೋದ್ಯಮಗಳ ಪ್ರತಿ ವಿಭಾಗಕ್ಕೆ ಒಟ್ಟು 1 ಲಕ್ಷ ಡಾಲರ್ (₹87 ಲಕ್ಷ) ಬಹುಮಾನ ಮೊತ್ತ ನಿಗದಿ ಮಾಡಲಾಗಿದೆ ಎಂದು ಶಿವಕುಮಾರ್ ಹೇಳಿದರು.

30ಕ್ಕೂ ಹೆಚ್ಚು ನವ ನವೀನ ರೀತಿಯ ಆಲೋಚನೆಗಳನ್ನು ಹೊಂದಿರುವ ನವೋದ್ಯಮಗಳು ಕರ್ನಾಟಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಭಾಗವಹಿಸುತ್ತಿವೆ. ಒಂದು ಸಾವಿರಕ್ಕೂ ಹೆಚ್ಚು ನವೋದ್ಯಮಗಳಿಂದ ಪ್ರದರ್ಶನಕ್ಕೆ ಅರ್ಜಿಗಳು ಬಂದಿದ್ದವು. ಇವರಲ್ಲಿ ವಿನೂತನ ಚಿಂತನೆಗಳನ್ನು ಹೊಂದಿರುವ 45 ನವೋದ್ಯಮಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ನೂತನ ಕೈಗಾರಿಕಾ ನೀತಿ 2025–30 ಅನ್ನು ಈ ಸಮಾವೇಶದಲ್ಲಿ ಘೋಷಣೆ ಮಾಡಲಾಗುವುದು. ದೇಶದ ಅನೇಕ ರಾಜ್ಯಗಳ ನೀತಿಗಳನ್ನು ಅಧ್ಯಯನ ಮಾಡಲಾಗಿದೆ. ಎಲ್ಲದಕ್ಕಿಂತ ಉತ್ತಮ, ಆಕರ್ಷಣೀಯ ನೀತಿಯನ್ನು ಪರಿಚಯಿಸಲಾಗುವುದು. ಜತೆಗೆ ಕ್ಲೀನ್ ಮೊಬಿಲಿಟಿ ನೀತಿ 2025–30 ಅನ್ನು ಅನಾವರಣ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಾಲ್ಕು ಸಾವಿರ ಎಂಎಸ್‌ಎಂಇಗಳಿಗೆ ಇಲಾಖೆ ವತಿಯಿಂದ ತರಬೇತಿ ನೀಡಿ ಸಮಾವೇಶಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

'ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಮುನ್ನುಡಿ ಬರೆದದ್ದೇ ಕರ್ನಾಟಕ. ಮೊದಲ ಬಾರಿ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಇದನ್ನು ನಡೆಸಲಾಗಿತ್ತು. ಇದನ್ನು ಗಮನಿಸಿದ ಅನ್ಯ ರಾಜ್ಯಗಳು ಇದನ್ನು ಅನುಕರಣೆ ಮಾಡಿದ್ದವು. ಎಲ್ಲ ರೀತಿಯಲ್ಲಿಯೂ ಕರ್ನಾಟಕ ಪ್ರಜ್ವಲಿಸಲಿದೆ. ಉದ್ಯೋಗ ಸೃಷ್ಟಿ ಸೇರಿದಂತೆ ಉತ್ಪಾದನೆಗೆ ಅನುಕೂಲಕರ ವಾತಾವರಣ ಉಂಟಾಗಲಿದೆ ಎಂಬುದು ನಮ್ಮ ನಂಬಿಕೆ' ಎಂದು ಹೇಳಿದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ಇತರರು ಹಾಜರಿದ್ದರು.

'ಏಕರೂಪದ ಟೋಲ್ ಜಾರಿಗೆ ಚಿಂತನೆ'

ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿ ಬಳಕೆದಾರರ ಅನುಕೂಲಕ್ಕಾಗಿ ಏಕರೂಪದ ಟೋಲ್ ನೀತಿ ಜಾರಿಗೆ ತರಲು ರಸ್ತೆ ಸಾರಿಗೆ ಸಚಿವಾಲಯ ಕಾರ್ಯನಿರತವಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸೋಮವಾರ ತಿಳಿಸಿದರು.

ಸದ್ಯ ಭಾರತದ ಹೆದ್ದಾರಿ ಮೂಲ ಸೌಕರ್ಯಗಳು ಅಮೆರಿಕಕ್ಕೆ ಸರಿಹೊಂದುವಂತಿವೆ ಎಂದು ಅವರು ಹೇಳಿದರು.

'ಪಿಟಿಐ' ಸುದ್ದಿಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ಪ್ರಯಾಣಿಕರು ಸಾಮಾಜಿಕ ಜಾಲತಾಣಗಳಲ್ಲಿ ರಸ್ತೆಯ ಸ್ಥಿತಿಗತಿ ಬಗ್ಗೆ ವ್ಯಕ್ತಪಡಿಸುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಆಯಾ ರಸ್ತೆಯ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಿದರು.

ಪ್ರಸ್ತುತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಯಾಣಿಸುವ ವಾಹನಗಳ ಪೈಕಿ ಖಾಸಗಿ ಕಾರುಗಳ ಪಾಲು ಶೇ 60ರಷ್ಟು. ಈ ವಾಹನಗಳಿಂದ ಸಂಗ್ರಹವಾಗುವ ಟೋಲ್ ಕೇವಲ ಶೇ 20–26ರಷ್ಟು ಮಾತ್ರ ಎಂದರು.

ಪ್ರತಿ ದಿನ 37 ಕಿ.ಮೀ ಹೆದ್ದಾರಿ ನಿರ್ಮಿಸುವ ದಾಖಲೆಯನ್ನು 2020–21ರಲ್ಲಿ ನಿರ್ಮಿಸಲಾಗಿತ್ತು. ಸಚಿವಾಲಯವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ದಾಖಲೆಯನ್ನು ಸರಿಗಟ್ಟಲಿದೆ ಎಂದು ಗಡ್ಕರಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಸಕ್ತ ಹಣಕಾಸು ವರ್ಷದಲ್ಲಿ 7,000 ಕಿ.ಮೀ ಹೆದ್ದಾರಿ ನಿರ್ಮಾಣವಾಗಿದೆ. ಸಾಮಾನ್ಯವಾಗಿ ಫೆಬ್ರುವರಿ–ಮಾರ್ಚ್ ಅವಧಿಯಲ್ಲಿ ಹೆದ್ದಾರಿ ನಿರ್ಮಾಣ ಕಾಮಗಾರಿ ಹೆಚ್ಚಾಗಿ ನಡೆಯುತ್ತದೆ ಎಂದು ತಿಳಿಸಿದರು.

10 ಗ್ರಾಂ ಚಿನ್ನದ ದರ ₹85,300

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆ ಆಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹400 ಹೆಚ್ಚಳವಾಗಿ, ₹85,300ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹84,900ಕ್ಕೆ ಮುಟ್ಟಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹300 ಹೆಚ್ಚಳವಾಗಿ, ₹96 ಸಾವಿರ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಚಿನ್ನದ ಖರೀದಿಗೆ ಬೇಡಿಕೆ ಹೆಚ್ಚಳವಾಗಿದೆ. ಇದರಿಂದ ಹಳದಿ ಲೋಹದ ಧಾರಣೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ತೆರಿಗೆ ಹಂಚಿಕೆಗೆ ಆಯೋಗದ ಜೊತೆ ರಾಜ್ಯಗಳು ಚರ್ಚಿಸಲಿ'

ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): 'ತೆರಿಗೆ ಹಂಚಿಕೆಯು ನ್ಯಾಯಯುತವಾಗಿಲ್ಲ ಎಂಬುದರ ಕುರಿತು ದಕ್ಷಿಣದ ರಾಜ್ಯಗಳು 16ನೇ ಹಣಕಾಸು ಆಯೋಗದೊಂದಿಗೆ ಮಾತುಕತೆ ನಡೆಸಬೇಕು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದ್ದಾರೆ.

ತೆರಿಗೆ ಹಣ ಹಂಚಿಕೆಯಲ್ಲಿ ಅನ್ಯಾಯ ಆಗುತ್ತಿದೆ ಎಂದು ದಕ್ಷಿಣದ ರಾಜ್ಯಗಳು ಕಳವಳ ವ್ಯಕ್ತಪಡಿಸುತ್ತಿವೆ. ಹಣಕಾಸು ಆಯೋಗವು ತೆರಿಗೆ ಆದಾಯವನ್ನು ವಿಂಗಡಿಸಲು ಬಳಸುವ ಮಾನದಂಡಗಳಲ್ಲಿ ಜನಸಂಖ್ಯೆಯೂ ಒಂದು. ಆದರೆ, ಕುಟುಂಬ ಯೋಜನೆಯ ಯಶಸ್ವೀ ಅನುಷ್ಠಾನದಿಂದಾಗಿ ದಕ್ಷಿಣದ ರಾಜ್ಯಗಳ ಜನಸಂಖ್ಯೆ ಕುಸಿತವಾಗಿದೆ.

ಕೇಂದ್ರ ಸರ್ಕಾರವು ಹಣಕಾಸು ಆಯೋಗದ ಶಿಫಾರಸು ಮೇರೆಗೆ ತೆರಿಗೆ ಹಂಚಿಕೆ ಮಾಡುತ್ತದೆ. ಮಾನದಂಡಗಳ ಬದಲಾವಣೆಗೆ ರಾಜ್ಯಗಳು ಆಯೋಗವನ್ನು ಸಂಪರ್ಕಿಸಬೇಕು ಎಂದು ಸುದ್ದಿಸಂಸ್ಥೆ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಸಚಿವರು ಹೇಳಿದರು.

2021–22ರಿಂದ 2024–25ರ ಅವಧಿಯಲ್ಲಿ ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಕರ್ನಾಟಕ ಮತ್ತು ಕೇರಳದ ತೆರಿಗೆ ಪಾಲು ಶೇ 15.8ರಷ್ಟು ಇತ್ತು. ಅದೇ 2014–15ರಲ್ಲಿ ಇದರ ಪ್ರಮಾಣ ಶೇ 18.62ರಷ್ಟಿತ್ತು.

ರೆಪೊ ದರ ಕಡಿತ ಸಾಧ್ಯತೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವು ತಾಳಿಕೆ ಮಟ್ಟವಾದ ಶೇ 6ರೊಳಗೆ ಇದೆ. ಹೀಗಾಗಿ ಆರ್‌ಬಿಐ ದರ ಕಡಿತದ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

2023ರ ಫೆಬ್ರುವರಿಯಿಂದ ರೆಪೊ ದರ ಶೇ 6.5 ಇದೆ. ಹೊಸದಾಗಿ ನೇಮಕಗೊಂಡ ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಬುಧವಾರದಿಂದ ಪ್ರಾರಂಭವಾಗುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಶುಕ್ರವಾರ ಆರ್‌ಬಿಐ ನಿರ್ಧಾರ ಪ್ರಕಟಿಸಲಿದೆ.

ಸೆನ್ಸೆಕ್ಸ್ 319 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಸೋಮವಾರ ನಡೆದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಕೆನಡಾ, ಮೆಕ್ಸಿಕೊ ಮತ್ತು ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಅಮೆರಿಕ ಸುಂಕ ಹೆಚ್ಚಳ ಮಾಡಿದೆ. ಇದು ದೇಶದ ಷೇರುಪೇಟೆಯ ಮೇಲೆ ಪರಿಣಾಮ ಬೀರಿದ್ದರಿಂದ ಸೂಚ್ಯಂಕಗಳು ಇಳಿದಿವೆ. ವಿದೇಶಿ ಬಂಡವಾಳದ ಹೊರಹರಿವು ಸಹ ಇಳಿಕೆಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 319 ಅಂಶ ಇಳಿಕೆಯಾಗಿ, 77,186ಕ್ಕೆ ವಹಿವಾಟು ಕೊನೆಗೊಂಡಿತು. ರಾಷ್ಟ್ರೀಯ ಷೇರು ಪೇಟೆ ಸೂಚ್ಯಂಕ ನಿಫ್ಟಿ 121 ಅಂಶ ಕಡಿಮೆಯಾಗಿ 23,361ಕ್ಕೆ ಅಂತ್ಯಗೊಂಡಿತು.

ಲಾರ್ಸೆನ್ ಆ್ಯಂಡ್ ಟೊಬ್ರೊ, ಟಾಟಾ ಮೋಟರ್ಸ್, ಹಿಂದುಸ್ತಾನ್ ಯೂನಿಲಿವರ್, ಏಷ್ಯನ್ ಪೇಂಟ್ಸ್, ಐಟಿಸಿ, ಪವರ್ ಗ್ರಿಡ್, ಎನ್‌ಟಿಪಿಸಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ. ಬಜಾಜ್ ಫೈನಾನ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಭಾರ್ತಿ ಏರ್‌ಟೆಲ್ ಮತ್ತು ಮಾರುತಿ ಸುಜುಕಿ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶನಿವಾರದ ವಹಿವಾಟಿನಲ್ಲಿ ₹1,327 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಯಾನ್ಸೆಗೆ 'ವರ್ಷದ ಆಲ್ಬಂ' ಗ್ರ್ಯಾಮಿ ಪ್ರಶಸ್ತಿ

ಲಾಸ್ ಏಂಜಲೀಸ್ (ಅಮೆರಿಕ) (ಪಿಟಿಐ): ಬಿಯಾನ್ಸೆ ಅವರ 'ಕೌಬಾಯ್ ಕಾರ್ಟರ್'ಗೆ 2025ನೇ ಸಾಲಿನ 'ವರ್ಷದ ಆಲ್ಬಂ' ಗ್ರ್ಯಾಮಿ ಪ್ರಶಸ್ತಿ ಸಂದಿದೆ.

ಇದುವರೆಗೆ ನಾಲ್ಕು ಬಾರಿ ಈ ವಿಭಾಗದಲ್ಲಿ ಪ್ರಶಸ್ತಿಗೆ ಬಿಯಾನ್ಸೆ ಹೆಸರು ನಾಮನಿರ್ದೇಶಿತವಾಗಿತ್ತು. ಒಮ್ಮೆಯೂ ಅವರಿಗೆ ಪ್ರಶಸ್ತಿ ಸಂದಿರಲಿಲ್ಲ. 21ನೇ ಶತಮಾನದಲ್ಲಿ 'ವರ್ಷದ ಆಲ್ಬಂ' ಗ್ರ್ಯಾಮಿ ಪ್ರಶಸ್ತಿ ಗೆದ್ದ ಮೊದಲ ಕಪ್ಪು ವರ್ಣದ ಮಹಿಳೆ ಎಂಬ ಗೌರವವೂ ಬಿಯಾನ್ಸೆ ಅವರದ್ದಾಗಿದೆ.

'ದಿ ಮಿಸ್‌ಎಡುಕೇಷನ್ ಆಫ್ ಲಾರಿನ್ ಹಿಲ್' ಎಂಬ ಆಲ್ಬಂಗೆ 26 ವರ್ಷಗಳ ಹಿಂದೆ ಲಾರಿನ್ ಹಿಲ್ 'ವರ್ಷದ ಆಲ್ಬಂ' ಗ್ರ್ಯಾಮಿ ಪ್ರಶಸ್ತಿ ಪಡೆದಿದ್ದರು. ಆನಂತರ ಕಪ್ಪು ವರ್ಣದ ಮಹಿಳೆಗೆ ಈ ಪ್ರಶಸ್ತಿ ಲಭಿಸುತ್ತಿರುವುದು ಈಗಲೇ. ಅದಕ್ಕೂ ಮೊದಲು ನತಾಲಿ ಕೋಲ್ ಹಾಗೂ ವಿಟ್ನಿ ಹ್ಯೂಸ್ಟನ್ ಆ ಪ್ರಶಸ್ತಿಯ ಗೌರವ ತಮ್ಮದಾಗಿಸಿಕೊಂಡಿದ್ದ ಕಪ್ಪು ವರ್ಣದ ಮಹಿಳೆಯರೆನಿಸಿದ್ದರು.

ಚಂದ್ರಿಕಾ 'ತ್ರಿವೇಣಿ' ಆಲ್ಬಂಗೂ ಗ್ರ್ಯಾಮಿ: ಭಾರತೀಯ ಅಮೆರಿಕನ್ ಗಾಯಕಿ ಮತ್ತು ಉದ್ಯಮಿ ಚಂದ್ರಿಕಾ ಟಂಡನ್, 'ತ್ರಿವೇಣಿ' ಆಲ್ಬಂಗಾಗಿ ಗ್ರ್ಯಾಮಿ ಪ್ರಶಸ್ತಿ ಪಡೆದಿದ್ದಾರೆ. 'ಬೆಸ್ಟ್ ನ್ಯೂ ಏಜ್, ಆಂಬಿಯೆಂಟ್' ಅಥವಾ 'ಚಾಂಟ್ ಆಲ್ಬಂ' ವಿಭಾಗದಲ್ಲಿ ಅವರು ಈ ಪ್ರಶಸ್ತಿ ಗಳಿಸಿದ್ದಾರೆ.

ಟಂಡನ್ ಅವರು ಪೆಪ್ಸಿಕೋದ ಮಾಜಿ ಸಿಇಒ ಇಂದ್ರಾ ನೂಯಿ ಅವರ ಹಿರಿಯ ಸಹೋದರಿ. ಅವರು ದಕ್ಷಿಣ ಆಫ್ರಿಕಾದ ಕೊಳಲು ವಾದಕ ವೂಟರ್ ಕೆಲ್ಲರ್ ಮ್ಯಾನ್ ಮತ್ತು ಜಪಾನಿನ 'ಸೆಲಿಸ್ಟ್' ಎರು ಮಾಟ್ಸುಮೊಟೊ ಅವರೊಂದಿಗೆ ಪ್ರಶಸ್ತಿ ಜಯಿಸಿದ್ದಾರೆ.

ಬರ್ತ್ ದೆ ವೇವರ್ ಬೆಲ್ಜಿಯಂ ಪ್ರಧಾನಿ

ಬ್ರುಸೆಲ್ಸ್(ಎಪಿ): ಬೆಲ್ಜಿಯಂನ ನೂತನ ಪ್ರಧಾನಿಯಾಗಿ ಬರ್ತ್ ದೆ ವೇವರ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು.

ದೇಶವನ್ನು ವಿಭಜಿಸಿ, ಬೆಲ್ಜಿಯಂನ ಉತ್ತರ ಭಾಗದಲ್ಲಿರುವ, ಡಚ್ ಭಾಷೆ ಮಾತನಾಡುವ ಜನರು ಹೆಚ್ಚಿರುವ 'ಫ್ಲಾಂಡರ್ಸ್'ಗೆ ಮತ್ತಷ್ಟು ಸ್ವಾಯತ್ತೆ ನೀಡಬೇಕು ಹಾಗೂ ರಾಜ್ಯದ ಸ್ಥಾನಮಾನ ನೀಡಬೇಕೆಂದು ವೇವರ್ ಅವರು ತಮ್ಮ ಈವರೆಗಿನ ರಾಜಕೀಯ ಜೀವನದ ಉದ್ದಕ್ಕೂ ಹೋರಾಟ ನಡೆಸಿದ್ದರು.

ಕೆಲಸದ ಅವಧಿ ಹೆಚ್ಚಿಸುವ ಪ್ರಸ್ತಾವ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): ವಾರದಲ್ಲಿ ಕೆಲಸದ ಗರಿಷ್ಠ ಅವಧಿಯನ್ನು 70 ಅಥವಾ 90 ಗಂಟೆಗೆ ಏರಿಸಬೇಕೆಂಬ ಯಾವುದೇ ಪ್ರಸ್ತಾವವನ್ನು ಪರಿಗಣಿಸಿಲ್ಲ ಎಂದು ಸರ್ಕಾರ ಸೋಮವಾರ ಸಂಸತ್ತಿಗೆ ತಿಳಿಸಿತು.

'ಕಾರ್ಮಿಕರು ಸಮವರ್ತಿ ಪಟ್ಟಿಯಲ್ಲಿ ಬರುತ್ತಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಮ್ಮ ವ್ಯಾಪ್ತಿಯ ಒಳಗೆ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡುತ್ತವೆ' ಎಂದು ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಅವರು ಲಿಖಿತ ಉತ್ತರ ನೀಡಿದರು. ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳ ಪ್ರಕಾರ, ಕೆಲಸದ ಸಮಯ ಮತ್ತು ಹೆಚ್ಚುವರಿ ಅವಧಿ ಸೇರಿದಂತೆ ಕೆಲಸದ ಪರಿಸ್ಥಿತಿಗಳನ್ನು 1948ರ ಕಾರ್ಖಾನೆ ಕಾಯ್ದೆ ಮತ್ತು ಆಯಾ ರಾಜ್ಯ ಸರ್ಕಾರಗಳ ಅಂಗಡಿಗಳು ಮತ್ತು ಕಂಪನಿಗಳ ಕಾಯ್ದೆಯ ನಿಬಂಧನೆಗಳ ಮೂಲಕ ನಿಯಂತ್ರಿಸಲಾಗುತ್ತದೆ.

ಇತ್ತೀಚೆಗೆ ಕೆಲ ಕಾರ್ಪೊರೇಟ್ ಕಂಪನಿಗಳ ವರಿಷ್ಠರು ಕೆಲಸದ ಗರಿಷ್ಠ ಅವಧಿಯನ್ನು ವಾರಕ್ಕೆ 70 ಅಥವಾ 90 ಗಂಟೆಗಳವರೆಗೆ ಹೆಚ್ಚಿಸಬೇಕು ಎಂದು ಹೇಳಿಕೆ ನೀಡಿದ್ದರು.

ಅಮೆರಿಕದಿಂದ ಶೇ 10ರಷ್ಟು ಸುಂಕ: ಚೀನಾದಿಂದ ಪ್ರತ್ಯುತ್ತರ

ತೈಪೆ (ತೈವಾನ್)(ಎಪಿ): ದೇಶದ ಕಾನೂನುಬದ್ಧ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಚೀನಾ ಪ್ರತ್ಯುತ್ತರ ನೀಡಿದೆ.

ಫೆಂಟನೈಲ್ ತಯಾರಿಕೆಗೆ ಬೇಕಾದ ರಾಸಾಯನಿಕಗಳ ಉತ್ಪಾದನೆ ತಡೆಗೆ ಚೀನಾ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ಚೀನಾ ಮೇಲೆ ಶೇ 10ರಷ್ಟು ಸುಂಕವನ್ನು ಅಮೆರಿಕ ವಿಧಿಸಿದೆ.

ಈ ಬೆನ್ನಲ್ಲೇ ಚೀನಾ ವಿದೇಶಾಂಗ ಸಚಿವಾಲಯ ಭಾನುವಾರ ರಾತ್ರಿ ಹೇಳಿಕೆ ಬಿಡುಗಡೆ ಮಾಡಿದೆ. 'ಅಮೆರಿಕವು ತಪ್ಪುಗಳನ್ನು ಸರಿಪಡಿಸಿಕೊಳ್ಳಲಿ, ಮಾದಕ ವಸ್ತು ಪೂರೈಕೆ ತಡೆಗೆ ಸಕಾರಾತ್ಮಕ ಕ್ರಮ ಕೈಗೊಳ್ಳಲಿ ಮತ್ತು ಚೀನಾ–ಅಮೆರಿಕ ನಡುವಿನ ಸಂಬಂಧವನ್ನು ಸುಸ್ಥಿರಗೊಳಿಸಲು ಉತ್ತೇಜನ ನೀಡಲಿ' ಎಂದು ಹೇಳಿದೆ.

ಅಮೆರಿಕದ ಕ್ರಮವು ವಿಶ್ವ ವ್ಯಾಪಾರ ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸುತ್ತದೆ ಎಂದು ಅದು ಹೇಳಿದೆ.

ಗೋಪ್ಯ ಕಡತ ತೋರಿಸಲು ಅಧಿಕಾರಿಗಳ ನಿರಾಕರಣೆ: ರಜೆ ಮೇಲೆ ಕಳುಹಿಸಿದ ಅಮೆರಿಕ

ಎಲಾನ್ ಮಸ್ಕ್

ವಾಷಿಂಗ್ಟನ್ (ಎಪಿ): ಎಲಾನ್ ಮಸ್ಕ್ ಅವರ ಸರ್ಕಾರಿ ತಪಾಸಣಾ ತಂಡಕ್ಕೆ ನಿರ್ಬಂಧಿತ ಪ್ರದೇಶಗಳಲ್ಲಿನ ಗೋಪ್ಯ ಕಡತಗಳನ್ನು ತೋರಿಸಲು ನಿರಾಕರಿಸಿದ ಕಾರಣಕ್ಕೆ ಅಂತರರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕದ ಏಜೆನ್ಸಿಯ (ಯುಎಸ್‌ಎಐಡಿ) ಇಬ್ಬರು ಭದ್ರತಾ ಮುಖ್ಯಸ್ಥರನ್ನು ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರವು ರಜೆಯ ಮೇಲೆ ಕಳುಹಿಸಿದೆ.

ಸರ್ಕಾರಿ ದಕ್ಷತಾ ಇಲಾಖೆಯ (ಡಿಒಜಿಇ) ಸದಸ್ಯರು ನಂತರದಲ್ಲಿ ಈ ಕಡತಗಳನ್ನು ಪರಿಶೀಲಿಸಲು ಸಾಧ್ಯವಾಗಿದೆ ಎಂದು ಮೂಲಗಳು ಸುದ್ದಿಸಂಸ್ಥೆಗಳಿಗೆ ತಿಳಿಸಿವೆ.

ಮಸ್ಕ್ ನೇತೃತ್ವದ ಇಲಾಖೆಯ ಅಧಿಕಾರಿಗಳು ಈ ಮಾಹಿತಿ ಪಡೆಯಲು ಅಗತ್ಯವಿರುವ ಅನುಮತಿ ಹೊಂದಿರಲಿಲ್ಲ. ಹೀಗಾಗಿ ಯುಎಸ್‌ಎಐಡಿ ಏಜೆನ್ಸಿಯ ಜಾನ್ ವೊರೀಸ್ ಮತ್ತು ಬ್ರಯಾನ್ ಮೆಕ್‌ಗಿಲ್ ಅವರು, ಮಸ್ಕ್ ನೇತೃತ್ವದ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ಒದಗಿಸಲು ನಿರಾಕರಿಸಿದರು.

'ಎಕ್ಸ್' ವೇದಿಕೆಯಲ್ಲಿ ಶನಿವಾರ ಪ್ರತಿಕ್ರಿಯೆಯೊಂದನ್ನು ಬರೆದಿರುವ ಮಸ್ಕ್ ಅವರು, 'ಯುಎಸ್‌ಎಐಡಿ ಏಜೆನ್ಸಿಯು ಕ್ರಿಮಿನಲ್ ಸಂಘಟನೆ. ಅದನ್ನು ಕೊನೆಗಾಣಿಸಲು ಇದು ಸಕಾಲ' ಎಂದು ಹೇಳಿದ್ದರು.

ಯುಎಸ್‌ಎಐಡಿ ಏಜೆನ್ಸಿಯ ವಾಷಿಂಗ್ಟನ್ ಪ್ರಧಾನ ಕಚೇರಿಯಿಂದ ಹೊರಗಿರುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಏಜೆನ್ಸಿಯ ಕಂಪ್ಯೂಟರ್ ವ್ಯವಸ್ಥೆಯಿಂದ ಸರಿಸುಮಾರು 600 ಸಿಬ್ಬಂದಿಯನ್ನು ಹೊರಹಾಕಲಾಗಿದೆ ಎಂದು ಸಿಬ್ಬಂದಿ ಹೇಳಿದ್ದಾರೆ.

'ಏಜೆನ್ಸಿ ಸ್ಥಗಿತಕ್ಕೆ ಟ್ರಂಪ್ ಒಪ್ಪುತ್ತಾರೆ'

ವಾಷಿಂಗ್ಟನ್ (ರಾಯಿಟರ್ಸ್): ಯುಎಸ್‌ಎಐಡಿ ಏಜೆನ್ಸಿಯನ್ನು ಸ್ಥಗಿತಗೊಳಿಸುವ ಕೆಲಸ ನಡೆದಿದೆ ಎಂದು ಎಲಾನ್ ಮಸ್ಕ್ ಅವರು ತಿಳಿಸಿದ್ದಾರೆ.

'ಏಜೆನ್ಸಿಯು ಸರಿಪಡಿಸಲು ಸಾಧ್ಯವಾಗದಂತೆ ಆಗಿದೆ' ಎಂದು ಹೇಳಿರುವ ಮಸ್ಕ್ ಅವರು ಏಜೆನ್ಸಿಯನ್ನು ಮುಚ್ಚಲು ಅಧ್ಯಕ್ಷ ಟ್ರಂಪ್ ಅವರು ಒಪ್ಪುತ್ತಾರೆ ಎಂದು ತಿಳಿಸಿದ್ದಾರೆ.

ಸಂಘರ್ಷಕ್ಕೆ ಗುರಿಯಾಗಿರುವ ಪ್ರದೇಶಗಳಲ್ಲಿ ಮಹಿಳೆಯರ ಆರೋಗ್ಯ, ಶುದ್ಧವಾದ ಕುಡಿಯುವ ನೀರಿನ ಲಭ್ಯತೆ, ಎಚ್‌ಐವಿ/ಏಡ್ಸ್‌ಗೆ ಚಿಕಿತ್ಸೆ, ಇಂಧನ ಭದ್ರತೆ ಸೇರಿದಂತೆ ಹಲವು ಉದ್ದೇಶಗಳಿಗೆ ಈ ಏಜೆನ್ಸಿಯು ನೆರವು ಒದಗಿಸುತ್ತದೆ. ವಿಶ್ವದಲ್ಲಿ ಅತಿದೊಡ್ಡ ಮೊತ್ತವನ್ನು ದಾನವಾಗಿ ನೀಡುವ ಏಜೆನ್ಸಿ ಇದು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ
Travel
28.2.25 ಕೇರಳ: 5 ದಿನ. 14.3.25 ಶ್ರೀಶೈಲ ಮಂತ್ರಾಲಯ ಹೈದರಾಬಾದ್ 5 ದಿನಗಳು 15.3.25 ರಾಜಸ್ಥಾನ 9 ದಿನ 17.3.25 ಪ್ರಯಾಗ್ ರಾಜ್ ಕಾಶಿ 25.3.25 ಮೂರು ಜ್ಯೋತಿರ್ಲಿಂಗ ಶಿರಡಿ 4 ದಿನಗಳು. 2.4.25 ಕಲ್ಕತ್ತಾ ಪುರಿ ಜಗನ್ನಾಥ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

23.04. 2025, 16.05.2025 ರಿಂದ 18ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10ದೇಶಗಳು. ಪ್ರೇಕ್ಷಣೀಯ ಸ್ಥಳಗಳು ಮತ್ತು ಊಟ, ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿಂದ ಬೆಂಗಳೂರಿನ ತನಕ ಎಲ್ಲ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04, 9900080794, 9611329473

CONNECT ಕ್ಲಾಸಿಫೈಡ್ಸ್

ಹೊಂಗೆ ಬೀಜ ಖರೀದಿ
ದಿನಾಂಕ: 30–01–2025
M11 ಎನರ್ಜಿ ಟ್ರಾನ್ಸಿಷನ್ ಪ್ರೈವೇಟ್ ಲಿಮಿಟೆಡ್, ಇದು ಎಂ.ಕೆ ಆಗ್ರೋಟೆಕ್ ಪ್ರೈವೇಟ್ ಲಿಮಿಟೆಡ್ ಇದರ ಅಂಗಸಂಸ್ಥೆಯಾಗಿದ್ದು, ಪ್ರಸ್ತುತ ಬಯೋಡೀಸೆಲ್ ಉತ್ಪಾದನೆ ಕಾರ್ಯ ಪ್ರಾರಂಭಿಸಿದೆ. ಉಡುಪಿಯ ಪಡುಬಿದುರೆಯಲ್ಲಿ M11 ಎನರ್ಜಿ ಟ್ರಾನ್ಸಿಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ದಿನವಹಿ 500 ಟನ್ ಸಾಮರ್ಥ್ಯದ ಅತ್ಯಾಧುನಿಕ ಬಯೋಫ್ಯೂಲ್ ಉತ್ಪಾದಕ ಘಟಕವನ್ನು ಹೊಂದಿದ್ದು, ಈಗಾಗಲೇ ಹೊಂಗೆ, ಜಟ್ರೋಪ, ಉಪಯೋಗಿಸಿದ ಅಡುಗೆ ಎಣ್ಣೆ ಇತ್ಯಾದಿ ಕಚ್ಚಾವಸ್ತುಗಳ ಖರೀದಿಯನ್ನು ಪ್ರಾರಂಭಿಸಿದೆ.
ಮಸೂಮ್ ಗ್ರೂಪ್ ಆಫ್ ಕಂಪನೀಸ್ ಸುಮಾರು 1969 ರಿಂದಲೂ ಕರ್ನಾಟಕದಲ್ಲಿ ವಿವಿಧ ರೀತಿಯ ವ್ಯಾಪಾರ ವ್ಯವಹಾರಗಳನ್ನು ನಡೆಸಿಕೊಂಡು ಬಂದಿರುತ್ತದೆ. ಉದಾ:–ಖಂಡಸಾರಿ ಸಕ್ಕರೆ, ನೈಸರ್ಗಿಕ ಬೆಲ್ಲ, ರೈಸ್‌ಬ್ರಾನ್ ಎಣ್ಣೆ, ಸೂರ್ಯಕಾಂತಿ ಎಣ್ಣೆ, ಶೇಂಗಾ ಎಣ್ಣೆ, ಮಸಾಲೆ ಪದಾರ್ಥಗಳು ಇತ್ಯಾದಿ ಸನ್‌ಪ್ಯೂರ್ ಬ್ರಾಂಡ್ ಭಾರತದ ಸರ್ವಶ್ರೇಷ್ಠ ಅಡುಗೆ ಎಣ್ಣೆಗಳನ್ನು ಉತ್ಪಾದಿಸಿ ಮಾರುಕಟ್ಟೆಗೆ ಒದಗಿಸುತ್ತಿದೆ. ಮುಂದುವರೆದು, ಕಂಪನಿಯು ಹೊಂಗೆ, ಮಾಹುವಾ(ಹಿಪ್ಪೆ), ಜಟ್ರೋಪ, ರಬ್ಬರ್ ಬೀಜಗಳು, ಸುರಹೊನ್ನೆ ಬೀಜಗಳು, ಅಮೋರ ಬೀಜಗಳನ್ನು ಹಳ್ಳಿಮಟ್ಟದಲ್ಲಿ ರೈತರಿಂದ ನೇರವಾಗಿ ಹಳ್ಳಿಮಟ್ಟದ ಸಂಘಗಳ ಮೂಲಕ ರೂ.35/– ಕೆ.ಜಿ ದರದಲ್ಲಿ (ತೇವಾಂಶ ಗರಿಷ್ಠ 12%) ತಮ್ಮ ಸ್ಥಳದಲ್ಲೇ ಖರೀದಿಸಲು ತೀರ್ಮಾನಿಸಿದೆ. ಹಳ್ಳಿಮಟ್ಟದ ಸಂಘಗಳಿಗೆ ಕಮೀಷನ್ ರೂಪದಲ್ಲಿ ಖರೀದಿ ಬೆಲೆಯ ಮೇಲೆ 6% ಹಾಗೂ ತಾಲ್ಲೂಕು ಮಟ್ಟದ ಸಂಘಗಳಿಗೆ ಕಮೀಷನ್ ರೂಪದಲ್ಲಿ ಖರೀದಿ ಬೆಲೆಯ ಮೇಲೆ 6% ಕಮೀಷನ್ ನೀಡಲು ತೀರ್ಮಾನಿಸಿದೆ.
ಆದುದರಿಂದ, ಎಲ್ಲರಿಗೂ ಮನವಿ ಮಾಡಿಕೊಳ್ಳುವುದೇನೆಂದರೆ ಸುಮಾರು 55 ವರ್ಷಗಳಿಂದ ನಮ್ಮ ವಿವಿಧ ಕಂಪನಿಗಳೊಂದಿಗೆ ಸ್ಪಂದಿಸಿದ ಹಾಗೆ ಮುಂದೆಯೂ ನಮ್ಮ ಜೊತೆ ಸಕ್ರಿಯವಾಗಿ ಪಾಲ್ಗೊಂಡು ತಾವು ಸಂಗ್ರಹಿಸಿರುವ ಹೊಂಗೆಬೀಜ, ಜಟ್ರೋಪಬೀಜ, ಮಾಹುವಾ(ಹಿಪ್ಪೆ), ರಬ್ಬರ್ ಬೀಜ, ಸುರಹೊನ್ನೆಬೀಜ ಹಾಗೂ ಉಪಯೋಗಿಸಿದ ಅಡುಗೆ ಎಣ್ಣೆ ಇವುಗಳನ್ನು ನಮ್ಮ ಕಂಪನಿಗೆ ನೇರವಾಗಿ ಮಾರಾಟ ಮಾಡಿ ಉತ್ತಮ ಬೆಲೆಯನ್ನು ಪಡೆಯಲು ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.
M11 ಎನರ್ಜಿ ಟ್ರಾನ್ಸಿಷನ್ ಪ್ರೈವೇಟ್ ಲಿಮಿಟೆಡ್, ನೆಲಮಂಗಲ, ಬೆಂಗಳೂರು
Ph. No.: 9008146840 / 8880880625

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE
ADS IN PRAJAVANI
ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಹಾಕುಂಭ: ತ್ರಿವೇಣಿ ಸಂಗಮದಲ್ಲಿ ಸುಸೂತ್ರವಾಗಿ ನಡೆದ ವಸಂತ ಪಂಚಮಿ 'ಅಮೃತ ಸ್ನಾನ'

ಲಕ್ಷಾಂತರ ಭಕ್ತರಿಂದ ಪವಿತ್ರ ಸ್ನಾನ

ಮುಖ್ಯಾಂಶಗಳು

- ಬೆಳಗಿನ ಜಾವ 4ಕ್ಕೆ 'ಅಮೃತ ಸ್ನಾನ' ಆರಂಭ
- ನಾಗಾ ಸಾಧುಗಳು, ಸನ್ಯಾಸಿಗಳ ಮೆರವಣಿಗೆ

ಮಹಾಕುಂಭ ನಗರ (ಉತ್ತರ ಪ್ರದೇಶ) (ಪಿಟಿಐ): ಮಹಾಕುಂಭ ಮೇಳದ ಮೂರನೇ 'ಅಮೃತ ಸ್ನಾನ' ತ್ರಿವೇಣಿ ಸಂಗಮದಲ್ಲಿ ಸೋಮವಾರ ಸುಸೂತ್ರವಾಗಿ ನಡೆಯಿತು. ದೇಶದ ವಿವಿಧ ಭಾಗಗಳು ಮತ್ತು ವಿದೇಶಗಳ ಲಕ್ಷಾಂತರ ಭಕ್ತರು 'ವಸಂತ ಪಂಚಮಿ'ಯ ಪವಿತ್ರ ಸ್ನಾನದಲ್ಲಿ ಪಾಲ್ಗೊಂಡರು.

ಜನವರಿ 29ರಂದು 'ಮೌನಿ ಅಮಾವಾಸ್ಯೆ' ದಿನ ನಡೆದ ಅಮೃತ ಸ್ನಾನದ ವೇಳೆ ಉಂಟಾದ ಕಾಲ್ತುಳಿತದಲ್ಲಿ 30 ಭಕ್ತರು ಮೃತಪಟ್ಟಿದ್ದರು. ಇಂಥ ಅವಘಡಗಳು ಮರುಕಳಿಸದಿರಲಿ ಎಂದು ಕುಂಭಮೇಳದ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಿದ್ದರು.

ಉತ್ತರ ಪ್ರದೇಶ ಸರ್ಕಾರವು ಮೇಳದ ವಲಯದ ವ್ಯವಸ್ಥೆಯಲ್ಲಿ ಹಲವು ಪ್ರಮುಖ ಬದಲಾವಣೆಗಳನ್ನು ಮಾಡಿತ್ತು. ದಟ್ಟಣೆ ನಿರ್ವಹಣೆ ಹಾಗೂ ಭಕ್ತರ ಸುರಕ್ಷತೆ ಖಾತ್ರಿಪಡಿಸುವ ಉದ್ದೇಶದಿಂದ ಹಲವಾರು ಕ್ರಮಗಳನ್ನು ತೆಗೆದುಕೊಂಡಿತ್ತು. ಇದರಿಂದ ಸೋಮವಾರ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ.

ಮೌನಿ ಅಮಾವಾಸ್ಯೆ ದಿನದಂದು ಭಕ್ತರು ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನಕ್ಕೆ ಮುಗಿಬಿದ್ದಿದ್ದರಿಂದ ಅಲ್ಲಿ ನೂಕುನುಗ್ಗಲು ಉಂಟಾಗಿತ್ತು. ಆದರೆ, ಸೋಮವಾರ ಭಕ್ತರು ಸಂಗಮ ಸ್ಥಳದಲ್ಲೇ ಸ್ನಾನಕ್ಕೆ ಮುಂದಾಗದೆ, ವಿವಿಧ ಘಾಟ್‌ಗಳಲ್ಲಿ ಪವಿತ್ರ ಸ್ನಾನ ಮಾಡಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಲಖನೌದ ತಮ್ಮ ನಿವಾಸದಿಂದ ಬೆಳಿಗ್ಗೆ 3.30ರಿಂದಲೇ ಸಂಗಮ ಸ್ಥಳದಲ್ಲಿನ ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಗಮ ಸ್ಥಳದಲ್ಲಿ ದಟ್ಟಣೆ ನಿರ್ವಹಣೆಗಾಗಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು ಎಂದು ಮಹಾಕುಂಭದ ಡಿಐಜಿ ವೈಭವ್ ಕೃಷ್ಣ ತಿಳಿಸಿದ್ದಾರೆ. 'ಅಮೃತ ಸ್ನಾನ ಪ್ರಕ್ರಿಯೆ ಸುಸೂತ್ರವಾಗಿ ನೆರವೇರಿತು. ಹಿರಿಯ ಪೊಲೀಸ್ ಅಧಿಕಾರಿಗಳನ್ನೂ ಸ್ಥಳದಲ್ಲಿ ನಿಯೋಜಿಸಲಾಗಿತ್ತು' ಎಂದು ಮಾಹಿತಿ ನೀಡಿದರು.

ಸಂಜೆಯವರೆಗೆ 2.30 ಕೋಟಿ ಮಂದಿ ಸಂಗಮದಲ್ಲಿ ಸ್ನಾನ ಮಾಡಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರದ ಪ್ರಕಟಣೆ ತಿಳಿಸಿದೆ.

'ಅಮೃತ ಸ್ನಾನ'ಕ್ಕಾಗಿ ನಾಗಾ ಸಾಧುಗಳು ತ್ರಿವೇಣಿ ಸಂಗಮಕ್ಕೆ ಮೆರವಣಿಗೆಯಲ್ಲಿ ಬಂದ ದೃಶ್ಯ — ಪಿಟಿಐ ಚಿತ್ರ

'ಸನಾತನ ಧರ್ಮದ ದುರ್ಬಳಕೆ ಸಲ್ಲ'

ವಸಂತ ಪಂಚಮಿ ದಿನ ಅಮೃತ ಸ್ನಾನಕ್ಕಾಗಿ ಸಂಗಮದಲ್ಲಿ ನೆರೆದಿದ್ದ ಸಂತರು, ಸನಾತನ ಧರ್ಮವನ್ನು ದುರುಪಯೋಗ ಪಡಿಸಿಕೊಳ್ಳದಂತೆ ಮತ್ತು ರಾಜಕೀಯ ಲಾಭಕ್ಕಾಗಿ ವದಂತಿಗಳನ್ನು ಹರಡದಂತೆ ರಾಜಕೀಯ ಮುಖಂಡರಿಗೆ ಎಚ್ಚರಿಕೆ ನೀಡಿದರು.

ಪಂಚ ನಿರ್ವಾಣಿ ಅಖಾಡದ ಮಹಾಂತ ಸಂತೋಷ್ ದಾಸ್ ಬಾಬಾ ಮಹಾರಾಜ್ ಅವರು ರಾಜಕೀಯ ಮುಖಂಡರು, ಅದರಲ್ಲೂ ಮುಖ್ಯವಾಗಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ವಿರುದ್ಧ ಹರಿಹಾಯ್ದಿದ್ದಾರೆ. 'ನೀವು ಯಾವತ್ತೂ ಸನಾತನ ಧರ್ಮವನ್ನು ಅನುಸರಿಸಿಲ್ಲ ಅಥವಾ ಗೌರವಿಸಿಲ್ಲ. ಆದ್ದರಿಂದ ಅದರಿಂದ ಲಾಭ ಪಡೆಯಲು ಪ್ರಯತ್ನಿಸಬೇಡಿ' ಎಂದು ಅಖಿಲೇಶ್‌ಗೆ ಎಚ್ಚರಿಸಿದ್ದಾರೆ. ಹಿಂದಿನ ಘಟನೆಗಳನ್ನು ಉಲ್ಲೇಖಿಸಿದ ಅವರು, 'ನಿಮ್ಮ ಪಕ್ಷವು ಅಧಿಕಾರದಲ್ಲಿದ್ದಾಗ ಸನಾತನ ಧರ್ಮವನ್ನು ಯಾವ ರೀತಿ ಗುರಿಯಾಗಿಸಲಾಗಿತ್ತು ಎಂಬುದನ್ನು ನೋಡಿದ್ದೇವೆ. ರಾಜಕೀಯ ಲಾಭಕ್ಕಾಗಿ ವದಂತಿ ಹರಡಬೇಡಿ. ನಾವು ಸನಾತನಿಗಳು, ನಿಮ್ಮಂಥವರನ್ನು ಬೇರು ಸಮೇತ ಕಿತ್ತೊಗೆಯುತ್ತೇವೆ' ಎಂದಿದ್ದಾರೆ.

'ಕಾಲ್ತುಳಿತ: ಸಾವಿರಾರು ಸಾವು'

ರಾಜ್ಯಸಭೆಯಲ್ಲಿ ಕೋಲಾಹಲ ಎಬ್ಬಿಸಿದ ಖರ್ಗೆ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕುಂಭಮೇಳದಲ್ಲಿ ಜನವರಿ 29ರಂದು ನಡೆದ ಕಾಲ್ತುಳಿತದಲ್ಲಿ 'ಸಾವಿರಾರು' ಮಂದಿ ಮೃತಪಟ್ಟಿದ್ದಾರೆ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿಕೆ ನೀಡಿದ್ದು ಮೇಲ್ಮನೆಯಲ್ಲಿ ಸೋಮವಾರ ಕೋಲಾ ಹಲಕ್ಕೆ ಕಾರಣವಾಯಿತು.

ಮಲ್ಲಿಕಾರ್ಜುನ ಖರ್ಗೆ

'ನಿಮ್ಮ ಹೇಳಿಕೆಯನ್ನು ದಾಖಲೆಗಳೊಂದಿಗೆ ದೃಢೀಕರಿಸಬೇಕು' ಎಂದು ಖರ್ಗೆ ಅವರಿಗೆ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಸೂಚಿಸಿದರು.

ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆ ಮಾತನಾಡಿದ ಖರ್ಗೆ, 'ಕಾಲ್ತುಳಿತದಲ್ಲಿ ಮೃತಪಟ್ಟ ಸಾವಿರಾರು ಮಂದಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ' ಎಂದರು. ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಆಡಳಿತ ಪಕ್ಷದ ಸದಸ್ಯರು ಪ್ರತಿಭಟಿಸಿದರು.

'ಇದು (ಸತ್ತವರ ಸಂಖ್ಯೆಗೆ ಸಂಬಂಧಿಸಿದಂತೆ) ನಾನು ಮಾಡಿರುವ ಅಂದಾಜು. ನನ್ನ ಅಂದಾಜು ಸರಿಯಿಲ್ಲದಿದ್ದರೆ, ನೀವು ಸತ್ಯವನ್ನು ಬಹಿರಂಗಪಡಿಸಬೇಕು. ನನ್ನ ಅಂದಾಜು ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳಲು ಸಿದ್ಧ' ಎಂದು ಖರ್ಗೆ ತಕ್ಷಣವೇ ಹೇಳಿದರು.

'ಯಾರನ್ನೂ ದೂಷಿಸುವ ಉದ್ದೇಶದಿಂದ ಸಾವಿರಾರು ಎಂಬ ಪದ ಬಳಸಿಲ್ಲ. ತಪ್ಪಾಗಿದ್ದರೆ ಕ್ಷಮೆ ಯಾಚಿಸುತ್ತೇನೆ. ಆದರೆ ಎಷ್ಟು ಜನ ಸತ್ತಿದ್ದಾರೆ, ಎಷ್ಟು ಮಂದಿ ಕಾಣೆಯಾಗಿದ್ದಾರೆ ಎಂಬ ಸರಿಯಾದ ಅಂಕಿ–ಅಂಶ ನೀಡಬೇಕು' ಎಂದರು.

ಚರ್ಚೆಗೆ ವಿಪಕ್ಷ ಪಟ್ಟು: ಕಾಲ್ತುಳಿತ ಮತ್ತು ಸತ್ತವರ ನಿಖರ ಸಂಖ್ಯೆಯ ಬಗ್ಗೆ ಚರ್ಚೆಗೆ ವಿರೋಧ ಪಕ್ಷಗಳು ಒತ್ತಾಯಿಸಿದ್ದು ಲೋಕಸಭೆಯಲ್ಲೂ ಗದ್ದಲಕ್ಕೆ ಕಾರಣವಾಯಿತು. ಕಾಲ್ತುಳಿತದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ವಿಪಕ್ಷಗಳ ಸದಸ್ಯರು, ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಟೀಕಿಸಿದರು.

ಪಿಐಎಲ್ ವಜಾಗೊಳಿಸಿದ 'ಸುಪ್ರೀಂ'

ಮಹಾಕುಂಭ ಮೇಳದಲ್ಲಿನ ಕಾಲ್ತುಳಿತ ಘಟನೆಯು 'ದುರದೃಷ್ಟಕರ' ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್ ಈ ಸಂಬಂಧ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ನಿರಾಕರಿಸಿತು. 'ನೀವು ಅಲಹಾಬಾದ್ ಹೈಕೋರ್ಟ್‌ಗೆ ಹೋಗಿ' ಎಂದು ಅರ್ಜಿದಾರರಿಗೆ ಸೂಚಿಸಿತು.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರಿದ್ದ ಪೀಠದ ಮುಂದೆ ಈ ಅರ್ಜಿ ಬಂದಿತ್ತು. ಉತ್ತರ ಪ್ರದೇಶದ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ, 'ಇದೇ ರೀತಿಯ ಅರ್ಜಿಯು ಈಗಾಗಲೇ ಅಲಹಾಬಾದ್ ಹೈಕೋರ್ಟ್‌ನ ಮುಂದಿದೆ. ಈ ಬಗ್ಗೆ ಈಗಾಗಲೇ ನ್ಯಾಯಾಂಗ ತನಿಖೆ ನಡೆಯುತ್ತಿದೆ' ಎಂದರು.

'ಮಹಾಕುಂಭ ಮೇಳದಲ್ಲಿ ಭಾಗವಹಿಸುವ ಭಕ್ತರ ಸುರಕ್ಷತೆಗಾಗಿ ನಿರ್ದಿಷ್ಟ ಮಾರ್ಗಸೂಚಿ ಹಾಗೂ ನಿಯಮಗಳನ್ನು ರೂಪಿಸಬೇಕು. ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಬೇಕು. ದೇಶದ ಇತರ ರಾಜ್ಯಗಳ ಸರ್ಕಾರಗಳು ಈ ಮೇಳದಲ್ಲಿ ಜನರ ಸಹಾಯಕ್ಕಾಗಿ ಕೇಂದ್ರಗಳನ್ನು ತೆರೆಯಬೇಕು' ಎಂದು ಒತ್ತಾಯಿಸಿ ವಕೀಲ ವಿಶಾಲ್ ತಿವಾರಿ ಎಂಬುವರು ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದರು.

ತ್ರಿಭುವನ್ ಸಹಕಾರಿ ವಿ.ವಿ ಮಸೂದೆ ಮಂಡನೆ

ಸಹಕಾರ ಸಂಘಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದಾಗಿದ್ದು, ಈ ಸಂಬಂಧ ಮಸೂದೆಯನ್ನು ಸೋಮವಾರ ಲೋಕಸಭೆಯಲ್ಲಿ ಮಂಡಿಸಿದೆ.

ಕೇಂದ್ರದ ಸಹಕಾರ ಖಾತೆ ರಾಜ್ಯ ಸಚಿವ ಕೃಷ್ಣಪಾಲ್ ಮಸೂದೆ ಮಂಡಿಸಿದರು. ಸಹಕಾರ ವಲಯದಲ್ಲಿ ವ್ಯವಸ್ಥಾಪಕರು, ಮೇಲ್ವಿಚಾರಕರು, ಆಡಳಿತಾತ್ಮಕ, ತಾಂತ್ರಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ಅರ್ಹ ಮಾನವ ಸಂಪನ್ಮೂಲದ ಅಗತ್ಯವಿದೆ. ಅದನ್ನು ಪೂರೈಸಲು ರಾಷ್ಟ್ರೀಯ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಿ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಗಳನ್ನು ಕೈಗೊಳ್ಳಲು ಮಸೂದೆ ಮೂಲಕ ಅವಕಾಶ ಕಲ್ಪಿಸಲಾಗಿದೆ.

ದೆಹಲಿ: ಬಹಿರಂಗ ಪ್ರಚಾರ ಅಂತ್ಯ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆಗೆ ಬುಧವಾರ (ಫೆ.5) ಮತದಾನ ನಡೆಯಲಿದ್ದು, ಬಹಿರಂಗ ಪ್ರಚಾರ ಸೋಮವಾರ ಅಂತ್ಯಗೊಂಡಿದೆ. ಬಿಜೆಪಿ, ಆಮ್ ಆದ್ಮಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳು ಸೋಮವಾರ ತೀವ್ರ ಪ್ರಚಾರ ನಡೆಸಿದವು. ಇದೇ ವೇಳೆ ಬಿಜೆಪಿ ವಿರುದ್ಧ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಜನರನ್ನು ಉದ್ದೇಶಿಸಿ ಬಿಡುಗಡೆ ಮಾಡಿದ ವಿಡಿಯೊ ಸಂದೇಶದ ಮೂಲಕ ಹಲವು ಗಂಭೀರ ಆರೋಪಗಳನ್ನು ಮಾಡಿದರು. ಗೃಹ ಸಚಿವ ಅಮಿತ್ ಶಾ ಅವರು ಕೇಜ್ರಿವಾಲ್ ವಿರುದ್ಧ ಮಾತನಾಡಿದರು.

'ಪ್ರಭಾವ ಬೀರಲು ಗೂಂಡಾ, ಪೊಲೀಸರ ಬಳಕೆ'

ಬಿಜೆಪಿಯು ಅತ್ಯಂತ ಹೀನಾಯವಾಗಿ ಸೋಲಲಿದೆ. ಇದನ್ನು ತಪ್ಪಿಸಿಕೊಳ್ಳಲು ಕುತಂತ್ರದ ಮಾರ್ಗ ಹಿಡಿದಿದೆ. ಗೂಂಡಾಗಳನ್ನು ಮತ್ತು ದೆಹಲಿ ಪೊಲೀಸರನ್ನು ಬಳಸಿಕೊಂಡು ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದೆ. ಮತದಾರರಲ್ಲಿ ಭಯ ಹುಟ್ಟಿಸಲು ನೋಡುತ್ತಿದೆ. ಅದರಲ್ಲಿಯೂ ಕೊಳೆಗೇರಿ ಪ್ರದೇಶದ ಜನರಲ್ಲಿ ಭಯ ಉಂಟು ಮಾಡಲು ಬಿಜೆಪಿ ಯತ್ನಿಸುತ್ತಿದೆ.

ಇದೇ ಕಾರಣಕ್ಕಾಗಿ ನಾವು 'ತುರ್ತು ಕಾರ್ಯ ಪಡೆ'ಯೊಂದನ್ನು ರಚಿಸಿದ್ದೇವೆ. ಕೊಳೆಗೇರಿ ಪ್ರದೇಶದಲ್ಲಿ ಸ್ಪೈ ಕ್ಯಾಮೆರಾಗಳನ್ನು ಹಂಚಿದ್ದೇವೆ. ಕೆಲವರಲ್ಲಿ 'ಬಾಡಿ ಕ್ಯಾಮೆರಾ'ಗಳನ್ನು ಅಳವಡಿಸಿದ್ದೇವೆ. ಬಿಜೆಪಿಯ ಕುತಂತ್ರಗಳು ಇದರಲ್ಲಿ ಸೆರೆಯಾಗಲಿವೆ. ಎಲ್ಲೇ ಕಾನೂನುಬಾಹಿರ ಘಟನೆಗಳು ನಡೆದರೂ ನಮ್ಮ ತುರ್ತು ಕಾರ್ಯಪಡೆಯು 15 ನಿಮಿಷದಲ್ಲಿ ಅಲ್ಲಿಗೆ ತಲುಪಲಿದೆ.

ಕೊಳೆಗೇರಿಗಳಲ್ಲಿ ಒಂದು ಮತಕ್ಕೆ ₹3 ಸಾವಿರದಿಂದ ₹5 ಸಾವಿರದವರೆಗೆ ನೀಡಲಾಗುತ್ತಿದೆ. ಹಣ ನೀಡಿ, ನಿಮ್ಮ ಬೆರಳಿಗೆ ಕಪ್ಪು ಶಾಹಿವೊಂದನ್ನು ಹಚ್ಚುತ್ತಾರೆ. ಅವರಿಂದ ಹಣ ಪಡೆದುಕೊಳ್ಳಿ. ಆದರೆ, ಬೆರಳಿಗೆ ಕಪ್ಪು ಶಾಹಿಯನ್ನು ಹಚ್ಚಲುಬಿಡಬೇಡಿ. ಬಿಜೆಪಿ ಅಧಿಕಾರಕ್ಕೆ ಬಂದರೆ, ನಿಮ್ಮ ಜೋಪಡಿಗಳನ್ನು ಕೆಡವಲಿದೆ. ಬಿಜೆಪಿಗೆ ನಿಮ್ಮ ಮತಗಳನ್ನು ಮಾರಿಕೊಂಡರೆ, ನಿಮ್ಮ ಸಾವಿಗೆ ನೀವೇ ಸಹಿ ಹಾಕಿದಂತಾಗುತ್ತದೆ.

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ

'ಎಎಪಿ ನೀಡಿದ್ದು ಕಸ, ವಿಷಯುಕ್ತ ನೀರು ಮಾತ್ರ'

ಎಲ್ಲೆಲ್ಲಿ ಡಬಲ್ ಎಂಜಿನ್ ಸರ್ಕಾರ ಇದೆಯೊ ಅಲ್ಲೆಲ್ಲಾ ಕಳೆದ 10 ವರ್ಷಗಳಲ್ಲಿ ಅಭಿವೃದ್ಧಿಯಾಗಿದೆ. ಆದರೆ, ದೆಹಲಿ ಅಭಿವೃದ್ಧಿ ಸಾಧಿಸಿಲ್ಲ. ಯಾಕೆಂದರೆ, ಎಎಪಿ ಕೇಂದ್ರ ಸರ್ಕಾರದ ಜೊತೆ ಜಗಳ ಮಾಡುತ್ತದೆ. ದೆಹಲಿ ಜನತೆಗೆ ಕೇಜ್ರಿವಾಲ್ ಅವರು ಸುಳ್ಳು ಹೇಳುತ್ತಾರೆ. ಅವರು ಜನರಿಗೆ ಕಸ, ವಿಷಯುಕ್ತ ನೀರು, ಭ್ರಷ್ಟಾಚಾರವನ್ನು ಮಾತ್ರ ನೀಡಿದ್ದಾರೆ.

'ಬಡೇ ಮಿಯಾ, ಛೋಟೆ ಮಿಯಾ' (ದೊಡ್ಡ ಅಣ್ಣ, ಸಣ್ಣ ಅಣ್ಣ – ಕೇಜ್ರಿವಾಲ್ ಮತ್ತು ಮನೀಷ್ ಸಿಸೋಡಿಯಾ) ಸೇರಿಕೊಂಡು ದೆಹಲಿಯನ್ನು ಲೂಟಿ ಹೊಡೆದಿದ್ದಾರೆ. ದೆಹಲಿಯ ಶಿಕ್ಷಣ ಸಚಿವರಾಗಿದ್ದ ಸಿಸೋಡಿಯಾ ಅವರು ಅಬಕಾರಿ ಹಗರಣದಲ್ಲಿ ಜೈಲಿಗೆ ಹೋಗಿದ್ದರು. ಬಹುಶಃ ಶಿಕ್ಷಣ ಸಚಿವರೊಬ್ಬರು ಜೈಲಿಗೆ ಹೋಗಿದ್ದು ದೇಶದಲ್ಲಿಯೇ ಇದೇ ಮೊದಲು.

ಅಮಿತ್ ಶಾ, ಕೇಂದ್ರ ಗೃಹ ಸಚಿವ

ವಿಶ್ವ ದರ್ಜೆಯ ರಸ್ತೆಗಳು, ಶುದ್ಧ ನೀರು, ಸಮರ್ಥ ಆಡಳಿತ– ಶೀಲಾ ದೀಕ್ಷಿತ್ ಅವರು ಕಟ್ಟಿದ ದೆಹಲಿಯನ್ನು ವಾಪಸು ಪಡೆಯುವುದೇ ಈ ಚುನಾವಣೆಯ ಪ್ರಮುಖ ವಿಷಯ

ದೇವಿಂದರ್ ಯಾದವ್
ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ

ಶಿಕ್ಷಣ, ಆರೋಗ್ಯ ಮಾದರಿಗಳ ಬಗ್ಗೆ ಎಎಪಿ ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತದೆ. ಆದರೆ, ಈ ಬಗ್ಗೆ ಪ್ರಶ್ನೆ ಎತ್ತಿದರೆ ಮೌನ ವಹಿಸುತ್ತದೆ. ತಾವೇ ದೊಡ್ಡ ದೊಡ್ಡ ಪದವಿಗಳನ್ನು ಕೊಟ್ಟುಕೊಳ್ಳುತ್ತಾರೆ

ಸಂದೀಪ್ ದೀಕ್ಷಿತ್, ಕಾಂಗ್ರೆಸ್ ಅಭ್ಯರ್ಥಿ

ಯಾರಿಗೆ 10ನೇ ತರಗತಿಯ ವಾರ್ಷಿಕ ಪರೀಕ್ಷೆಯನ್ನು ಪಾಸು ಮಾಡುವ ಶಕ್ತಿ ಇರುತ್ತದೆಯೊ ಅಂಥ ವಿದ್ಯಾರ್ಥಿಗಳನ್ನು ಮಾತ್ರವೇ 9ನೇ ತರಗತಿಯಲ್ಲಿ ತೇರ್ಗಡೆ ಮಾಡಲಾಗುತ್ತದೆ. ಫಲಿತಾಂಶದಲ್ಲಿ ಕುಸಿತವಾದರೆ ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗುತ್ತದೆ ಎನ್ನುವ ಉದ್ದೇಶದಿಂದಲೇ ಎಎಪಿ ಸರ್ಕಾರ ಹೀಗೆ ಮಾಡುತ್ತಿದೆ. ತನ್ನ ವರ್ಚಸ್ಸು ಉಳಿಸಿಕೊಳ್ಳಲು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಹಕ್ಕನ್ನು ಸರ್ಕಾರ ಕಸಿದುಕೊಳ್ಳುತ್ತಿದೆ

ನರೇಂದ್ರ ಮೋದಿ, ಪ್ರಧಾನಿ (ದೆಹಲಿಯ ಕೆಲವು ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ಮೋದಿ ಮಾತುಕತೆ ನಡೆಸಿದ ವಿಡಿಯೊದಲ್ಲಿ ನೀಡಿದ ಹೇಳಿಕೆ)

ದೆಹಲಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳಾಗಿವೆ. ಇಂಥ ಕಾರ್ಯಗಳನ್ನು ಸಾಧ್ಯ ಮಾಡಲು ಒಂದೋ ಧರೆಗಿಳಿದ ದೇವರಿಂದ ಮಾತ್ರವೇ ಸಾಧ್ಯ. ಇಲ್ಲವೇ ಇಂಥ ಪವಾಡಗಳನ್ನು ಮಾಡಲು ಪ್ರಧಾನಿ ಮೋದಿ ಅವರಿಂದ ಮಾತ್ರ ಸಾಧ್ಯ

ರಾಮ್‌ವೀರ್ ಸಿಂಗ್ ಬಿಧೋಡಿ, ಸಂಸದ (ಲೋಕಸಭೆಯಲ್ಲಿ ಆಡಿದ ಮಾತು)

ಅರಣ್ಯ ವಿಸ್ತೀರ್ಣ ತಗ್ಗಿಸುವ ಕ್ರಮ ಸಲ್ಲದು: ಕೋರ್ಟ್

ನವದೆಹಲಿ (ಪಿಟಿಐ): ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ತಗ್ಗಿಸುವಂತಹ ಯಾವುದೇ ಕ್ರಮವನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಕೈಗೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ. ಮುಂದಿನ ಆದೇಶದವರೆಗೆ ಈ ಸೂಚನೆಯು ಜಾರಿಯಲ್ಲಿ ಇರಲಿದೆ.

2023ರ ಅರಣ್ಯ ಸಂರಕ್ಷಣಾ ಕಾನೂನಿಗೆ ತಂದಿರುವ ತಿದ್ದುಪಡಿಗಳನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ. ವಿನೋದ್ ಚಂದ್ರನ್ ಅವರು ಇರುವ ವಿಭಾಗೀಯ ಪೀಠವು ನಡೆಸುತ್ತಿದೆ.

'ಅರಣ್ಯ ಪ್ರದೇಶದ ವ್ಯಾಪ್ತಿಯನ್ನು ತಗ್ಗಿಸುವ ಯಾವುದಕ್ಕೂ ನಾವು ಅವಕಾಶ ನೀಡುವುದಿಲ್ಲ. ಪರಿಹಾರ ರೂಪದಲ್ಲಿ ಬೇರೆ ಜಮೀನು ನೀಡಲು ಆಗದಿದ್ದರೆ, ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ಕಡಿಮೆ ಮಾಡುವಂತಹ ಯಾವ ಕ್ರಮವನ್ನೂ ಕೇಂದ್ರ, ರಾಜ್ಯ ಸರ್ಕಾರಗಳು ಕೈಗೊಳ್ಳಬಾರದು' ಎಂದು ಪೀಠವು ಸೂಚನೆ ನೀಡಿದೆ. ವಿಚಾರಣೆಯನ್ನು ಮಾರ್ಚ್ 4ಕ್ಕೆ ಮುಂದೂಡಲಾಗಿದೆ.

2023ರಲ್ಲಿ ತಿದ್ದುಪಡಿಯಾದ ಕಾನೂನು 'ಅರಣ್ಯ'ದ ವ್ಯಾಖ್ಯಾನದಿಂದ ಸರಿಸುಮಾರು 1.99 ಲಕ್ಷ ಚದರ ಕಿ.ಮೀ. ಅರಣ್ಯ ಪ್ರದೇಶವನ್ನು ಹೊರಗಿರಿಸಿದೆ, ಈ ಪ್ರದೇಶವನ್ನು ಇತರ ಉದ್ದೇಶಗಳಿಗೆ ಲಭ್ಯವಾಗುವಂತೆ ಮಾಡಲಾಗಿದೆ ಎಂಬ ವಾದವನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷದ ಫೆಬ್ರುವರಿಯಲ್ಲಿ ಗಣನೆಗೆ ತೆಗೆದುಕೊಂಡಿತ್ತು.

ಹೊಸದಾಗಿ ಮೃಗಾಲಯ ಆರಂಭಿಸಲು ಅಥವಾ ಅರಣ್ಯ ಪ್ರದೇಶದಲ್ಲಿ ಸಫಾರಿ ಆರಂಭಿಸಲು ತನ್ನ ಅನುಮತಿ ಪಡೆಯಬೇಕು ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿತ್ತು.

ಅಕ್ರಮ ವಲಸಿಗರನ್ನು ಅನಿರ್ದಿಷ್ಟಾವಧಿಗೆ ಇರಿಸಿಕೊಳ್ಳುವುದೇಕೆ: ಕೋರ್ಟ್ ಪ್ರಶ್ನೆ

ನವದೆಹಲಿ: ಬಾಂಗ್ಲಾದೇಶದಿಂದ ಭಾರತಕ್ಕೆ ಅಕ್ರಮವಾಗಿ ನುಸುಳಿದ ಅಪರಾಧ ಸಾಬೀತಾಗಿ, ಅಂಥವರು ಭಾರತೀಯ ಪ್ರಜೆಗಳಲ್ಲ ಎಂಬುದು ಖಚಿತವಾದ ನಂತರದಲ್ಲಿ ಅವರನ್ನು ಅನಿರ್ದಿಷ್ಟ ಅವಧಿಗೆ ಬಂಧನದಲ್ಲಿ ಇರಿಸಿಕೊಳ್ಳುವುದು ಏಕೆ ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಶ್ನಿಸಿದೆ.

'ಅಕ್ರಮವಾಗಿ ವಲಸೆ ಬಂದವರ ವಿಚಾರಣೆ ನಡೆಸಿ, ಅವರ ಅಪರಾಧ ಸಾಬೀತಾದ ನಂತರದಲ್ಲಿ ಅವರ ರಾಷ್ಟ್ರೀಯತೆಯನ್ನು ಮತ್ತೆ ಪರಿಶೀಲಿಸುವ ಅಗತ್ಯ ಏನು ಎಂಬ ಗೊಂದಲ ನಮ್ಮ ಮನಸ್ಸಿನಲ್ಲಿದೆ' ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಅಕ್ರಮ ವಲಸಿಗರನ್ನು ಮತ್ತೆ ಅವರ ದೇಶಕ್ಕೆ ಕಳುಹಿಸುವ ಕೆಲಸ, ಅವರ ದಾಖಲೆಪತ್ರಗಳನ್ನು ಪರಿಶೀಲಿಸುವ ಕೆಲಸ 30 ದಿನಗಳಲ್ಲಿ ಪೂರ್ಣಗೊಳ್ಳಬೇಕು ಎಂದು ಕಾನೂನು ಹೇಳುತ್ತದೆ. ಆದರೆ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರದೆ ಇರುವುದಕ್ಕೆ ಕಾರಣಗಳೇನು ಎಂದು ಪೀಠವು ಪ್ರಶ್ನಿಸಿತು.

ಚುನಾವಣಾ ಆಯುಕ್ತರ ನೇಮಕ ಅರ್ಜಿ ವಿಚಾರಣೆ 12ಕ್ಕೆ

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತ ಮತ್ತು ಆಯುಕ್ತರ ನೇಮಕ ಸಂಬಂಧ ಕೇಂದ್ರ ಸರ್ಕಾರ 2023ರಲ್ಲಿ ಮಾಡಿರುವ ತಿದ್ದುಪಡಿಗಳನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಇದೇ 12ಕ್ಕೆ ನಿಗದಿಪಡಿಸಿದೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟಿಶ್ವರ್ ಸಿಂಗ್ ಅವರಿದ್ದ ಪೀಠವು, ಈ ಅರ್ಜಿಯ ಮಹತ್ವವನ್ನು ನಿರ್ಧರಿಸಲಾಗುವುದು ಎಂದು ತಿಳಿಸಿದೆ.

ವಿಚಾರಣೆಗೆ ಹಾಜರಾಗಲು ತರೂರ್‌ಗೆ ಸೂಚನೆ

ನವದೆಹಲಿ (ಪಿಟಿಐ): ಬಿಜೆಪಿ ಮುಖಂಡ ರಾಜೀವ್ ಚಂದ್ರಶೇಖರ್ ಅವರು ದಾಖಲಿಸಿರುವ ಮಾನನಷ್ಟ ಮೊಕದ್ದಮೆಯ ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರಿಗೆ ದೆಹಲಿ ಹೈಕೋರ್ಟ್ ಸೋಮವಾರ ಸೂಚನೆ ನೀಡಿದೆ.

ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ಅವರು ವಿಚಾರಣೆಯನ್ನು ಏಪ್ರಿಲ್ 28ಕ್ಕೆ ನಿಗದಿ ಮಾಡಿದ್ದಾರೆ.

ತರೂರ್ ಅವರು 2024ರ ಏಪ್ರಿಲ್‌ನಲ್ಲಿ ಸಾರ್ವಜನಿಕವಾಗಿ ಹಲವು ವೇದಿಕೆಗಳಲ್ಲಿ ಆಡಿರುವ ಮಾತುಗಳು ಮಾನಹಾನಿಕರವಾಗಿ ಇದ್ದವು. ಎಂದು ರಾಜೀವ್ ಅವರು ಅರ್ಜಿಯಲ್ಲಿ ಹೇಳಿದ್ದಾರೆ.

ಮಾನಹಾನಿಕರ ರೀತಿಯಲ್ಲಿ ಮಾತನಾಡದಂತೆ ತರೂರ್ ಅವರಿಗೆ ಸೂಚಿಸಬೇಕು ಎಂದು ರಾಜೀವ್ ಅವರು ಕೋರಿದ್ದಾರೆ. ಅಲ್ಲದೆ, ತರೂರ್ ಅವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು, ಹೆಸರು ಹಾಳುಮಾಡಿದ್ದಕ್ಕಾಗಿ ತಮಗೆ ತರೂರ್ ಅವರು ₹10 ಕೋಟಿ ಪರಿಹಾರ ಕೊಡಬೇಕು ಎಂದು ಕೂಡ ರಾಜೀವ್ ಕೋರಿದ್ದಾರೆ.

2024ರ ಲೋಕಸಭಾ ಚುನಾವಣೆಯಲ್ಲಿ ರಾಜೀವ್ ಅವರು ಮತದಾರರಿಗೆ ಹಣ ನೀಡಿದ್ದರು ಎಂದು ತರೂರ್ ಅವರು ಸುದ್ದಿವಾಹಿನಿಗೆ ನೀಡಿದ ಸಂದರ್ಶನವೊಂದರಲ್ಲಿ ಹೇಳಿದ್ದರು ಎಂಬ ಆರೋಪ ಇದೆ.

ಸಂಕ್ಷಿಪ್ತ ಸುದ್ದಿ

'ಮೃತದೇಹ ತುಂಡರಿಸಿ ಅರ್ಧ ಪಾಲು ಕೊಡಿ'

ಟೀಕಮಗಢ (ಮಧ್ಯ ಪ್ರದೇಶ) (ಪಿಟಿಐ): ತಂದೆಯ ಅಂತ್ಯಕ್ರಿಯೆಯನ್ನು ಯಾರು ನೆರವೇರಿಸಬೇಕು ಎಂಬ ವಿಚಾರವಾಗಿ ಸಹೋದರರ ನಡುವೆ ಜಗಳ ನಡೆದಿದ್ದು, ಮೃತದೇಹವನ್ನು ಕತ್ತರಿಸಿ ಅರ್ಧ ಭಾಗವನ್ನು ತನಗೆ ಕೊಡುವಂತೆ ವ್ಯಕ್ತಿಯೊಬ್ಬ ಪಟ್ಟುಹಿಡಿದ ಘಟನೆ ಮಧ್ಯಪ್ರದೇಶದ ಟೀಕಮಗಢ ಜಿಲ್ಲೆಯಲ್ಲಿ ನಡೆದಿದೆ.

ಘಟನೆಯ ವಿವರ: ಟೀಕಮಗಢ ಜಿಲ್ಲೆಯ ಲಿಧೋರಾತಾಲ್ ಗ್ರಾಮದ ನಿವಾಸಿ ಧ್ಯಾನಿ ಸಿಂಗ್ ಘೋಷ್ (84) ಅವರು ದೀರ್ಘಕಾಲೀನ ಅನಾರೋಗ್ಯದಿಂದಾಗಿ ಭಾನುವಾರ ಮೃತಪಟ್ಟಿದ್ದರು. ಅಂತಿಮ ಸಂಸ್ಕಾರವನ್ನು ತಾನೇ ನಡೆಸಬೇಕೆಂದು ಘೋಷ್ ಅವರ ಹಿರಿಯ ಪುತ್ರ ಕಿಶನ್ ವರಸೆ ತೆಗೆದಿದ್ದ. ಇದಕ್ಕೊಪ್ಪದ ಕಿರಿಯ ಪುತ್ರ ದೇಶರಾಜ್, ತಂದೆಯ ಆಶಯದಂತೆ ನಾನೇ ಅಂತಿಮ ಸಂಸ್ಕಾರ ನಡೆಸುವುದಾಗಿ ಪಟ್ಟು ಹಿಡಿದಿದ್ದರು.

ಸ್ಥಳೀಯರು ಮಧ್ಯ ಪ್ರವೇಶಿಸಿ ಜಗಳ ಬಿಡಿಸಲು ಮುಂದಾದಾಗ, 'ದೇಹವನ್ನು ಎರಡು ಭಾಗಗಳಾಗಿ ತುಂಡರಿಸಿ, ಇಬ್ಬರಿಗೂ ಹಂಚಿ' ಎಂದು ಕಿಶನ್ ಒತ್ತಾಯಿಸಿದ್ದ. ಬಳಿಕ ಪೊಲೀಸರು ಸ್ಥಳಕ್ಕೆ ಬಂದು ಆತನ ಮನವೊಲಿಸಿದ್ದು, ದೇಶರಾಜ್ ಅಂತಿಮ ಸಂಸ್ಕಾರ ನೆರವೇರಿಸಿದ್ದಾರೆ.

ಖಾಲಿ ಬೋಗಿಯಲ್ಲಿ ಮಹಿಳೆ ಮೇಲೆ ಅತ್ಯಾಚಾರ

ಮುಂಬೈ (ಪಿಟಿಐ): ಮುಂಬೈನ ಬಾಂದ್ರಾ ರೈಲು ನಿಲ್ದಾಣದಲ್ಲಿ ನಿಲ್ಲಿಸಿದ್ದ ರೈಲಿನ ಖಾಲಿ ಬೋಗಿಯಲ್ಲಿ ಮಹಿಳೆಯ ಮೇಲೆ ರೈಲ್ವೆ ಕೂಲಿಯೊಬ್ಬ ಅತ್ಯಾಚಾರ ಎಸಗಿದ್ದಾನೆ ಎನ್ನಲಾಗಿದ್ದು, ಪ್ರಕರಣ ಸಂಬಂಧ ಆತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯಮ ವಯೋಮಾನದ ಮಹಿಳೆ ಮತ್ತು ಆಕೆಯ ಮಗ ಶನಿವಾರ ರಾತ್ರಿ ದೂರದ ಊರಿನಿಂದ ಬಂದು ಬಾಂದ್ರಾ ರೈಲು ನಿಲ್ದಾಣದಲ್ಲಿ ಇಳಿದಿದ್ದರು. ಬಳಿಕ ಮಹಿಳೆ ಮತ್ತೊಂದು ರೈಲನ್ನು ಹತ್ತಿದ್ದರು. ಈ ಸಂದರ್ಭದಲ್ಲಿ ಈ ರೈಲಿನಲ್ಲಿ ಬೇರೆ ಪ್ರಯಾಣಿಕರು ಇರಲಿಲ್ಲ. ಈ ಸಂದರ್ಭದಲ್ಲಿ ರೈಲಿನಲ್ಲಿದ್ದ ಕೂಲಿಯು ಮಹಿಳೆ ಮೇಲೆ ಅತ್ಯಾಚಾರ ಎಸಗಿ, ಪರಾರಿಯಾಗಿದ್ದಾನೆ ಎಂದು ರೈಲ್ವೆ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಗ್ರರ ದಾಳಿ: ಮಾಜಿ ಯೋಧ ಸಾವು

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಬೆಹಿಬಾಗ್‌ನಲ್ಲಿ ಸೋಮವಾರ ಉಗ್ರರು ನಡೆಸಿದ ದಾಳಿಯಲ್ಲಿ ಮಾಜಿ ಯೋಧರೊಬ್ಬರು ಮೃತಪಟ್ಟಿದ್ದಾರೆ. ಮಂಜೂರ್ ಅಹಮದ್ ವಾಗೆ ಮೃತ ವ್ಯಕ್ತಿ.

ಮಾಜಿ ಯೋಧರ ಕುಟುಂಬದ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿದ್ದು, ವಾಗೆ ಅವರ ಪತ್ನಿ ಹಾಗೂ ಸೋದರ ಸಂಬಂಧಿ ಮಹಿಳೆ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕನ ಪುತ್ರ ಶವವಾಗಿ ಪತ್ತೆ

ಪಟ್ನಾ (ಪಿಟಿಐ): ಬಿಹಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಶಕೀಲ್ ಅಹ್ಮದ್ ಖಾನ್ ಅವರ ಪುತ್ರ ಸೋಮವಾರ ಪಟ್ನಾದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತಂದೆಯ ಅಧಿಕೃತ ನಿವಾಸದಲ್ಲಿ, ಅಯಾನ್ ಅಹಮ್ಮದ್ ಖಾನ್ ಅವರ ದೇಹವು ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ ಎಂದು ಪಟ್ನಾದ ಹಿರಿಯ ಪೊಲೀಸ್ ಅಧಿಕಾರಿ ಅವಕಾಶ್ ಕುಮಾರ್ ತಿಳಿಸಿದರು.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದು, ತನಿಖೆಯು ಎಲ್ಲ ಆಯಾಮಗಳಲ್ಲಿ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿನಿ ಸಾವು

ಬೈರಕ್‌ಪುರ (ಪಶ್ಚಿಮ ಬಂಗಾಳ), (ಪಿಟಿಐ): ಆರ್.ಜಿ.ಕರ್ ಮೆಡಿಕಲ್ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿನಿಯ ಮೃತದೇಹವು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಆಯಿವಿ ಪ್ರಸಾದ್ ಮೃತ ವಿದ್ಯಾರ್ಥಿನಿ.ಈಕೆ ಕಮರ್‌ಹಾಟ ಇಎಸ್‌ಐ ಆಸ್ಪತ್ರೆಯಲ್ಲಿ ವೈದ್ಯರಾಗಿರುವ ತನ್ನ ತಾಯಿಯ ಜೊತೆ ಆಸ್ಪತ್ರೆಯ ವಸತಿ ಗೃಹದಲ್ಲಿ ವಾಸವಾಗಿದ್ದರು. ಇಲ್ಲಿಯೇ ಮೃತದೇಹ ಸಿಕ್ಕಿದೆ.

ಕಮರ್‌ಹಾಟಿ ಪೊಲೀಸರು ಅಸ್ವಾಭಾವಿಕ ಸಾವಿನ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಕೈಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದರು.

ನಕ್ಸಲನ ಹತ್ಯೆ

ಕಾಂಕೇರ್ (ಪಿಟಿಐ): ಛತ್ತೀಸಗಢದ ಕಾಂಕೇರ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲರೊಬ್ಬರು ಮೃತಪಟ್ಟಿದ್ದಾರೆ.

ನಕ್ಸಲ್ ವಿರೋಧಿ ಕಾರ್ಯಾಚರಣೆಯ ವೇಳೆ ಭಾನುವಾರ ಮಧ್ಯಾಹ್ನ ಕಾಂಕೇರ್ ಮತ್ತು ನಾರಾಯಣಪುರ ಜಿಲ್ಲೆಗಳ ಗಡಿಯಲ್ಲಿರುವ ಕಾಡಿನಲ್ಲಿ ಗುಂಡಿನ ಚಕಮಕಿ ನಡೆದಿದೆ.

ಜಾರ್ಖಂಡ್: ಸಿಎಎ, ಎನ್‌ಆರ್‌ಸಿ, ಯುಸಿಸಿ ತಿರಸ್ಕರಿಸುವ ನಿರ್ಣಯ ಅಂಗೀಕರಿಸಿದ ಜೆಎಂಎಂ

ದುಮಕಾ (ಜಾರ್ಖಂಡ್) (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ), ರಾಷ್ಟ್ರೀಯ ನಾಗರಿಕ ನೋಂದಣಿ (ಎನ್‌ಸಿಸಿ) ಮತ್ತು ಏಕರೂಪ ನಾಗರಿಕ ಸಂಹಿತೆಯ ನಿರಾಕರಣೆ ಸೇರಿದಂತೆ 50 ಅಂಶಗಳ ನಿರ್ಣಯಕ್ಕೆ ಆಡಳಿತಾರೂಢ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಅಂಗೀಕಾರ ನೀಡಿದೆ.

ಗಾಂಧಿ ಮೈದಾನದಲ್ಲಿ ಭಾನುವಾರ ರಾತ್ರಿ ನಡೆದ ಪಕ್ಷದ 46ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಅಂಗೀಕಾರ ನೀಡಲಾಗಿದೆ.

ಚೋಟಾನಾಗ್ಪುರ ಗೇಣಿದಾರಿಕೆ ಕಾಯ್ದೆ ಮತ್ತು ಸಂಥಲ ಪರಗಣ ಗೇಣಿದಾರಿಕೆ ಕಾಯ್ದೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಬೇಕು ಎಂದು ಪಕ್ಷವು ಬೇಡಿಕೆ ಇಟ್ಟಿದೆ. ಇದೇ ಸಂದರ್ಭದಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರವು ನೀಡಬೇಕಿರುವ ₹1.36 ಲಕ್ಷ ಕೋಟಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದೆ.

ಹೇಮಂತ್ ಸೊರೇನ್

ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು, ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.

ಖನಿಜ ಸಂಪನ್ಮೂಲಗಳ ಮೂಲಕ ದೇಶಕ್ಕೆ ಸಾಕಷ್ಟು ಕೊಡುಗೆ ನೀಡುತ್ತಿದ್ದರೂ ಜಾರ್ಖಂಡ್ ಇನ್ನೂ ಹಿಂದುಳಿದ ರಾಜ್ಯವಾಗಿಯೇ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳನ್ನು ಸಮಾನವಾಗಿ ಕಾಣಬೇಕು. ನಾವು ಸಾಕಷ್ಟು ಕೊಡುಗೆ ನೀಡುತ್ತಿದ್ದರೂ ನಮಗೆ ಏನೂ ಸಿಗುತ್ತಿಲ್ಲ. ನಮ್ಮ ಹಕ್ಕುಗಳಿಗಾಗಿ ಸಹ ನಾವು ಹೋರಾಡಬೇಕಾಗಿದೆ ಎಂದು ಹೇಳಿದರು.

ಕೇಂದ್ರ ಬಜೆಟ್ ಕೇವಲ ಉಳ್ಳವರಿಗಾಗಿಯೇ ಹೊರತು, ಬಡವರಿಗಾಗಿ ಅಲ್ಲ ಎಂದು ಹೇಳಿದರು.

ಸಿ.ಎಂ ವಿರುದ್ಧ ಆಡಿಯೊ: ವರದಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಮಣಿಪುರ ಜನಾಂಗೀಯ ಸಂಘರ್ಷದಲ್ಲಿ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರ ಪಾತ್ರ ಇದೆ ಎಂದು ಹೇಳಲಾದ ಸೋರಿಕೆಯಾದ ಆಡಿಯೊ ಕ್ಲಿಪ್ ಕುರಿತ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.



ಬಿರೇನ್ ಸಿಂಗ್

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು, ಆರು ವಾರಗಳ ಒಳಗಾಗಿ ವರದಿ ಸಲ್ಲಿಸುವಂತೆ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಸೂಚಿಸಿದರು. ನಂತರ ಅರ್ಜಿಯ ವಿಚಾರಣೆಯನ್ನು ಮಾರ್ಚ್ 24ಕ್ಕೆ ಮುಂದೂಡಿದರು.

ದಲಿತ ಯುವತಿ ಹತ್ಯೆ ಮೂರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಲಖನೌ: ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿರುವ ಅಯೋಧ್ಯೆಯ ದಲಿತ ಯುವತಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರನ್ನು ದಿಗ್ವಿಜಯ್ ಸಿಂಗ್, ಹರಿರಾಮ್ ಕೋರಿ ಮತ್ತು ವಿಜಯ್ ಸಾಹು ಎಂದು ಗುರುತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಅಯೋಧ್ಯೆ ಪೊಲೀಸ್ ಮುಖ್ಯಸ್ಥ ರಾಮ್ ಕರಣ್ ನಾಯರ್ ಅವರು, 'ಆರೋಪಿಗಳು ಕೃತ್ಯವನ್ನು ತಾವೇ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

ಜನವರಿ 30ರಿಂದ 22 ವರ್ಷದ ಯುವತಿ ನಾಪತ್ತೆಯಾಗಿದ್ದು, ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಜಿಲ್ಲೆಯ ಕಾಲುವೆಯೊಂದರ ಪಕ್ಕದ ಪೊದೆಯಲ್ಲಿ ತೀವ್ರ ಗಾಯಗೊಂಡಿದ್ದ ಸಂತ್ರಸ್ತೆಯ ಶವವನ್ನು ಶನಿವಾರ ಪೊಲೀಸರು ಪತ್ತೆ ಮಾಡಿದ್ದರು. ದೇಹದ ತುಂಬ ಗಾಯದ ಗುರುತುಗಳಿದ್ದವು. ಹೀಗಾಗಿ ಕೊಲೆಗೂ ಮುನ್ನ ಅತ್ಯಾಚಾರ ನಡೆಸಲಾಗಿದೆ ಎಂದು ಕುಟುಂಬಸ್ಥರು ಶಂಕಿಸಿದ್ದರು.

'ಪ್ರತೀಕಾರಕ್ಕಾಗಿ ಹತ್ಯೆ ನಡೆದಿರಬಹುದು. ಕೆಲ ದಿನಗಳ ಹಿಂದೆ ಸಂತ್ರಸ್ತೆಯ ಸಹೋದರ ಮತ್ತು ಆರೋಪಿಯೊಬ್ಬನ (ದಿಗ್ವಿಜಯ್) ನಡುವೆ ಕಲಹ ನಡೆದಿತ್ತು' ಎಂದು ಮೂಲಗಳು ತಿಳಿಸಿವೆ.

ಆರೋಗ್ಯಕ್ಕೂ ಆನಂದಕ್ಕೂ ಸೂರ್ಯ

• ಎಸ್. ಸೂರ್ಯಪ್ರಕಾಶ ಪಂಡಿತ್

ನಾಡಿನ ಕೆಲವು ಭಾಗಗಳಲ್ಲಿ ಈ ಸಲ ಚಳಿ ಹೆಚ್ಚಿತ್ತು. ಕಳೆದ ಒಂದೆರಡು ದಿನಗಳಿಂದ ಬಿಸಿಲು ಕೂಡ ಪ್ರಖರವಾಗುತ್ತಿದೆ. 'ಇನ್ನೇನು ರಥಸಪ್ತಮಿ ಬಂತು; ಬಿಸಿಲು ಚುರುಕಾಗುತ್ತದೆ' ಎಂಬ ಮಾತುಗಳನ್ನು ನಾವು ಆಗಾಗ ಕೇಳುತ್ತಿರುತ್ತೇವೆ. ಸೂರ್ಯನು ರಥಸಪ್ತಮಿಯಂದು ರಥವನ್ನು ಏರುತ್ತಾನೆ. ಹೀಗಾಗಿ ಅಂದಿನಿಂದ ಅವನ ಶಕ್ತಿ ಜೋರು – ಎಂಬುದು ನಮ್ಮ ಸಾಮಾನ್ಯ ವಿವರಣೆ. ಪ್ರಕೃತಿಯಲ್ಲಿ ನಡೆಯುವ ವಿದ್ಯಮಾನಗಳಿಗೆ ವೈಜ್ಞಾನಿಕವಾದ ಕಾರಣಗಳು ಬೇರೆ ಇರುತ್ತವೆ, ದಿಟ. ಆದರೆ ನಮ್ಮ ಪೂರ್ವಜರು ಈ ವೈಜ್ಞಾನಿಕ ಸತ್ಯಕ್ಕೆ ಪುರಾಣದ ಆಯಾಮವನ್ನು ಒದಗಿಸಿ, ಪ್ರಾಕೃತಿಕ ಘಟನೆಯನ್ನೇ ಧಾರ್ಮಿಕ ಕಲಾಪದ ಮೂಲಕ ಬದುಕಿನ ಭಾಗವನ್ನಾಗಿಸಿಕೊಂಡು ಅದನ್ನು ಎದುರುಗೊಂಡದ್ದು ವಿಶೇಷ. ನಮ್ಮ ಹಲವು ಹಬ್ಬಗಳು ಹೀಗೆ ವೈಜ್ಞಾನಿಕತೆ ಮತ್ತು ಪೌರಾಣಿಕತೆ – ಎರಡು ಆಯಾಮಗಳಿಂದಲೂ ಅಲಂಕಾರಗೊಂಡಿರುತ್ತವೆ. ರಥಸಪ್ತಮಿ ಅಂಥ ಹಬ್ಬಗಳಲ್ಲಿ ಒಂದು.

ಸೂರ್ಯನಿಲ್ಲದಿದ್ದರೆ ನಮ್ಮ ಜೀವನವಿಲ್ಲ. ಇದು ವೈಜ್ಞಾನಿಕ ವಾಸ್ತವವೂ ಹೌದು. ನಮ್ಮ ಪರಂಪರೆಯೂ ಸೂರ್ಯನ ಈ ಅನಿವಾರ್ಯತೆಯನ್ನು ಒಪ್ಪಿಕೊಂಡಿದೆ. ಇದನ್ನೇ ಅದು ಸೂರ್ಯನು ಜಗತ್ತಿನ ಕಣ್ಣು, ಜಗತ್ತಿನ ಆತ್ಮ– ಎಂದೆಲ್ಲ ಒಕ್ಕಣಿಸಿದೆ. ಕಣ್ಣಿಲ್ಲದಿದ್ದರೆ ನಮಗೆ ಏನೂ ಕಾಣದು; ಎಂದರೆ ಜಗತ್ತು ನಮ್ಮ ಪಾಲಿಗೆ ಹುಟ್ಟುವುದೇ ಸೂರ್ಯನ ಕೃಪೆಯಿಂದ ಎಂಬ ವಿನಯ ನಮ್ಮ ಸಂಸ್ಕೃತಿಯದು. 'ಆತ್ಮ' ಎಂಬುದರಲ್ಲಿಯೂ ಇಂಥದೇ ಭಾವ ದಟ್ಟವಾಗಿದೆ. ಆತ್ಮ ಎಂದರೆ ಸಾರ, ಸತ್ವ, ಮೂಲ, ದೇಹ – ಹೀಗೆಲ್ಲ ಹಲವು ಅರ್ಥಗಳಿವೆ. ಈ ಎಲ್ಲ ಅರ್ಥಗಳಲ್ಲಿಯೂ ಸೂರ್ಯನ ಹಿರಿಮೆಯ ಅಂಶಗಳು ಸೇರಿಕೊಂಡಿರುವುದು ಸ್ಪಷ್ಟ. ಹೀಗೆ ನಮ್ಮ ಇರುವಿಕೆಗೇ ಮೂಲವಾಗಿರುವ ಸೂರ್ಯನು ದೇವರಾದದ್ದು, ನಮ್ಮ ಧಾರ್ಮಿಕತೆಗೆ ಒದಗಿಬಂದದ್ದು ಆಶ್ಚರ್ಯವೇನೂ ಅಲ್ಲವಷ್ಟೆ.

ವೇದಗಳ ಕಾಲದಿಂದ ನಮ್ಮ ಸಂಸ್ಕೃತಿಯಲ್ಲಿ ಸೂರ್ಯನ ಆರಾಧನೆ ನಡೆದಿದೆ. ವೇದಗಳಲ್ಲಿ ಎಷ್ಟೋ ಮಂತ್ರಗಳು ಅವನಿಗೆ ಮೀಸಲಾಗಿವೆ. ಸೂರ್ಯನ ಪೂಜೆಗೇ ಒಂದು ವಿಶಿಷ್ಟ ದಿನವನ್ನು ಆರಿಸಿಕೊಂಡು, ಅದನ್ನು 'ರಥಸಪ್ತಮಿ' ಎಂದು ಕರೆದಿದ್ದಾರೆ. ಸೂರ್ಯನು ಆರೋಗ್ಯಕ್ಕೂ ಜ್ಞಾನಕ್ಕೂ ಕ್ರಿಯಾಶೀಲತೆಗೂ ಪ್ರಧಾನ ಸಂಕೇತವಾಗಿದ್ದಾನೆ. ಹೀಗಾಗಿ ಇಂದು ಅವನ ಪೂಜೆಯನ್ನು ಹಲವು ವಿಧಗಳಲ್ಲಿ ನೆರವೇರಿಸಲಾಗುವುದು. ಎಕ್ಕದ ಗಿಡ ಸೂರ್ಯನಿಗೆ ಸಂಕೇತ. ಆದುದರಿಂದ ಇಂದು ಅದರ ಎಲೆಗಳನ್ನು ದೇಹದಲ್ಲಿ ಧರಿಸಿ ಸ್ನಾನ ಮಾಡಿದರೆ ಆರೋಗ್ಯ ಗಟ್ಟಿ ಆಗುತ್ತದೆ ಎಂಬ ನಂಬಿಕೆ ಇದೆ. ಸೂರ್ಯನಮಸ್ಕಾರವನ್ನು ಮಾಡುವುದು ಕೂಡ ಇಂದಿನ ಆಚರಣೆಯ ಭಾಗವಾಗಿದೆ. ಸೂರ್ಯನ ಹೆಸರುಗಳನ್ನು ಹೇಳಿಕೊಂಡು ಆಸನಗಳ ರೂಪದಲ್ಲಿ ಮಾಡುವ ಕ್ರಮ ಒಂದು; ಇನ್ನೊಂದು ಅರುಣ ಪಾರಾಯಣದ ಮೂಲಕವಾಗಿಯೂ ಸೂರ್ಯನಮಸ್ಕಾರವನ್ನು ಮಾಡಲಾಗುತ್ತದೆ. ನಮ್ಮ ಆರೋಗ್ಯರಕ್ಷಣೆಯಲ್ಲಿ ಸೂರ್ಯಕಿರಣಗಳ ಪಾತ್ರ ದೊಡ್ಡದು. ಅಂತೆಯೇ ಜ್ಞಾನ–ವಿವೇಕಗಳಿಗೂ ಮೂಲವನ್ನಾಗಿ ಸೂರ್ಯನನ್ನೇ ನಮ್ಮ ಪರಂಪರೆ ಎತ್ತಿಹಿಡಿದಿದೆ. ನಮ್ಮ ಬುದ್ಧಿಶಕ್ತಿಯನ್ನು ಪ್ರಚೋದಿಸುವವನೇ ಸೂರ್ಯ. ಹಿಗಾಗಿ ರಥಸಪ್ತಮಿಯ ಆಚರಣೆ ಎಂದರೆ ನಮ್ಮ ಅಂತರಂಗ–ಬಹಿರಂಗಗಳ ಆರೋಗ್ಯವನ್ನೂ ಆಹ್ಲಾದವನ್ನೂ ಕಾಪಾಡಿಕೊಳ್ಳುವ ಸಂಕಲ್ಪದಿನವೇ ಹೌದು. ❖



ಚಿನ್ನದ ಬೇಟೆ ಮುಂದುವರಿಸಿದ ಕರ್ನಾಟಕದ ಈಜುಪಟುಗಳು: ರಾಜ್ಯಕ್ಕೆ ಮಿಶ್ರ ರಿಲೆ ಕಿರೀಟ

ಧಿನಿಧಿ ದಾಖಲೆ, ಶ್ರೀಹರಿ ಮಿಂಚು

ಉತ್ತರಾಖಂಡದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ವಿಭಾಗದಲ್ಲಿ 4x100 ಮೀಟರ್ಸ್ ಮಿಶ್ರ ರಿಲೆಯಲ್ಲಿ ಚಿನ್ನ ಗೆದ್ದ ಕರ್ನಾಟಕ ತಂಡ (ಎಡದಿಂದ), ಆಕಾಶ್ ಮಣಿ, ಧೀನಿಧಿ ದೇಸಿಂಗು, ಶ್ರೀಹರಿ ನಟರಾಜ್ ಹಾಗೂ ನೀನಾ ವೆಂಕಟೇಶ್

ಬೆಂಗಳೂರು: ಈಜು ಕ್ರೀಡೆಯ ಶಕ್ತಿಕೇಂದ್ರ ಕರ್ನಾಟಕದ ಸ್ಪರ್ಧಿಗಳು ಉತ್ತರಾಖಂಡದ ಹಲ್ದ್ವಾನಿಯಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸೋಮವಾರ ಮತ್ತೆ ಐದು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಆ ಮೂಲಕ ತಮ್ಮ ಪಾರಮ್ಯವನ್ನು ಮುಂದುವರಿಸಿದ್ದಾರೆ.

14 ವರ್ಷ ವಯಸ್ಸಿನ ಧಿನಿಧಿ ದೇಸಿಂಗು ಅವರು ನೂತನ ಕೂಟ ದಾಖಲೆಯೊಂದಿಗೆ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡರು. ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಧಿನಿಧಿ ದೇಸಿಂಗು 4ನಿಮಿಷ, 24.60ಸೆಕೆಂಡುಗಳಲ್ಲಿ ಗುರಿ ಮುಟ್ಟಿ ನೂತನ ದಾಖಲೆ ಬರೆದರು. ಅವರು ಎರಡು ವರ್ಷಗಳ ಹಿಂದೆ ದೆಹಲಿಯ ಭವ್ಯಾ ಸಚದೇವ ಸ್ಥಾಪಿಸಿದ್ದ ದಾಖಲೆಯನ್ನು ಮೀರಿ ನಿಂತರು.

ಪುರುಷರ ವಿಭಾಗದಲ್ಲಿ ಒಲಿಂಪಿಯನ್ ಶ್ರೀಹರಿ ನಟರಾಜ್ ಚಿನ್ನದ ಪದಕ ಗೆದ್ದರು. ಅವರು 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಮೊದಲಿಗರಾದರು. ರಾಜ್ಯದವರೇ ಆದ ಆಕಾಶ್ ಮಣಿ ಇದೇ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದರು. 200 ಮೀ ಮೆಡ್ಲೆಯಲ್ಲಿ ಕರ್ನಾಟಕದ ಶಾನ್ ಗಂಗೂಲಿ ಅವರು ಚಿನ್ನ ಗೆದ್ದರು.

4X100 ಮೀ ಮಿಶ್ರ ಫ್ರೀಸ್ಟೈಲ್ ರಿಲೆ ವಿಭಾಗದಲ್ಲಿ ಕರ್ನಾಟಕದ ತಂಡವು ಚಿನ್ನದ ಬೇಟೆಯಾಡಿತು. ಆಕಾಶ್ ಮಣಿ, ನೀನಾ ವೆಂಕಟೇಶ್, ಧೀನಿಧಿ ದೇಸಿಂಗು ಹಾಗೂ ಶ್ರೀಹರಿ ನಟರಾಜ್ ಅವರಿದ್ದ ತಂಡವು 3ನಿಮಿಷ, 41.03ಸೆಕೆಂಡುಗಳಲ್ಲಿ ಗುರಿ ತಲುಪಿ ಮೊದಲ ಸ್ಥಾನ ಪಡೆಯಿತು.

ಫಲಿತಾಂಶಗಳು: ಪುರುಷರು: 50 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಕರ್ನಾಟಕ; 26.09ಸೆಕೆಂಡು)–1, ಆಕಾಶ್ ಮಣಿ (ಕರ್ನಾಟಕ; 26.42ಸೆ)–2, ರಿಷಭ್ ದಾಸ್ (ಮಹಾರಾಷ್ಟ್ರ)–3.

800 ಮೀ ಫ್ರೀಸ್ಟೈಲ್: ಖುಶಾಗ್ರ ರಾವತ್ (ದೆಹಲಿ; 8ನಿ,12.89ಸೆ)–1, ಆರ್ಯನ್ ನೆಹ್ರಾ(ಗುಜರಾತ್; 8ನಿ,23.62ಸೆ)–2, ಅನೀಶ್ ಎಸ್ ಗೌಡ (ಕರ್ನಾಟಕ; 8ನಿ,24.39ಸೆ)–3

200 ಮೀ ಮೆಡ್ಲೆ: ಶಾನ್ ಗಂಗೂಲಿ (ಕರ್ನಾಟಕ; 2ನಿ,6.61ಸೆ)–1, ಸಜನ್ ಪ್ರಕಾಶ್ (ಕೇರಳ)–2, ಆರ್ಯನ್ ನೆಹ್ರಾ (ಗುಜರಾತ್)–3.

ಮಹಿಳೆಯರು: 50 ಮೀ ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ (ಕರ್ನಾಟಕ; 31.46ಸೆ)–1, ಸೌಬರ್ತಿ ಮಂಡಲ್ (ಬಂಗಾಳ)–2, ಋತುತಾ ರಾಜದನ್ಯಾ (ಮಹಾರಾಷ್ಟ್ರ)–3.

400 ಮೀ ಫ್ರೀಸ್ಟೈಲ್: ಧೀನಿಧಿ ದೇಸಿಂಗು (ಕರ್ನಾಟಕ; 4ನಿ,24.60ಸೆ, ನೂತನ ದಾಖಲೆ. ಹಳೆಯದು: 4ನಿ,27.93ಸೆ, ಭವ್ಯಾ ಸಚದೇವ, 2023ರಲ್ಲಿ) –1, ಭವ್ಯಾ ಸಚದೇವ (ದೆಹಲಿ) –2, ಅದಿತಿ ಸತೀಶ್ ಹೆಗಡೆ (ಮಹಾರಾಷ್ಟ್ರ)–3.

200 ಮೀ ಮೆಡ್ಲೆ: ಸಾನ್ವಿ ದೇಶ್ವಾಲ್ (ಮಹಾರಾಷ್ಟ್ರ; 2ನಿ,24.90ಸೆ)–1, ಶ್ರೀನೀತಿ ನಟೇಶನ್ (ತಮಿಳುನಾಡು)–2, ಭೂಮಿ ಗುಪ್ತಾ –3.

4X100 ಮೀ ಮಿಶ್ರ ಫ್ರೀಸ್ಟೈಲ್: ಕರ್ನಾಟಕ (ಆಕಾಶ್ ಮಣಿ, ನೀನಾ ವೆಂಕಟೇಶ್, ಧೀನಿಧಿ ದೇಸಿಂಗು, ಶ್ರೀಹರಿ ನಟರಾಜ್; 3ನಿ, 41.03ಸೆ)–1, ಮಹಾರಾಷ್ಟ್ರ –2, ತಮಿಳುನಾಡು–3.

ಡೈವಿಂಗ್ 1 ಮೀ ಸ್ಪ್ರಿಂಗ್‌ಬೋರ್ಡ್: ಪಲಕ್ ಶರ್ಮಾ (ಮಧ್ಯಪ್ರದೇಶ; 165.20 ಪಾಯಿಂಟ್ಸ್)–1, ಕೆ. ಮೃಣಾಲಿನಿ (ತಮಿಳುನಾಡು)–2, ಕ್ಷಮಾ ಬಂಗೇರಾ (ಮಹಾರಾಷ್ಟ್ರ)–3.

ವಾಟರ್‌ಪೋಲೊ: ಸೆಮಿಫೈನಲ್– ಪುರುಷರು: ಮಹಾರಾಷ್ಟ್ರ ತಂಡವು 20–5ರಿಂದ ಪಶ್ಚಿಮ ಬಂಗಾಳದ ಎದುರು; ಎಸ್‌ಎಸ್‌ಸಿಬಿ ತಂಡವು ಕೇರಳ ಎದುರು 14–11ರಿಂದ ಜಯಿಸಿತು. ಮಹಿಳೆಯರು: ಕೇರಳ ತಂಡವು 15–9ರಿಂದ ಪಶ್ಚಿಮ ಬಂಗಾಳ ಎದುರು; ಮಹಾರಾಷ್ಟ್ರ ತಂಡವು 15–12ರಿಂದ ಕರ್ನಾಟಕದ ಎದುರು (ಪೆನಾಲ್ಟಿ ಶೂಟೌಟ್‌ನಲ್ಲಿ) ಜಯಿಸಿತು.

ವೇಟ್‌ಲಿಫ್ಟಿಂಗ್: 4 ದಾಖಲೆ' ರಾಷ್ಟ್ರೀಯ ಕ್ರೀಡೆಗಳ ವೇಟ್ ಲಿಫ್ಟಿಂಗ್‌ನಲ್ಲಿ ಸೋಮವಾರ ನಾಲ್ಕು ದಾಖಲೆಗಳು ಮೂಡಿಬಂದವು. ಪಂಜಾಬ್‌ನ ಮೆಹಕ್ ಶರ್ಮಾ ಅವರು ಮಹಿಳೆಯರ 87 + ಕೆ.ಜಿ. ವಿಭಾಗದಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಸ್ನಾಚ್, ಕ್ಲೀನ್ ಅಂಡ್ ಜರ್ಕ್ ಮತ್ತು ಒಟ್ಟು ತೂಕ ವಿಭಾಗದಲ್ಲಿ ನೂತನ ದಾಖಲೆ ಸ್ಥಾಪಿಸಿದರು.

ವೇಟ್‌ಲಿಫ್ಟಿಂಗ್ ಸ್ಪರ್ಧೆಗಳ ಅಂತಿಮ ದಿನ ತಮಿಳುನಾಡಿನ ಎಸ್. ರುದ್ರಮಯನ್ ಅವರು 109 + ಕೆ.ಜಿ. ವಿಭಾಗದ ಸ್ನಾಚ್‌ನಲ್ಲಿ ದಾಖಲೆ ಸ್ಥಾಪಿಸಿದರು.

29 ವರ್ಷದ ಮೆಹಕ್ ಸ್ನಾಚ್‌ನಲ್ಲಿ 106 ಕೆ.ಜಿ (ಹಿಂದಿನ ದಾಖಲೆ 105 ಕೆ.ಜಿ) ಕ್ಲೀನ್ ಮತ್ತು ಜರ್ಕ್‌ನಲ್ಲಿ 141 ಕೆ.ಜಿ. (ಹಳೆಯ ದಾಖಲೆ 140 ಕೆ.ಜಿ) ಮತ್ತು ಒಟ್ಟು 247 ಕೆ.ಜಿ. ಭಾರ (ಹಳೆಯ ದಾಖಲೆ 244 ಕೆ.ಜಿ) ಎತ್ತಿ ತಮ್ಮದೇ ದಾಖಲೆ ಸುಧಾರಿಸಿದರು.

ರುದ್ರಮಯನ್ ಅವರು ಸ್ನಾಚ್‌ನಲ್ಲಿ 175 ಕೆ.ಜಿ. ಎತ್ತಿ ರೈಲ್ವೇಸ್‌ನ ಗುರ್ದೀಪ್ ಸಿಂಗ್ (172 ಕೆ.ಜಿ) ಹೆಸರಿನಲ್ಲಿದ್ದ ದಾಖಲೆ ಮುರಿದರು.

ಬೆಂಗಳೂರಿನ ಬಾಲಕನಿಗೆ ಶೂಟಿಂಗ್ ಚಿನ್ನ

ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದ ಜೊನಾಥನ್ ಆ್ಯಂಟನಿ (ಮಧ್ಯದಲ್ಲಿ)

ಡೆಹ್ರಾಡೂನ್ (ಪಿಟಿಐ): ಬೆಂಗಳೂರಿನ 15ರ ಹರೆಯದ ಶೂಟರ್ ಜೊನಾಥನ್ ಆ್ಯಂಟನಿ ಅವರು ದೇಶಿಯ ಸ್ಪರ್ಧೆಗಳ ಅತಿದೊಡ್ಡ ವೇದಿಕೆಯಲ್ಲಿ ಅಮೋಘ ಗುರಿಯ ಪ್ರದರ್ಶನ ನೀಡಿದರು. ರಾಷ್ಟ್ರೀಯ ಕ್ರೀಡೆಗಳ ಶೂಟಿಂಗ್ ಸ್ಪರ್ಧೆಯ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅವರು ಸೋಮವಾರ ಖ್ಯಾತನಾಮರನ್ನು ಹಿಂದೆಹಾಕಿ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಸರಬ್ಜೋತ್ ಸಿಂಗ್, ಸ್ವರ್ಣ ಗೆಲ್ಲುವ ನೆಚ್ಚಿನ ಸ್ಪರ್ಧಿ ಸೌರಭ್ ಚೌಧರಿ ಅವರಿಗೆ ಈ ಎಂಟನೇ ತರಗತಿ ವಿದ್ಯಾರ್ಥಿ ಆಘಾತ ನೀಡಿದರು. 2022ರಲ್ಲಿ ಸಿಬಿಎಸ್‌ಇ ದಕ್ಷಿಣ ವಲಯ ರೈಫಲ್ ಶೂಟಿಂಗ್ ಸ್ಪರ್ಧೆಗಳಲ್ಲಿ ಜೊನಾಥನ್ ಮೊದಲ ಬಾರಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದ್ದರು.

ಇಲ್ಲಿ 240.7ರ ಸ್ಕೋರ್‌ನೊಡನೆ ಅವರು ಚಿನ್ನ ಗೆದ್ದರು. ಸರ್ವಿಸಸ್‌ನ ಸ್ಪರ್ಧಿಗಳಾದ ರವಿಂದರ್ ಸಿಂಗ್ (240.3) ಮತ್ತು ಗುರುಪ್ರೀತ್ ಸಿಂಗ್ (ಕಂಚು, 220.1) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು. ಸರಬ್ಜೋತ್ ನಾಲ್ಕನೇ ಸ್ಥಾನ ಪಡೆಯಬೇಕಾಯಿತು. ಸರಬ್ಜೋತ್ 2023ರ ಜೂನ್‌ನಲ್ಲಿ ಮನುಭಾಕರ್ ಜೊತೆಗೂಡಿ ಪ್ಯಾರಿಸ್ ಒಲಿಂಪಿಕ್ಸ್ ಮಿಶ್ರ ಡಬಲ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಜೊನಾಥನ್ ಅವರು 578 ಪಾಯಿಂಟ್ಸ್ ಗಳಿಸಿ ಎಂಟನೆಯವರಾಗಿ ಫೈನಲ್‌ಗೆ ಅರ್ಹತೆ ಪಡೆದಿದ್ದರು. ರಾಷ್ಟ್ರೀಯ ದಾಖಲೆವೀರ ಸೌರಭ್ ಚೌಧರಿ ಕೂಡ ಇಷ್ಟೇ ಪಾಯಿಂಟ್ಸ್ ಗಳಿಸಿದರೂ, ಶೂಟ್‌ಆಫ್‌ನಲ್ಲಿ ಎಂಟು ಮಂದಿಯ ಫೈನಲ್‌ನಿಂದ ಹೊರಬಿದ್ದರು. ರವಿಂದರ್ (584) ಮತ್ತು ಸರಬ್ಜೋತ್ (583) ಕ್ರಮವಾಗಿ ಮೊದಲೆರಡು ಸ್ಥಾನ ಪಡೆದಿದ್ದರು.

ಸೀನಿಯರ್ ವಿಭಾಗದಲ್ಲಿ ಇದು ಜೊನಾಥನ್ ಅವರ ಅತಿ ದೊಡ್ಡ ಸಾಧನೆಯೆನಿಸಿತು. ಬೆಂಗಳೂರಿನ ಹುಡುಗ ಈ ಹಿಂದೆ ಜೂನಿಯರ್ ವಿಭಾಗದ 10 ಮೀ. ಏರ್‌ರೈಫಲ್‌ನಲ್ಲಿ ಚಿನ್ನ (ಮಿಶ್ರ ತಂಡ) ಮತ್ತು ಯೂತ್ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದರು.

'ಈ ಗೆಲುವಿನಿಂದ ರೋಮಾಂಚನವಾಗಿದೆ. ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ದೇಶ ಪ್ರತಿನಿಧಿಸಿದ ಪ್ರತಿಭಾನ್ವಿತ ಮತ್ತು ಅನುಭವಿ ಶೂಟರ್‌ಗಳೆದುರು ಈ ವಿಜಯ ದಾಖಲಿಸಿದ್ದರು ನನ್ನ ಗೆಲುವನ್ನು ಇನ್ನೂ ಅರ್ಥಪೂರ್ಣ ಗೊಳಿಸಿದೆ. ಇಂದಿನ ದಿನ ನನಗೆ ಸೇರಿತ್ತು' ಎಂದು ಜೊನಾಥನ್ ಸಂಭ್ರಮಪಟ್ಟರು.ಮಹಿಳೆಯರ 50 ಮೀ ರೈಫಲ್ 3–ಪೊಸಿಷನ್ಸ್ ಸ್ಪರ್ಧೆಯಲ್ಲಿ ಪಂಜಾಬಿನ ಸಿಫ್ಟ್ ಕೌರ್ ಸಮ್ರಾ 461.2 ರ ಗುರಿಯೊಡನೆ ಚಿನ್ನ ಗೆದ್ದರು. ಒಲಿಂಪಿಯನ್ ಅಂಜುಮ್ ಮೌದ್ಗಿಲ್ ಎರಡನೇ ಸ್ಥಾನ (458.7) ಪಡೆದರು.

ಪ್ರಜ್ಞಾನಂದ ಚಾಂಪಿಯನ್

ಟಾಟಾ ಸ್ಟೀಲ್ ಚೆಸ್ ಟೈಬ್ರೇಕರ್‌ನಲ್ಲಿ ಮಣಿದ ಗುಕೇಶ್

ಟ್ರೋಫಿಯೊಂದಿಗೆ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಚಿತ್ರ: ಪಿಟಿಐ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಅಂತರರಾಷ್ಟ್ರೀಯ ಚೆಸ್‌ನಲ್ಲಿ ಭಾರತದ ಪ್ರಾಬಲ್ಯ ಮುಂದುವರಿದಿದೆ. ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ 'ಅನಿರೀಕ್ಷಿತ ಬೆಳವಣಿಗೆಗಳ' ನಂತರ ವಿಶ್ವ ಚಾಂಪಿಯನ್ ಗುಕೇಶ್ ಅವರನ್ನು ಸೋಲಿಸಿ ವರ್ಷದ ಮೊದಲ ಪ್ರಮುಖ ಟೂರ್ನಿಯಾದ ಟಾಟಾ ಸ್ಟೀಲ್ ಮಾಸ್ಟರ್ಸ್‌ನಲ್ಲಿ ಚಾಂಪಿಯನ್ ಕಿರೀಟ ಧರಿಸಿದರು.

87ನೇ ವರ್ಷದ ಈ ಟೂರ್ನಿಯ ಅಂತಿಮ ಸುತ್ತಿನ ನಂತರ ಪ್ರಜ್ಞಾನಂದ ಮತ್ತು ಗುಕೇಶ್ ತಲಾ 8.5 ಪಾಯಿಂಟ್ಸ್ ಸಂಗ್ರಹಿಸಿದ್ದರು. ಇಬ್ಬರೂ 12ನೇ ಸುತ್ತಿನ ನಂತರ ಅಗ್ರಸ್ಥಾನ ಹಂಚಿಕೊಂಡಿದ್ದರು. ಅರ್ಜುನ್ ಇರಿಗೇಶಿ 13ನೇ ಸುತ್ತಿನಲ್ಲಿ ಸ್ವದೇಶದ ಗುಕೇಶ್ ಅವರನ್ನು ಸೋಲಿಸಿದರೆ, ಜರ್ಮನಿಯ ವಿನ್ಸೆಂಟ್ ಕೀಮರ್ ಅವರು ಪ್ರಜ್ಞಾನಂದ ಅವರನ್ನು ಮಣಿಸಿದ್ದರು.

ಸ್ಕೋರ್ ಸಮನಾದ ಕಾರಣ ಅಲ್ಪಾ ವಧಿಯ ಟೈಬ್ರೇಕರ್ ಜಾರಿ ಗೊಳಿಲಾಯಿತು. ಚೆನ್ನೈನ ಆಟಗಾರರಿಬ್ಬರ ಈ ಪೈಪೋಟಿಯಲ್ಲಿ ಪ್ರಜ್ಞಾನಂದ 2–1 ರಿಂದ ಗುಕೇಶ್ ಅವರನ್ನು ಸೋಲಿಸಿದರು. ಮೊದಲ ಎರಡು ಗೇಮ್‌ಗಳಲ್ಲಿ ಇಬ್ಬರೂ ಒಂದೊಂದು ಗೆದ್ದರು. 2ನಿ.30 ಸೆಕೆಂಡುಗಳ 'ಸಡನ್ ಡೆತ್' ಪಂದ್ಯದಲ್ಲಿ 19 ವರ್ಷ ವಯಸ್ಸಿನ ಪ್ರಜ್ಞಾನಂದ ಜಯಗಳಿಸಿದರು.

'ನಾನಿನ್ನೂ ಆ ಒತ್ತಡದ ಗುಂಗಿನಿಂದ ಹೊರಬಂದಿಲ್ಲ. ಈ ಸಂತಸವನ್ನು ಹೇಗೆ ಬಣ್ಣಿಸಬೇಕೆಂದು ತಿಳಿಯುತ್ತಿಲ್ಲ. ನಾನು ಗೆಲ್ಲುವೆನೆಂಬ ನಿರೀಕ್ಷೆಯೇ ಇರಲಿಲ್ಲ. ಫಲಿತಾಂಶ ಹೇಗೋ ನನ್ನ ಕಡೆ ವಾಲಿತು' ಎಂದು ಟೂರ್ನಿಯ ಅಧಿಕೃತ ವೆಬ್‌ಸೈಟ್‌ಗೆ ಪ್ರಜ್ಞಾನಂದ ಬರೆದಿದ್ದಾರೆ.

ವಿಶ್ವನಾಥನ್ ಆನಂದ್ ನಂತರ ಈ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ ಎಂಬ ಗೌರವ ಪ್ರಜ್ಞಾನಂದ ಅವರದಾಯಿತು. ಈ ಹಿಂದೆ ಕೋರಸ್ ಚೆಸ್ ಟೂರ್ನಿಯ ಎಂಬ ಹೆಸರು ಹೊಂದಿದ್ದ ಈ ಟೂರ್ನಿಯನ್ನು ಆನಂದ್ 2003, 2004 ಮತ್ತು 2006ರಲ್ಲಿ ಗೆದ್ದುಕೊಂಡಿದ್ದರು. 1989 ಮತ್ತು 1998 ರಲ್ಲಿ ಅವರು ಪ್ರಶಸ್ತಿಯನ್ನು ಹಂಚಿಕೊಂಡಿದ್ದರು.ಗುಕೇಶ್ ಸತತ ಎರಡನೇ ವರ್ಷ ನಿರಾಶೆ ಅನುಭವಿಸಬೇಕಾಯಿತು. 2024ರಲ್ಲಿ ಅಗ್ರಸ್ಥಾನಕ್ಕೆ ಚೀನಾದ ವೀ ಯಿ ಜೊತೆ ಟೈ ಮಾಡಿಕೊಂಡಿದ್ದರು. ಆದರೆ ಟೈಬ್ರೇಕರ್‌ನಲ್ಲಿ ಚೀನಾದ ಆಟಗಾರ ಜಯಗಳಿಸಿದ್ದರು.

ಭಾರತ ತಂಡದ ಮುಖ್ಯ ಕೋಚ್ ಗಂಭೀರ್ ಅಭಿಮತ

ಸೋಲಿಗೆ ಹೆದರಲ್ಲ; ಆಕ್ರಮಣವೇ ಸಿದ್ಧಾಂತ



ಗೌತಮ್ ಗಂಭೀರ್

ಮುಂಬೈ (ಪಿಟಿಐ): ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಅಭಿಷೇಕ್ ಶರ್ಮಾ ಅವರ ಅಬ್ಬರದ ಶತಕದ ಬಲದಿಂದ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಟಿ20 ಕ್ರಿಕೆಟ್ ಪಂದ್ಯದಲ್ಲಿ ಬೃಹತ್ ಮೊತ್ತ ಗಳಿಸಿತ್ತು. ದೊಡ್ಡ ಅಂತರದ ಜಯ ಕೂಡ ಗಳಿಸಿತ್ತು.

ಸರಣಿಯಲ್ಲಿ 4–1ರಿಂದ ಗೆದ್ದ ತಂಡದ ಸಾಧನೆಯಿಂದ ಅಪಾರ ಸಂತಸಗೊಂಡಿರುವ ಮುಖ್ಯ ಕೋಚ್ ಗೌತಮ್ ಗಂಭೀರ್, 'ದೊಡ್ಡ ಅಪಾಯವನ್ನು ಮೈಮೇಲೆ ಎಳೆದುಕೊಂಡು ದೊಡ್ಡಡ ಪ್ರತಿಫಲ' ಗಳಿಸುವುದು ನಮ್ಮ ಧ್ಯೇಯವಾಗಿದೆ' ಎಂದಿದ್ದಾರೆ.

ಪಂದ್ಯದ ನಂತರ ಅಧಿಕೃತ ಪ್ರಸಾರಕ ವಾಹಿನಿಯೊಂದಿಗೆ ಮಾತನಾಡಿದ ಅವರು, 'ಟಿ20 ಕ್ರಿಕೆಟ್ ಪಂದ್ಯಗಳಲ್ಲಿ 250–260 ರನ್‌ಗಳ ಮೊತ್ತ ಗಳಿಸುವುದೇ ನಮ್ಮ ಭವಿಷ್ಯದ ಗುರಿಯಾಗಿದೆ. ಇಂತಹ ಪ್ರಯತ್ನದಲ್ಲಿ ತಂಡವು ಕೆಲವೊಮ್ಮೆ 120–130 ರನ್‌ಗಳಿಗೇ ಆಲೌಟ್ ಆಗುವ ಅಪಾಯವೂ ಇದೆ.ಅದಕ್ಕೆ ನಾವು ಹೆದರುವುದಿಲ್ಲ' ಎಂದೂ ಹೇಳಿದ್ದಾರೆ.

'ನಾವು ಇದೇ ರೀತಿಯ ಟಿ20 ಕ್ರಿಕೆಟ್ ಆಡಲು ಇಚ್ಛಿಸುತ್ತೇವೆ. ಪಂದ್ಯ ಸೋಲುವ ಆತಂಕ ನಮಗಿಲ್ಲ. ದೊಡ್ಡ ಪ್ರತಿಫಲದ ಮೇಲೆ ನಮ್ಮ ಕಣ್ಣಿದೆ. ಈ ಸಿದ್ಧಾಂತವನ್ನು ತಂಡದ ಆಟಗಾರರು ಚೆನ್ನಾಗಿ ಅರಿತಿದ್ದಾರೆ. ಅದೇ ರೀತಿ ಆಡುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ನಿರ್ಭೀತ ಮನೋಭಾವದಿಂದ ಟಿ20 ಕ್ರಿಕೆಟ್ ಆಡದೇ ಹೋದರೆ ದೊಡ್ಡ ಸಾಧನೆ ಮಾಡಲು ಸಾಧ್ಯವಾಗದು. ನಾವು ಸರಿಯಾದ ಹಾದಿಯಲ್ಲಿ ಸಾಗುತ್ತಿದ್ದೇವೆ ಎಂಬ ವಿಶ್ವಾಸ ನನಗಿದೆ. ಸೋಲುವುದಕ್ಕೆ ಹೆದರುವುದಿಲ್ಲ. ಇದೇ ಧೋರಣೆಯಿಂದ ಆಡುತ್ತೇವೆ' ಎಂದರು.

'ಸ್ವಾರ್ಥರಹಿತ ಮತ್ತು ನಿರ್ಭೀತ ಧೋರಣೆಯೇ ಟಿ20 ತಂಡಗಳ ಸಿದ್ಧಾಂತವಾಗಿದೆ' ಎಂದರು.

ಸೋಲಿನ ಸರಪಣಿ ತುಂಡರಿಸಿದ ಬೆಂಗಳೂರು

ಚರ್ಚಿಲ್ ಬ್ರದರ್ಸ್ (ಎಡಗಡೆ) ಮತ್ತು ಎಸ್‌ಸಿ ಬೆಂಗಳೂರು ತಂಡದ ಆಟಗಾರರ ನಡುವೆ ಚೆಂಡಿನ ನಿಯಂತ್ರಣಕ್ಕೆ ಪೈಪೋಟಿ....

ರೈಯಾ (ದಕ್ಷಿಣ ಗೋವಾ): ಚರ್ಚಿಲ್ ಬ್ರದರ್ಸ್ ತಂಡ, ಸೋಮವಾರ ನಡೆದ ಐ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ಜೊತೆ 1–1 ಡ್ರಾಕ್ಕೆ ತೃಪ್ತಿ ಪಡಬೇಕಾಯಿತು. ಇದರಿಂದ ಗೋವಾದ ತಂಡಕ್ಕೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಅವಕಾಶ ಕೈತಪ್ಪಿತು.

61ನೇ ನಿಮಿಷ ವೇಡ್ ಲೇಕ ಅವರು ಈ ಋತುವಿನ ಒಂಬತ್ತನೇ ಗೋಲು ಗಳಿಸಿ ಚರ್ಚಿಲ್ ಬ್ರದರ್ಸ್ ತಂಡಕ್ಕೆ ಮುನ್ನಡೆ ಒದಗಿಸಿದ್ದರು. ಆದರೆ 12 ನಿಮಿಷಗಳ ನಂತರ ಗೋಲು ಗಳಿಸಿದ ಕ್ಲಾರೆನ್ಸ್ ಫೆರ್ನಾಂಡಿಸ್ ಅವರು ಬೆಂಗಳೂರು ತಂಡ ಸಮಬಲ ಮಾಡಿಕೊಳ್ಳಲು ನೆರವಾದರು.

ನಾಮಧಾರಿ ಎಫ್‌ಸಿ ತಂಡ 12 ಪಂದ್ಯಗಳಿಂದ 24 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದೆ. ಚರ್ಚಿಲ್ಸ್ ತಂಡ 23 ಪಾಯಿಂಟ್ಸ್ ಗಳಿಸಿ ಒಂದು ಪಾಯಿಂಟ್ ಅಂತರದಿಂದ ಎರಡನೇ ಸ್ಥಾನದಲ್ಲಿದೆ.

ಇದು ಈ ಋತುವಿನಲ್ಲಿ ಬೆಂಗಳೂರಿನ ತಂಡ ತವರಿನಿಂದಾಚೆ ಗಳಿಸಿದ ಮೊದಲ ಪಾಯಿಂಟ್ ಸಹ ಆಗಿದೆ. 'ಗೋಲ್ಡನ್ ಟೈಗರ್ಸ್' ತಂಡದ ಸತತ ಆರು ಸೋಲುಗಳ ಸರಪಣಿ ಈ ಡ್ರಾದ ಮೂಲಕ ಮುರಿದಿದ್ದು ಒಟ್ಟು 9 ಪಾಯಿಂಟ್ಸ್ ಸಂಗ್ರಹಿಸಿ ಕೊನೆಯ ಸ್ಥಾನದಿಂದ ಒಂದು ಸ್ಥಾನ ಮೇಲಕ್ಕೇರಿತು. ದೆಹಲಿ ತಂಡ 12ನೇ ಸ್ಥಾನದಲ್ಲಿದೆ.

ಸ್ಯಾಮ್ಸನ್ ಬೆರಳಿನ ಮೂಳೆ ಮುರಿತ

ಒಂದು ತಿಂಗಳು ಅಲಭ್ಯ • ಎನ್‌ಸಿಎನಲ್ಲಿ ಆರೈಕೆ

ಸಂಜು ಸ್ಯಾಮ್ಸನ್

wನವದೆಹಲಿ (ಪಿಟಿಐ): ಜೋಫ್ರಾ ಆರ್ಚರ್ ಬೌಲಿಂಗ್ ವೇಳೆ ಭಾರತ ತಂಡದ ವಿಕೆಟ್ ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್ ಅವರ ತೋರು ಬೆರಳಿಗೆ ಚೆಂಡು ತಾಗಿ ಮೂಳೆ ಮುರಿದಿದೆ. ಅವರು ಐದರಿಂದ ಆರು ವಾರ ಕ್ರಿಕೆಟ್‌ನಿಂದ ದೂರವಿರಬೇಕಾಗಿದೆ.

ಹೀಗಾಗಿ ಅವರು ಮುಂಬರುವ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯ ಆಡುವ ಕೇರಳ ತಂಡಕ್ಕೆ (ಜಮ್ಮು ಮತ್ತು ಕಾಶ್ಮೀರ ವಿರುದ್ಧ) ಲಭ್ಯರಿರುವುದಿಲ್ಲ. ಅವರು ಸದ್ಯ ತವರು ತಿರುವನಂತಪುರಕ್ಕೆ ಮರಳಿದ್ದಾರೆ. ಅವರು ಎನ್‌ಸಿಎನಲ್ಲಿ ಪುನಶ್ಚೇತನದಲ್ಲಿ ಭಾಗಿಯಾದ ನಂತರ ತರಬೇತಿಗೆ ಮರಳುವ ನಿರೀಕ್ಷೆಯಿದೆ.

ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳುವ ಮೊದಲು ಎನ್‌ಸಿಎ ಹಸಿರು ನಿಶಾನೆ ತೋರ ಬೇಕಾಗುತ್ತದೆ.

'ಸಂಜು ಸ್ಯಾಮ್ಸನ್ ಅವರ ಬಲಗೈ ತೋರು ಬೆರಳಿನ ಮೂಳೆ ಮುರಿದಿದೆ. ಅವರು ನೆಟ್ಸ್‌ಗೆ ಮರಳಬೇಕಾದರೆ ಐದರಿಂದ ಆರು ವಾರ ಬೇಕಾಗಲಿದೆ. ಹೀಗಾಗಿ ಪುಣೆಯಲ್ಲಿ ಅವರು ಕೇರಳ ತಂಡಕ್ಕೆ (ಜಮ್ಮು–ಕಾಶ್ಮೀರ ವಿರುದ್ಧ) ಆಡುವ ಅವಕಾಶವಿಲ್ಲ' ಎಂದು ಈ ಬೆಳವಣಿಗೆಯನ್ನು ಬಲ್ಲ ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

ಆದರೆ ಅವರು ಐಪಿಎಲ್ ವೇಳೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಪುನರಾಗಮನ ಮಾಡುವ ಸಾಧ್ಯತೆ ಹೆಚ್ಚು ಇದೆ. ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯಲ್ಲಿ ಸಂಜು ಅವರು ಪರದಾಡಿದ್ದರು. ಐದು ಪಂದ್ಯಗಳಲ್ಲಿ ಅವರು ಗಳಿಸಿದ್ದು 51 ರನ್ ಮಾತ್ರ. ಕೋಲ್ಕತ್ತದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಗಳಿಸಿದ 26 ಇದರಲ್ಲಿ ಅತ್ಯಧಿಕ. ಅಂತಿಮ ಪಂದ್ಯದಲ್ಲಿ ಆರ್ಚರ್ ಅವರ ಶರವೇಗದ ಎಸೆತದಲ್ಲಿ ಬೆರಳಿಗೆ ಗಾಯವಾಗಿತ್ತು.

ವಿಜಯ್ ಹಜಾರೆ ಟ್ರೋಫಿಯಲ್ಲಿ ಕೇರಳಕ್ಕೆ ಒಂದೂ ಪಂದ್ಯ ಆಡಿರದ ಕಾರಣ ಅವರನ್ನು ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಆಯ್ಕೆ ಮಾಡಿರಲಿಲ್ಲ.

ಡಬ್ಲ್ಯುಪಿಎಲ್‌ನಿಂದ ಅನುಕೂಲ: ಸ್ಮೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆರಂಭವಾದ ಮೇಲೆಸ್ಥಳೀಯಕ್ರಿಕೆಟ್‌ಆಟಗಾರ್ತಿಯರು ಆದಾಯ ಗಳಿಸುತ್ತಿದ್ದಾರೆ. ಅವರ ಪ್ರತಿಭೆಗೆ ಮಾನ್ಯತೆ ಸಿಗುತ್ತಿದೆ. ಭಾರತವು ಕ್ರೀಡೆಯಲ್ಲಿ ಅಭಿವೃದ್ಧಿ ಹೊಂದಿದ ದೇಶವಾದರೆ ಇಂತಹ ಹಲವಾರು ಕ್ರೀಡಾಪಟುಗಳಿಗೆ ನೆರವಾಗಲಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ಕ್ರಿಕೆಟ್ ತಂಡದ ನಾಯಕಿ ಸ್ಮೃತಿ ಮಂದಾನ ಅಭಿಪ್ರಾಯಪಟ್ಟರು.

ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ಸೋಮವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಆಯೋಜಿಸಿದ್ದ 'ಸ್ಪೋರ್ಟ್ಸ್ ಫಾರ್ವರ್ಡ್ ನೇಷನ್' ರಿಪೋರ್ಟ್ ಲಾಂಚ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೇರೆ ಬೇರೆ ಕ್ರೀಡೆಗಳಲ್ಲಿಯೂ ಸ್ಫೂರ್ತಿದಾಯಕ ಕತೆಗಳು ಪ್ರತಿದಿನ ಕೇಳಿಬರುತ್ತಿವೆ. ಪ್ರತಿಭಾವಂತರು ಬೆಳಕಿಗೆ ಬರುತ್ತಿದ್ದಾರೆ. ಇಂತಹ ಅಭಿಯಾನದಲ್ಲಿ ಭಾಗಿಯಾಗಲು ನನಗೆ ಖುಷಿಯಾಗಿದೆ' ಎಂದೂ ಸ್ಮೃತಿ ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಆರ್‌ಸಿಬಿಯ ಸಿ.ಒ.ಒ ರಾಜೇಶ್ ಮೆನನ್, 'ಭಾರತದ ಕ್ರೀಡೆಯ ಬೆಳವಣಿಗೆಯಲ್ಲಿ ಕೇಂದ್ರಬಿಂದುವಾಗಿ ಗುರುತಿಸಿಕೊಳ್ಳುವುದೇ ಆರ್‌ಸಿಬಿಯ ಮುಖ್ಯ ಉದ್ದೇಶ. ಕ್ರೀಡಾಭಿವೃದ್ಧಿ ಪಥದಲ್ಲಿ ಭಾರತ ನಡೆಯುತ್ತಿದೆ. ಆದರೆ ಕ್ರೀಡಾರಂಗದಲ್ಲಿ ಚಾಂಪಿಯನ್ ದೇಶವಾಗಲು ಅಥ್ಲೀಟ್‌ಗಳಿಗೆ ಸೂಕ್ತವಾದ ವಾತಾವರಣ ಕಲ್ಪಿಸಬೇಕು' ಎಂದರು.

ದೇಶ ಕಟ್ಟುವ ಕೆಲಸದಲ್ಲಿ ಕ್ರೀಡೆಯ ಮಹತ್ವದ ರೂಪುರೇಷೆಯ ವರದಿಯೇ ಸ್ಪೋರ್ಟ್ಸ್ ಫಾರ್ವರ್ಡ್ ನೇಷನ್ ಆಗಿದೆ. ರೋಡ್‌ಮ್ಯಾಪ್ ಟು 2047 ಮತ್ತು ವಿಕಸಿತ ಭಾರತ ಅಭಿಯಾನದಲ್ಲಿ ಕ್ರೀಡೆಯೂ ಒಂದು ಭಾಗವಾಗಿದೆ.

ಆರ್‌ಸಿಬಿಗೆ ಹೀದರ್, ಕಿಮ್

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಆಸ್ಟ್ರೇಲಿಯಾದ ಹೀದರ್ ಗ್ರಹಾಂ ಮತ್ತು ಕಿಮ್ ಗಾರ್ತ್ ಅವರನ್ನು ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ತಂಡಕ್ಕೆ ಸೇರ್ಪಡೆಗೊಳಿಸಿದೆ. ಅವರು ಕ್ರಮವಾಗಿ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಮತ್ತು ಇಂಗ್ಲೆಂಡ್‌ನ ಕೇಟ್ ಕ್ರಾಸ್ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

ವೈಯಕ್ತಿಕ ಕಾರಣಗಳಿಂದಾಗಿ ಡಿವೈನ್ ಮತ್ತು ಕ್ರಾಸ್ ಆಡುತ್ತಿಲ್ಲ. ಕುಟುಂಬದ ಜೊತೆ ಕಳೆಯುವ ಉದ್ದೇಶದಿಂದ, 35 ವರ್ಷ ವಯಸ್ಸಿನ ಕೇಟ್ ಅವರು ಆಟದಿಂದ ವಿರಾಮ ಪಡೆದಿದ್ದಾರೆ.

ಆಲ್‌ರೌಂಡರ್ ಹೀದರ್ ಗ್ರಹಾಂ ಅವರು ಐದು ಟಿ20 ಪಂದ್ಯಗಳನ್ನಾಡಿದ್ದು ಎಂಟು ವಿಕೆಟ್ ಪಡೆದಿದ್ದಾರೆ.

ನಿರಾಶೆಯ ಋತುವಿನಲ್ಲಿ ಬೆಳ್ಳಿಚುಕ್ಕಿ ಸ್ಮರಣ್

ಕರ್ನಾಟಕ ರಣಜಿ ತಂಡದ ಭರವಸೆಯ ಎಡಗೈ ಬ್ಯಾಟರ್ • ಸ್ಮರಣೀಯ ಆಟದ ಬಗ್ಗೆ ಮಾತು

• ಗಿರೀಶ ದೊಡ್ಡಮನಿ

ಕರ್ನಾಟಕದ ಬ್ಯಾಟರ್ ಸ್ಮರಣ್ ರವಿಚಂದ್ರನ್ —ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಬೆಂಗಳೂರು: 'ನಾನು ಮೊದಲಿನಿಂದ ಇರೋದೇ ಹೀಗೆ. ಹಂಡ್ರೆಡ್ ಅಥವಾ ಡಬಲ್ ಹಂಡ್ರೆಡ್ ಹೊಡೆದರೂ ಭರಾಟೆಯಿಂದ ಸಂಭ್ರಮಿಸುವ ವ್ಯಕ್ತಿ ಅಲ್ಲ. ಸರಳವಾಗಿ ಸಂತಸ ಆಚರಿಸುವುದೇ ರೂಢಿಯಾಗಿಬಿಟ್ಟಿದೆ'–

ಕರ್ನಾಟಕ ಕ್ರಿಕೆಟ್ ತಂಡದ ಉದಯೋನ್ಮುಖ ಬ್ಯಾಟರ್ ಸ್ಮರಣ್ ರವಿಚಂದ್ರನ್ ಅವರು ಈ ಮಾತುಗಳನ್ನು ಹೇಳುವಾಗಲೂ ಧ್ವನಿಯಲ್ಲಿ ಮೃದುತ್ವ ಇತ್ತು. ಮುಖದ ಮೇಲೆ ಮಂದಹಾಸ ಇತ್ತು. ಆದರೆ ಈ ತಣ್ಣಗಿನ ಸ್ವಭಾವದ ಹುಡುಗನ ಬ್ಯಾಟಿಂಗ್ ಮಾತ್ರ ಬೌಲರ್‌ಗಳಿಗೆ ಬಿಸಿ ಮುಟ್ಟಿಸುತ್ತದೆ. ಕಳೆದ ನಾಲ್ಕು ತಿಂಗಳುಗಳಲ್ಲಿ ಈ ಎಡಗೈ ಬ್ಯಾಟರ್ ನಾಲ್ಕು ಶತಕ ಸಿಡಿಸಿದ್ದಾರೆ. ಅವೆಲ್ಲವೂ ತಂಡದ ಗೆಲುವಿಗೆ ಮತ್ತು ಸೋಲು ತಪ್ಪಿಸಲು ಕಾರಣವಾಗಿವೆ. ಇದೇ ದೇಶಿ ಕ್ರಿಕೆಟ್ ಋತುವಿನಲ್ಲಿ ಪದಾರ್ಪಣೆ ಮಾಡಿ ಭರವಸೆ ಮೂಡಿಸಿರುವ ಆಟಗಾರ ಸ್ಮರಣ್. ಈ ಋತುವಿನಲ್ಲಿ ಅನುಭವಿ ಆಟಗಾರ ಮನೀಷ್ ಪಾಂಡೆ ಅವರನ್ನು ಕೈಬಿಡಲಾಗಿತ್ತು. ಆದರೆ ಅವರ ಗೈರುಹಾಜರಿ ಕಾಡದಂತೆ ಸ್ಮರಣ್ ತಮ್ಮ ಪಾತ್ರ ನಿಭಾಯಿಸಿದರು.

ಈ ಸಲದ ರಣಜಿ ಟ್ರೋಫಿ ಕ್ರಿಕೆಟ್ ಋತುವಿನ ಮೊದಲ ಐದು ಪಂದ್ಯಗಳಲ್ಲಿ 145 ರನ್‌ಗಳನ್ನಷ್ಟೇ ಸೇರಿಸಿದ್ದ ಎಡಗೈ ಬ್ಯಾಟರ್ ಸ್ಮರಣ್ ರವಿಚಂದ್ರನ್ ಆರನೇ ಪಂದ್ಯದಲ್ಲಿ ದ್ವಿಶತಕ ಹೊಡೆದರು. ಅವತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅವರು ಅರ್ಧಶತಕ, ಶತಕ ಮತ್ತು ದ್ವಿಶತಕ ಗಳಿಸಿದಾಗ ಸಂಭ್ರಮಿಸಿದ ರೀತಿ ಅವರ ಶಾಂತಚಿತ್ತದ ಪ್ರತಿಬಿಂಬದಂತಿತ್ತು. ಯಾವುದೇ ಅಬ್ಬರ, ನೆಗೆತ, ಜಿಗಿತಗಳಿರಲಿಲ್ಲ. ಶತಕ–ದ್ವಿಶತಕ ಪೂರೈಸಿದ ನಂತರ ತಮ್ಮ ಹೆಲ್ಮೆಟ್ ತೆಗೆದು ಎರಡೂ ಕೈಗಳನ್ನು ಮೇಲೆತ್ತಿ, ಸಹ ಆಟಗಾರರು ಇದ್ದ ಡ್ರೆಸಿಂಗ್ ರೂಮ್‌ನತ್ತ ಬ್ಯಾಟ್ ತೋರಿಸಿದರು. ಹರಿಯಾಣ ಎದುರಿನ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅಜೇಯ ಶತಕ ದಾಖಲಿಸಿದ ಅವರು ತಂಡವನ್ನು ಸೋಲಿನ ಆತಂಕದಿಂದ ಪಾರು ಮಾಡಿದ್ದರು. ಈ ಸಲದ ರಣಜಿ ಋತುವಿನಲ್ಲಿ ಕರ್ನಾಟಕದ ಅಭಿಯಾನ ಅಂತ್ಯಗೊಂಡಿದೆ. ಹಳೆ ನೀರು ಹೋಗಿ ಹೊಸ ನೀರು ತಂಡದೊಳಗೆ ಹರಿದು ಬಂದ ಈ ಋತುವಿನಲ್ಲಿ ಸ್ಮರಣ್ 'ದೀರ್ಘ ಇನಿಂಗ್ಸ್' ಆಡುವ ಭರವಸೆ ಮೂಡಿಸಿದ್ದಾರೆ. ಈ ಕುರಿತು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ್ದಾರೆ.

'ನಮ್ಮ ಕುಟುಂಬದಲ್ಲಿ ಈ ಹಿಂದೆ ಯಾರೂ ಕ್ರಿಕೆಟಿಗರಾಗಿರಲಿಲ್ಲ. ಆದರೆ ಎಲ್ಲರಿಗೂ ಕ್ರಿಕೆಟ್ ಪ್ರೀತಿ ಇತ್ತು. ಟಿ.ವಿಯಲ್ಲಿ ಒಟ್ಟಾಗಿ ಪಂದ್ಯಗಳನ್ನು ನೋಡುತ್ತಿದ್ದೆ. ಟೆನಿಸ್ ಬಾಲ್ ಕ್ರಿಕೆಟ್‌ನಲ್ಲಿ ಆಡುತ್ತಿದ್ದೆ. 8ನೇ ವಯಸ್ಸಿನಿಂದ ಕ್ರಿಕೆಟ್ ಆಟವಾಡಲು ಆರಂಭಿಸಿದೆ. ಮನೆಯ ಹತ್ತಿರ ನಡೆಯುತ್ತಿದ್ದ ಶಿಬಿರವೊಂದಕ್ಕೆ ಅಮ್ಮ ಕರೆದುಕೊಂಡು ಹೋಗಿ ಸೇರಿಸಿದ್ದರು. ಆರಂಭದ ಕೆಲವು ವರ್ಷ ಆಫ್‌ಸ್ಪಿನ್ನರ್ ಆಗಿದ್ದೆ. 14ನೇ ವಯಸ್ಸಿನಿಂದ ಬೌಲಿಂಗ್ ಬಿಟ್ಟು ಬ್ಯಾಟಿಂಗ್ ಮಾಡತೊಡಗಿದೆ' ಎಂದು ನೆನಪಿಸಿಕೊಂಡರು.

'ಹೋದ ವರ್ಷ 23 ವರ್ಷದೊಳಗಿನವರ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿ ಜಯಿಸಿದ್ದು ನನಗೆ ಅವಿಸ್ಮರಣೀಯವಾದದ್ದು. ಅದೊಂದು ಐತಿಹಾಸಿಕ ಸಾಧನೆ. ಆಗ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದು ಹೆಮ್ಮೆಯ ವಿಷಯ' ಎಂದರು.

ರಣಜಿ ಟ್ರೋಫಿ ಸಿ ಗುಂಪಿನ ಪಂದ್ಯದಲ್ಲಿ ಪಂಜಾಬ್ ವಿರುದ್ಧ ತಮ್ಮ ದ್ವಿಶತಕದ ಕುರಿತು ಪ್ರತಿಕ್ರಿಯಿಸುವ ಅವರು, 'ನನಗೆ ದ್ವಿಶತಕ ಪೂರೈಸುವ ಗುರಿ ಇರಲಿಲ್ಲ. ಎಸೆತಗಳಿಗೆ ತಕ್ಕ ಹೊಡೆತಗಳನ್ನು ಆಯ್ಕೆ ಮಾಡಿ ಪ್ರಯೋಗಿಸುವುದರಲ್ಲಿ ನಿರತನಾಗಿದ್ದೆ. ಏಕೆಂದರೆ ತಂಡವು ಹೆಚ್ಚು ರನ್ ಗಳಿಸಬೇಕಿತ್ತು' ಎಂದರು.

ಈ ಸಲದ ರಣಜಿ ಟೂರ್ನಿಯ 5 ಮತ್ತು 6ನೇ ಸುತ್ತಿನ ಪಂದ್ಯಗಳ ಮಧ್ಯದಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿಯೂ ಅವರು ರನ್‌ಗಳ ಹೊಳೆ ಹರಿಸಿದರು. ಅದರಲ್ಲೂ ಫೈನಲ್ ಪಂದ್ಯದಲ್ಲಿ ಅವರ ಶತಕದ ಬಲದಿಂದ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತು. ಕರ್ನಾಟಕ 5 ವರ್ಷಗಳ ನಂತರ ವಿಜಯ್ ಹಜಾರೆ ಟ್ರೋಫಿ ಗೆದ್ದಿತು. ಟೂರ್ನಿಯ 7 ಇನಿಂಗ್ಸ್‌ಗಳಲ್ಲಿ ಒಟ್ಟು 433 ರನ್‌ಗಳನ್ನು ಗಳಿಸಿದರು. ಅದರಲ್ಲಿ ಎರಡು ಶತಕ ಮತ್ತು 2 ಅರ್ಧಶತಕಗಳು ಇದ್ದವು.

'ಮೊದಲ ಅವಧಿಯ ರಣಜಿ ಪಂದ್ಯಗಳಲ್ಲಿ ದೊಡ್ಡ ಮೊತ್ತ ಗಳಿಸಲು ಆಗಲಿಲ್ಲ. ಆದರೆ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಲಯ ಕಂಡುಕೊಂಡೆ. ನಂತರದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಉತ್ತಮವಾಗಿ ಆಡತೊಡಗಿದೆ. ತಂಡದ ಕೋಚ್ ಮತ್ತು ಅನುಭವಿ ಆಟಗಾರರು ಸಲಹೆಗಳು ಉಪಯುಕ್ತವಾದವು. ಅದೇ ಲಯ ಕಳೆದ ಎರಡೂ ಪಂದ್ಯಗಳಲ್ಲಿ ಮುಂದುವರಿಸಿದೆ' ಎಂದರು.

ಸ್ಮರಣ್ ಅವರು ಪ್ರವರ್ಧಮಾನಕ್ಕೆ ಬಂದಿರುವುದರಿಂದ ಕರ್ನಾಟಕ ತಂಡದಲ್ಲಿ ಈಗ 'ಸ್ಟೈಲಿಷ್' ಎಡಗೈ ಬ್ಯಾಟರ್‌ಗಳ ಸಂಖ್ಯೆ ಹೆಚ್ಚಿದೆ. ದೇವದತ್ತ ಪಡಿಕ್ಕಲ್ ಈ ಮೊದಲೇ ಇದ್ದರು. ಇದೇ ಋತುವಿನಲ್ಲಿ ಪದಾರ್ಪಣೆ ಮಾಡಿರುವ ಕೃಷ್ಣನ್ ಶ್ರೀಜಿತ್ ಅವರೂ ಸೇರಿಕೊಂಡಿದ್ದಾರೆ. ಎಡಗೈ ವೇಗಿ –ಬ್ಯಾಟರ್ ಆಗಿರುವ ಅಭಿಲಾಷ್ ಶೆಟ್ಟಿ ಕೂಡ ಕೊನೆ ಕ್ರಮಾಂಕದಲ್ಲಿ ಒಂದಿಷ್ಟು ರನ್ ಕಾಣಿಕೆ ನೀಡಬಲ್ಲರು. ಕರ್ನಾಟಕದ ಒಂದೇ ಋತುವಿನಲ್ಲಿ ಇಷ್ಟು ಸಂಖ್ಯೆಯ ಎಡಗೈ ಬ್ಯಾಟರ್‌ಗಳು ಆಡುತ್ತಿರುವುದು ಅಪರೂಪ.